prajavani.net prajavani | ಬುಧವಾರ, ಡಿಸೆಂಬರ್ 31, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 361 | ಪುಟ 14 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಹರ್ಮನ್ ಅರ್ಧಶತಕ

ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮಂಗಳವಾರ ಶ್ರೀಲಂಕಾ ಎದುರಿನ ಟಿ20 ಪಂದ್ಯದಲ್ಲಿ 43 ಎಸೆತಗಳಲ್ಲಿ 68 ರನ್ ಗಳಿಸಿದರು

ಸೆನ್ಸೆಕ್ಸ್ 84,675 | ನಿಫ್ಟಿ 25,938 | $/₹ 89.75 | ಚಿನ್ನ (Std. 10g) ₹1,40,280 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,44,300 (ಬೆಂಗಳೂರು)

ಸರ್ಕಾರಕ್ಕೆ ‘ಲೆಕ್ಕ ಶೀರ್ಷಿಕೆ’ಗಳ ಭಾರ

ಕರ್ನಾಟಕ ಆಡಳಿತ ಸುಧಾರಣಾ ಆಯೋಗ –2 ಅಂತಿಮ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಯೋಜನೆಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರ 2,874 ಲೆಕ್ಕ ಶೀರ್ಷಿಕೆ (ಖಾತೆ) ಹೊಂದಿದ್ದು, ಅವುಗಳಲ್ಲಿ ಶೂನ್ಯ, ಅತ್ಯಲ್ಪ ಹಂಚಿಕೆ ಇರುವ 1,000 ಲೆಕ್ಕ ಶೀರ್ಷಿಕೆಗಳನ್ನು ಆರು ತಿಂಗಳ ಒಳಗೆ ರದ್ದು ಮಾಡಲು ಅಥವಾ ವಿಲೀನಗೊಳಿಸಲು ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2 ಶಿಫಾರಸು ಮಾಡಿದೆ.

ಆರ್.ವಿ.ದೇಶಪಾಂಡೆ ಅಧ್ಯಕ್ಷತೆಯ ಆಯೋಗವು ಆಡಳಿತ ಸುಧಾರಣೆಗಾಗಿ 355 ಶಿಫಾರಸುಗಳನ್ನು ಒಳಗೊಂಡ ತನ್ನ 10ನೇ ಹಾಗೂ ಕೊನೆಯ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂಗಳವಾರ ಸಲ್ಲಿಸಿತು.

ಅನಗತ್ಯ ಲೆಕ್ಕ ಶೀರ್ಷಿಕೆಗಳು ರಾಜ್ಯದ ಹಣಕಾಸು ನಿರ್ವಹಣೆಗೆ ಭಾರವಾಗಿವೆ. 280 ಶೀರ್ಷಿಕೆಗಳು ₹1 ಕೋಟಿಗಿಂತ ಕಡಿಮೆ ಮೊತ್ತದ ಹಂಚಿಕೆ ಹೊಂದಿವೆ. ಕಂದಾಯ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ತಲಾ 36, ಲೋಕೋಪಯೋಗಿ ಇಲಾಖೆಯಲ್ಲಿ 34, ಆರ್ಥಿಕ ಇಲಾಖೆಯಲ್ಲಿ 33, ಸಾರಿಗೆ ಇಲಾಖೆಯಲ್ಲಿ 30, ಶಾಲಾ ಶಿಕ್ಷಣ ಇಲಾಖೆಯಲ್ಲಿ 29, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆಯಲ್ಲಿ ತಲಾ 28 ಸೇರಿದಂತೆ ಹಲವು ಶೀರ್ಷಿಕೆಗಳ ಆಡಳಿತಾತ್ಮಕ ವೆಚ್ಚ ಶೇಕಡ 35 ದಾಟಿದೆ. ಸಾಲ ಮರುಪಾವತಿಗಾಗಿಯೇ 396 ಲೆಕ್ಕ ಶೀರ್ಷಿಕೆಗಳಿದ್ದು, ಇಂತಹ ಎಲ್ಲ ಶೀರ್ಷಿಕೆಗಳನ್ನು ರದ್ದು ಮಾಡಬೇಕು. ಸಾಮ್ಯತೆ ಇರುವ ಕಡೆ ವಿಲೀನಗೊಳಿಸಬೇಕು ಎಂಬ ಶಿಫಾರಸು ವರದಿಯಲ್ಲಿದೆ.

ಅಂಕಿ ಅಂಶಗಳು

10 ಸಲ್ಲಿಕೆಯಾದ ವರದಿಗಳು

6,031 ಒಟ್ಟು ಶಿಫಾರಸುಗಳು

2,014 ಅನುಷ್ಠಾನಗೊಂಡ ಶಿಫಾರಸುಗಳು

1,743 ಅನುಷ್ಠಾನದ ಪ್ರಕ್ರಿಯೆಯಲ್ಲಿರುವ ಶಿಫಾರಸುಗಳು

2,274 ಅನುಷ್ಠಾನಗೊಳ್ಳದ ಶಿಫಾರಸುಗಳು

ಸಾಮಾಜಿಕ ಭದ್ರತಾ ಯೋಜನೆಗಳೂ ಸೇರಿದಂತೆ ಕೇಂದ್ರ ಪುರಸ್ಕೃತ ಯೋಜನೆಗಳ ಜತೆ ಹೆಚ್ಚಿನ ಸಾಮ್ಯತೆ ಹೊಂದಿರುವ ಯೋಜನೆಗಳನ್ನು ವಿಲೀನಗೊಳಿಸುವ ಮೂಲಕ ಮರು ಜೋಡಣೆ ಮಾಡಬೇಕು. ಹಳೆಯ ಯೋಜನೆಗಳನ್ನು ಸ್ಥಗಿತಗೊಳಿಸಬೇಕು ಎಂದು ಹೇಳಿದೆ. 2023–24ನೇ ಸಾಲಿನ ವೆಚ್ಚ, 2024–25ನೇ ಸಾಲಿನ ಪರಿಷ್ಕೃತ ಅಂದಾಜು ಹಾಗೂ 2025–26ನೇ ಸಾಲಿನ ಬಜೆಟ್ ಅಂದಾಜುಗಳ ಆಧಾರದಲ್ಲಿ ನಿಷ್ಕ್ರಿಯವಾಗಿರುವ ಖಾತೆಗಳನ್ನು ಲೆಕ್ಕ ಹಾಕಿ, ಆಯೋಗ ಶಿಫಾರಸು ಮಾಡಿದೆ.

ಅನುಪಯುಕ್ತ ಲೆಕ್ಕ ಶೀರ್ಷಿಕೆಗಳನ್ನು ರದ್ದು ಮಾಡುವುದರಿಂದ ಬಜೆಟ್ ತಯಾರಿ, ಅನುದಾನ ಬಿಡುಗಡೆ, ವೆಚ್ಚದಲ್ಲಿ ಸ್ಪಷ್ಟತೆ ಸಿಗುತ್ತದೆ. ಮೇಲ್ವಿಚಾರಣೆ ಸುಲಭವಾಗುತ್ತದೆ. ಕಾರ್ಯಕ್ಷಮತೆ ಸುಧಾರಿಸುತ್ತದೆ. ಲೋಪದೋಷಗಳು, ಆಡಳಿತಾತ್ಮಕ ಹೊರೆ ಕಡಿಮೆಯಾಗುತ್ತದೆ. ಮುಂದಿನ ಆರ್ಥಿಕ ವರ್ಷಗಳಲ್ಲಿ ನಿಷ್ಕ್ರಿಯ ಲೆಕ್ಕ ಶೀರ್ಷಿಕೆಗಳು ತಗ್ಗುತ್ತವೆ. ಸರಳೀಕೃತ ಲೆಕ್ಕಾಚಾರದ ಚೌಕಟ್ಟು ಸಿದ್ಧವಾಗುತ್ತದೆ. ರಾಜ್ಯ ಹಾಗೂ ಜಿಲ್ಲಾಮಟ್ಟದಲ್ಲಿ ಹಣಕಾಸಿನ ಪರಿಣಾಮಕಾರಿ ನಿರ್ವಹಣೆ ಸಾಧ್ಯವಾಗಲಿದೆ ಎಂದು ವಿವರಿಸಿದೆ.

ವಾರ್ಷಿಕ ನೇಮಕಾತಿ ಕಡ್ಡಾಯ: ವಿವಿಧ ಇಲಾಖೆ ಮತ್ತು ನಿಗಮ, ಮಂಡಳಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ಆಯಾ ವರ್ಷವೇ ಭರ್ತಿ ಮಾಡುವ ನಿಯಮ ರೂಪಿಸಬೇಕು. ನಗರಾಭಿವೃದ್ಧಿ, ಕಂದಾಯ, ಗ್ರಾಮೀಣಾಭಿವೃದ್ಧಿ, ಆರೋಗ್ಯ ಇಲಾಖೆಗಳಲ್ಲಿ ಅಧಿಕಾರಿಗಳು, ಸಿಬ್ಬಂದಿ ಕೊರತೆ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಮೇಲ್ವಿಚಾರಣಾ ವ್ಯವಸ್ಥೆಯನ್ನು ಬಲಪಡಿಸಬೇಕು ಎಂಬ ಶಿಫಾರಸುಗಳೂ ವರದಿಯಲ್ಲಿವೆ.



ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಂತಿಮ ವರದಿಯನ್ನು ಮಂಗಳವಾರ ಸಲ್ಲಿಸಿದರು

ನೇಮಕಾತಿ ನಿಯಮಕ್ಕೆ ತಿದ್ದುಪಡಿ

ಯಾವುದೇ ಇಲಾಖೆ, ನಿಗಮ–ಮಂಡಳಿಗಳ ಹುದ್ದೆಗಳನ್ನು ಭರ್ತಿ ಮಾಡುವಾಗ ಕೆಲಸದ ಸ್ವರೂಪ, ಕಾರ್ಯಭಾರ ಖಚಿತಪಡಿಸಿಕೊಳ್ಳಬೇಕು. ನಂತರ ಜಿಲ್ಲಾವಾರು ಜನಸಂಖ್ಯೆ, ಕೆಲಸಗಳ ಆಧಾರದಲ್ಲಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಬೇಕು ಎಂದು ಆಯೋಗ ಹೇಳಿದೆ.

ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಾಗ ಹಿಂದೆ ಮಂಜೂರಾದ ಹುದ್ದೆಗಳನ್ನು ಪರಿಗಣಿಸಬಾರದು. ರಾಜ್ಯದ ವಿವಿಧ ಇಲಾಖೆಗಳಲ್ಲಿ ಮಂಜೂರಾದ 8.16 ಲಕ್ಷ ಹುದ್ದೆಗಳು ಇದ್ದು, 2.94 ಲಕ್ಷ ಖಾಲಿ ಇವೆ. ಪ್ರಸ್ತುತ ಸನ್ನಿವೇಶ, ಬದಲಾದ ಕೆಲಸದ ಸ್ವರೂಪ, ಅಗತ್ಯವನ್ನು ಲೆಕ್ಕಹಾಕಿಕೊಂಡು ನೇಮಕಾತಿ ಮಾಡಿಕೊಳ್ಳಬೇಕು. ಹೆಚ್ಚುವರಿ ಹುದ್ದೆಗಳು ಇದ್ದರೆ ಅಗತ್ಯವಿರುವ ಇತರೆ ಕಡೆಗೆ ಮರು ಹಂಚಿಕೆ ಮಾಡಬೇಕು. ಹೆಚ್ಚುವರಿ ಹುದ್ದೆಗಳ ಅಗತ್ಯವಿದ್ದರೆ ಆರ್ಥಿಕ ಇಲಾಖೆಯ ಅನುಮತಿ ಪಡೆದು ಭರ್ತಿ ಮಾಡಿಕೊಳ್ಳಬೇಕು. ಅದಕ್ಕಾಗಿ ಎಲ್ಲ ಇಲಾಖೆಗಳೂ ವೃಂದ ಮತ್ತು ನೇಮಕಾತಿ ನಿಯಮಕ್ಕೆ ಸಮಗ್ರ ತಿದ್ದುಪಡಿ ತರಬೇಕು. ಇಲಾಖೆಗಳ ಮಧ್ಯೆ ಮರು ಹಂಚಿಕೆಯನ್ನು ಕಡ್ಡಾಯ ಮಾಡಬೇಕು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸಿ ಮತ್ತು ಡಿ ಗುಂಪಿನ ಹುದ್ದೆಗಳಿಗೆ ಹೊರಗುತ್ತಿಗೆ ನೇಮಕಾತಿಯನ್ನು ಪಾರದರ್ಶಕವಾಗಿ ಮಾಡಬೇಕು. ಕಾಯಂ ನೇಮಕಕ್ಕೆ ಆದ್ಯತೆ ನೀಡಬೇಕು. 70 ಸಾವಿರಕ್ಕೂ ಹೆಚ್ಚು ಹೊರಗುತ್ತಿಗೆ ಸಿಬ್ಬಂದಿ ಇದ್ದು, ಹಂತಹಂತವಾಗಿ ಹೊರಗುತ್ತಿಗೆ ನೇಮಕವನ್ನು ಕೈಬಿಡಬೇಕು ಎಂದು ಶಿಫಾರಸು ಮಾಡಿದೆ.

ಅವಧಿ ಮುಕ್ತಾಯ, ಮೇಲ್ವಿಚಾರಣೆಗೆ ಘಟಕ

ಐದು ವರ್ಷಗಳ ಅವಧಿಯಲ್ಲಿ ಸಿದ್ಧಪಡಿಸಿರುವ 10 ವರದಿಗಳಲ್ಲಿ ಮಾಡಿರುವ ಎಲ್ಲ ಶಿಫಾರಸುಗಳನ್ನು ಅನುಷ್ಠಾನಗೊಳಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ ‘ಸುಧಾರಣಾ ಮೇಲ್ವಿಚಾರಣಾ ಘಟಕ (ಆರ್‌ಎಂಯು)’ ಸ್ಥಾಪಿಸುವಂತೆ ಆಯೋಗ ಶಿಫಾರಸು ಮಾಡಿದೆ.

ಆಡಳಿತ ಸುಧಾರಣಾ ಆಯೋಗ–2ರ ಅವಧಿ ಮುಕ್ತಾಯವಾಗಿದ್ದು, ಆಯೋಗವನ್ನು ವಿಸರ್ಜನೆ ಮಾಡುತ್ತಿರುವ ಕಾರಣ ಶಿಫಾರಸುಗಳ ಅನುಷ್ಠಾನಕ್ಕೆ ಆರ್‌ಎಂಯು ಅಗತ್ಯವಿದೆ. ಶಿಫಾರಸುಗಳ ಅನುಷ್ಠಾನ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಸಭೆ, ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ವರ್ಷಕ್ಕೆ ಒಮ್ಮೆ ಪ್ರಗತಿ ಪರಿಶೀಲನೆ ನಡೆಸಬೇಕು. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಆನ್‌ಲೈನ್ ಟ್ರ್ಯಾಕಿಂಗ್ ಮೂಲಕ ಪಾರದರ್ಶಕ ಮೇಲ್ವಿಚಾರಣೆ ಮಾಡಬೇಕು ಎಂದು ಹೇಳಿದೆ.

ಹೆಲಿಕಾಪ್ಟರ್ ಅನಾವರಣ

ಪಿಟಿಐ ಚಿತ್ರ

ನಾಗರಿಕ-ವಾಣಿಜ್ಯ ಬಳಕೆಗೆಂದೇ ಮಾರ್ಪಾಡು ಮಾಡಲಾದ, ಎಚ್‌ಎಎಲ್‌ನ ‘ಧ್ರುವ ಎನ್-ಜೆನ್ (ನ್ಯೂ ಜನರೇಷನ್)’ ಹೆಲಿಕಾಪ್ಟರ್ ಅನ್ನು ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಅವರು ಬೆಂಗಳೂರಿನಲ್ಲಿ ಮಂಗಳವಾರ ಅನಾವರಣ ಮಾಡಿದ ಬಳಿಕ ಹೆಲಿಕಾಪ್ಟರ್ ಮೊದಲ ಹಾರಾಟ ಮಾಡಿದ ಕ್ಷಣ

ತ್ವರಿತ ತೀರ್ಪು: ‘ಸುಪ್ರೀಂ’ ಎಸ್‌ಒಪಿ

ಎಲ್ಲಾ ವಕೀಲರು ನಿಗದಿಪಡಿಸಿದ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ಆ ಗಡುವಿನ ಒಳಗಾಗಿ ತಮ್ಮ ವಾದ ಮಂಡನೆ ಮುಕ್ತಾಯಗೊಳಿಸಬೇಕು

‘ಸುಪ್ರೀಂ’ ಎಸ್‌ಒಪಿ

ನವದೆಹಲಿ (ಪಿಟಿಐ): ವಾದ ಮಂಡನೆ ಮತ್ತು ಲಿಖಿತ ಟಿಪ್ಪಣಿ ಸಲ್ಲಿಕೆಗೆ ವಕೀಲರು ವೇಳಾಪಟ್ಟಿ ನಿಗದಿಪಡಿಸಿ, ಈ ವೇಳಾಪಟ್ಟಿಗೆ ಅವರು ಬದ್ಧರಾಗಿರುವುದಕ್ಕಾಗಿ ಸುಪ್ರೀಂ ಕೋರ್ಟ್ ಹೊಸ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಪ್ರಕಟಿಸಿದೆ.

ನ್ಯಾಯಾಲಯಗಳ ಕಾರ್ಯ ನಿರ್ವಹಣೆಯಲ್ಲಿ ಸುಧಾರಣೆ ತರುವುದು ಮತ್ತು ನ್ಯಾಯದಾನ ಪ್ರಕ್ರಿಯೆ ತ್ವರಿತಗೊಳಿಸುವ ಗುರಿಯನ್ನು ಈ ಕ್ರಮ ಹೊಂದಿದೆ. ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನಿರ್ದೇಶನದ ಮೇರೆಗೆ ಡಿಸೆಂಬರ್ 29ರಂದು ಈ ಸುತ್ತೋಲೆ ಹೊರಡಿಸಲಾಗಿದೆ.

‘ವಿವಿಧ ಪ್ರಕರಣಗಳಲ್ಲಿ ವಾದಿಸುವ ಹಿರಿಯ ವಕೀಲರು, ವಕೀಲರು ಅಥವಾ ಎಒಆರ್‌ಗಳು (ಅಡ್ವೊಕೇಟ್ ಆನ್ ರೆಕಾರ್ಡ್) ವಾದ ಮಂಡನೆಯ ವೇಳಾಪಟ್ಟಿಯನ್ನು ಪ್ರಕರಣದ ವಿಚಾರಣೆ ಪ್ರಾರಂಭವಾಗುವ ಕನಿಷ್ಠ ಒಂದು ದಿನ ಮೊದಲು ಸಲ್ಲಿಸಬೇಕು. ನಿರ್ದಿಷ್ಟ ಪ್ರಕರಣದಲ್ಲಿ ವಾದ ಮಂಡಿಸುವುದಕ್ಕಾಗಿ ಎಒಆರ್‌ಗೆ ಈಗಾಗಲೇ ಒದಗಿಸಲಾದ ‘ಹಾಜರಾತಿ ಚೀಟಿ’ಯನ್ನು ವೆಬ್‌ಸೈಟ್ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂದು ಎಸ್‌ಒಪಿ ಹೇಳಿದೆ.

‘ವೇಳಾಪಟ್ಟಿಯನ್ನು ಮುಂಚಿತವಾಗಿ ನಿಗದಿಪಡಿಸುವುದರ ಜತೆಗೆ ವಾದ ಮಂಡಿಸುವ ವಕೀಲರು ತಮ್ಮ ವಾದದ ಸಂಕ್ಷಿಪ್ತ ವಿವರಗಳನ್ನು ಲಿಖಿತವಾಗಿ (ಐದು ಪುಟಗಳಿಗೆ ಮೀರದಂತೆ) ವಿಚಾರಣೆ ಆರಂಭಕ್ಕೆ ಕನಿಷ್ಠ ಮೂರು ದಿನ ಮುಂಚಿತವಾಗಿ ಕಡ್ಡಾಯವಾಗಿ ಸಲ್ಲಿಸಬೇಕು’ ಎಂದಿದೆ. ಹೊಸ ಎಸ್‌ಒಪಿ ತಕ್ಷಣದಿಂದಲೇ ಜಾರಿಗೆ ಬರಲಿದೆ.

ಮಾಜಿ ಪ್ರಧಾನಿ ಖಾಲಿದಾ ನಿಧನ

ಢಾಕಾ (ಪಿಟಿಐ): ಮಿಲಿಟರಿ ಆಡಳಿತದ ನಂತರ ಪ್ರಜಾಪ್ರಭುತ್ವವನ್ನು ಮರುಸ್ಥಾಪನೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮತ್ತು ದಶಕಗಳ ಕಾಲ ದೇಶದ ರಾಜಕೀಯದಲ್ಲಿ ಸಕ್ರಿಯರಾಗಿದ್ದ ಬಾಂಗ್ಲಾದೇಶದ ಮೊದಲ ಮಹಿಳಾ ಪ್ರಧಾನಿ ಖಾಲಿದಾ ಜಿಯಾ (79) ಮಂಗಳವಾರ ನಿಧನರಾದರು.

ಮೂರು ಸಲ ಪ್ರಧಾನಿಯಾಗಿದ್ದ ಖಾಲಿದಾ ಅವರು ಸುದೀರ್ಘ ಅವಧಿಗೆ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷದ (ಬಿಎನ್‌ಪಿ) ಅಧ್ಯಕ್ಷರಾಗಿದ್ದರು. ‘ನನ್ನ ಅಮ್ಮ ಇನ್ನಿಲ್ಲ’ ಎಂದು ಜಿಯಾ ಅವರ ಹಿರಿಯ ಮಗ, ಬಿಎನ್‌ಪಿ ಹಂಗಾಮಿ ಅಧ್ಯಕ್ಷ ತಾರಿಕ್ ರೆಹಮಾನ್ ಅವರು ನಿಧನ ಸುದ್ದಿಯನ್ನು ಪ್ರಕಟಿಸಿದರು.

ವಿವರ 10

ಜಪಾನ್ ಹಿಂದಿಕ್ಕಿದ ಭಾರತ

ಜಿಡಿಪಿ

ನವದೆಹಲಿ (ಪಿಟಿಐ): ಭಾರತದ ಅರ್ಥ ವ್ಯವಸ್ಥೆಯು ಜಪಾನ್ ದೇಶದ ಅರ್ಥ ವ್ಯವಸ್ಥೆಯ ಗಾತ್ರವನ್ನು ಹಿಂದಿಕ್ಕಿದ್ದು, 4.18 ಟ್ರಿಲಿಯನ್ ಡಾಲರ್ (ಸರಿಸುಮಾರು ₹375 ಲಕ್ಷ ಕೋಟಿ) ಆಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಈಗ ಭಾರತದ ಅರ್ಥ ವ್ಯವಸ್ಥೆಯು ವಿಶ್ವದ ನಾಲ್ಕನೆಯ ಅತಿ ದೊಡ್ಡ ಅರ್ಥವ್ಯವಸ್ಥೆ ಎಂದು ಅದು ಹೇಳಿದೆ. ಭಾರತದ ಅರ್ಥ ವ್ಯವಸ್ಥೆಯು ಜರ್ಮನಿಯ ಅರ್ಥ ವ್ಯವಸ್ಥೆಯನ್ನು ಕೂಡ 2030ರ ವೇಳೆಗೆ ಹಿಂದಿಕ್ಕಿ ವಿಶ್ವದ ಮೂರನೆಯ ಅತಿದೊಡ್ಡ ಅರ್ಥವ್ಯವಸ್ಥೆ ಆಗಲಿದೆ ಎಂದು ತಿಳಿಸಿದೆ.

ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆ ಪ್ರಮಾಣವು ಚೆನ್ನಾಗಿದ್ದು, ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿದೆ ಎಂದು ಕೇಂದ್ರವು ತಿಳಿಸಿದೆ. 2025–26ನೇ ಸಾಲಿನ ಎರಡನೆಯ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಪ್ರಮಾಣವು ಶೇ 8.2ರಷ್ಟಾಗಿದೆ. ಇದು ಆರು ತ್ರೈಮಾಸಿಕಗಳಲ್ಲಿನ ಅತಿಹೆಚ್ಚಿನ ಬೆಳವಣಿಗೆ.

‘ಮುಂದಿನ ಎರಡೂವರೆಯಿಂದ ಮೂರು ವರ್ಷಗಳಲ್ಲಿ ಭಾರತದ ಜಿಡಿಪಿ ಗಾತ್ರವು 7.3 ಅಮೆರಿಕನ್ ಡಾಲರ್ (ಸರಿಸುಮಾರು ₹655 ಲಕ್ಷ ಕೋಟಿ) ಆಗುವ ನಿರೀಕ್ಷೆ ಇದೆ’ ಎಂದು ಕೇಂದ್ರ ಸರ್ಕಾರದ ಪ್ರಕಟಣೆಯೊಂದು ತಿಳಿಸಿದೆ. ಅಮೆರಿಕವು ವಿಶ್ವದ ಅತಿದೊಡ್ಡ ಅರ್ಥ ವ್ಯವಸ್ಥೆಯನ್ನು ಹೊಂದಿದೆ. ಚೀನಾ ಎರಡನೆಯ ಸ್ಥಾನದಲ್ಲಿದೆ.

ದೇಶದ ಮಾರುಕಟ್ಟೆಯಲ್ಲಿ ಜನಸಾಮಾನ್ಯರಿಂದ ಬೇಡಿಕೆಯು ಹೆಚ್ಚಾಗಿರುವುದು ಅರ್ಥ ವ್ಯವಸ್ಥೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ಕೇಂದ್ರವು ಪ್ರತಿಪಾದಿಸಿದೆ.

ಬೇರೆ ಬೇರೆ ಅಂತರರಾಷ್ಟ್ರೀಯ ಸಂಸ್ಥೆಗಳು ಭಾರತದ ಅರ್ಥ ವ್ಯವಸ್ಥೆಯ ಬಗ್ಗೆ ಬಹಳ ಆಶಾವಾದವನ್ನು ವ್ಯಕ್ತಪಡಿಸಿವೆ ಎಂದು ಹೇಳಿರುವ ಕೇಂದ್ರವು, ಅವು ಜಿಡಿಪಿ ಬೆಳವಣಿಗೆಯ ಬಗ್ಗೆ ಸಿದ್ಧಪಡಿಸಿರುವ ಅಂದಾಜುಗಳನ್ನು ಕೂಡ ಉಲ್ಲೇಖಿಸಿದೆ.

‘ದೇಶಕ್ಕೆ ಸ್ವಾತಂತ್ರ್ಯ ದೊರೆತು ನೂರು ವರ್ಷಗಳಾಗುವ 2047ರ ವೇಳೆಗೆ ದೇಶದ ಜನರು ಹೆಚ್ಚಿನ ಆದಾಯವನ್ನು ಪಡೆಯುವಂತೆ ಆಗಬೇಕು ಎಂಬ ಮಹತ್ವಾಕಾಂಕ್ಷೆಯನ್ನು ಸಾಧಿಸಲು ದೇಶವು ಸುಧಾರಣೆಗಳನ್ನು, ಸಾಮಾಜಿಕ ಪ್ರಗತಿಯನ್ನು ನೆಚ್ಚಿಕೊಂಡಿದೆ’ ಎಂದು ಪ್ರಕಟಣೆಯು ವಿವರಿಸಿದೆ.

ಹಣದುಬ್ಬರ ಪ್ರಮಾಣವು ನಿಗದಿತ ಮಟ್ಟಕ್ಕಿಂತ ಕಡಿಮೆ ಇದೆ, ನಿರುದ್ಯೋಗ ದರವು ಕಡಿಮೆ ಆಗುತ್ತಿದೆ, ರಫ್ತು ಪ್ರಮಾಣ ಸುಧಾರಿಸುತ್ತಿದೆ ಎಂದು ಅದರಲ್ಲಿ ಹೇಳಲಾಗಿದೆ.

ಕೋಗಿಲು ಬಡಾವಣೆಯ ಸಂತ್ರಸ್ತರಿಗೆ ನೀಡಲು ಉದ್ದೇಶಿಸಿರುವ ಮನೆಗಳು

ಇನ್ನೂ ಪೂರ್ಣಗೊಳ್ಳದ ವಸತಿ ಸಮುಚ್ಚಯ

• ಸ್ನೇಹಾ ರಮೇಶ್

ಬೆಂಗಳೂರು: ಕೋಗಿಲು ಬಡಾವಣೆಯಲ್ಲಿ ಮನೆ ಕಳೆದುಕೊಂಡಿರುವ ಅರ್ಹರಿಗೆ ಬೈಯ್ಯಪ್ಪನಹಳ್ಳಿಯ ವಸತಿ ಸಮುಚ್ಚಯದಲ್ಲಿ ನಿರ್ಮಿಸಿರುವ ಮನೆಗಳನ್ನು ಹಂಚಿಕೆ ಮಾಡಲಾಗುವುದು ಎಂದು ಸರ್ಕಾರ ಘೋಷಿಸಿದೆ. ಆದರೆ, ಆರು ಬ್ಲಾಕ್‌ಗಳ ಸಮುಚ್ಚಯ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ.

ಮಂಗಳವಾರ ‘ಪ್ರಜಾವಾಣಿ’ ಪ್ರತಿನಿಧಿ ಸ್ಥಳಕ್ಕೆ ಭೇಟಿ ನೀಡಿದ ವೇಳೆ, ‘ಕಾಮಗಾರಿ ಪೂರ್ಣಗೊಳಿಸಲು ಕನಿಷ್ಠ ಎರಡು ತಿಂಗಳು ಬೇಕಾಗುತ್ತದೆ’ ಎಂದು ಸ್ಥಳದಲ್ಲಿದ್ದ ಕಾರ್ಮಿಕರು ತಿಳಿಸಿದರು.

‘ಅಂತಿಮ ಹಂತದ ಕೆಲಸಗಳು ಬಾಕಿ ಇವೆ. ಲಿಫ್ಟ್‌ಗಳ ಅಳವಡಿಕೆ, ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಕಾರ್ಯಾರಂಭ ಹಾಗೂ ಇತರೆ ಸಣ್ಣಪುಟ್ಟ ಕೆಲಸಗಳು ಬಾಕಿಯಿವೆ. ಎರಡು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ’ ಎಂದು ಮೇಲ್ವಿಚಾರಕರೊಬ್ಬರು ಹೇಳಿದರು.

ವಸತಿ ಸಮುಚ್ಚಯದ ‘ಇ’ ಮತ್ತು ‘ಎಫ್’ ಬ್ಲಾಕ್‌ಗಳಲ್ಲಿ ಫ್ಲ್ಯಾಟ್‌ಗಳನ್ನು ಹಂಚಿಕೆ ಮಾಡುವ ಉದ್ದೇಶವಿದ್ದು, ಅಲ್ಲಿನ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದು ಎಂದು ರಾಜೀವ್ ಗಾಂಧಿ ವಸತಿ ನಿಗಮದ ಹಿರಿಯ ಅಧಿಕಾರಿಗಳು ತಿಳಿಸಿದರು.

6

‘ದಾಖಲೆ ಜೆರಾಕ್ಸ್ ಮಾಡಿಸಲು ಹಣವಿಲ್ಲ’

‘ಕೋಗಿಲು ಬಡಾವಣೆ ಸಂತ್ರಸ್ತರಿಗೆ ಸಬ್ಸಿಡಿ ದರದಲ್ಲಿ ಮನೆಗಳನ್ನು ನೀಡುತ್ತಿದ್ದು, ಅರ್ಹ ಫಲಾನುಭವಿಗಳು ₹2.50 ಲಕ್ಷ ಪಾವತಿಸಬೇಕಾಗುತ್ತದೆ. ದಿನಕ್ಕೆ ₹100ರಿಂದ ₹300 ಮಾತ್ರ ಸಂಪಾದಿಸುತ್ತಿದ್ದು, ಮನೆಯ ನಿತ್ಯದ ವೆಚ್ಚಕ್ಕೂ ಸಾಕಾಗುತ್ತಿಲ್ಲ. ಸರ್ಕಾರಕ್ಕೆ ಸಲ್ಲಿಸಲು ಬೇಕಾದ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಪಡೆಯಲು ಸಾಲ ಮಾಡಬೇಕಾದ ಸ್ಥಿತಿ ಎದುರಾಗಿದೆ’ ಎಂದು ನಿವಾಸಿಯೊಬ್ಬರು ತಿಳಿಸಿದರು.

‘ಸರ್ಕಾರಕ್ಕೆ ಸಲ್ಲಿಸಬೇಕಾದ ದಾಖಲೆಗಳ ಜೆರಾಕ್ಸ್‌ಗೆ ಪ್ರತಿ ಕುಟುಂಬಕ್ಕೂ ₹500ರಿಂದ ₹600ರವರೆಗೆ ವೆಚ್ಚವಾಗಿದೆ. ಹಲವರ ಬಳಿ ಸಾಲ ಮಾಡಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಲಕ್ಷಾಂತರ ರೂಪಾಯಿ ಪಾವತಿಸುವುದು ಅಸಾಧ್ಯ’ ಎಂದು ಜಬೀನಾ ಹೇಳಿದರು.

‘ಚಿಕಿತ್ಸಾ ವೆಚ್ಚ ಭರಿಸಲೂ ಹಣವಿಲ್ಲ’ ಎಂದು ಮತ್ತೊಬ್ಬ ನಿವಾಸಿ ತಿಳಿಸಿದರು.

ಬಿಜೆಪಿ,ಜೆಡಿಎಸ್ ಆಕ್ಷೇಪ

ಕೋಗಿಲು ಗ್ರಾಮದ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸಿದ್ದವರಿಗೆ, ರಾಜ್ಯ ಸರ್ಕಾರವೇ ಬೇರೆ ಕಡೆ ವಸತಿ ಕಲ್ಪಿಸಲು ಮುಂದಾಗಿರುವುದಕ್ಕೆ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

ಸುದ್ದಿ 6

ಮದ್ರಾಸ್ ವಿ.ವಿ ಮಸೂದೆ ಹಿಂದಿರುಗಿಸಿದ ಮುರ್ಮು

ಚೆನ್ನೈ (ಪಿಟಿಐ): ತಮಿಳುನಾಡು ಮದ್ರಾಸ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹಿಂದಿರುಗಿಸಿದ್ದಾರೆ ಎಂದು ಮೂಲಗಳು ಮಂಗಳವಾರ ಹೇಳಿವೆ.

ವಿಶ್ವವಿದ್ಯಾಲಯಕ್ಕೆ ಕುಲಪತಿಯನ್ನು ನೇಮಕ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡುವ ಅವಕಾಶವನ್ನು ಈ ಮಸೂದೆ ಒಳಗೊಂಡಿದೆ.

ಈ ಮಸೂದೆಯನ್ನು 2022ರ ಏಪ್ರಿಲ್‌ನಲ್ಲಿ ವಿಧಾನಸಭೆಯಲ್ಲಿ ಅಂಗೀಕರಿಸಲಾಗಿತ್ತು. ಮಸೂದೆಗೆ ಅಂಕಿತ ಹಾಕಲು ಒಪ್ಪದ ರಾಜ್ಯಪಾಲ ಆರ್.ಎನ್.ರವಿ ಅವರು ರಾಷ್ಟ್ರಪತಿಯವರ ಪರಿಗಣನೆಗಾಗಿ ಈ ಮಸೂದೆಯನ್ನು ಕಳುಹಿಸಿದ್ದರು. ಮರುಪರಿಶೀಲನೆಗಾಗಿ ಈ ಮಸೂದೆಯನ್ನು ರಾಷ್ಟ್ರಪತಿಯವರು ಇತ್ತೀಚೆಗಷ್ಟೆ ವಿಧಾನಸಭೆಗೆ ಹಿಂದಿರುಗಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಸ್ತಾವಿತ ಮಸೂದೆಯು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಬಂಧನೆಗಳು ಹಾಗೂ ಕುಲಪತಿಗಳ ನೇಮಕಕ್ಕೆ ಸಂಬಂಧಿಸಿದ ನಿಯಮಗಳಿಗೆ ವಿರುದ್ಧವಾಗಿದೆ ಎಂಬ ಕಾರಣ ನೀಡಿ, ಅವರು ಇಂತಹ ಕ್ರಮ ಕೈಗೊಂಡಿದ್ದರು.

ಮದ್ರಾಸ್ ವಿಶ್ವವಿದ್ಯಾಲಯಕ್ಕೆ 168 ವರ್ಷಗಳ ಇತಿಹಾಸ ಇದೆ. ಕಳೆದ ಎರಡು ವರ್ಷಗಳಿಂದ ವಿ.ವಿ ಕುಲಪತಿ ಹುದ್ದೆ ಖಾಲಿ ಇದೆ. ರಾಜ್ಯಪಾಲರೇ ಈಗ ಪದನಿಮಿತ್ತ ಕುಲಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿ.ವಿಗೆ ಕುಲಪತಿ ನೇಮಕ ಮಾಡುವ ಹಾಗೂ ಅವರನ್ನು ತೆಗೆದು ಹಾಕುವ ಅಧಿಕಾರವನ್ನು ರಾಜ್ಯಪಾಲರು ಹೊಂದಿದ್ದಾರೆ. ಮದ್ರಾಸ್ ವಿಶ್ವವಿದ್ಯಾಲಯ ಕಾಯ್ದೆಗೆ ತಿದ್ದುಪಡಿ ತಂದು, ರಾಜ್ಯಪಾಲರ ಈ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಬೇಕು ಎಂಬ ಅವಕಾಶವನ್ನು ಈ ತಿದ್ದುಪಡಿ ಮಸೂದೆ ಒಳಗೊಂಡಿದೆ.

ತಮಿಳುನಾಡಿನಲ್ಲಿರುವ 22 ವಿಶ್ವವಿದ್ಯಾಲಯಗಳ ಪೈಕಿ, ಮದ್ರಾಸ್ ವಿ.ವಿ ಸೇರಿ 14 ವಿ.ವಿಗಳಲ್ಲಿ ಕುಲಪತಿ ಹುದ್ದೆಗಳು ಖಾಲಿ ಇವೆ. ಸಂಚಾಲಕ ಸಮಿತಿಗಳೇ ಈ ವಿ.ವಿಗಳ ಆಡಳಿತದ ಹೊಣೆ ಹೊತ್ತಿವೆ.

ದ್ರೌಪದಿ ಮುರ್ಮು

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಬೆಲೆ ಸಿಗದೆ ಇವರಿಗೆ ನಿರಾಸೆ, ಮನೆ ಬಾಗಿಲಿಗೆ ಬರುವ ಗ್ರಾಹಕರಿಂದ ಅವರಿಗೆ ಖುಷಿ

ಕಣ್ಣೀರು ತರಿಸಿದ ಈರುಳ್ಳಿ, ಸಿಹಿ ಹಂಚಿದ ಬೆಲ್ಲ

ದರ ಕುಸಿತ: ಖರ್ಚು, ಶ್ರಮ ವ್ಯರ್ಥ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಜಿಲ್ಲೆಯಲ್ಲಿ ಈರುಳ್ಳಿ ಬೆಲೆ ಕುಸಿದಿದೆ. ಪರಿಣಾಮ ಬಹುತೇಕ ಕಡೆ ಈರುಳ್ಳಿ ಬೆಳೆ ಕಟಾವು ನಡೆಯುತ್ತಿಲ್ಲ. ಕೆಲ ರೈತರು ಸಿಕ್ಕಷ್ಟು ಬೆಲೆಗೆ ಮಾರಾಟ ಮಾಡಿ, ನಷ್ಟ ಅನುಭವಿಸಿದ್ದಾರೆ. ಕೆಲವರು ಕುರಿ, ಮೇಕೆ ಮತ್ತು ದನಗಳನ್ನು ಬಿಟ್ಟು ಮೇಯಿಸುತ್ತಿದ್ದಾರೆ.

ಗದಗ ತಾಲ್ಲೂಕಿನ ತಿಮ್ಮಾಪುರ, ಹರ್ಲಾಪುರ ಭಾಗದಿಂದ ನಿತ್ಯ 10 ಕ್ಯಾಂಟರ್‌ಗಳಷ್ಟು ಈರುಳ್ಳಿ ಬೆಂಗಳೂರಿನ ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ (ಎಪಿಎಂಸಿ) ತಲುಪುತ್ತಿದೆ. ಒಂದು ಕ್ವಿಂಟಲ್ ಈರುಳ್ಳಿ ಬೆಂಗಳೂರು ತಲುಪುವ ಹೊತ್ತಿಗೆ ₹150 ವೆಚ್ಚವಾಗುತ್ತದೆ. ಆದರೆ, ಗುಣಮಟ್ಟ ಕಡಿಮೆ ಇರುವ ಈರುಳ್ಳಿಗೆ ಅಷ್ಟು ಬೆಲೆ ಸಿಗುತ್ತಿಲ್ಲ.

‘ರೈತರು ಒಯ್ಯುವ ಎಲ್ಲಾ ಈರುಳ್ಳಿಗೂ ವ್ಯಾಪಾರಿಗಳು ಒಂದೇ ದರ ನಿಗದಿಪಡಿಸುವುದಿಲ್ಲ. ಕೊಂಡೊಯ್ದ ಈರುಳ್ಳಿಗಳನ್ನು ಗ್ರೇಡಿಂಗ್ ಮಾಡುತ್ತಾರೆ. ಗುಣಮಟ್ಟಕ್ಕೆ ಉತ್ತಮ ಬೆಲೆ, ಎರಡು ಮತ್ತು ಮೂರನೇ ದರ್ಜೆಗೆ ಕನಿಷ್ಠ ಬೆಲೆ ನಿಗದಿ ಮಾಡುತ್ತಾರೆ. ಇದರಿಂದ ತುಂಬಾ ನಷ್ಟವಾಗುತ್ತಿದೆ’ ಎಂದು ರೈತರು ನೊಂದು ನುಡಿಯುತ್ತಾರೆ.

‘ತಿಮ್ಮಾಪುರದ ರೈತ ಶಿವಪ್ಪ ಬಾಬರಿ ಡಿ.27ರಂದು 29 ಕ್ವಿಂಟಲ್ ಈರುಳ್ಳಿಯನ್ನು ಯಶವಂತಪುರ ಎಪಿಎಂಸಿಗೆ ಒಯ್ದಿದ್ದರು. ಅದರಲ್ಲಿ 10 ಕ್ವಿಂಟಲ್ ಈರುಳ್ಳಿಗೆ ಮಾತ್ರ ₹850 ದರ ಸಿಕ್ಕಿದೆ. ಉಳಿದಂತೆ ವರ್ಗೀಕರಣದ ಅನುಸಾರ ಕ್ವಿಂಟಲ್‌ಗೆ ₹500, ₹250 ಮತ್ತು ₹150 ದರ ಸಿಕ್ಕಿದೆ. ಲಾರಿ ಬಾಡಿಗೆ, ಹಮಾಲಿ ಖರ್ಚು ಕಳೆದು ₹24,530 ಹಣ ಸಿಕ್ಕಿದೆ. ಆದರೆ, ಈರುಳ್ಳಿ ಬೆಳೆಯಲು ಅವರು ಖರ್ಚು ಮಾಡಿದ್ದು ಎಕರೆಗೆ ₹40 ಸಾವಿರ. ಹಾಕಿದ್ದ ಹಣದ ಜತೆಗೆ ನಾಲ್ಕು ತಿಂಗಳ ಶ್ರಮಕ್ಕೂ ಬೆಲೆ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ರೈತ ಮುಖಂಡ ಯಲ್ಲಪ್ಪ ಬಾಬರಿ ಬೇಸರ ವ್ಯಕ್ತಪಡಿಸಿದರು.

7

ರೈತರಿಗೆ ಆಲೆಮನೆಯೇ ಅಚ್ಚುಮೆಚ್ಚು

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಪ್ರಸ್ತುತ ಮಾರುಕಟ್ಟೆಯಲ್ಲಿ ಸಾವಯವ ಬೆಲ್ಲಕ್ಕೆ ಬೇಡಿಕೆ ಬಂದಿದೆ. ಕಳೆದ ವರ್ಷ ಸಾವಯವ ಬೆಲ್ಲದ ದರ ಪ್ರತಿ 10 ಕೆಜಿಗೆ ₹500 ರಿಂದ ₹600 ಇದ್ದರೆ, ಈ ವರ್ಷ ₹700ರಿಂದ ₹800ಕ್ಕೆ ಏರಿಕೆಯಾಗಿದೆ. ಇದು ರೈತರಲ್ಲಿ ಸಂತಸ ಮೂಡಿಸಿದೆ.

‘ಕೊರೊನಾ ನಂತರದ ಕಾಲಘಟ್ಟದಲ್ಲಿ ಜನರಲ್ಲಿ ಆರೋಗ್ಯ ಕಾಳಜಿ ಹೆಚ್ಚಾಗಿ ಸಾವಯವ ಬೆಲ್ಲ ಬಳಸಲು ಇಷ್ಟಪಡುತ್ತಿದ್ದಾರೆ. ಪರಿಣಾಮವಾಗಿ ಬೆಲ್ಲ ಖರೀದಿ ಪ್ರಮಾಣವೂ ಹೆಚ್ಚಾಗಿದೆ. ಹೀಗಾಗಿ ಜಿಲ್ಲೆಯ ಮೋದಗಾ, ಮಾವಿನಕಟ್ಟಿ, ಹೊನ್ನಿಹಾಳ ಮತ್ತಿತರ ಗ್ರಾಮಗಳಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ ಕಬ್ಬು ಬೆಳೆದು ಬೆಲ್ಲ ತಯಾರಿಸುವವರ ಸಂಖ್ಯೆಯೂ ಹೆಚ್ಚಿದೆ’ ಎಂದು ತಾಲ್ಲೂಕಿನ ಮೋದಗಾ ಗ್ರಾಮದ ಆಲೆಮನೆ ಮಾಲೀಕ ಅಪ್ಪಯ್ಯ ಅಷ್ಟೇಕರ ತಿಳಿಸಿದರು.

‘3 ಎಕರೆಯಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ ಕಬ್ಬು ಬೆಳೆದಿದ್ದು, ಪ್ರತಿ ಎಕರೆಗೆ 40 ಟನ್ ಇಳುವರಿ ಬಂದಿದೆ. ಅದರಿಂದ ಸಾವಯವ ಬೆಲ್ಲ ತಯಾರಿಸಿ ಬೈಲಹೊಂಗಲದ ಅಂಗಡಿಯಲ್ಲಿ ಮಾರುತ್ತಿದ್ದೇನೆ. ಮೂರು ವರ್ಷಗಳ ಹಿಂದೆ 60 ಕ್ವಿಂಟಲ್ ಮಾರಿದ್ದೆ. ಕಳೆದ ವರ್ಷ 100 ಕ್ವಿಂಟಲ್ ಮಾರಾಟವಾಗಿತ್ತು. ಈ ವರ್ಷ 120 ಕ್ವಿಂಟಲ್ ಮಾರುವ ಗುರಿ ಇದೆ’ ಎಂದು ಮಾವಿನಕಟ್ಟಿಯ ರೈತ ಬಸವರಾಜ ಪಾಟೀಲ ಹೇಳಿದರು.

‘ಸ್ಥಳೀಯರಷ್ಟೇ ಅಲ್ಲದೇ, ಬೆಂಗಳೂರು, ಮೈಸೂರು ಮತ್ತು ಕೇರಳದ ಗ್ರಾಹಕರು ನನ್ನಿಂದ ಬೆಲ್ಲ ಖರೀದಿಸುತ್ತಾರೆ’ ಎನ್ನುತ್ತಾ, ಮಾರುಕಟ್ಟೆ ವಿಸ್ತರಿಸಿರುವುದನ್ನೂ ಅವರು ಸಂತಸದಿಂದ ವಿವರಿಸಿದರು.



7

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ.

ನಗರದಲ್ಲಿ ಇಂದು

ವಿವಿಧ ಲೇಖಕರ ಪುಸ್ತಕಗಳ ಬಿಡುಗಡೆ: ಮಲ್ಲೇಪುರಂ ಜಿ. ವೆಂಕಟೇಶ್, ಎಚ್.ಕೆ. ಲಕ್ಷ್ಮೀನಾರಾಯಣ ಅಬಿನ, ಪುಸ್ತಕಗಳ ಕುರಿತು: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ನಿಡಸಾಲೆ ಪುಟ್ಟಸ್ವಾಮಯ್ಯ, ಆಯೋಜನೆ: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

ಅಂಗಳದಲ್ಲಿ ಕಿಂಗ್ಸ್ ಪುಸ್ತಕ 'ಕುವೆಂಪು ಅವರ ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಪಾತ್ರಾವಲೋಕನ: ಉದ್ಘಾಟನೆ: ಮಾನಸ, ಉಪನ್ಯಾಸ: ಕೆ.ವೈ. ನಾರಾಯಣಸ್ವಾಮಿ, ಅತಿಥಿ: ಕೆ.ಎಂ. ಗಾಯಿತ್ರಿ, ಅಧ್ಯಕ್ಷತೆ: ರಮೇಶ್ ಬಿ., ಉಪಸ್ಥಿತಿ: ನವೀನ್ ಜೋಸೆಫ್ ಎ., ಕೆ.ಬಿ. ಕಿರಣ್ ಸಿಂಗ್, ವಿಜಯಲಕ್ಷ್ಮಿ ಎಂ.ವಿ., ತಾಂಡವಗೌಡ ಟಿ.ಎನ್., ರಮೇಶ್ ಬಿ. ಕುಡೇಚಟ್ಟ, ಲಕ್ಷ್ಮಣ ಕೊಡಸೆ, ಕರಣಂ ಪವನ್ ಪ್ರಸಾದ್, ಬಿ.ಸಿ. ಕುಹಿಲ, ಬಿ.ಎಚ್. ನಿರಗುಡಿ, ಕೆ. ಅಕ್ಷತಾ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ನ್ಯೂ ಅಕಾಡೆಮಿಕ್ ಬ್ಲಾಕ್, ಸೆಮಿನಾರ್ ಹಾಲ್, ಆರನೇ ಮಹಡಿ, ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 11

ಮಾರ್ಗಶೀರ್ಷೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯನ: ಶಂಕರ್ ನಂಬೂತಿರಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರುಭಾರತಿ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ: nagaradalli_indu@prajavani.co.in

ಭಕ್ತಿಭಾವದಿಂದ ವೈಕುಂಠ ಏಕಾದಶಿ

ನಗರದ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಕೆ • ದರ್ಶನ ಪಡೆದ ಭಕ್ತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ದೇವಸ್ಥಾನಗಳಲ್ಲಿ ವೈಕುಂಠ ಏಕಾದಶಿಯನ್ನು ಮಂಗಳವಾರ ಭಕ್ತಿಭಾವದಿಂದ ಆಚರಿಸಲಾಯಿತು.

ಪುಷ್ಪಾಲಂಕಾರದಿಂದ ಕಂಗೊಳಿಸುತ್ತಿದ್ದ ದೇವಸ್ಥಾನಗಳು, ಮುಂಜಾನೆಯೇ ಬಾಗಿಲು ತೆರೆದಿದ್ದವು. ವೈಕುಂಠ ದ್ವಾರದ ಮೂಲಕ ಸಾಗಿದ ಭಕ್ತರು, ಸರದಿಯಲ್ಲಿ ದೇವರ ದರ್ಶನ ಪಡೆದರು. ವಿಶೇಷ ಪೂಜೆ ಹಾಗೂ ವಿವಿಧ ಧಾರ್ಮಿಕ ವಿಧಿಗಳಿಗೆ ಸಾಕ್ಷಿಯಾದರು. ಭಜನೆ, ವಿಷ್ಣು ಸಹಸ್ರನಾಮ ಪಾರಾಯಣ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಬೆಳಿಗ್ಗೆಯಿಂದ ರಾತ್ರಿಯವರೆಗೆ ಹಮ್ಮಿಕೊಳ್ಳಲಾಗಿತ್ತು. ವೆಂಕಟೇಶ್ವರನ ಮೂರ್ತಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ವೈಕುಂಠ ದ್ವಾರದ ಪೂಜೆ, ಅಷ್ಟೋತ್ತರ ಶತನಾಮಾವಳಿ ಸೇವೆ, ಮಂತ್ರಪುಷ್ಪ ಸೇವೆ, ಅಷ್ಟಾವಧಾನ ಸೇವೆ ಸೇರಿದಂತೆ ವಿವಿಧ ಪೂಜೆಗಳನ್ನು ನೆರವೇರಿಸಲಾಯಿತು. 'ಇಸ್ಕಾನ್', ಕೋಟೆ ವೆಂಕಟರಮಣ, ಜೆ.ಪಿ. ನಗರದ ತಿರುಮಲಗಿರಿ ದೇವಸ್ಥಾನ, ಸಂಜಯ ನಗರದ ರಾಧಾಕೃಷ್ಣ ಮಂದಿರ ಸೇರಿದಂತೆ ಪ್ರಮುಖ ದೇಗುಲಗಳಲ್ಲಿ ಭಕ್ತರು ಅಧಿಕ ಸಂಖ್ಯೆಯಲ್ಲಿ ಸೇರಿದ್ದರು.

ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಶ್ರೀನಿವಾಸ ದೇವಸ್ಥಾನ, ಶ್ರೀನಿವಾಸ ನಗರದ ಲಕ್ಷ್ಮೀ ವೆಂಕಟೇಶ್ವರ ದೇವಾಲಯ, ಜೆ.ಪಿ.ನಗರದ ತಿರುಮಲಗಿರಿ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನ, ಮಾಗಡಿ ರಸ್ತೆಯ ಎಂ.ಜಿ.ರೈಲ್ವೆ ಕಾಲೊನಿಯ ವಿನಾ ಯಕ ವೆಂಕಟೇಶ್ವರಸ್ವಾಮಿ ದೇವಸ್ಥಾನ, ಕೆಂಗೇರಿಯ ಚಿಟ್ಟನಹಳ್ಳದ ಸ್ಥಂಭದ ಲಕ್ಷ್ಮೀರಂಗನಾಥಸ್ವಾಮಿ, ಕಲ್ಲೇಶಿವಪುರದ ವೀರಾಂಜನೇಯಸ್ವಾಮಿ ದೇವಸ್ಥಾನ, ಯಲಚೇನಹಳ್ಳಿಯ ವೆಂಕಟರಮಣ ಸ್ವಾಮಿ ಮತ್ತು ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಏಕಾದಶಿ ಆಚರಣೆ ಶ್ರದ್ಧಾ ಭಕ್ತಿಯಿಂದ ನಡೆಯಿತು.

ಮಾಗಡಿ ರಸ್ತೆಯ ಎಂ.ಜಿ. ರೈಲ್ವೆ ಕಾಲೊನಿಯ ವಿನಾಯಕ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬೆಳಿಗ್ಗೆ 5 ಗಂಟೆಯಿಂದಲೇ ವಿವಿಧ ಧಾರ್ಮಿಕ ವಿಧಿವಿಧಾನಗಳು ಪ್ರಾರಂಭವಾದವು. ಬೆಳಿಗ್ಗೆಯಿಂದ ರಾತ್ರಿಯವರೆಗೂ ಭಜನೆ, ವಿಷ್ಣು ಸಹಸ್ರನಾಮ ಪಾರಾಯಣ, ಸಂಗೀತ ಕಛೇರಿ ಹಾಗೂ ಭರತನಾಟ್ಯ ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿತ್ತು.

ಶ್ರೀ ಪಾಂಡುರಂಗ ವಿಷ್ಣುಸಹಸ್ರನಾಮ ಮಂಡಳಿಯಿಂದ ಮಲ್ಲೇಶ್ವರ ಆಟದ ಮೈದಾನದ ಎದುರು ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಬೆಣ್ಣೆ ಗೋವಿಂದಪ್ಪ ರಸ್ತೆಯಲ್ಲಿರುವ ಶ್ರೀವ್ಯಾಸರಾಜ ಮಠದಲ್ಲಿ (ಸೋಸಲೆ) ಅಖಂಡ ಭಾಗವತ ಪ್ರವಚನ ಸಮಾರಂಭ ಆಯೋಜಿಸಲಾಗಿತ್ತು. ಮರಿಯಪ್ಪನಪಾಳ್ಯದ ಮಾತಾ ಅಮೃತಾನಂದಮಯಿ ಗೋಪುರದ ಬಳಿ ವಿಷ್ಣೇಶ್ವರ ಕಲಾ ಸಂಘವು ಹಮ್ಮಿಕೊಂಡಿದ್ದ 'ಶ್ರೀನಿವಾಸ ಕಲ್ಯಾಣ' ನಾಟಕವು ನೆರೆದಿದ್ದವರನ್ನು ರಂಜಿಸಿತು.

1.5 ಲಕ್ಷ ಭಕ್ತರು ಭೇಟಿ

ಮಹಾಲಕ್ಷ್ಮಿ ಲೇಔಟ್‌ನ ಹರೇ ಕೃಷ್ಣ ಗಿರಿಯಲ್ಲಿ ಇರುವ ಇಸ್ಕಾನ್ ಹಾಗೂ ವಸಂತಪುರದಲ್ಲಿ ಇರುವ ವೈಕುಂಠ ಗಿರಿಯಲ್ಲಿ ಅದ್ದೂರಿಯಾಗಿ ವೈಕುಂಠ ಏಕಾದಶಿ ಆಚರಿಸಲಾಯಿತು. ಮುಂಜಾನೆ 3 ಗಂಟೆಗೆ ಶ್ರೀನಿವಾಸ ಗೋವಿಂದನಿಗೆ ಸುಪ್ರಭಾತ ಸೇವೆಯೊಂದಿಗೆ ಉತ್ಸವ ಪ್ರಾರಂಭವಾಯಿತು. ನಂತರ ವೇದ ಮಂತ್ರ ಪಠಣದೊಂದಿಗೆ ಪಂಚಾಮೃತ ಅಭಿಷೇಕ ನಡೆಯಿತು. ಉತ್ಸವ ಮೂರ್ತಿಗಳ ಮೆರವಣಿಗೆ, ಶ್ರೀಕೃಷ್ಣ, ರುಕ್ಮಿಣಿ ಮತ್ತು ಸತ್ಯಭಾಮ ಕಲ್ಯಾಣೋತ್ಸವ ಸೇರಿದಂತೆ ವಿವಿಧ ಆಚರಣೆಗಳು ನಡೆದವು. ಈ ಎರಡೂ ದೇವಾಲಯಗಳಿಗೆ ತಲಾ 1.5 ಲಕ್ಷ ಭಕ್ತರು ಭೇಟಿ ನೀಡಿದ್ದರು. ಭಕ್ತಾದಿಗಳಿಗೆ ಲಡ್ಡು ಪ್ರಸಾದ ವಿತರಿಸಲಾಯಿತು.

ರಾಜಾಜಿನಗರದ ಕೈಲಾಸ ವೈಕುಂಠ ಮಹಾಕ್ಷೇತ್ರದಲ್ಲಿ ಭಕ್ತಾದಿಗಳು ದೇವರ ದರ್ಶನ ಪಡೆದರು ಪ್ರಜಾವಾಣಿ:ರಂಜು ಪಿ

ಜೆ.ಪಿ.ನಗರದ ತಿರುಮಲಗಿರಿ ಲಕ್ಷ್ಮೀ ವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ಭಕ್ತರು ದೇವರಿಗೆ ವಿಶೇಷ ಪೂಜೆ ನೆರವೇರಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

17ನೇ ವಾರ್ಷಿಕ ಚಿರಸ್ಮರಣೆ

ಶ್ರೀ ಕೆ ಬಿ ಜಯರಾಮ ರೆಡ್ಡಿ

(ಸ್ಥಾಪಕರು: ಜೆ.ಆರ್ ಗ್ರೂಪ್ ಆಫ್ ಕಂಪನೀಸ್)

23-03-1943 - 31-12-2008

ನೀವು ನಮ್ಮನ್ನಗಲಿ ಇಂದಿಗೆ 17 ವರ್ಷವಾಯಿತು, ನಿಮ್ಮ ನೆನಪು ನಮ್ಮಲ್ಲಿ ಶಾಶ್ವತವಾಗಿದೆ, ನಿಮ್ಮ ಆಶೀರ್ವಾದವು ನಮ್ಮ ಜೀವನದ ದಾರಿದೀಪವಾಗಿದೆ. ದೇವರು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತಾ ಸದಾ ಸ್ಮರಿಸುವ

ಧರ್ಮಪತ್ನಿ: ಶ್ರೀಮತಿ ರತ್ನಮ್ಮ,
ಡಾ|| ಕೆ ಜೆ ಪುರುಷೋತ್ತಮ ಮತ್ತು ಕುಟುಂಬದವರು,
ಡಾ|| ಕೆ ಜೆ ಚಂದ್ರಶೇಖರ್ ಮತ್ತು ಕುಟುಂಬದವರು,
ಡಾ|| ಎಸ್ ಆರ್ ನಾಗರಾಜ್ ಕುಟುಂಬದವರು,
ಬಂಧುಗಳು ಮತ್ತು ಸ್ನೇಹಿತರು.

ಕರ್ನಾಟಕ ಸರ್ಕಾರ
(ಆರ್ಥಿಕ ಇಲಾಖೆ)

ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿಕಾಸಂ)

ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು – 560060
ದೂ: 080–26971000, ವೆಬ್‌ಸೈಟ್: www.fpibengaluru.karnataka.gov.in

ಸಂಖ್ಯೆ: FPI-PROC0TNDR(GRDN)/1/2025-ADMN ದಿನಾಂಕ: 31.12.2025

ಇ–ಟೆಂಡರ್ ಪ್ರಕಟಣೆ

ವಿತ್ತೀಯ ಕಾರ್ಯನೀತಿ ಸಂಸ್ಥೆಯು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟಿ ಪದ್ಧತಿಯಲ್ಲಿ ಸಂಬಂಧಿತ ಏಜೆನ್ಸಿಗಳಿಂದ ಕೆಳಕಂಡ ಸೇವೆಯನ್ನು ಪಡೆಯಲು ಟೆಂಡರ್ ಕರೆಯಲಾಗಿದೆ.

"To Provide Comprehensive Annual Maintenance Contract for Maintenance of Garden, Landscape and Potted Plants etc., in Fiscal Policy Institute".

Last date: **16.01.2026 till 5.30 PM.**

ಸದರಿ ಟೆಂಡರ್‌ನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/– ನಿರ್ದೇಶಕರ ಪರವಾಗಿ
ವಿತ್ತೀಯ ಕಾರ್ಯನೀತಿ ಸಂಸ್ಥೆ

DIPR/CP/YC/4733/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂಖ್ಯೆ. ಬಿಡಿಎ/ಇಎಂ/ಇಇ/ಐಡಿ/ಟೆಂಡರ್/277/2025–26 ದಿನಾಂಕ: 30.12.2025

ಟೆಂಡರ್ ಆಹ್ವಾನ ಪ್ರಕಟಣೆ

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ http://kppp.karnataka.gov.in ಮೂಲಕ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ (ಇನ್ನು ಮುಂದೆ "ಪ್ರಾಧಿಕಾರ" ಎಂದು ಕರೆಯಲಾಗುತ್ತದೆ), ವಿವಿಧ ನಾಗರಿಕ ಸೌಲಭ್ಯಗಳು, ಗುಣಮಟ್ಟದ ಮೂಲಸೌಕರ್ಯಗಳನ್ನು ಒದಗಿಸುವ ಮೂಲಕ ಬೆಂಗಳೂರು ಪ್ರದೇಶದ ಅಭಿವೃದ್ಧಿಗೆ ನೋಡಲ್ ಏಜೆನ್ಸಿಯಾಗಿದೆ ಮತ್ತು ಈ ಪ್ರಯತ್ನದ ಭಾಗವಾಗಿ, ಪ್ರಾಧಿಕಾರವು "ಹೆಬ್ಬಾಳ ಮೇಲು ಸೇತುವೆ ಪ್ರದೇಶದಿಂದ ಪಶುವೈದ್ಯ ಕಾಲೇಜಿನವರೆಗೆ ಕೆವಿಎಎಫ್‌ಎಸ್‌ಯು ಆವರಣ, ಬೆಂಗಳೂರು ಮುಖಾಂತರ "ಇಪಿಸಿ" ಆಧಾರದ ಮೇಲೆ 3 ಪಥದ ಜೋಡಿ ಸುರಂಗ ಮಾರ್ಗ (ಕಟ್ ಅಂಡ್ ಕವರ್) ಮತ್ತು ಆಯ್ದ ರೀಚ್‌ಗಳಲ್ಲಿ ಕ್ಯಾಸ್ಟ್ ಇನ್ ಸಿಟು ಆರ್‌ಸಿಸಿ ಬಾಕ್ಸ್ ನಿರ್ಮಿಸಲು" ನಿರ್ಧರಿಸಿದೆ. ಈ ನಿಟ್ಟಿನಲ್ಲಿ, ಪ್ರಾಧಿಕಾರವು ಪಾರದರ್ಶಕ ಮತ್ತು ಸ್ಪರ್ಧಾತ್ಮಕ ಬಿಡ್ಡಿಂಗ್ ಪ್ರಕ್ರಿಯೆಯ ಮೂಲಕ ಕನ್ಸೆಷನೇರ್‌ನ್ನು ಆಯ್ಕೆ ಮಾಡಲು ಅಪೇಕ್ಷಿಸಿದೆ.

ಕೆಲಸದ ಹೆಸರು	ಯೋಜನೆಯ ವೆಚ್ಚ	ಇಎಂಡಿ
ಹೆಬ್ಬಾಳ ಮೇಲು ಸೇತುವೆ ಪ್ರದೇಶದಿಂದ ಪಶುವೈದ್ಯ ಕಾಲೇಜಿನವರೆಗೆ ಕೆವಿಎಎಫ್‌ಎಸ್‌ಯು ಆವರಣ, ಬೆಂಗಳೂರು ಮುಖಾಂತರ "ಇಪಿಸಿ" ಆಧಾರದ ಮೇಲೆ 3 ಪಥದ ಜೋಡಿ ಸುರಂಗ ಮಾರ್ಗ (ಕಟ್ ಅಂಡ್ ಕವರ್) ಮತ್ತು ಆಯ್ದ ರೀಚ್‌ಗಳಲ್ಲಿ ಕ್ಯಾಸ್ಟ್ ಇನ್ ಸಿಟು ಆರ್‌ಸಿಸಿ ಬಾಕ್ಸ್ ನಿರ್ಮಾಣ.	ರೂ. 1,246.00 ಕೋಟಿ	ರೂ.12.50 ಕೋಟಿ.

ಪ್ರಸ್ತಾವನೆಗಾಗಿ ಕೋರಿಕೆ ("ಆರ್‌ಎಫ್‌ಪಿ") ಅನುಸಾರ ಆಸಕ್ತ ವ್ಯಕ್ತಿಗಳಿಂದ ಪ್ರಾಧಿಕಾರವು ಪ್ರಸ್ತಾವನೆಗಳನ್ನು ("ಬಿಡ್‌ಗಳು") ಆಹ್ವಾನಿಸಿದೆ. ಬಿಡ್‌ದಾರರಿಗೆ ಸೂಚನೆಗಳು, ಅರ್ಹತೆಯ ಮಾನದಂಡಗಳು ಮತ್ತು ಮೌಲ್ಯಮಾಪನಕ್ಕಾಗಿ ಮಾನದಂಡಗಳನ್ನು ಒಳಗೊಂಡಿರುವ ಆರ್‌ಎಫ್‌ಪಿ ದಾಖಲೆಯನ್ನು ಕರ್ನಾಟಕ ಸರ್ಕಾರದ ("ಜಿಒಕೆ") ಕೆಪಿಪಿಪಿ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಬಿಡ್‌ಗಳನ್ನು ಆರ್‌ಎಫ್‌ಪಿಯ ನಿಬಂಧನೆಗಳ ಪ್ರಕಾರ ಸಲ್ಲಿಸಬೇಕು.

ಪ್ರಮುಖ ವಿವರಗಳು: ಆರ್‌ಎಫ್‌ಪಿ ನೀಡಿಕೆ **ದಿನಾಂಕ: 03.01.2026,** ಬಿಡ್ ವಿಚಾರಣೆಗಳನ್ನು ಸಲ್ಲಿಸುವ **ದಿನಾಂಕ: 12.01.2026 ರಂದು 16:00 ಗಂಟೆಗೆ.** ಪೂರ್ವ ಬಿಡ್ ಸಭೆ ದಿನಾಂಕ: **16.01.2026 ರಂದು 16:00 ಗಂಟೆಗೆ.** ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 09.02.2026 ರಂದು 16:00 ಗಂಟೆವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 11.02.2026 ರಂದು 16:30 ಗಂಟೆಗೆ.**

ಸಂಪರ್ಕ ವ್ಯಕ್ತಿ: ಕಾರ್ಯನಿರ್ವಾಹಕ ಅಭಿಯಂತರರು

ವಿಳಾಸ: ಮೂಲಸೌಲಭ್ಯ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560020, ದೂರವಾಣಿ : 9449377654 ಇ–ಮೇಲ್: **bdaeeprr@gmail.com**

ಸೂಚನೆ:– ಈ ಆಹ್ವಾನವನ್ನು ರದ್ದುಗೊಳಿಸುವ ಮತ್ತು / ಅಥವಾ ಅಂತಹ ಆಹ್ವಾನಕ್ಕೆ ಯಾವುದೇ ಹೊಣೆಗಾರಿಕೆ ಅಥವಾ ಬಾಧ್ಯತೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆ ಈ ಆಹ್ವಾನಕ್ಕೆ ತಿದ್ದುಪಡಿಗಳೊಂದಿಗೆ ಅಥವಾ ಇಲ್ಲದೆ ಹೊಸ ಬಿಡ್‌ಗಳನ್ನು ಆಹ್ವಾನಿಸುವ ಹಕ್ಕನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

ಸಹಿ/–ಇಂಜಿನಿಯರ್ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಜ.4ರಂದು ಚಿತ್ರಸಂತೆ ಆಯೋಜನೆ

ಪರಿಸರ ವಿಷಯ–1,500ಕ್ಕೂ ಅಧಿಕ ಕಲಾವಿದರಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತು ಜ.4ರಂದು 23ನೇ ಚಿತ್ರಸಂತೆ ಹಮ್ಮಿಕೊಂಡಿದ್ದು, ಪ್ರಕೃತಿ ವಿಷಯಾಧಾರಿತ ಕಲಾಕೃತಿಗಳ ಪ್ರದರ್ಶನ ಈ ಬಾರಿಯ ವಿಶೇಷವಾಗಿರಲಿದೆ.

'ನಗರದ ಕುಮಾರ ಕೃಪಾ ರಸ್ತೆ, ಕ್ರೆಸೆಂಟ್ ರಸ್ತೆ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣ, ಸೇವಾದಳ ಮೈದಾನದಲ್ಲಿ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಚಿತ್ರಸಂತೆ ನಡೆಯಲಿದೆ. 22 ರಾಜ್ಯಗಳು, ನಾಲ್ಕು ಕೇಂದ್ರಾಡಳಿತ ಪ್ರದೇಶಗಳ 1,500ಕ್ಕೂ ಹೆಚ್ಚು ಕಲಾವಿದರು ಭಾಗಿಯಾಗಲಿದ್ದಾರೆ. ದುಬೈನ ಕಲಾವಿದರೊಬ್ಬರು ಪಾಲ್ಗೊಳ್ಳುವರು' ಎಂದು ಪರಿಷತ್ತಿನ ಅಧ್ಯಕ್ಷ ಬಿ.ಎಲ್.ಶಂಕರ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಈ ಬಾರಿ ಪ್ರದರ್ಶನದಲ್ಲಿ ಪಾಲ್ಗೊಳ್ಳುವುದಕ್ಕೆ 3,314 ಮಂದಿ ಕಲಾವಿದರು ಅರ್ಜಿ ಸಲ್ಲಿಸಿದ್ದರು. ಇದರಲ್ಲಿ ಶೇ 50ರಷ್ಟನ್ನು ಕರ್ನಾಟಕದವರಿಗೆ ನೀಡಲಾಗಿದೆ. ಬೇರೆ ರಾಜ್ಯಗಳ ಕಲಾವಿದರಿಗೂ ಅವಕಾಶ ನೀಡಲಾಗಿದೆ. 473 ಮಹಿಳೆಯರೂ ಸಂತೆಯಲ್ಲಿ ಕಲಾಕೃತಿಗಳನ್ನು ಪ್ರದರ್ಶಿಸುವರು, ಇವರಲ್ಲಿ ಹಿರಿಯರು, ಅಂಗವಿಕಲರೂ ಇದ್ದಾರೆ. ಅವಕಾಶ ಸಿಗದವರು ವರ್ಚುವಲ್ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶಿಸಬಹುದು' ಎಂದರು.

'ಬೆಂಗಳೂರಿನ ಭೌಗೋಳಿಕ ರಚನೆ, ನದಿಗಳು, ಅರಣ್ಯ, ವನ್ಯಜೀವಿ, ಮಾನವನ ಸಹಬಾಳ್ವೆ ಹಾಗೂ ಹವಾಮಾನ ಬದಲಾವಣೆಯ ಪರಿಣಾಮ ಪ್ರದರ್ಶನದ ಪ್ರಮುಖ ವಸ್ತುವಿಷಯವಾಗಿರಲಿದೆ. ಕಲೆಗಳ ಮೂಲಕ ವೈಜ್ಞಾನಿಕ ಅರಿವು, ಪರಿಸರದ ಮಹತ್ವ ಸಾರುವುದು ನಮ್ಮ ಉದ್ದೇಶ. ಪ್ರಕೃತಿ ವಿಷಯಾಧಾರಿತ ಕಲಾ ಪ್ರದರ್ಶನವು ಜ.12ರವರೆಗೆ ಚಿತ್ರಕಲಾ ಪರಿಷತ್ತಿನ ನಾಲ್ಕು ಗ್ಯಾಲರಿಗಳಲ್ಲಿ ನಡೆಯಲಿದೆ' ಎಂದರು.

'ಬೆಳಿಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಿತ್ರಸಂತೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಲಾ ಪ್ರದರ್ಶನ ಉದ್ಘಾಟಿಸುವರು. ಚಿತ್ರಸಂತೆಗೆ ರಾಜ್ಯ ಸರ್ಕಾರ ₹50 ಲಕ್ಷ ನೀಡಿದೆ. ನೋಂದಣಿ, ದಾನಿಗಳ ನೆರವಿನಿಂದ ಕಾರ್ಯಕ್ರಮ ನಡೆಸಲಾಗುತ್ತಿದೆ' ಎಂದು ಶಂಕರ್ ತಿಳಿಸಿದರು.

'ಮೆಜೆಸ್ಟಿಕ್, ಮಂತ್ರಿ ಮಾಲ್, ವಿಧಾನಸೌಧ ಮೆಟ್ರೊ ನಿಲ್ದಾಣದಿಂದ ಶಿವಾನಂದ ವೃತ್ತದವರೆಗೆ ಫೀಡರ್ ಬಸ್ ಸೇವೆ ಇರಲಿದೆ. ಹಸಿರು ಸ್ವಯಂ ಸೇವಕರು ಕಲಾಸಕ್ತರಿಗೆ ಅಗತ್ಯ ಮಾರ್ಗದರ್ಶನ ನೀಡುವರು' ಎಂದರು.

ಮುಖ್ಯಾಂಶಗಳು

- ಮೈಸೂರು, ತಂಜಾವೂರು ಶೈಲಿಯ ಕಲಾಕೃತಿಗಳು ಲಭ್ಯ
- ರಾಜಸ್ಥಾನಿ, ಮಧುಬನಿ ಶೈಲಿಯ ಕಲಾಕೃತಿಗಳ ಪ್ರದರ್ಶನ
- ಪ್ರಮುಖರ ಕಾರ್ಟೂನ್ ಪ್ರದರ್ಶನ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಈ ಬಾರಿ ಚಿತ್ರಸಂತೆ ನಡೆಯುವ ಮಾರ್ಗದಲ್ಲಿ ಹೆಚ್ಚಿನ ಭದ್ರತಾ ವ್ಯವಸ್ಥೆ ಮಾಡಲಾಗುತ್ತದೆ

ಬಿ.ಎಲ್.ಶಂಕರ್, ಅಧ್ಯಕ್ಷ ಕರ್ನಾಟಕ ಚಿತ್ರಕಲಾ ಪರಿಷತ್ತು

ಧರಾಮೃತ ಗೊಬ್ಬರ ಬಿಡುಗಡೆ

ಬೆಂಗಳೂರು: ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ ಕೋ–ಆಪರೇಟಿವ್ ಲಿಮಿಟೆಡ್ (ಐಎಫ್‌ಎಫ್‌ಸಿಒ) ನಗರದ ಜಿಕೆವಿಕೆ ಆವರಣದಲ್ಲಿರುವ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಆಯೋಜಿಸಿದ್ದ ಮೆಗಾ ಕೋ–ಆಪರೇಟಿವ್ ಆ್ಯಂಡ್ ಫಾರ್ಮರ್ಸ್ ಕಾನ್ಫರೆನ್ಸ್‌ನಲ್ಲಿ ಧರಾಮೃತ ಗೊಬ್ಬರ ಬಿಡುಗಡೆಗೊಳಿಸಲಾಯಿತು.

ಐಎಫ್‌ಎಫ್‌ಸಿಒ ಅಧ್ಯಕ್ಷ ದಿಲೀಪ್ ಸಂಗಾಣಿ ಮಾತನಾಡಿ, 'ಕಳೆದ ಹಲವು ದಶಕಗಳಿಂದ ಸಹಕಾರಿಗಳು ಭಾರತದ ಕೃಷಿ ಬೆಳವಣಿಗೆಯ ಆತ್ಮವಾಗಿದ್ದಾರೆ. ರೈತ ಕೇಂದ್ರಿತ ಆವಿಷ್ಕಾರಗಳನ್ನು ನಿರಂತರವಾಗಿ ಪರಿಚಯಿಸುವುದು ಮತ್ತು ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವುದರ ಮೂಲಕ ನಾವು ಉತ್ಪಾದಕತೆಯನ್ನು ಹೆಚ್ಚಿಸಬೇಕು. ಇದರ ಜೊತೆಗೆ ಮಣ್ಣಿನ ಆರೋಗ್ಯ ಕಾಪಾಡಬೇಕು' ಎಂದು ಹೇಳಿದರು.

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸೂಚನೆ ಸಂಖ್ಯೆ
ಇ–ಜಿಎಸ್‌ಯು–ಇಎಲ್‌ಇ–2025–26–ಒಟಿ–6
ದಿನಾಂಕ 24.12.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಅನ್ನು ಆಹ್ವಾನಿಸಿದ್ದಾರೆ.

ಕ್ರ.ಸ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು ದಂಡು ಯಾರ್ಡ್‌ನಲ್ಲಿ ಪ್ರಸ್ತಾವಿತ ಪಾಯಿಂಟ್‌ಗಳ ಶಿಫ್ಟಿಂಗ್ ಮತ್ತು ಕ್ರಾಸಿಂಗ್‌ಗಳಿಗೆ ಸಂಬಂಧಿಸಿದಂತೆ ಒಎಚ್‌ಇ ಮಾರ್ಪಾಡು ಕಾರ್ಯಗಳು.	ರೂ. 1,55,30,559.48/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
15–01–2026 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಉಪ ಮುಖ್ಯ ವಿದ್ಯುತ್ ಅಭಿಯಂತರರು, ಗತಿ ಶಕ್ತಿ ಘಟಕ, ಬೆಂಗಳೂರು

ಪಿಯುಬಿ/784/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

AVANTIS SUPER SPECIALITY CLINIC
Sahakar Nagar Main road, Byatarayanapura, Bengaluru
(Launching February 2025)
WANTED
Applications are invited for the following posts
- Clinic Manager - 1
- Receptionist / Front Office Executive - 2
- Pharmacist - 1
- Laboratory Technician - 1
- Staff Nurses - 2
- Physiotherapist - 1
- X-Ray Technician - 1

Requirements:- Relevant academic qualifications, prior experience professionalism, and commitment to quality patient care.
Please email your CV with recent photograph to: jobs.avantishealth@gmail.com (within 7 days)
(Only shortlisted candidates will be contacted for interview).
Contact : 9481024011

Marketing & Sales

WANTED SALES Managers (Male & Female), Sales Executives, Deliver Boys and Telecallers. Contact 8867627879

Walk-in

ಬೇಕಾಗಿದ್ದಾರೆ
AMB ಸಿನಿಮಾಸ್ ಬೆಂಗಳೂರಿನ ಕಪಾಲ ಮಾಲ್ ನಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸುತ್ತಿದೆ, ನಮ್ಮೊಂದಿಗೆ ಕೆಲಸ ಮಾಡಲು ನಾವು **ESP** ಗಳನ್ನು ನೇಮಿಸಿಕೊಳ್ಳುತ್ತಿದ್ದೇವೆ, ಆಸಕ್ತರು **AMB** ಸಿನಿಮಾಸ್, ಕಪಾಲ ಮಾಲ್, ಗಾಂಧಿನಗರ ಬೆಂಗಳೂರು ಇಲ್ಲಿಗೆ ಭೇಟಿ ನೀಡಬಹುದು.
ಅರ್ಹತೆ: 10+ 2.
ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ನಮ್ಮ ತಂಡವನ್ನು ಸಂಪರ್ಕಿಸಿ.
ಯೋಗೇಶ್: 9739221899
ಕುಶಾಲ್: 8050116194

EDUCATIONAL

School

SITUATION REQUIRED School Head with 30 years of experience in reputed educational institutions is looking for an administrative post anywhere in Karnataka. Interested may mail to qualityeducationquest@gmail.com or contact-7022827076

Teachers / Professors

WANTED
A Reputed CBSE School up to +2 having 2000 students run by Trust Requires the following positions:
1. TEACHERS: (CBSE & STATE) Trained Post Graduate & Graduate with Experience.
Subjects: Chemistry, Physics, Social Science, Hindi, Computer Science, Mathematics, English, Kannada, Applied Maths, Sanskrit, Librarian, Science, (PCM & CBZ), Trained Pre- Primary Teachers & School Bus Drivers with Heavy Licence.
2. DOCTORS For Our Medical Centre: MBBS with Experience.
3. ACCOUNTANT: Male Only- B.com With Tally And Knowledge Of PF/ESI/GST/TDS, Professional Tax Etc. With Experience.
How to Apply:- Kindly apply by sending your updated CV with photo and copies of educational documents latest by **14th January 2026**, to E-mail Id: **ayyappaedutrust@gmail.com**
SREE AYYAPPA EDUCATIONAL & CHARITABLE TRUST
Sree Ayyappan Temple Complex, S.M.Road, Jalahalli West, Bangalore-560015.
Mobile No: 94831 05248 / 98451 06037.

VIDYA MANDIR Public School, Amruthahalli, invites applications for the Following Position Pre-Primary coordinator, Receptionist, office admin and experienced teachers in all subjects (Near Hebbal) for Primary, Middle and High school. Contact: 9880822028/,9448711695

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PUBLIC NOTICE
Notice is hereby given that the Apartment Owners of Adonai Palms Apartment situated at Hennur Bagalur Main Road, Hiremath Layout, near BDS Garden, Narayanapura, Geddalahalli, Bengaluru – 560077, have resolved on 20.12.2025 to register Adonai Palms Apartment Owners' Co-operative Society Ltd. under the Karnataka Co-operative Societies Act, 1959.
Objections, if any, may be filed with the Assistant Registrar of Co-operative Societies, Bengaluru, within 15 days from the date of publication.
Place: Bengaluru
Date: 31st December 2025
Sd/-
Authorised Signatory

REAL ESTATE SELLING

Sites

Koramangala

KORAMANGALA 8TH Block Commercial property for sale 3200sqft. INR 37.7k/sqft Slightly Negotiable. Whatsapp Message Only 9663766492

BUILDERS ESSENTIAL

Water Proofing

LEAKAGE...
LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

PERSONAL

Change of Name

CHANGE OF NAME
I, RAMCHANDRA, RAMACHANDRA RAMCHANDRA D & RAMCHANDRA DHULEKAR residing at # 681, Krishnappa Layout, Subbannapalya, Benglauru-560033, declare that the above names pertain to me only. Henceforth I shall be known as **RAMCHANDRA D,** vide affidavit dt:30.12.2025 before notary Y.R.Chandrasekar, Bengaluru.

CHANGE OF NAME
I, **M.J. Deepa Rodrigues, Deepa Rodrigues, Deepa Pinto, M.J. Deepa Pinto, Merlyn Joan Deepa Pinto, Deepa Pinto M.J.** and **Deepa Merlyn Joan Rodrigues,** residing at No. 26, 1st A Main, 1st Block, Jakkasandra Extension, Koramangala, Bengaluru-560034, declare that the above names pertain to me only & henceforth I shall be known as **MERLYN JOAN DEEPA RODRIGUES** vide affidavit dated 09-Sep-2025, before notary K.V Mani, Bengaluru.

CHANGE OF NAME
I, **Anthony Peter A,** residing at No.14, Sunkalfarm Hut, 2nd Cross, 2nd Main, Wilson Garden, Adugodi Post, Bengaluru-560030 have changed my name to **SIDHARTH GOWDA** vide affidavit dated 26.12.2025 before notary register Sl.No. 313, Vol No.3, Page No. 53, S Jayanth, Bengaluru. Henceforth I shall be called **SIDHARTH GOWDA** only

Lost

DOCUMENT LOST
I, **K. MANJUNATH,** S/o Krishna residing at # 05, 6th Cross, Near Shiva Temple, Naganathapura, Bengaluru, have lost my **Original Property document page No. 4 & 5, Survey No. 56/2, Site No. 16, Reg No. 4117/1992 at Govinda Agrahara Grama, Hosur Taluk, Krishnagiri Dist. Tamilnadu.** While taking Xerox. If found please contact: **8861024714**

PUBLIC NOTICE

PUBLIC NOTICE
This is to inform the general public that my client , M/s B & M WINDMERE, a Partnership Firm registered under the Indian Partnership Act, 1932, having its principal place of business at No 73/2, First floor, Chambenahalli, Dommasandra post, Sarjapura Main Road, Bangalore - 562 125, and having (PAN): AAPFB4688Q, represented by its Authorized Signatory Mr. Shravanth P, aged about 40 years, Son of Mr.Pilla Reddy K, has lost/misplaced the original title documents pertaining to its immovable properties bearing Plot No. 18, Plot No. 19, Plot No. 29 and Plot No. 30, having amalgamated BBMP Khatha No. 3052/2850/18 and BBMP PID No. 159606848, carved out of converted land comprised in Sy.No. 51 of Kasavanahalli Village, Varthur Hobli, Bengaluru East Taluk.
The lost documents are as follows:

Document	Date	Document Details
Sale Deed	29.01.1998	Doc.No.7853/1997-98, registered at SRO Bangalore South Taluk.
Sale Deed	28.01.1998	Doc.No.7854/1997-98, registered at SRO Bangalore South Taluk.
Sale Deed	29.01.1998	Doc.No.7855/1997-98, registered at SRO Bangalore South Taluk.
Sale Deed	28.01.1998	Doc.No.7860/1997-98, registered at SRO Bangalore South Taluk.

My client has also duly lodged a Complaint bearing E-Lost Report No.1981333/2025 dated:29/12/2025 before the HSR Police Station, Bengaluru, regarding the same. It is hereby informed to the general public that who so ever finds the above mentioned original registered documents may hand over the same to me in the below mentioned address. General Public are hereby warned that any transactions or dealings concerning the above-mentioned property, using these documents, shall be deemed invalid and shall not bind my client in any manner whatsoever.
Address: GOKUL KUMAR S O, ADVOCATE, No.350, 12th Main, Sector-5, HSR Layout, Bengaluru-560102.
Mob: 8892595626. Email: ADGVK20@GMAIL.COM.

PUBLIC NOTICE

NOTICE is hereby given that, we are investigating the title of Bharat Fritz Werner Limited, having its registered office at Plot No 50B, Peenya 2nd Phase, Industrial Area, Bangalore North Taluk, Bangalore-560058, to the property which is more fully described in the Schedule hereunder (**"Schedule Property"**).

Any person having any subsisting claim, right, title or interest, in respect of the Schedule Property or any part thereof, in any manner including by way of sale, transfer, assignment, exchange, charge, tenancy, sub-tenancy, lease, sub-lease, license, mortgage, inheritance, share, gift, devise, lien, maintenance, easement, encumbrance, trust, covenant, possession, beneficial interest or pre-emption or under any agreement or other disposition or under any suit or award passed by any Court or Authority, arbitrator, *lis-pendens*, power of attorney, bequest, FSI, development rights, partnership, family arrangement or settlement or otherwise encumbrance of any nature howsoever ("Claim"), are hereby requested to respond with documentary proof to the undersigned within 15 (Fifteen) days from the date of publication of this notice, failing which, it shall be presumed that no such Claim exists and if it existed, the claimant has relinquished such Claim and/or waived their right to exercise such Claim.

SCHEDULE PROPERTY

All that piece and parcel of immovable property being converted land measuring 8,12,393 square feet (equivalent to 18 acres 26 guntas) along with factory buildings constructed thereon, bearing EPID No 4126542357, in Ward No 16 - Jalahalli, formed in Survey No 49, situated at Peenya Village, Yashwanthpura Hobli, Bengaluru Taluk and bounded as follows:

East By : Pipeline Road;
West By : Private Property;
North By : Private Property; and
South By : Road

Dated : 31/12 /2025
Place : Bengaluru

Pavithra Thammaiah
Khaitan & Co LLP
Embassy Quest, 3rd Floor
45/1, Magrath Road
Bengaluru - 560 025
T: +91 80 4339 7000

ಮೆಕ್‌ಡೊವೆಲ್ ಹೋಲ್ಡಿಂಗ್ಸ್ ಲಿಮಿಟೆಡ್ (CIRP ನಲ್ಲಿ)

ನೋಂದಾಯಿತ ಕಚೇರಿ: 104, ಮೊದಲ ಮಹಡಿ, ರಹೇಜಾ ಚೇಂಬರ್ಸ್, 12 ಮ್ಯೂಸಿಯಂ ರಸ್ತೆ, ಬೆಂಗಳೂರು - 560001.
ದೂರವಾಣಿ: +91 6361136783 , ವೆಬ್‌ಸೈಟ್– www.mcdowellholdings.co.in
ಕಾರ್ಪೊರೇಟ್ ಗುರುತಿನ ಸಂಖ್ಯೆ L05190KA2004PLCO33485

ಕಂಪನಿಯ 21ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ ಮತ್ತು ಇ–ವೋಟಿಂಗ್

ಕಂಪನಿಯ 21ನೇ ವಾರ್ಷಿಕ ಸಾಮಾನ್ಯ ಸಭೆ (AGM) ವೀಡಿಯೊ ಕಾನ್ಫರೆನ್ಸಿಂಗ್ ("VC")/ಇತರ ಆಡಿಯೋ–ವಿಷುಯಲ್ ಮೀನ್ಸ್ ("OAVM") ಮೂಲಕ ಗುರುವಾರ, 22ನೇ ಜನವರಿ, 2026ರಂದು 11:30 AM IST ರಂದು ನಡೆಯಲಿದೆ ಎಂದು ಈ ಸೂಚನೆಯನ್ನು ನೀಡಲಾಗಿದೆ, ಕಂಪನಿಗಳ ಕಾಯಿದೆ, 2013ರ ಎಲ್ಲಾ ಅನ್ವಯವಾಗುವ ನಿಬಂಧನೆಗಳು ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("SEBI") (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015, ('LODR') ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿ 08ನೇ ಏಪ್ರಿಲ್, 2020ರ ಸಾಮಾನ್ಯ ಸುತ್ತೋಲೆ ಸಂಖ್ಯೆ.14/2020 ರೊಂದಿಗೆ ಓದಿ ಸಾಮಾನ್ಯ ಸುತ್ತೋಲೆ ಸಂಖ್ಯೆ. 17/2020 ದಿನಾಂಕ 13ನೇ ಏಪ್ರಿಲ್, 2020 ಮತ್ತು ಸಾಮಾನ್ಯ ಸುತ್ತೋಲೆ ನಂ. 20/2020 ದಿನಾಂಕ 05ನೇ ಮೇ, 2020 ಜನವರಿ 13, 2021ರ MCA ಸುತ್ತೋಲೆ ಸಂಖ್ಯೆ 02/2021ರ ನಂತರ, MCA ಸುತ್ತೋಲೆ ಸಂಖ್ಯೆ 02/2021 ದಿನಾಂಕ ಡಿಸೆಂಬರ್ 14, 2021, MCA ಸುತ್ತೋಲೆ ಸಂಖ್ಯೆ. 02/2021 ದಿನಾಂಕ ಮೇ 05, 2022, ಜನವರಿ 05 2023 ಮತ್ತು SEBI ಸುತ್ತೋಲೆ ದಿನಾಂಕ 12ನೇ ಮೇ, 2020 ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("MCA") ಮತ್ತು SEBI ("ಸಂಬಂಧಿತ ಸುತ್ತೋಲೆಗಳು") ಹೊರಡಿಸಿದ ಇತರ ಅನ್ವಯವಾಗುವ ಸುತ್ತೋಲೆಗಳು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿಯಿಲ್ಲದೆಯೇ ಎಜಿಎಂ ಕರೆ ಮಾಡುವ ಸೂಚನೆಯಲ್ಲಿ ನಿಗದಿಪಡಿಸಿದ ವ್ಯವಹಾರವನ್ನು ವಹಿವಾಟು ಮಾಡಲು. ಸದಸ್ಯರು VC/OAVM ಮೂಲಕ AGMಗೆ ಹಾಜರಾಗಲು ಸಾಧ್ಯವಾಗುತ್ತದೆ. VC/OAVM ಸೌಲಭ್ಯದ ಮೂಲಕ ಭಾಗವಹಿಸುವ ಸದಸ್ಯರನ್ನು ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 103ರ ಅಡಿಯಲ್ಲಿ ಕೋರಂ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ.

ಸಂಬಂಧಿತ ಸುತ್ತೋಲೆಗಳಿಗೆ ಅನುಸಾರವಾಗಿ, 2024-25ರ ಹಣಕಾಸು ವರ್ಷದ ಎಜಿಎಂ ಮತ್ತು ಹಣಕಾಸು ಹೇಳಿಕೆಗಳ ಸೂಚನೆ, ಜೊತೆಗೆ ರೆಸಲ್ಯೂಶನ್ ವೃತ್ತಿಪರರ ವರದಿ, ಲೆಕ್ಕಪರಿಶೋಧಕರ ವರದಿ ಮತ್ತು ಅದಕ್ಕೆ ಲಗತ್ತಿಸಬೇಕಾದ ಇತರ ದಾಖಲೆಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಲಾಗಿದೆ. ಕಂಪನಿ/ಠೇವಣಿ ಸಹಭಾಗಿ (ಗಳು) ನೊಂದಿಗೆ ಇಮೇಲ್ ವಿಳಾಸವನ್ನು ನೋಂದಾಯಿಸಿರುವ ಕಂಪನಿ ಮೇಲೆ ಹೇಳಿದ ದಾಖಲೆಗಳು ಕಂಪನಿಯ ವೆಬ್‌ಸೈಟ್‌ನಲ್ಲಿ ಅಂದರೆ www.mcdowellholdings.co.in ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ನಲ್ಲಿ ಅಂದರೆ, ಕ್ರಮವಾಗಿ BSE ಮತ್ತು NSEನ www.bseindia.com & www.nseindia.com ನಲ್ಲಿ ಲಭ್ಯವಿದೆ.

ಕಂಪನಿಗಳ ಕಾಯಿದೆ 2013ರ ಸೆಕ್ಷನ್ 108ರ ನಿಬಂಧನೆಗಳಿಗೆ ಅನುಸಾರವಾಗಿ ಕಂಪನಿಗಳ ನಿರ್ವಹಣೆ ಮತ್ತು ಆಡಳಿತ ನಿಯಮಗಳು 2014ರ ನಿಯಮ 20 ರೊಂದಿಗೆ ಓದಲಾಗಿ ಮತ್ತು SEBI ಯ ನಿಯಮ 44 (ಪಟ್ಟಿ ಮಾಡುವ ಬಾಧ್ಯತೆ ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು 2015 ಮತ್ತು ಕಾರ್ಯದರ್ಶಿಯ ಮಾನದಂಡಗಳು (SS-2), ಕಂಪನಿಯು ತನ್ನ ಸದಸ್ಯರಿಗೆ ವಿದ್ಯುನ್ಮಾನ ಸೌಲಭ್ಯವನ್ನು (ರಿಮೋಟ್ ಇ–ವೋಟಿಂಗ್) ಒದಗಿಸುವ ಮೂಲಕ ನೋಟಿಸ್‌ನಲ್ಲಿ ಉಲ್ಲೇಖಿಸಲಾದ ಎಲ್ಲಾ ವ್ಯವಹಾರಗಳನ್ನು ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಮೂಲಕ ವಹಿವಾಟು ಮಾಡಲು ಸಂತೋಷವಾಗಿದೆ.

ಎಲ್ಲಾ ಸದಸ್ಯರಿಗೆ ತಿಳಿಸುವುದೇನೆಂದರೆ:–

(ಎ) ರಿಮೋಟ್ ಇ–ವೋಟಿಂಗ್ ಅಥವಾ ಎಜಿಎಂನಲ್ಲಿ ಮತ ಚಲಾಯಿಸುವ ಮೂಲಕ ಮತ ಚಲಾಯಿಸಲು ಸದಸ್ಯರ ಅರ್ಹತೆಯನ್ನು ನಿರ್ಧರಿಸಲು ಕಟ್ ಆಫ್ ದಿನಾಂಕವು 15ನೇ ಜನವರಿ, 2026.

(ಬಿ) ರಿಮೋಟ್ ಇ–ವೋಟಿಂಗ್ 19ನೇ ಜನವರಿ, 2026 ರಂದು 09:00 ISTಕ್ಕೆ ಪ್ರಾರಂಭವಾಗುತ್ತದೆ ಮತ್ತು 21ನೇ ಜನವರಿ, 2026 ರಂದು ಸಂಜೆ IST 05:00ಕ್ಕೆ ಕೊನೆಗೊಳ್ಳುತ್ತದೆ. ಹೇಳಿದ ದಿನಾಂಕ ಮತ್ತು ಸಮಯವನ್ನು ಮೀರಿ ರಿಮೋಟ್ ಇ–ವೋಟಿಂಗ್ ಅನ್ನು ಅನುಮತಿಸಲಾಗುವುದಿಲ್ಲ.

(ಸಿ) ಇಮೇಲ್ ಕಳುಹಿಸುವ ದಿನಾಂಕದ ನಂತರ ಅಂದರೆ 26ನೇ ಡಿಸೆಂಬರ್, 2025ರ ನಂತರ ಷೇರುಗಳನ್ನು ಸ್ವಾಧೀನಪಡಿಸಿಕೊಂಡಿರುವ ಮತ್ತು ಕಂಪನಿಯ ಸದಸ್ಯರಾಗಿರುವ ವ್ಯಕ್ತಿ ಮತ್ತು ಕಟ್ ಆಫ್ ದಿನಾಂಕದಂದು ಅಂದರೆ, 15ನೇ ಜನವರಿ, 2026ರಂದು ಷೇರುಗಳನ್ನು ಹೊಂದಿರುವವರು evoting@cdsl.co.in ನಲ್ಲಿ ವಿನಂತಿಯನ್ನು ಕಳುಹಿಸುವ ಮೂಲಕ ಲಾಗಿನ್ ಮಾಡುವ ವಿಧಾನವನ್ನು ಪಡೆಯಬಹುದು. ಆದಾಗ್ಯೂ, ವ್ಯಕ್ತಿಯು ಈಗಾಗಲೇ ಇ–ವೋಟಿಂಗ್‌ಗಾಗಿ CDSL ನಲ್ಲಿ ನೋಂದಾಯಿಸಿದ್ದರೆ ಅವನು ತನ್ನ ಅಸ್ತಿತ್ವದಲ್ಲಿರುವ ಲಾಗಿನ್ ಐಡಿ/ಬಳಕೆದಾರ ID ಮತ್ತು ಪಾಸ್‌ವರ್ಡ್ ಅನ್ನು ಬಳಸಿ, ಇ ಮತದಾನದ ಮೂಲಕ ಮತ ಚಲಾಯಿಸುವುದು.

(ಡಿ) ಡಿಮೆಟಿರಿಯಲೈಸ್ಡ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ / ನವೀಕರಿಸದ, ಅವರು ತಮ್ಮ ಡಿಮ್ಯಾಟ್ ಖಾತೆಗಳನ್ನು ನಿರ್ವಹಿಸುವ ಡಿಪಾಸಿಟರಿ ಭಾಗವಹಿಸುವವರೊಂದಿಗೆ ಅವರ ಇಮೇಲ್ ವಿಳಾಸಗಳನ್ನು ನೋಂದಾಯಿಸಿ/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ.

(ಇ) AGMನ ಸೂಚನೆಯು ಕಂಪನಿಯ ವೆಬ್‌ಸೈಟ್ www.mcdowellholdings.co.in ಮತ್ತು CDSL ವೆಬ್‌ಸೈಟ್ https://www.evotingindia.com ಲಭ್ಯವಿದೆ.

(ಎಫ್) ವಿದ್ಯುನ್ಮಾನ ಮತದಾನದ ಕಾರ್ಯವಿಧಾನವು 21ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯಲ್ಲಿ ಮತ್ತು ಕಳುಹಿಸಿದ ಇಮೇಲ್‌ನಲ್ಲಿ ಲಭ್ಯವಿದೆ ಸದಸ್ಯರಿಗೆ ಮತ್ತು CDSL ವೆಬ್‌ಸೈಟ್ https://www.evotingindia.com ನಲ್ಲಿ ಮತ ಹಾಕುವುದಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿದ್ದಲ್ಲಿ, ಸದಸ್ಯರು evoting@cdsl.co.in ಮತ್ತು/ಅಥವಾ bglsta@integratedindia.in ಗೆ ಇಮೇಲ್ ಮಾಡಬಹುದು.

(ಜಿ) ಎಜಿಎಂನ ಸೂಚನೆಯಲ್ಲಿ ಸೂಚಿಸಲಾದ ಎಲ್ಲಾ ಟಿಪ್ಪಣಿಗಳನ್ನು ಮತ್ತು ನಿರ್ದಿಷ್ಟವಾಗಿ, ಎಜಿಎಂಗೆ ಸೇರುವ ಸೂಚನೆ, ರಿಮೋಟ್ ಇ–ವೋಟಿಂಗ್ ಮೂಲಕ ಅಥವಾ ಎಜಿಎಂ ಸಮಯದಲ್ಲಿ ಇ–ವೋಟಿಂಗ್ ಮೂಲಕ ಮತ ಚಲಾಯಿಸುವ ವಿಧಾನಗಳನ್ನು ಎಚ್ಚರಿಕೆಯಿಂದ ಓದಲು ಸದಸ್ಯರನ್ನು ವಿನಂತಿಸಲಾಗಿದೆ.

ಮೆಕ್‌ಡೊವೆಲ್ ಹೋಲ್ಡಿಂಗ್ಸ್ ಲಿಮಿಟೆಡ್‌ಗಾಗಿ (CIRP ನಲ್ಲಿ)
ಸಹಿ/–
ಕೊಂಡೂರು ಪ್ರಶಾಂತ್ ರಾಜು,
ವೃತ್ತಿಪರ ನಿರ್ಣಯಾತ್ಮಕರು
IBBI/IPA-002/IP-N00708/2018-19/12200

ಸ್ಥಳ : ಬೆಂಗಳೂರು
ದಿನಾಂಕ : 30.12.2025

2025 ಹಿನ್ನೋಟ

ಗತಿಸಿದ ವರ್ಷ: ನೆನಪುಗಳ ಸರಮಾಲೆ

ಮೆಟ್ರೊ ದರ ಹೆಚ್ಚಳದ ಕಹಿ, ಹೊಸ ಮಾರ್ಗಗಳಲ್ಲಿ ಸಂಚಾರದ ಸಿಹಿ ● ನೋವು, ಕಣ್ಣೀರಿಗೆ ಕಾರಣವಾದ ಘಟನೆಗಳು

● ಬಾಲಕೃಷ್ಣ ಪಿ.ಎಚ್./ಕೆ.ಎಸ್.ಸುನಿಲ್

ಬೆಂಗಳೂರು: ನಗರ ಸಂಪರ್ಕ ಸಾರಿಗೆಯಲ್ಲಿ ಪ್ರಮುಖ ಸ್ಥಾನದಲ್ಲಿರುವ ನಮ್ಮ ಮೆಟ್ರೊ 2025ರಲ್ಲಿ ಪ್ರಯಾಣ ದರ ಏರಿಕೆ, ಹಳದಿ ಮಾರ್ಗದಲ್ಲಿ ಮೆಟ್ರೊ ಆರಂಭ ಇನ್ನಿತರ ಕಾರಣಕ್ಕೆ ಹೆಚ್ಚು ಸುದ್ದಿ ಮಾಡಿತು.

ಮತ್ತೊಂದೆಡೆ ನೋವು, ಕಣ್ಣೀರಿಗೆ ಕಾರಣವಾದ ಘಟನೆಗಳೂ ನಡೆದಿವೆ. ಬೆಂಕಿ ಅವಘಡದಲ್ಲಿ ಐವರು ಕಾರ್ಮಿಕರ ಸಜೀವ ದಹನ, ಕೈದಿಗಳು ಮದ್ಯ ಕುಡಿದು ನೃತ್ಯ ಮಾಡಿದ್ದ ವಿಡಿಯೊ ಹಾಗೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಎಲ್‌ಇಟಿ ಉಗ್ರನಿಗೆ ಜೈಲು ಅಧಿಕಾರಿ ಮತ್ತು ಮನೋವೈದ್ಯ ಸಹಕಾರ ನೀಡಿದ್ದು ಭಾರಿ ಸದ್ದು ಮಾಡಿತ್ತು. ನಿರೀಕ್ಷೆಗಳ ಹೊತ್ತಿನಲ್ಲಿ 2025ನೇ ಸಾಲಿನಲ್ಲಿ ನಗರದಲ್ಲಿ ಸದ್ದು ಮಾಡಿದ್ದ ಸುದ್ದಿಗಳತ್ತ 'ಇಣುಕು ನೋಟ' ಇಲ್ಲಿದೆ...

ನಮ್ಮ ಮೆಟ್ರೊ ಹಳದಿ ಮಾರ್ಗದ ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಉಪ ಮುಖ್ಯಮಂತ್ರಿ ಶಿವಕುಮಾರ್

ನಮ್ಮ ಮೆಟ್ರೊ

- **ಫೆ.9:** ನಮ್ಮ ಮೆಟ್ರೊ ಪ್ರಯಾಣ ದರವನ್ನು ಶೇ 51.5ರಷ್ಟು ಹೆಚ್ಚಳ ಮಾಡುವಂತೆ ದರ ನಿಗದಿ ಸಮಿತಿ ಶಿಫಾರಸು ಮಾಡಿದ್ದರೂ ಬಿಎಂಆರ್‌ಸಿಎಲ್ ಶೇ 101ರಷ್ಟು ಹೆಚ್ಚಿಸಿತು.
- **ಫೆ.14:** ವಿಪರೀತ ದರ ಏರಿಕೆಗೆ ಭಾರಿ ಆಕ್ರೋಶ ವ್ಯಕ್ತವಾದ ಮೇಲೆ ಶೇ 30ರಷ್ಟು ದರ ಇಳಿಸಿದ ಬಿಎಂಆರ್‌ಸಿಎಲ್.
- **ಮೇ 9:** ಬೈಯಪ್ಪನಹಳ್ಳಿ ಮತ್ತು ಎಂ.ಜಿ. ರಸ್ತೆ ನಡುವಿನ ಆರು ಮೆಟ್ರೊ ನಿಲ್ದಾಣಗಳಲ್ಲಿ ಸುಧಾರಿತ ಸಿ.ಸಿ.ಟಿ.ವಿ ಕ್ಯಾಮೆರಾ ನಿಗಾ ವ್ಯವಸ್ಥೆ ಮತ್ತು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಅಳವಡಿಕೆ.
- **ಆ.10:** ಆರ್‌ವಿ ರಸ್ತೆ–ಬೊಮ್ಮಸಂದ್ರ 'ನಮ್ಮ ಮೆಟ್ರೊ' ಹಳದಿ ಮಾರ್ಗಕ್ಕೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು. ಇದರಿಂದ ಮಾಹಿತಿ ತಂತ್ರಜ್ಞಾನದ (ಐ.ಟಿ) ಹಬ್ ಆಗಿರುವ ಎಲೆಕ್ಟ್ರಾನಿಕ್ ಸಿಟಿಗೆ ಮೆಟ್ರೊ ಸಂಚಾರ ಆರಂಭ. ಮೆಟ್ರೊ ಪ್ರಯಾಣಿಕರ ಸಂಖ್ಯೆ 1 ಲಕ್ಷ ಹೆಚ್ಚಳವಾಯಿತು.
- **ಸೆ.11:** ನಮ್ಮ ಮೆಟ್ರೊ ಪ್ರಯಾಣ ದರ ಏರಿಕೆಯಾದ ಏಳು ತಿಂಗಳ ಬಳಿಕ ಬಿಎಂಆರ್‌ಸಿಎಲ್ ತನ್ನ ವೆಬ್‌ಸೈಟ್‌ನಲ್ಲಿ ದರ ನಿಗದಿ ಸಮಿತಿ ನೀಡಿರುವ ವರದಿಯನ್ನು ಪ್ರಕಟಿಸಿತು.
- **ಅ.2:** ಕನ್ನಡ ಮಾತನಾಡುವ ವಿಚಾರವಾಗಿ ಮಹಿಳೆಯರ ನಡುವೆ ನಡೆದಿರುವ ವಾಗ್ವಾದಕ್ಕೆ ಸಂಬಂಧಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿ ಚರ್ಚೆಗೆ ಗ್ರಾಸವಾಯಿತು.
- **ನ.2:** ಮೆಜೆಸ್ಟಿಕ್‌ನಲ್ಲಿರುವ ನಮ್ಮ ಮೆಟ್ರೊ ನಿಲ್ದಾಣದಲ್ಲಿ ತಾಯಿಯಿಂದ ಬೇರ್ಪಟ್ಟ ಆರು ವರ್ಷದ ಬಾಲಕಿಯನ್ನು ಮೆಟ್ರೊ ಸಿಬ್ಬಂದಿ ಸುರಕ್ಷಿತವಾಗಿ ತಾಯಿಯ ಕೈಗೆ ಒಪ್ಪಿಸಿದ್ದರು.
- **ಡಿ. 5:** ಕೆಂಗೇರಿ ಮೆಟ್ರೊ ನಿಲ್ದಾಣದಲ್ಲಿ ಮೆಟ್ರೊ ಬರುವ ಸಮಯದಲ್ಲಿ ಹಾರಿ ವಿಜಯಪುರದ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡರು. ಈ ವರ್ಷ ಒಟ್ಟು ಐದು ಜನರು ಮೆಟ್ರೊ ಹಳಿಗೆ ಹಾರಿದ್ದು, ನಾಲ್ಕು ಜನರು ಮೆಟ್ರೊ ಸಿಬ್ಬಂದಿಯ ತಕ್ಷಣದ ಸ್ಪಂದನದಿಂದಾಗಿ ಬದುಕಿ ಉಳಿದರು.

ಅಪರಾಧ ಲೋಕ

- **ಮಾರ್ಚ್ 24:** ಸಾರ್ವಜನಿಕ ಸ್ಥಳದಲ್ಲಿ ಮಾರಕಾಸ್ತ್ರ ಹಿಡಿದು 'ರೀಲ್ಸ್' ಮಾಡಿ ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದ ಕಿರುತೆರೆಯ ನಟರಾದ ರಜತ್ ಕಿಶನ್ ಹಾಗೂ ವಿನಯ್ ಗೌಡ ಅವರನ್ನು ಬಸವೇಶ್ವರ ನಗರ ಠಾಣೆಯ ಪೊಲೀಸರು ಬಂಧಿಸಿದರು. ಕನ್ನಡ ವಾಹಿನಿಯೊಂದರಲ್ಲಿ ಪ್ರಸಾರವಾಗುವ 'ಬಿಗ್‌ಬಾಸ್' ಕಾರ್ಯಕ್ರಮದಲ್ಲಿ ಇಬ್ಬರೂ ಸ್ಪರ್ಧಿಸಿದ್ದರು.
- **ಏಪ್ರಿಲ್ 21:** ಎಚ್‌ಎಎಲ್ ರಸ್ತೆಯ ಗೋಪಾಲನ್ ಮಾಲ್ ಬಳಿ ದ್ವಿಚಕ್ರ ವಾಹನ ಸವಾರ ಎಸ್.ಜೆ.ವಿಕಾಸ್ ಕುಮಾರ್ ಅವರ ಮೇಲೆ ವಾಯುಪಡೆ ಕೋಲ್ಕತ್ತ ನೆಲೆಯ ವಿಂಗ್ ಕಮಾಂಡರ್ ಶಿಲಾದಿತ್ಯ ಬೋಸ್ ಹಲ್ಲೆ ಮಾಡಿದ್ದರು. ದ್ವಿಚಕ್ರ ವಾಹನ ಸವಾರನ ಮೇಲೆ ಶಿಲಾದಿತ್ಯ ಬೋಸ್ ಹಲ್ಲೆ ನಡೆಸಿದ್ದ ದೃಶ್ಯಾವಳಿಗಳು ಜಾಲತಾಣಗಳಲ್ಲಿ ಹರಿದಾಡಿ, ರಾಜ್ಯದಲ್ಲಿ ಭಾರಿ ಸದ್ದು ಮಾಡಿತ್ತು.
- **ಜುಲೈ 14:** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಎಲ್‌ಇಟಿ ಉಗ್ರ ನಾಸೀರ್‌ಗೆ ಕಾರಾಗೃಹ ಮನೋವೈದ್ಯ ಡಾ.ನಾಗರಾಜ್ ಹಾಗೂ ಜೈಲಿನ ಎಎಸ್‌ಐ ಚಾಂದ್ ಪಾಷಾ ಸಹಕಾರ ನೀಡಿದ್ದ ಆರೋಪದ ಮೇರೆಗೆ ಇಬ್ಬರ ಬಂಧನ. ಈ ಇಬ್ಬರು ಕೈದಿಗಳಿಗೆ ಹಾಗೂ ಉಗ್ರರಿಗೆ ಹಣದ ಆಸೆಗೆ ಮೊಬೈಲ್ ಹಾಗೂ ಶಂಕಿತ ಉಗ್ರರಿಗೆ ಮಾಹಿತಿ ನೀಡುತ್ತಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿತ್ತು.

- **ಜುಲೈ 28:** ನಟ ದರ್ಶನ್ ಅವರ ಅಭಿಮಾನಿಗಳು ಎಂದು ಹೇಳಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶಗಳನ್ನು ಹಾಕಿ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ನಟಿ ರಮ್ಯಾ ಅವರು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರಿಗೆ ನಾಲ್ಕು ಪುಟಗಳ ದೂರು ನೀಡಿದರು. 43 ಖಾತೆಗಳನ್ನು ಉಲ್ಲೇಖಿಸಿ ದೂರು ನೀಡಿ ಕ್ರಮಕ್ಕೆ ಕೋರಿದರು.

ಹಲಸೂರು ಗೇಟ್ ಸಮೀಪದ ನಗರ್ತಪೇಟೆಯ ಪ್ಲಾಸ್ಟಿಕ್ ಮ್ಯಾಟ್ ಗೋದಾಮಿನಲ್ಲಿ ಸಂಭವಿಸಿದ್ದ ಬೆಂಕಿ ಅವಘಡ

- **ಆ.19:** ಹಲಸೂರು ಗೇಟ್ ಸಮೀಪದ ನಗರ್ತಪೇಟೆಯಲ್ಲಿ ನಡೆದ ಪ್ಲಾಸ್ಟಿಕ್ ಮ್ಯಾಟ್ ಗೋದಾಮಿನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ರಾಜಸ್ಥಾನದ ಇಬ್ಬರು ಮಕ್ಕಳು ಸೇರಿ ಐವರು ಕಾರ್ಮಿಕರು ಸಜೀವ ದಹನವಾಗಿದ್ದರು. ಘಟನೆಗೆ ಶಾರ್ಟ್ ಸರ್ಕಿಟ್ ಕಾರಣ ಎಂದು ಶಂಕಿಸಲಾಗಿತ್ತು.
- **ಅ.16:** ಪ್ರೀತಿಸಲು ನಿರಾಕರಿಸಿದ ಕಾರಣಕ್ಕೆ ವಿದ್ಯಾರ್ಥಿನಿ ಯಾಮಿನಿ ಪ್ರಿಯಾ ಅವರ ಕತ್ತು ಕೊಯ್ದು ಕೊಲೆ ಮಾಡಿದ್ದ ಘಟನೆ ಶ್ರೀರಾಂಪುರ ಪೊಲೀಸ್ ಠಾಣೆ ವ್ಯಾಪ್ತಿಯ ರೈಲ್ವೆ ಹಳಿ ಬಳಿ ನಡೆದಿತ್ತು. ಪರೀಕ್ಷೆ ಬರೆದು ಕಾಲೇಜಿನಿಂದ ಮನೆಗೆ ಬರುತ್ತಿದ್ದ ಯುವತಿಯನ್ನು ಬರ್ಬರವಾಗಿ ಕೊಲೆಗೈದು ಪರಾರಿಯಾಗಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದರು.
- **ನ.5:** ರಾಜಾರಾಮ್ ಮೋಹನರಾಯ್ ರಸ್ತೆಯಲ್ಲಿ ಇರುವ ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆಯ (ಇಪಿಎಫ್‌ಒ) ಸ್ಟಾಫ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ನಡೆದಿರುವ ₹70 ಕೋಟಿ ಹಣ ದುರ್ಬಳಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೊಸೈಟಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಗೋಪಿನಾಥ್ ಹಾಗೂ ಸಿಬ್ಬಂದಿ ಲಕ್ಷ್ಮೀ ಅವರನ್ನು ಬಂಧಿಸಲಾಗಿದೆ.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಮದ್ಯ ಕುಡಿದು ನೃತ್ಯ ಮಾಡಿದ್ದ ಕೈದಿಗಳು

- **ನ.10:** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಗೆ ವಿಶೇಷ ಸೌಲಭ್ಯ, ಮೊಬೈಲ್ ಬಳಕೆಗೆ ಅವಕಾಶ ನೀಡಿದ್ದ ಪ್ರಕರಣದಲ್ಲಿ ಜೈಲಿನ ಸೂಪರಿಂಟೆಂಡೆಂಟ್ ಇಮಾಮ್‌ಸಾಬ್ ಮ್ಯಾಗೇರಿ ಹಾಗೂ ಸಹಾಯಕ ಸೂಪರಿಂಟೆಂಡೆಂಟ್ ಅಶೋಕ್ ಭಜಂತ್ರಿ ಅವರನ್ನು ಅಮಾನತು ಮಾಡಲಾಗಿದೆ. ಕಾರಾಗೃಹದ ಮುಖ್ಯ ಅಧೀಕ್ಷಕ ಕೆ.ಸುರೇಶ್ ಅವರನ್ನು ವರ್ಗಾವಣೆ ಮಾಡಿ, ಕಾರಾಗೃಹದ ಮುಖ್ಯ ಸೂಪರಿಂಟೆಂಡೆಂಟ್ ಜಾಗಕ್ಕೆ ಮೊದಲ ಬಾರಿಗೆ ಐಪಿಎಸ್ ಅಧಿಕಾರಿ ಅನ್ಶು ಕುಮಾರ್ ನಿಯೋಜಿಸಲಾಗಿದೆ.
- **ನ.15:** ಚರ್ಮರೋಗ ತಜ್ಞೆ ಡಾ.ಕೃತಿಕಾ ರೆಡ್ಡಿಗೆ ಅರಿವಳಿಕೆ ಚುಚ್ಚುಮದ್ದು ನೀಡಿ ಕೊಲೆ ಮಾಡಿದ ಆರೋಪದ ಮೇರೆಗೆ ಪತಿ ಡಾ.ಮಹೇಂದ್ರ ರೆಡ್ಡಿಯನ್ನು ಪೊಲೀಸರು ಬಂಧಿಸಿ, ಜೈಲಿಗೆ ಕಳುಹಿಸಿದರು.
- **ನ.15:** ಸಿಸಿಬಿ ವಿಶೇಷ ವಿಚಾರಣಾ ದಳ ಹಾಗೂ ಕೆಎಂಎಫ್ ಜಾಗೃತ ದಳದ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿ, ನಂದಿನಿ ಬ್ರ್ಯಾಂಡ್ ಹೆಸರಿನಲ್ಲಿ ಕಲಬೆರಕೆ ತುಪ್ಪ ಮಾರಾಟ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿದರು. ಕೆಎಂಎಫ್‌ನ (ಕರ್ನಾಟಕ ಹಾಲು ಉತ್ಪಾದಕರ ಒಕ್ಕೂಟ) ಉತ್ಪನ್ನಗಳ ವಿತರಕ ಮಹೇಂದ್ರ ಹಾಗೂ ಕೃತ್ಯಕ್ಕೆ ಬೆಂಬಲ ನೀಡಿದ್ದ ದೀಪಕ್, ಮುನಿರಾಜು, ಅಭಿ ಅರಸು ಬಂಧಿತರು.
- **ಡಿ.12:** ಗಿರಿನಗರದ ಅಪಾರ್ಟ್‌ಮೆಂಟ್ ಬಳಿ ಹಾದು ಹೋಗಿರುವ ಹೈಟೆನ್ಷನ್ ವಿದ್ಯುತ್ ಮಾರ್ಗದ ಕಂಬದ ಮೇಲೆ ಕುಳಿತಿದ್ದ ಸುಮಾರು ₹2 ಲಕ್ಷ ಬೆಲೆ ಬಾಳುವ ವಿದೇಶಿ ತಳಿಯ ಗಿಳಿಯನ್ನು ರಕ್ಷಣೆ ಮಾಡಲು ಹೋದ ನಾಗಮಂಗಲದ ಅರುಣ್ ಕುಮಾರ್ (32), ವಿದ್ಯುತ್ ಆಘಾತದಿಂದ ಮೃತಪಟ್ಟರು.
- **ಡಿ.23:** ಕೌಟುಂಬಿಕ ಕಲಹದ ಹಿನ್ನೆಲೆ ಪಿಸ್ತೂಲ್‌ನಿಂದ ಪತ್ನಿ ಭುವನೇಶ್ವರಿ (39) ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದ ಬಳಿಕ ಆರೋಪಿ ಪತಿ ಬಾಲಮುರುಗನ್ (40) ಮಾಗಡಿ ರಸ್ತೆ ಪೊಲೀಸ್ ಠಾಣೆಗೆ ಬಂದು ಶರಣಾದರು. ಭುವನೇಶ್ವರಿ ಅವರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಬಸವೇಶ್ವರನಗರ ಶಾಖೆಯ ಸಹಾಯಕ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಆರೋಪಿಯು ವೈಟ್‌ಫೀಲ್ಡ್‌ನಲ್ಲಿರುವ ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು.

- **ಡಿ.24:** ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶಗಳನ್ನು ಹಾಕಿರುವ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ಅವರು ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದರು. ದೂರು ಆಧರಿಸಿ, ಯೋಗಿ ಕಿಚ್ಚ, ಮಿ.ಅನಾಥ, ಮಹಿ ಕಿಚ್ಚ, ವಿರಾಟ್ ಕಿಚ್ಚ ಎಂಬ ಖಾತೆ ಸೇರಿ 18 ಇನ್‌ಸ್ಟಾಗ್ರಾಂ ಖಾತೆಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.
- **ಡಿ.24:** ಮಗಳನ್ನು ಮದುವೆ ಮಾಡಿಕೊಡಲು ನಿರಾಕರಿಸಿದ ಯುವತಿಯ ತಾಯಿ ಗೀತಾ (40) ಅವರ ಮೇಲೆ ಮುತ್ತು ಎಂಬಾತ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಲು ಯತ್ನಿಸಿರುವ ಘಟನೆ ಸಾಣೇಗುರುವನಹಳ್ಳಿಯಲ್ಲಿ ನಡೆದಿದೆ. ಘಟನೆ ಬಳಿಕ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದರು.
- **ಡಿ.28:** ಕನ್ನಡ ಮತ್ತು ತಮಿಳಿನ ಕೆಲ ಧಾರಾವಾಹಿಗಳಲ್ಲಿ ನಟಿಸಿದ್ದ ಸಿ.ಎಂ.ನಂದಿನಿ (26) ಕೆಂಗೇರಿ ಬಳಿಯ ಪಿ.ಜಿ.ಯೊಂದರಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ವಿಜಯನಗರ ಜಿಲ್ಲೆಯ ಕೊಟ್ಟೂರಿನವರಾಗಿದ್ದು, ಕೆಲ ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿದ್ದರು.

ಉಪನಗರ ರೈಲು

ಬೆಂಗಳೂರು ಉಪನಗರ ರೈಲು ಯೋಜನೆಯು ವರ್ಷದ ಆರಂಭದಲ್ಲಿ ತೆವಳುತ್ತಿತ್ತು. ಆನಂತರ ಗುತ್ತಿಗೆ ಕಂಪನಿ ಯೋಜನೆಯಿಂದ ಹಿಂದಕ್ಕೆ ಸರಿದ ಕಾರಣ ಕಾಮಗಾರಿಯೇ ಸ್ಥಗಿತಗೊಂಡಿತು. ವರ್ಷದ ಅಂತ್ಯಕ್ಕೆ ಲಕ್ಷ್ಮಣ್ ಸಿಂಗ್ ಅವರನ್ನು ಕಾಯಂ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸುವ ಮೂಲಕ ಮತ್ತೆ ಯೋಜನೆಗೆ ಹುರುಪು ತುಂಬಲಾಯಿತು.

ಹಳದಿ ಮಾರ್ಗದ ರೈಲು

'ಬೃಹತ್'ನಿಂದ 'ಗ್ರೇಟರ್' ಆದ ಬೆಂಗಳೂರು

● ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ಅಭಿವೃದ್ಧಿ ಅಥವಾ ಮೂಲಸೌಕರ್ಯದ ಹೊಸ ಯೋಜನೆಗಳಿಗೆ ಚಾಲನೆ ಸಿಗಲಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಸ್ತಿತ್ವ ಕಳೆದುಕೊಂಡು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಸ್ಥಾಪನೆಗೊಂಡು, ಐದು ನಗರ ಪಾಲಿಕೆಗಳು ರಚನೆಯಾದವು.

ಸುರಂಗ ರಸ್ತೆ ನಿರ್ಮಾಣದ ವಿವಾದ, ಗುಂಡಿ ಮುಚ್ಚಿ ಎಂದು ಜನಪ್ರತಿನಿಧಿಗಳು, ನಾಗರಿಕರು ರಸ್ತೆಗಿಳಿದಿದ್ದು ಈ ವರ್ಷದ ಪ್ರಮುಖಾಂಶಗಳು.

2007ರಲ್ಲಿ ರಚನೆಯಾಗಿದ್ದ ಬಿಬಿಎಂಪಿ, ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024ರ ಅನುಷ್ಠಾನದೊಂದಿಗೆ ಸೆಪ್ಟೆಂಬರ್ 2ರಂದು ಅಸ್ತಿತ್ವ ಕಳೆದುಕೊಂಡಿತು. ಜಿಬಿಎ ಮೂಲಕ ಬೆಂಗಳೂರು ಕೇಂದ್ರ, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ನಗರ ಪಾಲಿಕೆಗಳು ರಚನೆಯಾದವು.

ಈ ನಗರ ಪಾಲಿಕೆಗಳಿಗೆ ಒಟ್ಟಾರೆ 369 ವಾರ್ಡ್‌ಗಳನ್ನು ಅಂತಿಮಗೊಳಿಸಿ, ನವೆಂಬರ್‌ನಲ್ಲಿ ಅಧಿಸೂಚನೆಯನ್ನೂ ಹೊರಡಿಸಲಾಯಿತು. ಡಿಸೆಂಬರ್‌ಗೆ ನಗರ ಪಾಲಿಕೆಗಳಿಗೆ ಚುನಾವಣೆ ಎಂಬ ಮಾತು ಸೆಪ್ಟೆಂಬರ್‌ನಿಂದ ಹರಿದಾಡಿದರೂ, ಚುನಾವಣೆ ನಡೆಯುವ ಲಕ್ಷಣಗಳು ವರ್ಷಾಂತ್ಯದವರೆಗೂ ಕಂಡುಬರಲಿಲ್ಲ.

ಜಿಬಿಎ ಆಗುವುದಕ್ಕೆ ಮುನ್ನವೇ, ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ (ಉತ್ತರ–ದಕ್ಷಿಣ ಕಾರಿಡಾರ್) ಮೂರು ಪಥಗಳ ಅವಳಿ ಸುರಂಗ ರಸ್ತೆ (ಟ್ವಿನ್ ಟನಲ್) ನಿರ್ಮಾಣಕ್ಕೆ ಜುಲೈ 16ರಂದು ಟೆಂಡರ್ ಆಹ್ವಾನಿಸಲಾಯಿತು. ಸುರಂಗ ರಸ್ತೆ ಯೋಜನೆ ಡಿಪಿಆರ್‌ನಲ್ಲಿ 131 ಲೋಪಗಳಿವೆ ಎಂದು ಸರ್ಕಾರವೇ ರಚಿಸಿದ್ದ ತಜ್ಞರ ಸಮಿತಿ ವರದಿ ನೀಡಿತು.

ಪ್ರತಿಪಕ್ಷಗಳು ಸೇರದಂತೆ ಪರಿಸರ ಕಾರ್ಯಕರ್ತರು, ನಗರ ತಜ್ಞರು ಸುರಂಗ ರಸ್ತೆ ಯೋಜನೆಯನ್ನು ವಿರೋಧಿಸಿದರು. ಲಾಲ್‌ಬಾಗ್, ಸ್ಯಾಂಕಿ ಕೆರೆ, ಹೆಬ್ಬಾಳ ಕೆರೆಗೆ ಹಾನಿ ಉಂಟುಮಾಡುವ, ದುಂದು ವೆಚ್ಚದ ಸುರಂಗ ರಸ್ತೆ ಬೇಡ ಎಂದು ಪ್ರತಿಭಟನೆಗಳು ನಡೆದವು.

'ನಗರದ ಸುಗಮ ಸಂಚಾರಕ್ಕೆ ಸುರಂಗ ರಸ್ತೆ ನಿರ್ಮಿಸಿಯೇ ಸಿದ್ಧ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದರು. ಮೂರು ಬಾರಿ ಟೆಂಡರ್ ಅವಧಿಯನ್ನು ವಿಸ್ತರಿಸಲಾಯಿತು. ಅದಾನಿ ಗ್ರೂಪ್, ದಿಲಿಪ್ ಬಿಲ್ಡ್‌ಕಾನ್, ವಿಶ್ವ ಸಮುದ್ರ ಎಂಜಿನಿಯರಿಂಗ್, ರೈಲ್ ವಿಕಾಸ್ ನಿಗಮ್ ಲಿಮಿಟೆಡ್ (ಆರ್‌ವಿಎನ್‌ಎಲ್) ಬಿಡ್ ಸಲ್ಲಿಸಿದ್ದಾರೆಂದು ಹೇಳಲಾಗಿರುವ ಟೆಂಡರ್ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ ಹೆಚ್ಚಿನ ಅನುದಾನದಲ್ಲಿ ನಗರದ ಪ್ರಮುಖ ಸ್ಥಳಗಳಿಗೆ ಡಾಂಬರು ಹಾಕಲಾಗಿದೆ ಎಂಬುದು ಬಿಟ್ಟರೆ, 2025ರಲ್ಲಿ ನಗರದಲ್ಲಿ ಹೇಳಿಕೊಳ್ಳುವಂತಹ ಕಾಮಗಾರಿಗಳು ನಡೆದಿಲ್ಲ.

ಜಲಮಂಡಳಿ- 2025

ಬೆಂಗಳೂರು ಜಲಮಂಡಳಿ ಮೇ 1ರಿಂದ ನೀರಿನ ದರ ಏರಿಕೆ ಮಾಡಿತ್ತು. ನೀರು ಹಾಗೂ ಒಳಚರಂಡಿಯ ಅಕ್ರಮ ಸಂಪರ್ಕ ತಡೆಗೆ ನೀಲಿ ಪಡೆ ರಚಿಸಲಾಗಿದೆ. ಅಲ್ಲದೆ ನೀರಿನ ಸೋರಿಕೆ, ಅಕ್ರಮ ತಡೆಗೆ ರೋಬೋಟಿಕ್ ತಂತ್ರಜ್ಞಾನ ಬಳಕೆ ಮಾಡಲಾಗುತ್ತಿದೆ.



ಬಿಡಿಎ

- **ಆ.18:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹೆಬ್ಬಾಳ ಜಂಕ್ಷನ್ ಬಳಿ ನಿರ್ಮಿಸಿರುವ 700 ಮೀಟರ್ ಉದ್ದದ ಲೂಪ್ (ಪಥ) ಅನ್ನು ಸಂಚಾರಕ್ಕೆ ಮುಕ್ತಗೊಳಿಸಲಾಯಿತು. ಕೆ.ಆರ್. ಪುರ ಕಡೆಯಿಂದ ಮೇಖ್ರಿ ವೃತ್ತಕ್ಕೆ ಸಂಚಾರ ಸುಗಮಗೊಳಿಸಿದ್ದು, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಬೆಂಗಳೂರು ಸೆಂಟ್ರಲ್ ಕಡೆಗಿನ ಪ್ರಯಾಣಕ್ಕೆ ಅನುಕೂಲ ಮಾಡಿಕೊಡುತ್ತಿದೆ.
- **ಡಿ.20:** ಹೆಬ್ಬಾಳ ಮಾರ್ಗದಲ್ಲಿ ಬಿಡಿಎ ನಿರ್ಮಿಸಿರುವ ಎರಡನೇ ಲೂಪ್ ರ್‍ಯಾಂಪ್‌ನಲ್ಲಿ ಪ್ರಾಯೋಗಿಕವಾಗಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದ್ದು, ಈ ಮಾರ್ಗದಲ್ಲಿ ಶೇ 25ರಷ್ಟು ದಟ್ಟಣೆ ಸಮಸ್ಯೆ ತಗ್ಗಿದೆ.

ಹೊಸ ವರ್ಷ ಸಂಭ್ರಮಕ್ಕೆ ಕಿಂಗ್ಸ್ ಕ್ಲಬ್ ವೇದಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷದ ಸಂಭ್ರಮ ಹೆಚ್ಚಿಸಲು ನಾಗರಬಾವಿಯಲ್ಲಿರುವ ಕಿಂಗ್ಸ್ ಕ್ಲಬ್ ಡಿ.31ರಂದು ಸಂಜೆ 7.30ರಿಂದ 'ಟ್ರೋಪಿಕಲ್ ಎನ್‌ವೈಇ 2026 ಬೆಂಗಳೂರು' ಶೀರ್ಷಿಕೆಯಡಿ ಮನರಂಜನಾ ಕಾರ್ಯಕ್ರಮ ಹಮ್ಮಿಕೊಂಡಿದೆ.

ಅದ್ದೂರಿಯಾಗಿ ಹೊಸ ವರ್ಷ ಬರಮಾಡಿಕೊಳ್ಳುವ ಈ ಕಾರ್ಯಕ್ರಮಕ್ಕೆ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗವಿದೆ. ಮನರಂಜನೆಯ ಜತೆಗೆ ಉತ್ಸಾಹ ಹೆಚ್ಚಿಸಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ.

ಈ ಕ್ಲಬ್‌ನ ವಿವಿಧ ಮಹಡಿಗಳಲ್ಲಿ ಏಕಕಾಲದಲ್ಲಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಲೈವ್ ಡಿಜೆ ಪ್ರದರ್ಶನವು ರಾತ್ರಿಯಿಡೀ ವೈವಿಧ್ಯಮಯ ಸಂಗೀತದ ಅನುಭವ ನೀಡುತ್ತದೆ. ಬೆಲ್ಲಿ ಡಾನ್ಸ್ ಪ್ರದರ್ಶನಗಳು, ಫ್ಯಾಷನ್ ಶೋ, ಹಾಡು–ನೃತ್ಯ ಸೇರಿ ಹಲವು ವಿಶೇಷತೆಯನ್ನು ಹೊಸವರ್ಷ ಸಂಭ್ರಮದ ಈ ಕಾರ್ಯಕ್ರಮ ಒಳಗೊಂಡಿದೆ. ಅತಿಥಿ ಕಲಾವಿದರು ಸಹ ಪಾಲ್ಗೊಂಡು ಈ ಸಂಭ್ರಮದಲ್ಲಿ ಭಾಗಿಯಾಗಲಿದ್ದಾರೆ.

ಮಕ್ಕಳೊಂದಿಗೆ ಕುಟುಂಬಸ್ಥರು ಸಂಭ್ರಮಿಸಲೂ ಪ್ರತ್ಯೇಕ ವೇದಿಕೆ ಸಿದ್ಧಪಡಿಸಲಾಗಿದೆ. ಅಲ್ಲಿ ಆಟ ಮತ್ತು ಮನರಂಜನಾ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಈ ವೇದಿಕೆಯು ರೋಮಾಂಚನಕಾರಿ ಅನುಭವವನ್ನು ನೀಡಲಿದೆ.

ಪ್ರೀಮಿಯಂ ಟೇಬಲ್ ಕಾಯ್ದಿರಿಸುವಿಕೆಯ ಆಯ್ಕೆಯನ್ನೂ ನೀಡಲಾಗಿದ್ದು, ತೆರೆದ ಪ್ರದೇಶದಲ್ಲಿ ಹೊಸವರ್ಷಾಚರಣೆಯನ್ನು ಆನಂದಿಸಬಹುದಾಗಿದೆ. ಆಹಾರ ಮತ್ತು ಪಾನೀಯವು ಈ ಸಂಭ್ರಮದ ಭಾಗವಾಗಿದ್ದು, 40ಕ್ಕೂ ಅಧಿಕ ಬಗೆಯ ತಿನಿಸುಗಳು ಲಭ್ಯವಾಗಲಿವೆ. ಅನಿಯಮಿತ ಬಫೆಯನ್ನು ಈ ಕಾರ್ಯಕ್ರಮ ಒಳಗೊಂಡಿದೆ.

ಹೊಸವರ್ಷ ಸಂಭ್ರಮದ ಈ ಕಾರ್ಯಕ್ರಮವು ಟಿಕೆಟ್‌ಗಳನ್ನು ಒಳಗೊಂಡಿದ್ದು, ಟಿಕೆಟ್ ಹೊಂದಿದವರಿಗೆ ಮದ್ಯಪಾನ ಹಾಗೂ ತಂಪು ಪಾನೀಯಗಳ ಕೂಪನ್ ಒದಗಿಸಲಾಗುತ್ತದೆ.

ಟಿಕೆಟ್ ಕಾಯ್ದಿರಿಸಲು: https://kingsclub.in/events-2/
ಸಂಪರ್ಕಕ್ಕೆ: 7876433433

ಕೋಗಿಲು ಬಡಾವಣೆ ಸಂತ್ರಸ್ತರಿಗೆ ಮನೆ ಹಂಚಿಕೆ ಪ್ರಕ್ರಿಯೆ

ದಾಖಲೆ ಸಂಗ್ರಹ ಕಾರ್ಯ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ನೀಡುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೋಗಿಲು ಬಡಾವಣೆ ಸಂತ್ರಸ್ತರಿಂದ ಜಿಲ್ಲಾಡಳಿತ, ಜಿಬಿಎ ಮತ್ತು ರಾಜೀವ್ ಗಾಂಧಿ ವಸತಿ ನಿಗಮದ ಅಧಿಕಾರಿಗಳು ದಾಖಲೆಗಳನ್ನು ಸಂಗ್ರಹಿಸಿದರು.

ಬಡಾವಣೆಯಲ್ಲಿ ಮನೆ ಕಳೆದುಕೊಂಡಿರುವ ಸಂತ್ರಸ್ತರಿಗೆ ಬೈಯ್ಯಪ್ಪನಹಳ್ಳಿಯ ವಸತಿ ಸಮುಚ್ಚಯದಲ್ಲಿ ನಿರ್ಮಿಸುತ್ತಿರುವ ಮನೆಗಳನ್ನು ಹಂಚಿಕೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ ಬೆನ್ನಲ್ಲೆ ಅಧಿಕಾರಿಗಳು ದಾಖಲೆಗಳ ಸಂಗ್ರಹದಲ್ಲಿ ತೊಡಗಿದ್ದಾರೆ.

ಪ್ರತಿ ಮನೆಯಿಂದ ಐದು ದಾಖಲೆಗಳನ್ನು ಸಂಗ್ರಹಿಸಲಾಗುತ್ತಿದೆ. ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ವಿದ್ಯುತ್ ಬಿಲ್, ತಾತ್ಕಾಲಿಕ ಆದೇಶ ಪ್ರತಿ, ಪಡಿತರ ಚೀಟಿಯನ್ನು ಜಿಬಿಎ ಅಧಿಕಾರಿಗಳ ತಂಡ ಸಂಗ್ರಹಿಸುತ್ತಿದೆ. ಸಂಗ್ರಹಿಸಿದ ದಾಖಲೆಗಳನ್ನು ಕೋಗಿಲು ಸರ್ಕಾರಿ ಶಾಲೆಯಲ್ಲಿ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

ಜಿಲ್ಲಾಡಳಿತ ಅಧಿಕಾರಿಗಳು ಸಹ ಸ್ಥಳ ಪರಿಶೀಲನೆ ನಡೆಸಿ, ಸಂತ್ರಸ್ತರಿಂದ ಮಾಹಿತಿ ಪಡೆದುಕೊಂಡರು. ರಾಜೀವ್ ಗಾಂಧಿ ವಸತಿ ನಿಗಮದ ಅಧಿಕಾರಿಗಳು ಸರ್ವೆ ಕಾರ್ಯ ಆರಂಭಿಸಿದ್ದಾರೆ.

ನೆಲಸಮಗೊಂಡಿರುವ ಕೋಗಿಲು ಬಂಡೆ ಪ್ರದೇಶ

ಯಲಹಂಕ ತಹಶೀಲ್ದಾರ್ ಜಿ.ಎಸ್. ಶ್ರೇಯಸ್, ರಾಜೀವ್ ಗಾಂಧಿ ವಸತಿ ನಿಗಮದ ನಿರ್ದೇಶಕ ಪರಶುರಾಮ್, ಜಿಲ್ಲಾಧಿಕಾರಿ ಜಗದೀಶ್ ಸಹ ಭೇಟಿ ನೀಡಿ ಮಾಹಿತಿ ಪಡೆದರು.

'185 ಮನೆಗಳಲ್ಲಿ 20 ಮನೆಯವರು ಬೇರೆಯವರು ಇದ್ದಾರೆ. ಅವರು ಕರ್ನಾಟಕದ ರಾಯಚೂರು, ಕಲಬುರಗಿ ಮೂಲದವರು. ಅವರೆಲ್ಲರೂ ಸ್ಥಳೀಯರಾ? ಮನೆ ಇದೆಯೇ? ಎಂಬುದನ್ನು ಪರಿಶೀಲಿಸಲಾಗುವುದು. ಆಶಾ ಕಾರ್ಯಕರ್ತೆಯರ ಬಳಿ ಇರುವ ದಾಖಲೆಗಳ ಮಾಹಿತಿ ಕಲೆ ಹಾಕಲಾಗುವುದು' ಎಂದು ಜಿಬಿಎ ಅಧಿಕಾರಿಗಳು ತಿಳಿಸಿದರು.

'ಎಷ್ಟು ವರ್ಷದಿಂದ ವಾಸ ಮಾಡುತ್ತಿದ್ದೀರಾ? ಯಾವ ಉದ್ಯೋಗ ಮಾಡುತ್ತಿದ್ದೀರಾ? ಮಕ್ಕಳು ಯಾವ ಶಾಲೆಗೆ ಹೋಗುತ್ತಿದ್ದಾರೆ ಎಂಬ ಪ್ರಶ್ನೆಗಳನ್ನು ಅಧಿಕಾರಿಗಳು ಕೇಳಿದರು. ಅಲ್ಲದೇ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಮತದಾರರ ಗುರುತಿನ ಚೀಟಿ ಹಾಗೂ ವಾಸ ದೃಢೀಕರಣ ಪತ್ರಗಳನ್ನು ಪರಿಶೀಲಿಸಿದರು. ಆಧಾರ್ ಕಾರ್ಡ್, ಗುರುತಿನ ಚೀಟಿ, ವಿದ್ಯುತ್ ಬಿಲ್ ಕೇಳಿ ಪಡೆದುಕೊಂಡರು' ಎಂದು ಸಂತ್ರಸ್ತರು ತಿಳಿಸಿದರು.

ಸರ್ವೆ ಬಳಿಕ ಸರ್ಕಾರಕ್ಕೆ ವರದಿ

'ಐದು ತಂಡಗಳಾಗಿ ಮಾಡಿಕೊಂಡು, ಕೋಗಿಲು ಬಡಾವಣೆಯಲ್ಲಿ ಕಂದಾಯ ಇಲಾಖೆ, ಜಿಬಿಎ ಮತ್ತು ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಜಂಟಿ ಸರ್ವೆ ಮಾಡಲಾಗಿದೆ. ಮೂರು ತಂಡಗಳು ಮಾಡಿರುವ ಸರ್ವೆ ವರದಿಯನ್ನು ಜಿಲ್ಲಾಧಿಕಾರಿಗೆ ಸಲ್ಲಿಸಲಿದ್ದಾರೆ. ಸಲ್ಲಿಕೆಯಾದ ನಂತರ ಎಲ್ಲ ಮಾಹಿತಿಯನ್ನು ಕ್ರೋಢೀಕರಿಸಿ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ' ಎಂದು ಯಲಹಂಕ ತಹಶೀಲ್ದಾರ್ ಶ್ರೇಯಸ್ ತಿಳಿಸಿದರು.

ಕೋಗಿಲು ಬಡಾವಣೆಯ ಐದು ಎಕರೆ ಪ್ರದೇಶದಲ್ಲಿ ವಾಸಿಸುತ್ತಿದ್ದ ನಿವಾಸಿಗಳ ಮನೆ ಹಾಗೂ ಶೆಡ್‌ಗಳನ್ನು ಜಿಬಿಎ ಹಾಗೂ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಸಂಸ್ಥೆಯಿಂದ ತೆರವುಗೊಳಿಸಲಾಗಿದೆ. ಇದರಿಂದ 200ಕ್ಕೂ ಹೆಚ್ಚು ಕುಟುಂಬಗಳು ಬೀದಿಗೆ ಬಿದ್ದಿವೆ.

ನಿವಾಸಿಗಳಿಗೆ ಮೂಲಸೌಲಭ್ಯ ಕಲ್ಪಿಸಿ: ನಾಗಲಕ್ಷ್ಮೀ ಚೌಧರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಲಹಂಕ ಸಮೀಪದ ಕೋಗಿಲು ಬಡಾವಣೆಯ ನಿವಾಸಿಗಳಿಗೆ ಮೂಲಸೌಕರ್ಯ ಒದಗಿಸುವ ಜೊತೆಗೆ ಪುನರ್‌ವಸತಿ ಕಲ್ಪಿಸಬೇಕು' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಒತ್ತಾಯಿಸಿದ್ದಾರೆ.

ಡಾ. ನಾಗಲಕ್ಷ್ಮೀ ಚೌಧರಿ

ಮಂಗಳವಾರ ಕೋಗಿಲು ಬಡಾವಣೆಗೆ ಭೇಟಿ ನೀಡಿದ ಅವರು ಸ್ಥಳೀಯರ ಅಹವಾಲು ಸ್ವೀಕರಿಸಿದರು. 'ಸೂರು ಕಳೆದುಕೊಂಡ ಎಲ್ಲರಿಗೂ ಮೂಲಸೌಲಭ್ಯ ಕಲ್ಪಿಸಬೇಕು' ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಬಗ್ಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿರುವ ಅವರು, 'ಕೋಗಿಲು ಬಡಾವಣೆಯ ಐದು ಎಕರೆ ಪ್ರದೇಶದಲ್ಲಿ ವಾಸಿಸುತ್ತಿದ್ದ ನಿವಾಸಿಗಳ ಮನೆ ಹಾಗೂ ಶೆಡ್‌ಗಳನ್ನು ಜಿಬಿಎ ಹಾಗೂ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಸಂಸ್ಥೆಯಿಂದ ತೆರವುಗೊಳಿಸಲಾಗಿದೆ. ಇದರಿಂದ 200ಕ್ಕೂ ಹೆಚ್ಚು ಕುಟುಂಬಗಳು ಬೀದಿಗೆ ಬಿದ್ದಿವೆ. ಮಹಿಳೆಯರು, ಅಂಗವಿಕಲರು, ಮಕ್ಕಳು ಮತ್ತು ವೃದ್ಧರು ಕೃತಕ ಟೆಂಟ್‌ಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಬೆಂಗಳೂರು ನಗರದಲ್ಲಿ ಚಳಿ ತೀವ್ರತೆ ಹೆಚ್ಚಿದ್ದು, ಮಹಿಳೆಯರು, ಮಕ್ಕಳು ಹಾಗೂ ವೃದ್ಧರು ಮನೆಗಳಿಲ್ಲದೇ ಬಯಲು ಪ್ರದೇಶದಲ್ಲಿ ಜೀವನ ನಿರ್ವಹಿಸುತ್ತಿದ್ದಾರೆ. ಇವರಿಗೆ ಶುದ್ಧ ಕುಡಿಯುವ ನೀರು, ಆಹಾರ ಹಾಗೂ ಶೌಚಾಲಯ ಸೇರಿದಂತೆ ಮೂಲಸೌಕರ್ಯಗಳನ್ನು ನೀಡಬೇಕು. ಮಹಿಳೆಯರು ಹಾಗೂ ಮಕ್ಕಳಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಈ ಕುಟುಂಬಗಳಿಗೆ ತಾತ್ಕಾಲಿಕವಾಗಿ ಪುನರ್‌ವಸತಿ ಕಲ್ಪಿಸಬೇಕು. ಮುಂದಿನ ದಿನಗಳಲ್ಲಿ ಶಾಶ್ವತ ವಸತಿ ಸೌಲಭ್ಯ ಒದಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು' ಎಂದು ತಿಳಿಸಿದ್ದಾರೆ.

ಜಿಬಿಎ ವ್ಯಾಪ್ತಿಯಲ್ಲಿ 18,496 ಮತದಾರರು

ಪ್ರಜಾವಾಣಿ ವಾರ್ತೆ

ಶಿಕ್ಷಕರ ಕ್ಷೇತ್ರ

ಬೆಂಗಳೂರು: ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಾಗಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ 18,496 ಮತದಾರರಿದ್ದಾರೆ ಎಂದು ಪ್ರಾಧಿಕಾರ ಮುಖ್ಯ ಆಯುಕ್ತ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಎಂ.ಮಹೇಶ್ವರ್ ರಾವ್ ತಿಳಿಸಿದರು.

ಜಿಬಿಎ ಕೇಂದ್ರ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದ ಅವರು, ಬೆಂಗಳೂರು ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯನ್ನು ಪ್ರಕಟಿಸಲು ಕೇಂದ್ರ ಚುನಾವಣಾ ಆಯೋಗ ನಿರ್ದೇಶನ ನೀಡಿತ್ತು. ಅದರಂತೆ ನ.25ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿತ್ತು ಎಂದರು.

ಅಯೋಗದ ವೇಳಾ ಪಟ್ಟಿಯಂತೆ ನ.25ರಿಂದ ಡಿ.10ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಸ್ವೀಕರಿಸಲಾದ ಅರ್ಜಿಗಳ ಪರಿಶೀಲನೆಯ ನಂತರ, ಜಿಬಿಎ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳ ಅಂತಿಮ ಮತದಾರರ ಪಟ್ಟಿಯನ್ನು ಮಂಗಳವಾರ ಪ್ರಕಟಿಸಲಾಗಿದೆ ಎಂದು ಮಾಹಿತಿ ನೀಡಿದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಆರ್. ರಾಮಚಂದ್ರನ್ ಮಾತನಾಡಿ, 'ಅಂತಿಮ ಪರಿಷ್ಕರಣೆಯಲ್ಲಿ ತಪ್ಪಿಹೋದ ಅರ್ಹ ಶಿಕ್ಷಕರಿಗೆ, ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕದವರೆಗೂ ಹೆಸರು ಸೇರಿಸಲು ಅವಕಾಶವಿದೆ. ಮತದಾರರ ನೋಂದಣಿ ಹಾಗೂ ನವೀಕರಣ ಪ್ರಕ್ರಿಯೆ ನಿರಂತರವಾಗಿ ನಡೆಯಲಿದೆ' ಎಂದು ತಿಳಿಸಿದರು.

ಕಚೇರಿಗಳಲ್ಲಿ ಪ್ರಕಟ: ಮತದಾರರ ಪಟ್ಟಿ ಬೆಂಗಳೂರು ವಿಭಾಗದ ಶಿಕ್ಷಕರ ಕ್ಷೇತ್ರ ಹಾಗೂ ಪ್ರಾದೇಶಿಕ ಆಯುಕ್ತರ ಕಚೇರಿ ಹಾಗೂ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಶೀಲ್ದಾರರ ಕಚೇರಿ, ಜಿಬಿಎ ಕೇಂದ್ರ, ಉತ್ತರ, ದಕ್ಷಿಣ, ಪೂರ್ವ ಹಾಗೂ ಪಶ್ಚಿಮ ನಗರಪಾಲಿಕೆ ಕಚೇರಿಯಲ್ಲಿ ಪರಿಶೀಲನೆಗಾಗಿ ದೊರೆಯಲಿದೆ ಎಂದು ಬೆಂಗಳೂರು ವಿಭಾಗದ ಮತದಾರರ ನೋಂದಣಾಧಿಕಾರಿ ಹಾಗೂ ಪ್ರಾದೇಶಿಕ ಆಯುಕ್ತರು ತಿಳಿಸಿದ್ದಾರೆ.

'ಐತಿಹಾಸಿಕ ಪರಂಪರೆ ಉಳಿಸಿ'

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಬೆಂಗಳೂರು ಹಾಗೂ ತೋಟಗೆರೆಯ ಬಿಜಿಎಸ್ ಪದವಿಪೂರ್ವ ಕಾಲೇಜು ಸಹಭಾಗಿತ್ವದಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ' ಅಭಿಯಾನ ನಡೆಯಿತು.

ಅಭಿಯಾನ ಅಂಗವಾಗಿ, ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಮತ್ತು ಸ್ವಚ್ಛತಾ ಕಾರ್ಯಕ್ರಮ ಈಚೆಗೆ ತೋಟಗೆರೆಯಲ್ಲಿ ನಡೆಯಿತು.

11 ಮತ್ತು 12ನೇ ಶತಮಾನದ ಚೋಳರ ಕಾಲದ ತಮಿಳು ಶಾಸನ, 10ನೇ ಶತಮಾನದ ಹಂದಿ ಬೇಟೆ ನಾಯಿ ಸ್ಮಾರಕ ವೀರಗಲ್ಲುಗಳನ್ನು ಗ್ರಾಮಸ್ಥರ ನೆರವಿನಿಂದ ಅರ್ಜುನರಾಯ ದೇವಾಲಯದ ಬಳಿ ಇರಿಸಲಾಗಿತ್ತು. ಸಂರಕ್ಷಿಸಿದ್ದ ಶಾಸನಗಳನ್ನು ದೇವಾಲಯದ ಆವರಣದಲ್ಲಿ ಸಿಮೆಂಟಿನಲ್ಲಿ ಪ್ಲಾಸ್ಟಿಂಗ್ ಮಾಡಿಸಿ, ಸಾರ್ವಜನಿಕರು ವೀಕ್ಷಿಸುವಂತೆ ಶಾಶ್ವತವಾಗಿ ಸಂರಕ್ಷಣೆ ಮಾಡಲಾಯಿತು. ದೇವಾಲಯದ ಸುತ್ತಮುತ್ತಲಿನ ಸ್ಥಳದಲ್ಲಿ ತೋಟಗೆರೆಯ ಬಿಜಿಎಸ್ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಸ್ವಚ್ಛತಾ ಕಾರ್ಯ ಕೈಗೊಂಡರು. ಕರ್ನಾಟಕ ಇತಿಹಾಸ ಅಕಾಡೆಮಿಯ ಕಾರ್ಯದರ್ಶಿ ಕೆ. ಧನಪಾಲ್ ಮಾತನಾಡಿ, ತಾವು ಸಂರಕ್ಷಿಸಿರುವ ವೀರಗಲ್ಲುಗಳು, ಮಾಸ್ತಿ ಕಲ್ಲುಗಳು, ಸಪ್ತ ಮಾತೃಕೆಯರ ಶಿಲ್ಪಗಳ ಬಗ್ಗೆ ಮಾಹಿತಿ ನೀಡಿದರು. ಗೋಧಿ ಹಿಟ್ಟು ಹಾಕಿ ಶಾಸನಗಳನ್ನು ಸುಲಭವಾಗಿ ಓದುವ ಬಗೆಯನ್ನು ಶಾಸನ ತಜ್ಞ ಪಿ.ವಿ. ಕೃಷ್ಣಮೂರ್ತಿ ಹಾಗೂ ಡಾ.ಯುವರಾಜ್ ಅವರು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಅಲಯನ್ಸ್ ವಿಶ್ವವಿದ್ಯಾನಿಲಯದ ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ. ವಿವೇಕಾನಂದ ಸಜ್ಜನ್, ಇತಿಹಾಸ ಸಂಶೋಧಕರಾದ ಕೆ.ಆರ್.ಮಧುಸೂದನ್, ಎಂ.ನರೇಂದ್ರ, ಪ್ರಾಂಶುಪಾಲ ಆನಂದ್ ಕುಮಾರ್, ಮುಖ್ಯ ಶಿಕ್ಷಕರಾದ ಟಿ.ಎಸ್.ಮುನಿರಾಜು, ಎಂ. ನಟರಾಜು, ಗೋಪಾಲಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬಸವೇಗೌಡ, ಗ್ರಾಮ ಪಂಚಾಯಿತಿ ಸದಸ್ಯರಾದ ಬಸವರಾಜು, ಸುಜಾತ, ಮಂಜುಳ ಉಪಸ್ಥಿತರಿದ್ದರು.

ಮಲ್ಟಿಪಲ್ ಸ್ಕ್ಲೆರೋಸಿಸ್ ಎಂಬ ನರರೋಗಕ್ಕೆ ಸಂಬಂಧಪಟ್ಟಂತೆ ಈವರೆಗೆ ತಿಳಿದಿರದ ಎರಡು ಹೊಸ ಜೈವಿಕ ಪ್ರಕಾರಗಳನ್ನು ಕೃತಕ ಬುದ್ಧಿಮತ್ತೆಯು ಕಂಡುಹಿಡಿದಿದೆ. ಯುನಿವರ್ಸಿಟಿ ಕಾಲೇಜ್ ಆಫ್ ಲಂಡನ್ ತಂಡ ಈ ಸಂಶೋಧನೆಯ ನೇತೃತ್ವವನ್ನು ವಹಿಸಿದೆ

ಹೆಚ್ಚಾಗಲಿದೆ ‘ಇವಿ’ಗಳ ಚಾರ್ಜಿಂಗ್ ವೇಗ

• ಗುಬ್ಬಿಲ್ಯಾಬ್ಸ್

ರಸ್ತೆಗಳಲ್ಲಿ ಇಂದು ಎಲೆಕ್ಟ್ರಿಕ್ ವಾಹನಗಳು (ಇವಿ) ದಿನೇ ದಿನೇ ಹೆಚ್ಚಾಗುತ್ತಲಿದೆ. ಪರಿಸರಸ್ನೇಹಿ ಎಂಬ ಕಾರಣಕ್ಕೆ ಅನೇಕರು ಪೆಟ್ರೋಲ್ ಮತ್ತು ಡೀಸೆಲ್ ವಾಹನಗಳನ್ನು ಬಿಟ್ಟು ಇವಿಗಳತ್ತ ಮುಖ ಮಾಡುತ್ತಿದ್ದಾರೆ. ಆದರೆ, ಇವಿ ಮಾಲೀಕರನ್ನು ಇಂದಿಗೂ ಕಾಡುತ್ತಿರುವ ದೊಡ್ಡ ಸಮಸ್ಯೆಗಳೆಂದರೆ ಚಾರ್ಜಿಂಗ್‌ಗೆ ತೆಗೆದುಕೊಳ್ಳುವ ಹೆಚ್ಚು ಸಮಯ, ಬ್ಯಾಟರಿಗಳ ಅತಿಯಾದ ತೂಕ ಮತ್ತು ಅವು ಬಿಸಿಯಾಗುವ ಅಪಾಯ. ಈ ಎಲ್ಲಾ ಸಮಸ್ಯೆಗಳಿಗೆ ಮಣಿಪಾಲ ಉನ್ನತ ಶಿಕ್ಷಣ ಅಕಾಡೆಮಿಯ (MIT) ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (MAHE) ಸಂಶೋಧಕರು ಒಂದು ಅದ್ಭುತ ಪರಿಹಾರವನ್ನು ಸೂಚಿಸಿದ್ದಾರೆ. ಈ ಸಂಶೋಧನೆಯನ್ನು ‘ನೇಚರ್ ಸೈಂಟಿಫಿಕ್ ರಿಪೋರ್ಟ್ಸ್’ ಎಂಬ ನಿಯತಕಾಲಿಕೆಯಲ್ಲಿ ಪ್ರಕಟಿಸಿದ್ದಾರೆ.

ಮಣಿಪಾಲದ ಏರೋನಾಟಿಕಲ್ ಮತ್ತು ಆಟೋಮೊಬೈಲ್ ಎಂಜಿನಿಯರಿಂಗ್ ವಿಭಾಗದ ಸಂಶೋಧಕರಾದ ಎನ್. ಶ್ರೀಕೃಷ್ಣ, ದಿವ್ಯಾ ಡಿ. ಶೆಟ್ಟಿ ಮತ್ತು ಚಂದ್ರಕಾಂತ್ ಆರ್. ಕಿಣಿ ಅವರ ತಂಡವು ಕಂಪ್ಯೂಟರ್ ಸಿಮ್ಯುಲೇಶನ್ ಮೂಲಕ ನಡೆಸಿದ ಸಂಶೋಧನೆಯು ಎಲೆಕ್ಟ್ರಿಕ್ ವಾಹನಗಳ ಭವಿಷ್ಯವನ್ನೇ ಬದಲಿಸುವ ಮುನ್ಸೂಚನೆ ನೀಡಿದೆ. ಇವರು ಬ್ಯಾಟರಿಗಳಲ್ಲಿ ‘ಗ್ರಾಫೀನ್’ ಎಂಬ ವಸ್ತುವನ್ನು ಬಳಸುವ ಮೂಲಕ ಬ್ಯಾಟರಿಯ ಕಾರ್ಯಕ್ಷಮತೆಯನ್ನು ಗಣನೀಯವಾಗಿ ಹೆಚ್ಚಿಸಬಹುದು ಎಂದು ಅವರು ತೋರಿಸಿಕೊಟ್ಟಿದ್ದಾರೆ.

ಗ್ರಾಫೀನ್ ಎಂದರೆ ಏನು ಎಂಬ ಕುತೂಹಲ ನಿಮಗಿರಬಹುದು. ಇದನ್ನು ಸರಳವಾಗಿ ಹೇಳಬೇಕೆಂದರೆ, ನಾವು ಪೆನ್ಸಿಲ್‌ನಲ್ಲಿ ಬಳಸುವ ಮದ್ದು - ಇದಕ್ಕೆ ಗ್ರಾಫೈಟ್ ಎನ್ನುವುದು ಕೇಳಿರಬಹುದು. ಈ ಗ್ರಾಫೈಟ್‌ನ ಕೇವಲ ಒಂದು ಪರಮಾಣುವಿನಷ್ಟು ತೆಳುವಾದ ಪದರವೇ ಗ್ರಾಫೀನ್. ಇದು ಜೇನುಗೂಡಿನಂತಹ ಷಡ್ಭುಜಾಕೃತಿಯಲ್ಲಿ ಜೋಡಿಸಲ್ಪಟ್ಟ ಇಂಗಾಲದ (Carbon) ಪರಮಾಣುಗಳ ಪದರವಾಗಿದೆ. ಕೇವಲ ಒಂದು ಪರಮಾಣುವಿನಷ್ಟು ತೆಳುವಾಗಿದ್ದರೂ, ಇದು ಅತ್ಯಂತ ಗಟ್ಟಿಯಾದ ಮತ್ತು ಅದ್ಭುತವಾದ ವಿದ್ಯುತ್ ಹಾಗೂ ಶಾಖವನ್ನು ಪ್ರವಹಿಸುವ ಸಾಮರ್ಥ್ಯವನ್ನು ಹೊಂದಿದೆ. ಒಂದು ಅಚ್ಚರಿಯ ಸಂಗತಿಯೆಂದರೆ, 2004ರಲ್ಲಿ ಇಬ್ಬರು ವಿಜ್ಞಾನಿಗಳು ಕೇವಲ ಒಂದು ಸಾಮಾನ್ಯ ಅಂಟುಪಟ್ಟಿಯನ್ನು (Sticky tape) ಬಳಸಿ ಗ್ರಾಫೈಟ್‌ನಿಂದ ಈ ಗ್ರಾಫೀನ್ ಅನ್ನು ಬೇರ್ಪಡಿಸಿದ್ದರು.

ಮಣಿಪಾಲದ ವಿಜ್ಞಾನಿಗಳು ತಮ್ಮ ಸಂಶೋಧನೆಗಾಗಿ ಭಾರತದಲ್ಲಿ ಜನಪ್ರಿಯವಾಗಿರುವ ಟಾಟಾ ನೆಕ್ಸಾನ್ ಇವಿ ಪ್ರೈಮ್ (Tata Nexon EV Prime) ಕಾರಿನ ಬ್ಯಾಟರಿ ವ್ಯವಸ್ಥೆಯನ್ನೇ ಮಾದರಿಯಾಗಿ ಬಳಸಿಕೊಂಡಿದ್ದಾರೆ. ಮ್ಯಾಟ್‌ಲ್ಯಾಬ್ (MATLAB) ಎಂಬ ಸಾಫ್ಟ್‌ವೇರ್ ಬಳಸಿ ನಡೆಸಿದ ಈ ಸಿಮ್ಯುಲೇಶನ್‌ನಲ್ಲಿ, ಸಾಮಾನ್ಯ ಲಿಥಿಯಂ-ಐಯಾನ್ ಬ್ಯಾಟರಿಗಳಿಗಿಂತ ಗ್ರಾಫೀನ್ ಮಿಶ್ರಿತ ಬ್ಯಾಟರಿಗಳು ಎಷ್ಟು ಉತ್ತಮವಾಗಿವೆ ಎಂಬುದನ್ನು ಸಾಬೀತುಪಡಿಸಿದ್ದಾರೆ. ಸಂಶೋಧನೆಯ ಪ್ರಕಾರ, ಗ್ರಾಫೀನ್ ಬಳಸುವುದರಿಂದ ಬ್ಯಾಟರಿಯ ಚಾರ್ಜಿಂಗ್ ಸಮಯವನ್ನು ಶೇ 22ರಿಂದ 27ರಷ್ಟು ಕಡಿಮೆ ಮಾಡಬಹುದು. ಅಂದರೆ ಇಂದು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ, ನಾಳೆ ಕಾಫಿ ಕುಡಿಯುವಷ್ಟರಲ್ಲಿ ಮುಗಿದುಹೋಗಬಹುದು.

ಬ್ಯಾಟರಿಯ ತೂಕದ ವಿಷಯದಲ್ಲಂತೂ ಈ ಸಂಶೋಧನೆ ಸಾಕಷ್ಟು ಸಾಧನೆಯನ್ನು ಮಾಡಿದೆ. ಪ್ರಸ್ತುತ ಟಾಟಾ ನೆಕ್ಸಾನ್ ಕಾರಿನ ಬ್ಯಾಟರಿ ಪ್ಯಾಕ್ ಸುಮಾರು 260 ಕಿಲೋಗ್ರಾಂ ತೂಕವಿರುತ್ತದೆ. ಆದರೆ ಈ ಹೊಸ ತಂತ್ರಜ್ಞಾನವನ್ನು ಅಳವಡಿಸಿದರೆ, ಅದೇ ಸಾಮರ್ಥ್ಯದ ಬ್ಯಾಟರಿಯ ತೂಕ ಕೇವಲ 121.5 ಕಿಲೋಗ್ರಾಂಗೆ ಇಳಿಕೆಯಾಗುತ್ತದೆ. ಅಂದರೆ ಬ್ಯಾಟರಿಯ ಒಟ್ಟು ತೂಕದಲ್ಲಿ ಶೇ 53ರಷ್ಟು ಕಡಿತವಾಗಲಿದೆ. ಕಾರಿನ ತೂಕ ಕಡಿಮೆಯಾದಷ್ಟೂ ಅದು ಚಲಿಸಲು ಕಡಿಮೆ ಶಕ್ತಿಯನ್ನು ಬಳಸುತ್ತದೆ. ಇದರಿಂದ ಒಂದು ಬಾರಿ ಚಾರ್ಜ್ ಮಾಡಿದರೆ ಕಾರು ಇಂದಿನ ಕಾರುಗಳು ಕ್ರಮಿಸುವ ದೂರಕ್ಕಿಂತಲೂ ಹೆಚ್ಚಿನ ದೂರವನ್ನು ಕ್ರಮಿಸಲು ಸಾಧ್ಯವಾಗುತ್ತದೆ.

ಇ.ವಿ. ವಾಹನಗಳಲ್ಲಿ ಗ್ರಾಫೀನ್ ಬಳಸುವುದರಿಂದ ಬ್ಯಾಟರಿಯ ಚಾರ್ಜಿಂಗ್ ಸಮಯವನ್ನು ಶೇ 22ರಿಂದ 27ರಷ್ಟು ಕಡಿಮೆ ಮಾಡಬಹುದು. ಇದು ಗಂಟೆಗಟ್ಟಲೆ ಕಾಯಬೇಕಾದ ಅನಿವಾರ್ಯತೆಯನ್ನು ತಗ್ಗಿಸುತ್ತದೆ. ಸುರಕ್ಷತೆಯ ದೃಷ್ಟಿಯಿಂದಲೂ ಗ್ರಾಫೀನ್ ಬ್ಯಾಟರಿಗಳು ವರದಾನವಾಗಿವೆ. ಆದರೆ, ದೊಡ್ಡ ಪ್ರಮಾಣದಲ್ಲಿ ಗ್ರಾಫೀನ್‌ನ ಉತ್ಪಾದನೆಯೇ ಸದ್ಯದ ದೊಡ್ಡ ಸವಾಲು.

ಸುರಕ್ಷತೆಯ ದೃಷ್ಟಿಯಿಂದಲೂ ಗ್ರಾಫೀನ್ ಬ್ಯಾಟರಿಗಳು ವರದಾನವಾಗಿವೆ. ಎಲೆಕ್ಟ್ರಿಕ್ ವಾಹನಗಳ ಬ್ಯಾಟರಿ ಬಿಸಿಯಾಗಿ ಬೆಂಕಿ ಹೊತ್ತಿಕೊಳ್ಳುವ ಸುದ್ದಿಗಳು ಇತ್ತೀಚೆಗೆ ಆತಂಕ ಮೂಡಿಸಿವೆ. ಇದಕ್ಕೆ ಮುಖ್ಯ ಕಾರಣ ‘ಥರ್ಮಲ್ ರನ್‌ಅವೇ’ ಎಂಬ ಪ್ರಕ್ರಿಯೆ. ಎಂದರೆ ಬ್ಯಾಟರಿಯ ಒಳಗೆ ಶಾಖವು ನಿಯಂತ್ರಣ ಮೀರಿ ಹೆಚ್ಚಾಗುವುದು. ಪ್ರಚಲಿತವಾಗಿ ಬಳಸುವ ಲಿಥಿಯಂ-ಐಯಾನ್ ಬ್ಯಾಟರಿಗಳಲ್ಲಿ ವಿದ್ಯುತ್ ಹರಿಯುವಾಗ ಹೆಚ್ಚಿನ ಪ್ರತಿರೋಧ ಉಂಟಾಗಿ ಶಾಖ ಉತ್ಪತ್ತಿಯಾಗುತ್ತದೆ. ಆದರೆ ಗ್ರಾಫೀನ್ ಎಂಬುದು ವಿದ್ಯುತ್ ಮತ್ತು ಅಯಾನುಗಳಿಗೆ ಒಂದು ‘ಹೈ-ಸ್ಪೀಡ್ ಹೈವೇ’ಯಂತೆ ಕೆಲಸ ಮಾಡುತ್ತದೆ. ಇದು ವಿದ್ಯುತ್ ಅನ್ನು ಎಷ್ಟು ಸುಲಭವಾಗಿ ಹರಿಸುತ್ತದೆ ಎಂದರೆ ಬ್ಯಾಟರಿ ಒಳಗೆ ಶಾಖ ಉತ್ಪತ್ತಿಯಾಗುವುದು ತುಂಬಾ ಕಡಿಮೆ ಯಾಗುತ್ತದೆ. ಸಂಶೋಧನೆಯಲ್ಲಿ ಕಂಡುಕೊಂಡಂತೆ, ಈ ಗ್ರಾಫೀನ್ ಬ್ಯಾಟರಿಗಳು ಸಾಮಾನ್ಯ ಬ್ಯಾಟರಿಗಳಿಗಿಂತ ಶೇ 15ರಷ್ಟು ಹೆಚ್ಚು ತಂಪಾಗಿರುತ್ತವೆ. ಇದು ಬ್ಯಾಟರಿಯ ಜೀವಿತಾವಧಿಯನ್ನು ಹೆಚ್ಚಿಸುವುದಲ್ಲದೆ, ವಾಹನವನ್ನು ಹೆಚ್ಚು ಸುರಕ್ಷಿತವಾಗಿಸುತ್ತದೆ.

ಆದರೆ ಈ ಅದ್ಭುತ ತಂತ್ರಜ್ಞಾನ ನಮ್ಮ ಮನೆ ಬಾಗಿಲಿಗೆ ಬರಲು ಕೆಲವು ಸವಾಲುಗಳಿವೆ. ಪ್ರಸ್ತುತ ಗ್ರಾಫೀನ್ ತಯಾರಿಕೆಯು ಬಹಳ ದುಬಾರಿ ಮತ್ತು ಕ್ಲಿಷ್ಟಕರ ಪ್ರಕ್ರಿಯೆಯಾಗಿದೆ. ಒಂದು ಕಿಲೋಗ್ರಾಂ ಗ್ರಾಫೀನ್ ಬೆಲೆ ಸಾವಿರಾರು ಡಾಲರ್‌ಗಳಷ್ಟಿದೆ. ಅದೇ ಬ್ಯಾಟರಿಗಳಲ್ಲಿ ಬಳಸುವ ಸಾಮಾನ್ಯ ಕಾರ್ಬನ್ ಬೆಲೆ ಕೇವಲ ಹದಿನೈದು ಡಾಲರ್ ಮಾತ್ರ. ಅಲ್ಲದೆ, ಮೊದಲ ಬಾರಿ ಚಾರ್ಜ್ ಮಾಡಿದಾಗ ಬ್ಯಾಟರಿಯ ಶಕ್ತಿ ಸ್ವಲ್ಪ ಮಟ್ಟಿಗೆ ನಷ್ಟವಾಗುವ (First-cycle loss) ತಾಂತ್ರಿಕ ಸಮಸ್ಯೆಯೂ ಇದೆ. ಇಡೀ ವಾಹನ ಉದ್ಯಮಕ್ಕೆ ಬೇಕಾಗುವಷ್ಟು ದೊಡ್ಡ ಪ್ರಮಾಣದಲ್ಲಿ ಗ್ರಾಫೀನ್ ಉತ್ಪಾದಿಸುವುದು ಸದ್ಯದ ಮುಂದಿರುವ ದೊಡ್ಡ ಸವಾಲು.

ಹವಾಮಾನ ಬದಲಾವಣೆಯ ಈ ಕಾಲದಲ್ಲಿ ಪಳೆಯುಳಿಕೆ ಇಂಧನಗಳನ್ನು ಬಿಟ್ಟು ಸುಸ್ಥಿರ ಇಂಧನಗಳತ್ತ ಸಾಗುವುದು ಅನಿವಾರ್ಯವಾಗಿದೆ. ಮಣಿಪಾಲದ ಸಂಶೋಧಕರು ತೋರಿರುವ ಈ ಹಾದಿಯು ಎಲೆಕ್ಟ್ರಿಕ್ ವಾಹನಗಳನ್ನು ಜನಸಾಮಾನ್ಯರಿಗೆ ಹೆಚ್ಚು ಹತ್ತಿರವಾಗಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಲಿದೆ. ಮುಂದಿನ ದಿನಗಳಲ್ಲಿ ತಂತ್ರಜ್ಞಾನ ಅಭಿವೃದ್ಧಿಯಾಗಿ ಉತ್ಪಾದನಾ ವೆಚ್ಚ ಕಡಿಮೆಯಾದಂತೆ, ನಿಮ್ಮ ಇವಿ ಕಾರು ಕೂಡ ಪೆಟ್ರೋಲ್ ಕಾರಿನಷ್ಟೇ ವೇಗವಾಗಿ ಮತ್ತು ಸುಲಭವಾಗಿ ಚಾರ್ಜ್ ಆಗುವ ದಿನಗಳು ಬರಲಿವೆ.

ನಿಮ್ಮ ಮುಂದಿನ ಕಾರು ‘ಗ್ರಾಫೀನ್ ಶಕ್ತಿ’ಯಿಂದ ಓಡಬಹುದು, ಎಂಬುದು ವಿಜ್ಞಾನಿಗಳು ಸೂಚಿಸುತ್ತಿರುವ ಭವಿಷ್ಯವಾಣಿ!

❖

ಮರೆವಿನ ಕಾಯಿಲೆಗೆ ಪರಿಹಾರ!



• ಅಮೃತೇಶ್ವರಿ ಬಿ.

ಮನುಷ್ಯರಾದ ನಮಗೆ ಬುದ್ಧಿಶಕ್ತಿ ಮತ್ತು ನೆನಪಿನ ಶಕ್ತಿಗಳೇ ವರದಾನ. ಈ ಪ್ರಕೃತಿಯಲ್ಲಿ ನಾವು ಉನ್ನತರಾಗಿ ಬದುಕುತ್ತಿರಲು ಹಾಗೂ ಇತರ ಎಲ್ಲ ಜೀವಸಂಕುಲಗಳ ಮೇಲೆ ಮೇಲುಗೈಯನ್ನು ಸಾಧಿಸುವಂತಾಗಿರುವುದು ಕಾರಣ ನಮ್ಮೀ ಮಿದುಳಿಗಿರುವ ವಿಶೇಷ ಸಾಮರ್ಥ್ಯ. ಮಾತನಾಡುವುದು, ಪ್ರಜ್ಞಾಪೂರ್ವಕ ಯೋಚನೆ, ಯೋಜನೆಗಳನ್ನು ರೂಪಿಸುವುದು, ಹಾಗೂ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಇವೆಲ್ಲವನ್ನೂ ನಾವು ಮಾತ್ರವೇ ಮಾಡಲಾಗುವುದು. ಮಾನವನ ಮಿದುಳು ಅಷ್ಟು ಸಂಕೀರ್ಣ; ಅದೊಂದು ಅತ್ಯದ್ಭುತ ಅಂಗ ಎನ್ನಿ. ನಮ್ಮ ಮಿದುಳು ನೀರು, ಕೊಬ್ಬಿನಾಂಶ, ಪ್ರೋಟೀನ್, ಕಾರ್ಬೋಹೈಡ್ರೇಟ್, ಅಯಾನ್‌ಗಳು ಹಾಗೂ ನ್ಯೂರೋಟ್ರಾನ್ಸ್ಮಿಟರ್‌ಗಳಿಂದ ಮಾಡಲ್ಪಟ್ಟಿದೆ. ಇವೆಲ್ಲವೂ ಆರೋಗ್ಯಕರವಾಗಿ ಸರಿಯಾದ ಪ್ರಮಾಣದಲ್ಲಿದ್ದರೆ ನಮ್ಮ ಮಿದುಳು ಚೆನ್ನಾಗಿ ಕೆಲಸ ಮಾಡುತ್ತದೆ; ನಾವೂ ಆರೋಗ್ಯವಂತರಾಗಿರುತ್ತೇವೆ. ಇಲ್ಲದಿದ್ದರೆ ಮರೆಗುಳಿತನ, ಯೋಚನಾಶಕ್ತಿ ಕುಂದುವುದು ಇಂತಹ ಸಮಸ್ಯೆಗಳು ನಮ್ಮನ್ನು ಕಾಡಬಹುದು. ಇದು ದೊಡ್ಡ ಸಮಸ್ಯೆಯೇನಲ್ಲ. ಆದರೆ ಕೆಲವೊಮ್ಮೆ ಮಿದುಳಿನಲ್ಲಿರುವ ‘ಅಮೈಲಾಯಿಡ್’ ಎನ್ನುವ ಪ್ರೋಟೀನ್ ಎಳೆಗಳು ವಿಚಿತ್ರವಾಗಿ ಬೆಳೆದು ಗಂಟುಗಳಾಗಿಬಿಡಬಹುದು. ಆಗ ಮಿದುಳಿನ ನರಗಳು ನಶಿಸುತ್ತಾ ಬುದ್ಧಿಮಾಂದ್ಯತೆ, ನೆನಪಿನ ಶಕ್ತಿ ಶಾಶ್ವತವಾಗಿ ಕುಂದುವುದು ಹಾಗೂ ಅರಿವಿನ ಸಾಮರ್ಥ್ಯ ಅಳಿಸಿ ಹೋಗುವಂತಹ ಒಂದು ರೋಗಗಳು ಬಂದೆರಗುತ್ತವೆ; ಮಿದುಳಿನ ಗಾತ್ರವೂ ಚಿಕ್ಕದಾಗಿಬಿಡುತ್ತದೆ. ಇದನ್ನೇ ‘ಅಲ್ಝೀಮರ್ ರೋಗ’ ಎನ್ನುವುದು. ಒಮ್ಮೆ ಈ ಕಾಯಿಲೆ ಬಂತೆಂದರೆ ಮೊದಲಿನ ಸ್ಥಿತಿಗೆ ಮಿದುಳಿಗೆ ಮರಳಲಾದು. ಅರ್ಥಾತ್, ಮಿದುಳು ತನ್ನ ಶಕ್ತಿಯನ್ನು ಮರಳಿ ಪಡೆಯದು.

ನೂರಾರು ವರ್ಷಗಳಿಂದ ಎಷ್ಟೇ ಹಣ ಹಾಗೂ ಸಮಯವನ್ನು ಹೂಡಿದರೂ ಈ ಕಾಯಿಲೆಯನ್ನು ವಾಸಿ ಮಾಡಿ ಮಿದುಳಿನ ಶಕ್ತಿಯನ್ನು ಮರಳಿಸುವ ಯಾವುದೇ ಔಷಧವನ್ನು ವೈದ್ಯಕೀಯ ರಂಗದಿಂದ ತಯಾರಿಸಲು ಸಾಧ್ಯವಾಗಲಿಲ್ಲ. ಹಾಗಾಗಿ, ಸಂಶೋಧಕರು ಈ ಕಾಯಿಲೆಗೆ ಔಷಧವನ್ನು ಹುಡುಕುವ ಬದಲಿಗೆ ಕಾಯಿಲೆಯೇ ಬಾರದಂತೆ ತಡೆಯುವುದರತ್ತ ಅಥವಾ ಲಕ್ಷಣಗಳು ಕಾಣಿಸಿಕೊಳ್ಳುವುದನ್ನು ನಿಧಾನವಾಗಿಸುವತ್ತ ಸಂಶೋಧನೆಯನ್ನು ಕೈಗೊಂಡುಬಿಟ್ಟಿದ್ದರು. ಆದರೆ ಈಗ ಅಮೆರಿಕದ ಯೂನಿವರ್ಸಿಟಿ ಹಾಸ್ಪಿಟಲ್ಸ್ ಕ್ಲೀವ್ಲೆಂಡ್ ಮೆಡಿಕಲ್ ಸೆಂಟರ್ ಸಂಸ್ಥೆಯು ಈ ದೀರ್ಘಕಾಲದ ಸಿದ್ಧಾಂತಕ್ಕೆ ಸವಾಲೆಸೆದು ಪರಿಹಾರವನ್ನು ಪತ್ತೆಮಾಡಿದ್ದಾರೆ. ಅಲ್ಝೀಮರ್ ಕಾಯಿಲೆಯಿಂದ ಗಂಭೀರವಾಗಿ ನರಳುತ್ತಿರುವ ಮಿದುಳನ್ನೂ ಪುನಃಶ್ಚೇತನಗೊಳಿಸಬಹುದೇ ಎಂದು ಕಲ್ಯಾಣಿ ಚೌಬೆ ಮತ್ತು ಸಂಗಡಿಗರು ಪರೀಕ್ಷಿಸಿದ್ದಾರೆ.

‘NAD + ’ ಅಥವಾ ‘ನಿಕೋಟಿನಮೈಡ್ ಅಡಿನೈನ್ ಡೈನ್ಯೂಕ್ಲಿಯೋಟೈಡ್’ ನಮ್ಮ ದೇಹದ ಜೀವಕೋಶಗಳಲ್ಲಿರುವ ಒಂದು ಕೋಎಂಜೈಮ್. ಜೀವಕೋಶಗಳ ಶಕ್ತಿ. ಇದು ನಮ್ಮ ದೇಹದ ಚಯಾಪಚಯ ಕ್ರಿಯೆ, ಡಿಎನ್ಎ ಅನ್ನು ದುರಸ್ತಿಗೊಳಿಸುವುದು. ರೋಗನಿರೋಧಕ ಶಕ್ತಿಯನ್ನು ನಿಯಂತ್ರಿಸುವುದು ಹಾಗೂ ಆಯುಷ್ಯವನ್ನು ಕಾಪಾಡುವುದು ಮೊದಲಾದ ಕಾರ್ಯಗಳನ್ನೂ ನಿರ್ವಹಿಸುತ್ತದೆ. ಈ ಎಂಜೈಮಿನ ಪ್ರಮಾಣದ ನಿಯಂತ್ರಣ ತಪ್ಪಿದರೆ, ವೇಗವಾಗಿ ದೇಹಕ್ಕೆ ವಯಸ್ಸಾಗುವುದು, ನರಕೋಶಗಳು ಕ್ಷೀಣಿಸುವುದು ಮತ್ತು ಕ್ಯಾನ್ಸರ್‌ನಂತಹ ಕಾಯಿಲೆಗಳು ತಲೆದೋರುತ್ತವೆ. ಅಲ್ಝೀಮರ್ ಕಾಯಿಲೆಗೂ ಮುಖ್ಯ ಕಾರಣವೇ ಈ ‘NAD + ’ನ ಅಸಮತೋಲನ. ಹಾಗಾಗಿ ಇದನ್ನು ಸರಿದೂಗಿಸಿದರೆ ಈ ಕಾಯಿಲೆಯನ್ನು ವಾಸಿ ಮಾಡಬಹುದು ಮತ್ತು ಕಾಯಿಲೆಗೆ ತುತ್ತಾಗದಂತೆಯೂ ತಡೆಯಬಹುದು ಎಂದು ಕಲ್ಯಾಣಿ ಮತ್ತು ಸಂಗಡಿಗರು ತೋರಿಸಿದ್ದಾರೆ.

ಮಿದುಳು ಹಾಗೂ ದೇಹದ ತುಂಬೆಲ್ಲ ಇರುವ NAD + ನ ಮಟ್ಟವು ವಯಸ್ಸಿನೊಂದಿಗೆ ಕಡಿಮೆಯಾಗುತ್ತಿರುತ್ತದೆ. ಅಲ್ಝೀಮರ್ ರೋಗಿಗಳ ಮಿದುಳಿನಲ್ಲಿಯಂತೂ ಇದು ಕ್ಷೀಣಿಸುವ ವೇಗ ಇನ್ನೂ ತೀವ್ರ. ಈ ಕಾಯಿಲೆ ಮನುಷ್ಯರಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ. ಆದರೆ ಸಂಶೋಧಕರು ಸದ್ಯಕ್ಕೆ ಇದನ್ನು ಇಲಿಗಳಲ್ಲಿ ಪರೀಕ್ಷೆ ಮಾಡಲಾಗಿದ್ದು, ಮನುಷ್ಯರಲ್ಲಿ ಈ ಕಾಯಿಲೆಯನ್ನು ಉಂಟುಮಾಡುವ ಆನುವಂಶಿಕ ಪರಿವರ್ತನೆ(Genetic Mutation)ಯನ್ನು ವ್ಯಕ್ತಪಡಿಸುವಂತೆ ಇಲಿಗಳನ್ನು ವಿನ್ಯಾಸ ಮಾಡಿಸಿ, ಪರೀಕ್ಷೆಗೆ ತೆಗೆದುಕೊಂಡಿದ್ದರಂತೆ. ಈ ಇಲಿಗಳಲ್ಲಿಯೂ ಫಲಿತಾಂಶ ಇದೇ ಆಗಿತ್ತಂತೆ. ಅರ್ಥಾತ್, NAD + ನ ಮಟ್ಟ ಸಾಮಾನ್ಯಕ್ಕಿಂತ ಕಡಿಮೆಯಿತ್ತು! ಇಲ್ಲಿ ಎರಡು ಇಲಿಗಳನ್ನು ಅಧ್ಯಯನಕ್ಕೆ ತೆಗೆದುಕೊಂಡಿದ್ದರು. ಈ ಕಾಯಿಲೆಯಲ್ಲಿ ಪರಿಣಾಮ ಬೀರುವುದು ‘ಅಮೈಲಾಯಿಡ್’ ಮತ್ತು ‘ಟೌ’ ಎನ್ನುವ ಎರಡು ಬಗೆಯ ಪ್ರೋಟೀನುಗಳು. ಹಾಗಾಗಿ ಒಂದು ಇಲಿಯಲ್ಲಿ ಅಮೈಲಾಯಿಡ್ ಪ್ರೋಟೀನ್‌ನ ಪರಿವರ್ತನೆಯನ್ನೂ, ಮತ್ತೊಂದರಲ್ಲಿ ಟೌ ಪ್ರೋಟೀನ್‌ನ ಪರಿವರ್ತನೆಯನ್ನು ಅಧ್ಯಯನ ಮಾಡಿದ್ದಾರೆ. ಎರಡೂ ಇಲಿಗಳಲ್ಲಿ ಅಲ್ಝೀಮರ್ ರೋಗಿಗಳಲ್ಲಿ ಕಾಣುವ ಹಾಗೆಯೇ ಅರಿವಿನ ದೌರ್ಬಲ್ಯ ಕಂಡಿತ್ತಂತೆ. ಹಾಗಾಗಿ, ಕಾಯಿಲೆಗೂ ಮುನ್ನ NAD + ನ ಮಟ್ಟವನ್ನು ಸರಿಯಾಗಿ ನಿರ್ವಹಿಸುವುದರಿಂದ ಕಾಯಿಲೆಯನ್ನು ತಡೆಯಬಹುದೇ ಅಥವಾ ಕಾಯಿಲೆ ಬಂದ ಮೇಲೆ ಅದನ್ನು ಸರಿದೂಗಿಸುವುದರಿಂದ ವಾಸಿ ಮಾಡಬಹುದೇ ಎಂದು ಪರೀಕ್ಷಿಸಿದ್ದಾರೆ.

NAD + ನ ಮಟ್ಟವನ್ನು ಪುನಃಸ್ಥಾಪಿಸಲು ಬಳಸಿಕೊಂಡಿರುವ ಔಷಧವೇ ‘P7C3-A20’. ಫಲಿತಾಂಶ ಅಚ್ಚರಿಯೆಂಬಂತೆ, ಎರಡೂ ಇಲಿಗಳಲ್ಲಿ ಅರಿವಿನ ಪ್ರಜ್ಞೆ ಸಂಪೂರ್ಣವಾಗಿ ಸಕ್ರಿಯವಾಗಿ, ಅವು ಕಾಯಿಲೆಯಿಂದ ಗುಣಮುಖವಾಗಿದ್ದವಂತೆ! ಅಲ್ಲದೇ, ಈ ಔಷಧವು ಆನುವಂಶಿಕ ಪರಿವರ್ತನೆಗಳಿಂದ ತಲೆದೋರಬಹುದಾದ ಇತರೆ ಕಾಯಿಲೆಗಳನ್ನೂ ತನ್ನಂತಾನೇ ತಡೆಯುವ ಶಕ್ತಿಯನ್ನು ಮಿದುಳಿಗೆ ನೀಡಿತ್ತಂತೆ! ಅಂತೂ ಈ ಔಷಧ ಎರಡೂ ರೀತಿಯ ಆನುವಂಶಿಕ ಪರಿವರ್ತನೆಗಳಿಂದ ತಗುಲುವ ಅಲ್ಝೀಮರ್ ಕಾಯಿಲೆಯನ್ನು ಇಲಿಗಳಲ್ಲಿ ವಾಸಿಮಾಡಿದೆ.

ಅಂತೂ ಮಿದುಳಿನ NAD + ನ ಮಟ್ಟವನ್ನು ಸರಿದೂಗಿಸಿದರೆ ಗಂಭೀರ ರೋಗಲಕ್ಷಣಗಳನ್ನು ಕೂಡ ಗುಣಪಡಿಸಿ, ಮಿದುಳಿನ ಕಾರ್ಯಚಟುವಟಿಕೆಯನ್ನೂ ಸಕ್ರಿಯಗೊಳಿಸುವುದರಲ್ಲಿ ಸಂಶೋಧಕರು ಯಶಸ್ವಿಯಾಗಿದ್ದಾರೆ. ಈ ಫಲಿತಾಂಶದ ಮೂಲಕ ಅಲ್ಝೀಮರ್ ರೋಗಿಗಳ ಮಿದುಳಿನಲ್ಲಿಯೂ ಕಾಯಿಲೆಯನ್ನು ವಾಸಿಮಾಡಲು ಕೆಲಸ ಮಾಡಬೇಕಾದ ಪ್ರೋಟೀನನ್ನು ಪತ್ತೆ ಮಾಡಿಕೊಂಡಿದ್ದಾರೆ.

❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ಲೋಹಗಳು ಮತ್ತು ಅಲೋಹಗಳು

ಪ್ರಶ್ನೋತ್ತರ

13) ಲೋಹಗಳ ರಾಸಾಯನಿಕ ಗುಣಗಳನ್ನು ಬರೆಯಿರಿ

ಉತ್ತರ:– (……ಹಿಂದಿನ ಸಂಚಿಕೆಯಿಂದ)

3) ಲೋಹಗಳು ನೀರಿನ ಜೊತೆ ಪ್ರತಿವರ್ತಿಸಿದಾಗ ಲೋಹದ ಆಕ್ಸೈಡ್ ಮತ್ತು ಹೈಡ್ರೋಜನ್ ಅನಿಲವನ್ನು ಬಿಡುಗಡೆ ಮಾಡುತ್ತವೆ. ಲೋಹದ ಆಕ್ಸೈಡ್‌ಗಳು ಪುನಃ ನೀರಿನಲ್ಲಿ ಕರಗಿ ಲೋಹದ ಹೈಡ್ರಾಕ್ಸೈಡ್‌ಗಳಾಗುತ್ತವೆ. ಆದರೆ ಎಲ್ಲಾ ಲೋಹಗಳು ನೀರಿನ ಜೊತೆ ಪ್ರತಿವರ್ತಿಸುವುದಿಲ್ಲ

4) ಪೊಟ್ಯಾಸಿಯಂ ಮತ್ತು ಸೋಡಿಯಂನಂಥ ಲೋಹಗಳು ಅತ್ಯಂತ ರಭಸವಾಗಿ ತಣ್ಣೀರಿನ ಜೊತೆ ಪ್ರತಿವರ್ತಿಸುತ್ತವೆ. ಸೋಡಿಯಂ ಮತ್ತು ಪೊಟ್ಯಾಸಿಯಂಗಳ ಪ್ರಕರಣದಲ್ಲಿ ಪ್ರತಿವರ್ತನೆಯು ಎಷ್ಟೊಂದು ತೀವ್ರ ಮತ್ತು ಬಹಿರುಷ್ಣಕವಾಗಿರುತ್ತದೆಂದರೆ ಬಿಡುಗಡೆಯಾದ ಹೈಡ್ರೋಜನ್ ಅನಿಲವು ತಕ್ಷಣವೇ ಹೊತ್ತಿಕೊಂಡು ಉರಿಯುತ್ತವೆ.

5) ನೀರಿನೊಂದಿಗೆ ಕ್ಯಾಲ್ಸಿಯಂನ ಪ್ರತಿವರ್ತನೆಯ ತೀವ್ರತೆ ಕಡಿಮೆ. ಬಿಡುಗಡೆಯಾಗುವ ಉಷ್ಣವು ಹೈಡ್ರೋಜನ್ ಹೊತ್ತಿಕೊಳ್ಳಲು ಸಾಕಾಗುವುದಿಲ್ಲ.

6) ತಣ್ಣೀರಿನೊಂದಿಗೆ ಮೆಗ್ನೀಸಿಯಂ ಪ್ರತಿವರ್ತಿಸುವುದಿಲ್ಲ. ಬಿಸಿ ನೀರಿನೊಂದಿಗೆ ಪ್ರತಿವರ್ತಿಸಿ ಮೆಗ್ನೀಸಿಯಂ ಹೈಡ್ರಾಕ್ಸೈಡ್ ಮತ್ತು ಹೈಡ್ರೋಜನ್ ಬಿಡುಗಡೆ ಮಾಡುತ್ತದೆ. ಹೈಡ್ರೋಜನ್ ಅನಿಲದ ಗುಳ್ಳೆಗಳು ಲೋಹದ ಮೇಲ್ಮೈಗೆ ಅಂಟಿಕೊಳ್ಳುವ ಕಾರಣ ಇದೂ ಕೂಡ ನೀರಿನ ಮೇಲೆ ತೇಲಲು ಪ್ರಾರಂಭಿಸುತ್ತದೆ.

ಅಲ್ಯುಮಿನಿಯಂ, ಕಬ್ಬಿಣ, ಮತ್ತು ಸತುವಿನಂಥ ಲೋಹಗಳು ತಣ್ಣನೆಯ ಅಥವಾ ಬಿಸಿ ನೀರಿನ ಜೊತೆ ಪ್ರತಿವರ್ತಿಸುವುದಿಲ್ಲ ಆದರೆ ಹಬೆಯ ಜೊತೆ ಪ್ರತಿವರ್ತಿಸಿ ಲೋಹದ ಆಕ್ಸೈಡ್ ಮತ್ತು ಹೈಡ್ರೋಜನ್‌ಗಳನ್ನು ಉಂಟುಮಾಡುತ್ತವೆ.

7) ಲೋಹಗಳು ಆಮ್ಲಗಳ ಜೊತೆ ಪ್ರತಿವರ್ತಿಸಿ ಲವಣ ಮತ್ತು ಹೈಡ್ರೋಜನ್ ಅನಿಲ ಉಂಟುಮಾಡುತ್ತವೆ

8) ರಾಸಾಯನಿಕವಾಗಿ ಕ್ರಿಯಾಪಟುತ್ವ ಹೊಂದಿದ ಧಾತುಗಳು ತಮಗಿಂತ ಕಡಿಮೆ ಕ್ರಿಯಾಪಟುತ್ವ ಹೊಂದಿದ ಧಾತುಗಳನ್ನು ಅವುಗಳ ದ್ರಾವಣ ಅಥವಾ ದ್ರವಿಸಿದ ಸಂಯುಕ್ತದಿಂದ ಸ್ಥಳಾಂತರಿಸುತ್ತವೆ.

14) ಅಯಾನಿಕ ಸಂಯುಕ್ತಗಳ ಗುಣಲಕ್ಷಣಗಳನ್ನು ಬರೆಯಿರಿ

ಉತ್ತರ:– ಅಯಾನಿಕ ಸಂಯುಕ್ತಗಳ ಸಾಮಾನ್ಯ ಗುಣಲಕ್ಷಣಗಳು ಹೀಗಿವೆ:–

(i) **ಭೌತ ಸ್ಥಿತಿ** : ಅಯಾನಿಕ ಸಂಯುಕ್ತಗಳು ಘನವಸ್ತುಗಳಾಗಿದ್ದು, ಧನ ಮತ್ತು ಋಣ ಅಯಾನುಗಳ ನಡುವೆ ಇರುವ ಪ್ರಬಲ ಆಕರ್ಷಣ ಬಲದಿಂದಾಗಿ ಸ್ವಲ್ಪ ಮಟ್ಟಿಗೆ ಕಠಿಣವಾಗಿರುತ್ತವೆ. ಈ ಸಂಯುಕ್ತಗಳು ಸಾಮಾನ್ಯವಾಗಿ ಬಿಧುರವಾಗಿದ್ದು ಒತ್ತಡವನ್ನು ಹಾಕಿದಾಗ ಪುಡಿಯಾಗುತ್ತವೆ.

(ii) **ಕರಗುವ ಮತ್ತು ಕುದಿಬಿಂದುಗಳು** : ಅಯಾನಿಕ ಸಂಯುಕ್ತಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿಬಿಂದುಗಳನ್ನು ಹೊಂದಿವೆ. ಏಕೆಂದರೆ ಅಣುಗಳ ನಡುವಿನ ಪ್ರಬಲ ಅಯಾನಿಕ್ ಬಂಧವನ್ನು ಒಡೆಯಲು ಹೆಚ್ಚಿನ ಶಕ್ತಿ ಬೇಕಾಗುತ್ತದೆ.

(iii) **ವಿಲೀನತೆ** : ಅಯಾನಿಕ ಸಂಯುಕ್ತಗಳು ಸಾಮಾನ್ಯವಾಗಿ ನೀರಿನಲ್ಲಿ ವಿಲೀನವಾಗುತ್ತವೆ. ಮತ್ತು ಸಾವಯವ ದ್ರಾವಕಗಳಾದ ಸೀಮೆಎಣ್ಣೆ, ಪೆಟ್ರೋಲ್ ಇತ್ಯಾದಿಗಳಲ್ಲಿ ವಿಲೀನಗೊಳ್ಳುವುದಿಲ್ಲ.

(iv) **ವಿದ್ಯುದ್ವಾಹಕತೆ** : ಒಂದು ದ್ರಾವಣದ ಮೂಲಕ ವಿದ್ಯುತ್ತಿನ ಹರಿಯುವಿಕೆಯು ವಿದ್ಯುದಂಶಪೂರಿತ ಕಣಗಳ ಚಲನೆಯನ್ನು ಒಳಗೊಂಡಿದೆ. ಅಯಾನಿಕ ಸಂಯುಕ್ತದ ಜಲೀಯ ದ್ರಾವಣವು ಅಯಾನುಗಳನ್ನು ಹೊಂದಿದ್ದು ದ್ರಾವಣದ ಮೂಲಕ ವಿದ್ಯುತ್ ಹಾಯಿಸಿದಾಗ ಅವು, ವಿರುದ್ಧ ವಿದ್ಯುದ್ವಾರಗಳ ಕಡೆ ಚಲಿಸುತ್ತವೆ.

ಘನಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುವುದಿಲ್ಲ ಏಕೆಂದರೆ, ಘನವಸ್ತುಗಳ ಕಠಿಣ ರಚನೆಯಿಂದಾಗಿ ಅಯಾನುಗಳ ಚಲನೆ ಸಾಧ್ಯವಿಲ್ಲ. ಆದರೆ ದ್ರವಿಸಿದ ಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುತ್ತವೆ. ಇದು ದ್ರವಿಸಿದ ಸ್ಥಿತಿಯಲ್ಲಿ ಸಾಧ್ಯವಾಗಲು ಕಾರಣವೇನೆಂದರೆ ವಿದ್ಯುದಂಶಪೂರಿತ, ವಿರುದ್ಧ ಅಯಾನುಗಳ ನಡುವಣ ವಿದ್ಯುದಾಕರ್ಷಣ ಬಲಗಳು ಉಷ್ಣತೆಗೆ ಒಡೆಯುತ್ತವೆ. ಹಾಗಾಗಿ ಅಯಾನುಗಳು ಸ್ವತಂತ್ರವಾಗಿ ಚಲಿಸುತ್ತವೆ ಮತ್ತು ವಿದ್ಯುತ್ತನ್ನು ಹರಿಯಲು ಬಿಡುತ್ತವೆ.

15) ಯಾವುದನ್ನು ಖನಿಜ ಎನ್ನುವರು?

ಉತ್ತರ:– ಭೂತೊಗಟೆಯಲ್ಲಿ ನೈಸರ್ಗಿಕವಾಗಿ ದೊರೆಯುವ ಧಾತು ಅಥವಾ ಸಂಯುಕ್ತಗಳನ್ನು ಖನಿಜಗಳು ಎನ್ನುವರು

16) ಯಾವುದನ್ನು ಅದುರು ಎನ್ನುವರು?

ಉತ್ತರ:– ಕೆಲವು ಸ್ಥಳಗಳಲ್ಲಿನ ಖನಿಜಗಳು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ನಿರ್ದಿಷ್ಟ ಲೋಹವನ್ನು ಹೊಂದಿರುತ್ತವೆ ಮತ್ತು ಇವುಗಳಿಂದ ಅದನ್ನು ಲಾಭದಾಯಕವಾಗಿ ಹೊರತೆಗೆಯಬಹುದು. ಈ ಖನಿಜಗಳನ್ನು ಅದುರುಗಳು ಎನ್ನುವರು.

17) ಯಾವೆಲ್ಲಾ ಲೋಹಗಳು ಮುಕ್ತ ರೂಪದಲ್ಲಿ ದೊರೆಯುತ್ತವೆ?

ಉತ್ತರ:– ಚಿನ್ನ, ಬೆಳ್ಳಿ, ಪ್ಲಾಟಿನಂ ಮತ್ತು ತಾಮ್ರಗಳು ಮುಕ್ತ ಸ್ಥಿತಿಯಲ್ಲಿ ದೊರೆಯುತ್ತವೆ.

18) ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಎಷ್ಟು ಗುಂಪುಗಳನ್ನಾಗಿ ವಿಂಗಡಿಸಬಹುದು? ಯಾವುವು?

ಉತ್ತರ:– ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು. (i) ಕಡಿಮೆ ಕ್ರಿಯಾಪಟುತ್ವ ಹೊಂದಿರುವ ಲೋಹಗಳು (ii) ಮಧ್ಯಮ ಕ್ರಿಯಾಪಟುತ್ವ ಹೊಂದಿರುವ ಲೋಹಗಳು ಮತ್ತು (iii) ಹೆಚ್ಚಿನ ಕ್ರಿಯಾಪಟುತ್ವ ಹೊಂದಿರುವ ಲೋಹಗಳು.

ಪ್ರತಿಯೊಂದು ಗುಂಪಿನ ಲೋಹಗಳನ್ನು ವಿಭಿನ್ನ ತಂತ್ರಗಳನ್ನು ಬಳಸಿ ಪಡೆಯಲಾಗುತ್ತದೆ.

19) ಯಾವುದನ್ನು ಮಡ್ಡಿ ಎನ್ನುವರು?

ಉತ್ತರ:– ಸಾಮಾನ್ಯವಾಗಿ ಭೂಮಿಯಿಂದ ಗಣಿಗಾರಿಕೆ ಮಾಡಿದ ಅದುರುಗಳು ಮಣ್ಣು, ಮರಳು ಇತ್ಯಾದಿಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಕಲುಷಿತಗೊಂಡಿರುತ್ತವೆ. ಇದನ್ನು ಮಡ್ಡಿ ಎನ್ನುವರು

20) ಕ್ರಿಯಾಶೀಲ ಸರಣಿಯಲ್ಲಿ ಕೆಳಗಿರುವ ಲೋಹಗಳನ್ನು ಹೇಗೆ ಅಪಕರ್ಷಿಸಬಹುದು?

ಉತ್ತರ:– ಕ್ರಿಯಾಶೀಲ ಸರಣಿಯಲ್ಲಿ ಕೆಳಗಿರುವ ಲೋಹಗಳು ಅತಿ ಕಡಿಮೆ ಕ್ರಿಯಾಶೀಲತೆ ಹೊಂದಿರುವುದರಿಂದ ಲೋಹದ ಆಕ್ಸೈಡ್‌ಗಳನ್ನು ಕಾಸುವುದರಿಂದ ಮಾತ್ರ ಲೋಹಗಳನ್ನು ಅಪಕರ್ಷಿಸಬಹುದು.

BIOLOGY

MOLECULAR BASIS OF INHERITANCE

59. What are the Prospects and Implications of Human Genome Project?

Ans:- The Prospects and Implications of Human Genome Project are – (……Contd)

2. Soon we shall be mapping all the human genes, Alu sequences, transposons and junk DNA.
3. There are more than 1200 genes that cause common cardiovascular ailments, endocrine diseases like diabetes, Alzheimer's disease and other neurological ailments, cancers, etc. After taking their snapshots, it will be possible to know the method to alter them and remove the possibility of the disorders.
4. Single gene defects produce a number of hereditary diseases. Their exact location, reason for defect and method of correcting the same can be found out.
5. Studying the genes that will cause reversion of cancerous cells to normal cells.
6. It will be possible to study interactions between various genes, proteins, as well as mechanism of forming tissues, organs, tumors or switch over to different developmental stages.
7. It holds promise of healthier and longer living, designer drugs and genetically modified diets according to needs of individual human beings.

60. Match the following:-

	Column I		Column II
a	Jacob & Monad	i	Neurospora
b	1 gene 1 enzyme hypothesis	ii	Operon
c	Griffith	iii	Reverse transcriptase
d	Temin & Baltimore	iv	Okazaki fragments
e	DNA polymerase	v	Transformation
		vi	Transduction
		vii	Conjugation

Ans:- a – ii, b –i, c – v, d – iii, e – iv

63. Write a brief note on the Repressible Operon System.

Ans:- Repressible Operon System (tryptophan Operon System) - A repressible operon system is a regulated segment of genetic material which normally remains operational but can be switched off when its product is either not required or crosses a threshold value. The system is found in anabolic pathways.

Eg:- Tryptophan operon of Escherichia coli. It has the following components:-

1) Regulator Gene (trp-R) - The gene produces a biochemical, generally a proteinaceous substance, called **aporepressor.** Aporepressor alone is unable to block the operator gene because of the absence of the binding head. Therefore the operon system remains switched on. A complete repressor is formed only when a no-proteinaceous corepressor joins the aporepressor.



Working of tryptophan operon.

Corepressor is commonly a product of the operon. Normally it is metabolized as soon as it is formed. Therefore, corepressor does not accumulate. but, if the metabolic pathway is blocked or it is available from outside source, the corepressor binds with the aporepressor to produce repressor. The repressor comes in contact with operator gene and blocks its activity. In tryptophan operon one of its product, amino acid tryptophan, acts as a corepressor.

2) Promoter Gene (trp-P) - this gene is the recognition as well as initiation point for RNA polymerase. RNA polymerase attaches to promoter gene. It can pass over to structural genes provided the operator gene is in the functional state.

3) Operator Gene (trp-O) - The gene lies in the passage-way between promoter and structural genes. Normally it remains switched on so that RNA polymerase can pass over from promoter gene to structural gene and bring about transcription. The operator gene can be switched off when both aporepressor and corepressor join together to form repressor. The repressor binds to operator gene to interrupt movement of RNA polymerase.

4) Leader Attenuator (LA) **Complex** - It lies between operator and structural genes. Attenuator slows down the activity of polymerase enzyme when tryptophan concentration begins to rise, this happens without blocking the operon.

5) Structural Genes - Tryptophan operon has five structural genes which are preceded by a leader sequence. The various structural genes are trp E, trp D, trp C, trp B and trp A. In the switched on state the structural genes produce a polycistronic *m*RNA. The *m*RNA forms five types of enzymes E, D, C, B, A which convert chorismic acid to amino acid tryptophan.

ಪತ್ನಿ ಮೇಲೆ ಇನ್‌ಸ್ಪೆಕ್ಟರ್ ಹಲ್ಲೆ

ವರದಕ್ಷಿಣೆ ಕಿರುಕುಳ ಆರೋಪ ನಾಲ್ವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವರದಕ್ಷಿಣೆಗಾಗಿ ಪತ್ನಿ ಹಾಗೂ ಮಕ್ಕಳಿಗೆ ಕಿರುಕುಳ ನೀಡಿ ಹಲ್ಲೆ ನಡೆಸಿದ್ದ ಆರೋಪದ ಅಡಿ ಸದಾಶಿವನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸೇರಿದಂತೆ ನಾಲ್ವರ ವಿರುದ್ಧ ಉತ್ತರ ವಿಭಾಗದ ಮಹಿಳಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಇನ್‌ಸ್ಪೆಕ್ಟರ್ ಬಿ.ಪಿ.ಗಿರೀಶ್ ಹಾಗೂ ಅವರ ತಾಯಿ, ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಬರಗೂರಿನ ನಿವಾಸಿ ಲಲಿತಮ್ಮ, ಸಹೋದರ ಬಿ.ಪಿ.ಹರೀಶ್, ಹೊಳೆನರಸೀಪುರದ ತೆರಣ್ಯ ಗ್ರಾಮದ ರಾಜೇಶ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಗಿರೀಶ್ ಅವರ ಪತ್ನಿ, ಮಹಾಲಕ್ಷ್ಮಿಪುರದ ನಿವಾಸಿ ಡಿ.ಎನ್.ಕಾವ್ಯಾ ಅವರು ನೀಡಿದ ದೂರಿನ ಮೇರೆಗೆ ನಾಲ್ವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮಹಿಳಾ ಪೊಲೀಸ್ ಠಾಣೆಯ ಮೂಲಗಳು ತಿಳಿಸಿವೆ.

ಪತ್ನಿಯ ದೂರಿನಲ್ಲಿ ಏನಿದೆ?: '2010ರ ಜ.31ರಂದು ಹಾಸನದ ಶುಭೋದಯ ಕಲ್ಯಾಣ ಮಂಟಪದಲ್ಲಿ ಬಿ.ಪಿ.ಗಿರೀಶ್ ಅವರನ್ನು ಮದುವೆಯಾಗಿದ್ದೆ. ಹುಡುಗನಿಗೆ 250 ಗ್ರಾಂ ಚಿನ್ನಾಭರಣ, ₹5 ಲಕ್ಷ ನಗದು ನೀಡಲಾಗಿತ್ತು. ₹30 ಲಕ್ಷ ಖರ್ಚು ಮಾಡಿ ಮದುವೆ ಮಾಡಿಕೊಡಲಾಗಿತ್ತು. ಇಬ್ಬರು ಮಕ್ಕಳಿದ್ದಾರೆ. ಈಗ ಬಿ.ಪಿ.ಗಿರೀಶ್ ಅವರು ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ. 2017ರಿಂದಲೂ ನನಗೆ ಹಾಗೂ ಮಕ್ಕಳಿಗೆ ಮಾನಸಿಕ, ದೈಹಿಕ ಹಿಂಸೆ ನೀಡುತ್ತಿದ್ದಾರೆ' ಎಂದು ಕಾವ್ಯಾ ನೀಡಿದ್ದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ತಾಯಿ ಹಾಗೂ ದೊಡ್ಡಮ್ಮನನ್ನು ಮನೆಗೆ ಕರೆಸಿಕೊಂಡು ಮಕ್ಕಳ ಮೇಲೆಯೂ ದೌರ್ಜನ್ಯ ಎಸಗಿದ್ದಾರೆ. ಮನೆ ಖಾಲಿ ಮಾಡುವಂತೆ ಹೇಳಿ ಬೆದರಿಕೆ ಹಾಕಿ ಹೊರಕ್ಕೆ ಹಾಕಿದ್ದರು. ವರದಕ್ಷಿಣೆ ತರುವಂತೆ ಪದೇ ಪದೇ ಕಿರುಕುಳ ನೀಡುತ್ತಿದ್ದರು. ತಂದೆಯವರು ₹8 ಲಕ್ಷ ನೀಡಿದ್ದರು. ನಂತರ, ಪತಿಯ ಸಹೋದರ ಬಿ.ಪಿ.ಹರೀಶ್ ಅವರಿಗೆ ಮನೆಯನ್ನು ಭೋಗ್ಯಕ್ಕೆ ಹಾಕಿಸಿಕೊಳ್ಳಲು 2019ರಲ್ಲಿ ₹10 ಲಕ್ಷದ ಚೆಕ್ ನೀಡಲಾಗಿತ್ತು. ಅದಾದ ಮೇಲೆ ತವರು ಮನೆಗೆ ಹೋಗಿ ವಾಪಸ್ ಬಂದಾಗ ಕ್ರಿಕೆಟ್ ಬ್ಯಾಟ್‌ನಿಂದ ಮಗಳ ಮೇಲೆ ಹಲ್ಲೆ ಮಾಡಿದ್ದರು. ಅಲ್ಲದೇ ಕೊಲೆ ಬೆದರಿಕೆ ಹಾಕಿದ್ದರು. ಗಿರೀಶ್ ಅವರಿಗೆ ಬೇರೆ ಮಹಿಳೆಯ ಜತೆಗೆ ಸ್ನೇಹವಿದ್ದು ಕಿರುಕುಳ ನೀಡುತ್ತಿದ್ದಾರೆ' ಎಂಬುದಾಗಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಇನ್‌ಸ್ಪೆಕ್ಟರ್‌ಗಳ ಬಳಿ ಹಣಕ್ಕೆ ಬೇಡಿಕೆ: ಪತ್ರಕರ್ತ ಬಂಧನ

ಬೆಂಗಳೂರು: ಪೊಲೀಸ್ ಇನ್‌ಸ್ಪೆಕ್ಟರ್‌ಗಳಿಗೆ ವಾಟ್ಸ್‌ಆ್ಯಪ್ ಕರೆ ಮಾಡಿ ಹಣಕ್ಕೆ ಬೇಡಿಕೆ ಇಟ್ಟ ಆರೋಪದ ಮೇಲೆ ಪತ್ರಕರ್ತರೊಬ್ಬರನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

ಬಾಗಲೂರು ಠಾಣೆ ಸಬ್ ಇನ್‌ಸ್ಪೆಕ್ಟರ್ ರಮೇಶ್ ಅವರ ದೂರು ಆಧರಿಸಿ ಪತ್ರಕರ್ತ ಶರತ್ ಶರ್ಮಾ ಕಲಗಾರ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಬಂಧಿಸಿದ್ದಾರೆ.

ಆರೋಪಿಯು ಬಾಗಲೂರು ಠಾಣೆ ಇನ್‌ಸ್ಪೆಕ್ಟರ್ ಆಗಿದ್ದ ಶಬರೀಶ್ ಮತ್ತು ಸಬ್ ಇನ್‌ಸ್ಪೆಕ್ಟರ್ ರಮೇಶ್, ಕೊತ್ತನೂರು ಠಾಣೆ ಇನ್‌ಸ್ಪೆಕ್ಟರ್ ಆಗಿದ್ದ ಚೇತನ್ ಕುಮಾರ್ ಮತ್ತು ಅವಲಹಳ್ಳಿಯ ಠಾಣೆ ಇನ್‌ಸ್ಪೆಕ್ಟರ್ ಆಗಿದ್ದ ರಾಮಕೃಷ್ಣ ಅವರಿಗೆ ಕರೆ ಮಾಡಿ ತಲಾ ₹5 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ ಎಂದು ಆರೋಪಿಸಲಾಗಿದೆ.

ಚಟಿಕೆ ಸುದ್ದಿ

ಪತ್ನಿಗೆ ಪತಿಯ ಕಾಟ

ಬೆಂಗಳೂರು: ಅತ್ತೆ ಹಾಗೂ ಮಾವನ ಎದುರು, ಮನೆಯ ಪ್ಯಾಸೇಜ್‌ನಲ್ಲಿ ಪತಿ ಬೆತ್ತಲೆಯಾಗಿ ಓಡಾಟ ನಡೆಸುತ್ತಾ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಕೇಂದ್ರ ವಿಭಾಗದ ಮಹಿಳಾ ಠಾಣೆಗೆ ಪತ್ನಿ ದೂರು ನೀಡಿದ್ದಾರೆ.

'ಪತಿಯ ವಿಚಿತ್ರ ವರ್ತನೆಯಿಂದ ಬೇಸತ್ತು ಪೊಲೀಸರಿಗೆ ದೂರು ನೀಡಿದ್ದೇನೆ' ಎಂದು ಸಂತ್ರಸ್ತೆ ಹೇಳಿದ್ದಾರೆ. ದೂರು ಸ್ವೀಕರಿಸಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಠಾಣಾ ವ್ಯಾಪ್ತಿಯಲ್ಲಿ ದಂಪತಿ ನೆಲಸಿದ್ದರು.

'ಸಾಫ್ಟ್‌ವೇರ್ ಕಂಪನಿಯ ಮಾನವ ಸಂಪನ್ಮೂಲ ವಿಭಾಗದಲ್ಲಿ ಕೆಲಸ ಮಾಡುತ್ತಿರುವಾಗ ಪ್ರೀತಿಸಿ ಮದುವೆ ಆಗಿದ್ದೆವು. ಮದುವೆಯಾದ ನಾಲ್ಕು ತಿಂಗಳ ಬಳಿಕ ಪತಿ ವಿಚಿತ್ರವಾಗಿ ವರ್ತಿಸಲು ಆರಂಭಿಸಿದರು' ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ.

ಬಯೊಕಾನ್ ಉದ್ಯೋಗಿ ಆತ್ಮಹತ್ಯೆ

ಅನಂತ ಕುಮಾರ್

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಎರಡನೇ ಹಂತದಲ್ಲಿರುವ ಬಯೊಕಾನ್ ಕಂಪನಿಯ ಐದನೇ ಮಹಡಿಯಿಂದ ಜಿಗಿದು ಉದ್ಯೋಗಿಯೊಬ್ಬರು ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬನಶಂಕರಿಯ ಅನಂತಕುಮಾರ್ (26) ಆತ್ಮಹತ್ಯೆ ಮಾಡಿಕೊಂಡವರು.

ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಬನಶಂಕರಿಯ ಅನಂತ್ ಕುಮಾರ್ ಅವರು ಕಳೆದ ಎರಡು ತಿಂಗಳಿನಿಂದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು.

ನಿಧನ ವಾರ್ತೆ

ಬಿ.ಎನ್.ತಮ್ಮಣ್ಣ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕು ನರಸಿಪುರ ಆತ್ಮರಾಮ ಪ್ರೌಢ ಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ಬಿ.ಎನ್. ತಮ್ಮಣ್ಣ (71) ಅವರು ಅನಾರೋಗ್ಯದಿಂದ ಸೋಮವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಮಧುಗಿರಿಯ ಹೊಸಕೆರೆಯಲ್ಲಿ ಮಂಗಳವಾರ ನಡೆಯಿತು.

ಸುತ್ತಿಗೆಯಿಂದ ಹೊಡೆದು ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ. ನಗರದ 8ನೇ ಹಂತದಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ಮದ್ಯದ ಅಮಲಿನಲ್ಲಿದ್ದ ಗಾರೆ ಕೆಲಸಗಾರರ ನಡುವೆ ನಡೆದ ಗಲಾಟೆಯು ಕೊಲೆಯಲ್ಲಿ ಅಂತ್ಯವಾಗಿದೆ.

ಪಶ್ಚಿಮ ಬಂಗಾಳದ ಭಗೀರಥ್ ಬಾಪರಿ (30) ಕೊಲೆ ಆದವರು. ಕೃತ್ಯ ಎಸಗಿದ ಬಿಪ್ಲಬ್ ಮಂಡಲ್(27) ಬಂಧನಕ್ಕೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಜೆ.ಪಿ. ನಗರದ ದೀಪಕ್ ಲೇಔಟ್‌ನ 2ನೇ ಬ್ಲಾಕ್‌ನಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ಇಬ್ಬರು ಗಾರೆ ಕೆಲಸ ಮಾಡುತ್ತಿದ್ದರು. ಸೋಮವಾರ ರಾತ್ರಿ ಇಬ್ಬರೂ ಮದ್ಯ ಸೇವಿಸಿ, ಕಟ್ಟಡಕ್ಕೆ ಬಂದಿದ್ದರು. ಆಗ ಇಬ್ಬರ ನಡುವೆ ಗಲಾಟೆ ನಡೆದಿದೆ. ಗಲಾಟೆ ವಿಕೋಪಕ್ಕೆ ಹೋಗಿದ್ದರಿಂದ ಭಗೀರಥ್ ಬಾಪರಿ ಅವರಿಗೆ ಸುತ್ತಿಗೆಯಿಂದ ಬಿಪ್ಲಬ್ ಮಂಡಲ್ ಹೊಡೆದಿದ್ದಾನೆ. ಹೊಡೆದ ರಭಸಕ್ಕೆ ಸ್ಥಳದಲ್ಲೇ ಕುಸಿದು ಬಿದ್ದು, ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಇದಕ್ಕೂ ಮೊದಲು ಇಬ್ಬರೂ ಪಶ್ಚಿಮ ಬಂಗಾಳದಲ್ಲಿ ಕೆಲಸ ಮಾಡುತ್ತಿದ್ದರು. ಒಂದು ತಿಂಗಳ ಹಿಂದೆ ನಗರಕ್ಕೆ ಬಂದು ಗಾರೆ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು. ಮಂಗಳವಾರ ಬೆಳಿಗ್ಗೆ ಇತರೆ ಕಾರ್ಮಿಕರು ಕೆಲಸಕ್ಕೆ ಬಂದಾಗ ಕೃತ್ಯ ನಡೆದಿರುವುದು ಗೊತ್ತಾಗಿದೆ. ಕಾರ್ಮಿಕರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಪರಿಶೀಲಿಸಲಾಯಿತು ಎಂದು ಪೊಲೀಸರು ಹೇಳಿದರು. ಕೋಣನಕುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾರಕಾಸ್ತ್ರ ಹಿಡಿದು ಗಲಾಟೆ: ಆರು ಮಂದಿಯ ಬಂಧನ

ಬೆಂಗಳೂರು: ಮಾರಕಾಸ್ತ್ರ ಹಿಡಿದು ದಾಂದಲೆ ನಡೆಸಿದ್ದ ಆರು ಮಂದಿಯನ್ನು ಸಿ.ಕೆ. ಅಚ್ಚುಕಟ್ಟು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪ್ರಜ್ಞಾ ಲೇಔಟ್‌ನ ವೆಂಕಟೇಶ್ ಅಲಿಯಾಸ್ ಕಾಡು, ಕತ್ರಿಗುಪ್ಪೆಯ ನಿವಾಸಿ ಗಿರೀಶ್ ಅಲಿಯಾಸ್ ಚೋಟ, ಬ್ಯಾಟರಾಯನಪುರದ ಸುರೇಂದ್ರ ಅಲಿಯಾಸ್ ಸುರಿ, ಚಂದನ್ ಅಲಿಯಾಸ್ ಸಣ್ಣ, ಶ್ರೀನಿವಾಸನಗರದ ಕೆ.ಎಸ್. ಗಣೇಶ್, ಜ್ಞಾನಭಾರತಿಯ ಗಣೇಶ ಬಂಧಿತರು. ಕತ್ರಿಗುಪ್ಪೆ ಮುಖ್ಯರಸ್ತೆಯಲ್ಲಿ ಗಲಾಟೆ ನಡೆದಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ರಸ್ತೆಯಲ್ಲಿ ಸಾಗುತ್ತಿದ್ದ ಇಬ್ಬರ ಮೇಲೆ ಆರು ಮಂದಿ ಆರೋಪಿಗಳು ಮಾರಕಾಸ್ತ್ರ ಬೀಸಿದ್ದರು. ಅಲ್ಲದೇ ರಸ್ತೆಯ ಪಕ್ಕದಲ್ಲಿದ್ದ ಬೇಕರಿಯ ಗಾಜು ಒಡೆದು ಹಾಕಿ ದಾಂದಲೆ ನಡೆಸಿದ್ದರು ಎಂದು ಪೊಲೀಸರು ಹೇಳಿದರು.

'ಮರ್ಯಾದೆಗೇಡು ಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ಮರ್ಯಾದೆಗೇಡು ಹತ್ಯೆ ನಿಷೇಧಕ್ಕೆ ಕಾಯ್ದೆ ರಚಿಸಿ, ಅದನ್ನು ಜಾರಿಗೊಳಿಸಬೇಕು ಎಂದು ಹೋರಾಟಗಾರ್ತಿ ಕೆ.ಎಸ್. ವಿಮಲಾ ಆಗ್ರಹಿಸಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಮಂಗಳವಾರ ಆಯೋಜಿಸಿದ್ದ 'ನಿರಾತಂಕ ಹಗಲು, ನಿರ್ಭಯದ ರಾತ್ರಿಗಳ ಖಾತ್ರಿಗಾಗಿ 2025ಕ್ಕೆ ವಿದಾಯ ಹಾಗೂ 2026ಕ್ಕೆ ಸ್ವಾಗತ –ಸಾಂಸ್ಕೃತಿಕ ಅಭಿವ್ಯಕ್ತಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಂಬರುವ ಬಜೆಟ್ ಅಧಿವೇಶನದಲ್ಲಿ ಈ ಬಗ್ಗೆ ಮಸೂದೆ ಮಂಡಿಸಬೇಕು. ರಾಜ್ಯದಲ್ಲಿ ಮರ್ಯಾದೆಗೇಡು ಹತ್ಯೆಗಳು ನಡೆಯದಂತೆ ಸುರಕ್ಷಿತ ವಾತಾವರಣ ನಿರ್ಮಿಸಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಸೇರಿ ನಿರಂತರ ಹೋರಾಟಗಳನ್ನು ಮಾಡುವ ಮೂಲಕ ಸರ್ಕಾರದ ಮೇಲೆ ಒತ್ತಡ ಹಾಕಬೇಕು. ಈ ಬಗ್ಗೆ ಪತ್ರ ಚಳವಳಿಯನ್ನು ಪ್ರಾರಂಭಿಸಲಾಗುವುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹಿಳೆಯರು ಹಾಗೂ ಮಕ್ಕಳ ಸುರಕ್ಷತೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಆದ್ಯತೆ ನೀಡಬೇಕು' ಎಂದು ಒತ್ತಾಯಿಸಿದರು.

ಲೇಖಕಿ ವಸುಂಧರಾ ಭೂಪತಿ ಮಾತನಾಡಿ, 'ಇತ್ತೀಚೆಗೆ ಮಹಿಳೆಯರು ಹಾಗೂ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ರೈಲು, ಬಸ್‌ಗಳಲ್ಲಿ ಲೈಂಗಿಕ ಕಿರುಕುಳ ಹಾಗೂ ಅತ್ಯಾಚಾರ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು. ಅಂತರ್ ಜಾತಿ ವಿವಾಹವಾದ ಕಾರಣ ಹುಬ್ಬಳ್ಳಿಯಲ್ಲಿ ಹೆತ್ತ ಮಗಳನ್ನೆ ತಂದೆ ಹತ್ಯೆ ಮಾಡಿರುವುದು ಖಂಡನೀಯ. ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಮಹಿಳೆಯರು ಸಮಾಜದಲ್ಲಿ ನಿರ್ಭೀತಿಯಿಂದ ಜೀವನ ನಡೆಸುವ ಸುರಕ್ಷಿತ ಪರಿಸರ ನಿರ್ಮಿಸಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನ ಅವಕಾಶಗಳಿದ್ದರೂ, ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿ' ಎಂದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷರಾದ ಕೆ.ಎಸ್. ಲಕ್ಷ್ಮಿ, ಗೌರಮ್ಮ ಉಪಸ್ಥಿತರಿದ್ದರು.

'ಗೂಗಲ್' ನಿವೃತ್ತ ಪ್ರಾದೇಶಿಕ ನಿರ್ದೇಶಕರ ಮೇಲೆ ನಾಯಿ ದಾಳಿ

ಬೆಂಗಳೂರು: ವಾಯುವಿಹಾರಕ್ಕೆ ತೆರಳಿದ್ದ ವೇಳೆ ಗೂಗಲ್ ಕಂಪನಿಯ ನಿವೃತ್ತ ಪ್ರಾದೇಶಿಕ ನಿರ್ದೇಶಕ, ಜಯನಗರದ ನಿವಾಸಿ ಬಿ.ಆರ್. ನಾಗರಾಜ್ (63) ಅವರ ಮೇಲೆ ಸೋಮವಾರ ಬೆಳಿಗ್ಗೆ ಬೀದಿನಾಯಿಗಳು ದಾಳಿ ನಡೆಸಿ ಗಾಯಗೊಳಿಸಿವೆ.

ನಾಗರಾಜ್ ಅವರು ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರು ಸ್ವೀಕರಿಸಿರುವ ಪೊಲೀಸರು, ಎನ್‌ಸಿಆರ್(ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಂಡಿದ್ದಾರೆ.

'ಡಿಸೆಂಬರ್ 29ರಂದು ಬೆಳಿಗ್ಗೆ 6 ಗಂಟೆಯ ಸುಮಾರಿಗೆ ಜಯನಗರದ ಐದನೇ ಬ್ಲಾಕ್‌ನ 36ನೇ ಕ್ರಾಸ್ ಬಳಿ ವಾಯುವಿಹಾರಕ್ಕೆ ತೆರಳಿದ್ದೆ. ಆ ಸಂದರ್ಭದಲ್ಲಿ ಆರರಿಂದ ಏಳು ಬೀದಿ ನಾಯಿಗಳು ಬಂದು ದಾಳಿ ನಡೆಸಿದವು. ಆ ನಾಯಿಗಳನ್ನು ಸುರಕ್ಷಿತ ಸ್ಥಳಕ್ಕೆ ಬಿಡಬೇಕು. ಬಿಬಿಎಂಪಿ ಅಧಿಕಾರಿಗಳಿಗೂ ತಿಳಿವಳಿಕೆ ನೀಡಬೇಕು' ಎಂದು ದೂರಿನಲ್ಲಿ ನಾಗರಾಜ್ ಕೋರಿದ್ದಾರೆ.

'ನಾಗರಾಜ್ ಅವರು ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದುಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಇ-ಮೇಲ್ ಶೀರ್ಷಿಕೆಯಲ್ಲಿ ಆರ್‌ಡಿಎಕ್ಸ್ ಸ್ಫೋಟದ ಎಚ್ಚರಿಕೆ

ಡಿ.ಸಿ ಕಚೇರಿಗೆ ಹುಸಿ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಕೋಲಾರ: ನಗರ ಹೊರವಲಯದಲ್ಲಿರುವ ಕೋಲಾರ ಜಿಲ್ಲಾಧಿಕಾರಿ ಕಚೇರಿಗೆ ಒಂದೇ ತಿಂಗಳಲ್ಲಿ ಎರಡನೇ ಬಾರಿ ಹುಸಿ ಬಾಂಬ್ ಬೆದರಿಕೆ ಬಂದಿದೆ.

ಕಳೆದ ಬಾರಿಯಂತೆಯೇ ಇ-ಮೇಲ್ ವಿಷಯ ಕಾಲಂನಲ್ಲಿ (ಶೀರ್ಷಿಕೆ) ಆರ್‌ಡಿಎಕ್ಸ್ ಐಇಡಿ ಬಾಂಬ್ ಇಡಲಾಗಿದೆ ಎಂಬ ಅಂಶವಿದೆ. ಆದರೆ, ಪತ್ರದ ಸಾರಾಂಶದಲ್ಲಿ ನಕಲಿ ಪಾಸ್‌ಪೋರ್ಟ್ ದಂಧೆ ನಡೆಯುತ್ತಿರುವ ಆರೋಪ ಮಾಡಲಾಗಿದೆ. ಎಲ್‌ಟಿಟಿಇ, ತಮಿಳುನಾಡಿನ ಡಿಎಂಕೆ ಮುಖಂಡ ಉದಯನಿಧಿ ಹಾಗೂ ಐಪಿಎಸ್ ಅಧಿಕಾರಿಗಳ ಹೆಸರು ಉಲ್ಲೇಖಿಸಲಾಗಿದೆ. ಗಮನ ಸೆಳೆಯಲು ನಡೆದಿರುವ ಕೃತ್ಯವಿದು ಎಂಬುದು ಗೊತ್ತಾಗಿದೆ.

ಮಂಗಳವಾರ ಬೆಳಿಗ್ಗೆ 8.30ರ ಸುಮಾರಿಗೆ ಬಾಂಬ್ ಬೆದರಿಕೆ ಸಂದೇಶವು ಜಿಲ್ಲಾಧಿಕಾರಿ ಕಚೇರಿಯ ಇ-ಮೇಲ್‌ಗೆ ಬಂದಿದೆ. ಕೂಡಲೇ ಎಚ್ಚೆತ್ತ ಪೊಲೀಸರು ಜಿಲ್ಲಾಧಿಕಾರಿ ಕಚೇರಿಯನ್ನು ಸಂಪೂರ್ಣವಾಗಿ ಪರಿಶೀಲನೆ ನಡೆಸಿದರು.

ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳ ಜಿಲ್ಲಾಧಿಕಾರಿ ಕಚೇರಿಯ ಕೊಠಡಿಗಳನ್ನು ತಪಾಸಣೆ ನಡೆಸಿದವು. ಮುನ್ನೆಚ್ಚರಿಕೆ ಕ್ರಮವಾಗಿ ಅಗ್ನಿಶಾಮಕ ವಾಹನವನ್ನೂ ಸ್ಥಳಕ್ಕೆ ಕರೆಸಲಾಯಿತು. ಜಿಲ್ಲಾಧಿಕಾರಿ ಎಂ.ಆರ್.ರವಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. ಸ್ಥಳದಲ್ಲಿದ್ದು ಪರಿಶೀಲನೆ ನಡೆಸಿದರು.

ಮುಖ್ಯಾಂಶಗಳು

- ಶ್ವಾನದಳ, ಬಾಂಬ್ ನಿಷ್ಕ್ರಿಯ ದಳದಿಂದ ತಪಾಸಣೆ
- ಡಿ.12ರಂದು ಬಾಲಕಿ ಹೆಸರಲ್ಲಿ ಬಂದಿದ್ದ ಇ-ಮೇಲ್
- ಇ-ಮೇಲ್ ಜಾಡು ಪತ್ತೆ ಹಚ್ಚಲು ತನಿಖೆ

2ನೇ ಬಾರಿ ಬಾಂಬ್ ಬೆದರಿಕೆ ಬಂದಿದ್ದು, ಜಿಲ್ಲಾಧಿಕಾರಿ ಕಚೇರಿ ಪರಿಶೀಲನೆ ನಡೆಸಿದೆವು. ಯಾವುದೇ ಸ್ಫೋಟಕ ಪತ್ತೆ ಆಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ

ನಿಖಿಲ್ ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಜಿಲ್ಲಾಡಳಿತ ಭವನಕ್ಕೆ ಮಂಗಳವಾರ ಬಾಂಬ್ ಬೆದರಿಕೆ ಸಂದೇಶ ಬಂದಿದ್ದರಿಂದ ಪೊಲೀಸರು ಶ್ವಾನದೊಂದಿಗೆ ಆವರಣ ತಪಾಸಣೆ ನಡೆಸಿದರು

ಸುಮಾರು ಹೊತ್ತು ತಪಾಸಣೆ ನಡೆಸಿದ ನಂತರ ಇದು ಹುಸಿ ಬಾಂಬ್ ಸಂದೇಶ ಎಂಬುದು ಗೊತ್ತಾಯಿತು.

ಇದೇ ತಿಂಗಳ 12 ರಂದು ಇದೇ ರೀತಿ ಚೆನ್ನೈನ ಬಾಲಕಿಯೊಬ್ಬಳ ಹೆಸರಿನಲ್ಲಿ ಇ-ಮೇಲ್‌ನಲ್ಲಿ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಬಾಂಬ್ ಸ್ಫೋಟ ಮಾಡಲಿದ್ದು, ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರನ್ನು ತೆರವುಗೊಳಿಸಬೇಕು ಎಂಬ ಎಚ್ಚರಿಕೆ ಆ ಇ-ಮೇಲ್‌ನಲ್ಲಿ ಇತ್ತು. 13ರ ಹರೆಯದ ಬಾಲಕಿಯೊಬ್ಬಳು ತಾನಾಗುತ್ತಿರುವ ಲೈಂಗಿಕ ಕಿರುಕುಳ ಹೇಳಿಕೊಳ್ಳಲು ಈ ರೀತಿ ಇ-ಮೇಲ್ ಕಳಿಸಿರುವುದು ತಿಳಿದುಬಂದಿತ್ತು. ಇ-ಮೇಲ್ ಶೀರ್ಷಿಕೆಯಲ್ಲಿ ಬಾಂಬ್ ಬೆದರಿಕೆ ವಿಚಾರವಿದ್ದು, ಸಾರಂಶದಲ್ಲಿ ಕಿರುಕುಳದ ದೂರಿತ್ತು.

ಈಗಾಗಲೇ ಇ-ಮೇಲ್ ಜಾಡು ಪತ್ತೆ ಹಚ್ಚಲು ಮುಂದಾಗಿರುವ ಜಿಲ್ಲಾ ಪೊಲೀಸರು ಕೃತ್ಯದ ಹಿಂದೆ ಇರುವಂತಹ ಕಿಡಿಗೇಡಿಗಳಿಗೆ ತಕ್ಕ ಪಾಠ ಕಲಿಸಲು ವಿಶೇಷ ತಂಡ ರಚನೆ ಮಾಡಿದ್ದಾರೆ. ಮೊದಲ ಹುಸಿ ಬಾಂಬ್ ಬೆದರಿಕೆ ಘಟನೆಯಲ್ಲಿ ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿತ್ತು. ಈಗ ಮತ್ತೊಂದು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಒಂದು ತಿಂಗಳಲ್ಲಿ ಎರಡು ಬಾರಿ ಜಿಲ್ಲಾಧಿಕಾರಿ ಕಚೇರಿಗೆ ಬಾಂಬ್ ಬೆದರಿಕೆ ಬಂದಿರುವುದು ಜಿಲ್ಲಾಡಳಿತಕ್ಕೆ ತಲೆನೋವು ತರಿಸಿದೆ.

ಹೊಸ ವರ್ಷ ಸ್ವಾಗತಿಸಲು ಸಜ್ಜು

ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಕೋರಮಂಗದಲ್ಲಿ ಬಂದೋಬಸ್ತ್

ಹೊಸ ವರ್ಷದ ಆಚರಣೆಯ ಹಿನ್ನಲೆಯಲ್ಲಿ ಬ್ರಿಗೇಡ್ ರಸ್ತೆ ದೀಪಾಲಂಕಾರದಿಂದ ಕಂಗೊಳಿಸುತ್ತಿದೆ ಚಿತ್ರಗಳು: ಎಂ. ಎಸ್‌. ಮಂಜುನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 2025ಕ್ಕೆ ವಿದಾಯ ಹೇಳಿ 2026 ಸ್ವಾಗತಿಸಲು ಬೆಂಗಳೂರು ನಗರವು ಸಜ್ಜಾಗುತ್ತಿದೆ...

ಸಂಭ್ರಮಾಚರಣೆ ನಡೆಯುವ ಪ್ರಮುಖ ರಸ್ತೆಗಳು ಬಣ್ಣಬಣ್ಣದ ವಿದ್ಯುತ್ ದೀಪಗಳ ಅಲಂಕಾರದಿಂದ ಸಜ್ಜಾಗಿವೆ. ಪಬ್, ಕ್ಲಬ್, ರೆಸ್ಟೊರೆಂಟ್‌ಗಳು ಬುಧವಾರ ರಾತ್ರಿ ಪಾರ್ಟಿ ಆಯೋಜಿಸಲು ಸಿದ್ಧತೆ ಮಾಡಿಕೊಂಡಿವೆ.

ನೂತನ ವರ್ಷವನ್ನು ಸ್ವಾಗತಿಸಲು ಬುಧವಾರ ರಾತ್ರಿ ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆ, ಕೋರಮಂಗಲ, ಒಪೆರಾ ಜಂಕ್ಷನ್, ರೆಸ್ಟ್‌ಹೌಸ್ ರಸ್ತೆ, ಸೇಂಟ್ ಮಾರ್ಕ್ ರಸ್ತೆ, ರಿಚ್ಮಂಡ್ ರಸ್ತೆ, ರೆಸಿಡೆನ್ಸಿ ರಸ್ತೆಗೆ ದೊಡ್ಡ ಸಂಖ್ಯೆಯಲ್ಲಿ ಯುವ ಸಮೂಹ ಬರುವ ನಿರೀಕ್ಷೆಯಿದೆ. ಈ ಸ್ಥಳಗಳಲ್ಲಿ ಪೊಲೀಸ್ ಪಹರೆ ಕಾಣಿಸುತ್ತಿದೆ. ಸೂಕ್ಷ್ಮ ಪ್ರದೇಶದಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ.

ಕಳೆದ ವರ್ಷಕ್ಕಿಂತ ಈ ಬಾರಿ ಹೆಚ್ಚಿನ ಜನರು ಹೊಸ ವರ್ಷಾಚರಣೆ ನಡೆಯುವ ಸ್ಥಳಗಳಿಗೆ ಬರುವ ನಿರೀಕ್ಷೆಯಿದೆ. ಮಹಾತ್ಮ ಗಾಂಧಿ ರಸ್ತೆಗೆ ಮಂಗಳವಾರ ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಹಾಕೇ ಅವರು ಭೇಟಿ ನೀಡಿ

> **ಜವಾಬ್ದಾರಿಯಿಂದ ಎಲ್ಲರೂ ಹೊಸ ವರ್ಷದ ಆಚರಣೆ ನಡೆಸಬೇಕು. ಅಹಿತಕರ ಘಟನೆಗಳಿಗೆ ಅವಕಾಶ ನೀಡಬಾರದು**
> **ಸೀಮಾಂತ್‌ಕುಮಾರ್ ಸಿಂಗ್,**
> ನಗರ ಪೊಲೀಸ್ ಕಮಿಷನರ್

ಅನಾಹುತಗಳ ಬಗ್ಗೆ ಪೊಲೀಸ್ ಅಧಿಕಾರಿ ಜನರಿಗೆ ಮುನ್ನೆಚ್ಚರಿಕೆ ನೀಡಿದರು

ಬಂದೋಬಸ್ತ್ ವ್ಯವಸ್ಥೆ ಪರಿಶೀಲಿಸಿದರು.

ಪ್ರವೇಶಕ್ಕೆ ಅವಕಾಶ: ಮಹಾತ್ಮ ಗಾಂಧಿ ರಸ್ತೆಗೆ ಬರುವವರು ಅನಿಲ್ ಕುಂಬ್ಳೆ ವೃತ್ತದ ಮೂಲಕ, ಚರ್ಚ್ ಸ್ಟ್ರೀಟ್‌ಗೆ ಬರುವವರು ಕೆಸಿ ದಾಸ್ ಜಂಕ್ಷನ್ ಮೂಲಕ, ಬ್ರಿಗೇಡ್ ರಸ್ತೆಗೆ ಬರುವವರು ಕಾವೇರಿ ಜಂಕ್ಷನ್ ಹಾಗೂ ಟ್ರಿನಿಟಿ ಕಡೆಯಿಂದ ಬರಬಹುದು.

ಕೇಂದ್ರ ವಲಯ ವ್ಯಾಪ್ತಿಯಲ್ಲಿ 3,400 ಸಿ.ಸಿ.ಟಿ.ವಿ ಕ್ಯಾಮೆರಾಗಳಿದ್ದು, ಪ್ರತಿಯೊಬ್ಬರ ಚಲನವಲನವನ್ನು ಸೆರೆಹಿಡಿಯಲಾಗುವುದು. ಕೃತಕ ಬುದ್ಧಿಮತ್ತೆ(ಎಐ) ಆಧರಿಸಿ ಜನದಟ್ಟಣೆಯನ್ನು ವಿಶ್ಲೇಷಿಸಿ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗುವುದು. ಸಿವಿಲ್ ಪೊಲೀಸ್, ಸಶಸ್ತ್ರ ಮೀಸಲು ಪಡೆ, ಕೆಎಸ್‌ಆರ್‌ಪಿ, ಕ್ಷಿಪ್ರ ಕಾರ್ಯ ಪಡೆ, ಗೃಹ ರಕ್ಷಕ ದಳದ ಸಿಬ್ಬಂದಿ ಸೇರಿ 3 ಸಾವಿರಕ್ಕೂ ಹೆಚ್ಚು ಸಿಬ್ಬಂದಿಯನ್ನು ಕೇಂದ್ರ ವಲಯದಲ್ಲಿ ಬಂದೋಬಸ್ತ್‌ಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಡಿಸಿಪಿ ಅಕ್ಷಯ್ ಹಾಕೇ ತಿಳಿಸಿದ್ದಾರೆ.

'ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆ ಹಾಗೂ ಕೋರಮಂಗಲದ ಅಲ್ಲಲ್ಲಿ ಮಹಿಳಾ ಸಹಾಯವಾಣಿ ಕೇಂದ್ರ, ವಾಚ್ ಟವರ್ಸ್ ನಿರ್ಮಿಸಲಾಗಿದೆ. ಸ್ಥಳದಲ್ಲಿ ಆಂಬುಲೆನ್ಸ್, ವೈದ್ಯಕೀಯ ಸಿಬ್ಬಂದಿ, ಅಗ್ನಿಶಾಮಕ ದಳದ ವಾಹನಗಳನ್ನು ನಿಯೋಜನೆ ಮಾಡಲಾಗುವುದು. ತುರ್ತು ಸಂದರ್ಭದಲ್ಲಿ ಸಹಾಯವಾಣಿ ಕೇಂದ್ರದ ಸಿಬ್ಬಂದಿಯನ್ನು ಸಂಪರ್ಕಿಸಬಹುದು' ಎಂದು ಪೊಲೀಸರು ತಿಳಿಸಿದರು.

ಪಬ್, ಕ್ಲಬ್‌ಗಳಿಗೆ ಸೂಚನೆ: 'ಪಬ್ ಹಾಗೂ ಕ್ಲಬ್‌ಗಳಲ್ಲಿ ಹೊಸ ವರ್ಷದ ಪಾರ್ಟಿಗಳನ್ನು ಆಯೋಜಿಸುವಾಗ ಪಟಾಕಿ ಸ್ಫೋಟಿಸುವಂತಿಲ್ಲ. ಕಾನೂನುಬಾಹಿರ ಪಾರ್ಟಿಗಳಿಗೆ ಅವಕಾಶ ಇಲ್ಲ. ಪ್ರಚೋದನಕಾರಿ ಹಾಡು ಹಾಕಬಾರದು. ಕುಟುಂಬದ ಸದಸ್ಯರಿಗೆ, ಸ್ನೇಹಿತರಿಗೆ ಬೇರೆ ವ್ಯವಸ್ಥೆ ಇರಬೇಕು ಎಂಬುದಾಗಿ ಸೂಚನೆ ನೀಡಲಾಗಿದೆ' ಎಂದು ಪೊಲೀಸರು ಹೇಳಿದರು.

ಜಲಮಂಡಳಿ ಅದಾಲತ್ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿಯು ಗುರುವಾರ (ಜ.1) ವಿವಿಧ ಉಪವಿಭಾಗಗಳಲ್ಲಿ ನೀರಿನ ಅದಾಲತ್ ಅನ್ನು ಹಮ್ಮಿಕೊಂಡಿದೆ.

ಪೂರ್ವ 1-1 ಉಪವಿಭಾಗದ ಅದಾಲತ್ ಬಿಇಎಂಎಲ್ ಲೇಔಟ್, ಪೂರ್ವ 2-1 ಕಲ್ಯಾಣ ನಗರ, ಆಗ್ನೇಯ 1 ಹಲಸೂರು, ಆಗ್ನೇಯ 4 ಇಂದಿರಾನಗರ ಕ್ಲಬ್ ಹಿಂಭಾಗ, ಪಶ್ಚಿಮ 1-1 ವಿಜಯನಗರ 2ನೇ ಹಂತ, ಪಶ್ಚಿಮ 2-1 ರಾಜರಾಜೇಶ್ವರಿ ನಗರ, ವಾಯವ್ಯ-1 ರಾಜಾಜಿನಗರ ವಿದ್ಯಾವರ್ಧಕ ಶಾಲೆ ಹಿಂಭಾಗ, ವಾಯವ್ಯ-3 ಹೆಸರಘಟ್ಟ ರಸ್ತೆ ಎಂಇಐ ಲೇಔಟ್, ಕೇಂದ್ರ 1-1 ಹೈಗ್ರೌಂಡ್ಸ್, ಈಶಾನ್ಯ 1 ಮಲ್ಲೇಶ್ವರಂ ಸುವರ್ಣ ಭವನ, ಉತ್ತರ 1-1 ಉಪವಿಭಾಗದ ಅದಾಲತ್ ಜಕ್ಕೂರಿನಲ್ಲಿ ನಡೆಯಲಿದೆ.

ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ವಾಟ್ಸ್ ಆ್ಯಪ್ 8762228888ಕ್ಕೆ ಸಂದೇಶದ ರೂಪದಲ್ಲಿ ದೂರು ನೀಡಬಹುದು ಎಂದು ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಪ್ರಿಯಾಂಕಾ ಪುತ್ರ ರೆಹಾನ್ ನಿಶ್ಚಿತಾರ್ಥ

ನವದೆಹಲಿ (ಪಿಟಿಐ): ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ಹಾಗೂ ಉದ್ಯಮಿ ರಾಬರ್ಟ್ ವಾದ್ರಾ ಅವರ ಪುತ್ರ ರೆಹಾನ್ ವಾದ್ರಾ ಅವರು ತಮ್ಮ ಬಹುಕಾಲದ ಗೆಳತಿ ಅವೀವಾ ಬೇಗ್ ಅವರ ಜೊತೆ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇಬ್ಬರ ಕುಟುಂಬಗಳು ಹಲವು ವರ್ಷಗಳಿಂದ ಉತ್ತಮ ಒಡನಾಟ ಹೊಂದಿವೆ. ಇಬ್ಬರೂ ಕೆಲವು ವರ್ಷಗಳಿಂದ ಒಟ್ಟಿಗಿದ್ದರು.

ರೆಹಾನ್ (25) ಅವರು ಪ್ರಿಯಾಂಕಾ ಗಾಂಧಿ-ರಾಬರ್ಟ್ ವಾದ್ರಾ ಅವರ ಹಿರಿಯ ಮಗ. ತಮ್ಮ ಸಾಮಾಜಿಕ ಜಾಲತಾಣದಲ್ಲಿ ಅವರು 'ಕಲಾವಿದ' ಹಾಗೂ 'ಛಾಯಾಗ್ರಾಹಕ' ಎಂದು ಸ್ವಪರಿಚಯ ಮಾಡಿಕೊಂಡಿದ್ದಾರೆ. ಪ್ರಿಯಾಂಕಾ-ರಾಬರ್ಟ್ ದಂಪತಿಗೆ ಮಗಳು ಮಿರಾಯಾ(23) ಕೂಡ ಇದ್ದಾರೆ.

ವಯನಾಡ್‌ನಲ್ಲಿ ಪ್ರಿಯಾಂಕಾ ಗಾಂಧಿ ಸ್ಪರ್ಧಿಸಿದ್ದ ವೇಳೆ ಇಬ್ಬರೂ ಮಕ್ಕಳು ಅಮ್ಮನ ಜೊತೆಗೆ ಪ್ರಚಾರದಲ್ಲಿ ಭಾಗಿಯಾಗಿದ್ದರು.

ಪ್ರಿಯಾಂಕಾ ಗಾಂಧಿ ಅವರು ತಮ್ಮ

ರಿಹಾನ್ ವಾದ್ರಾ–ಅವೀವಾ ಬೇಗ್

ಸಹೋದರ ರಾಹುಲ್ ಗಾಂಧಿ ಜೊತೆಗೆ ಮಂಗಳವಾರ ರಣಥಂಬೋರ್‌ಗೆ ಭೇಟಿ ನೀಡಿದ್ದಾರೆ.

ಸವಾಯಿ ಮಾಧೋಪುರ ಜಿಲ್ಲೆಯಲ್ಲಿರುವ ರಣಥಂಬೋರ್ ಹೆಚ್ಚಿನ ಸಂಖ್ಯೆಯ ಹುಲಿ ಹಾಗೂ ಜೀವವೈವಿಧ್ಯ ಹೊಂದಿದೆ. ಈ ಹಿಂದೆಯೂ ಕೂಡ ಅವರು ಇಲ್ಲಿಗೆ ಭೇಟಿ ನೀಡಿದ್ದರು.

ಮೂಲಗಳ ಪ್ರಕಾರ, ರೆಹಾನ್ ಮತ್ತು ಅವೀವಾ ಏಳು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಇತ್ತೀಚೆಗೆ ಈ ವಿಚಾರವನ್ನು ಪೋಷಕರಿಗೆ ತಿಳಿಸಿದ್ದು, ವಿವಾಹಕ್ಕೆ ಅವರೂ ಸಮ್ಮತಿ ಸೂಚಿಸಿದ್ದಾರೆ ಎಂದು ತಿಳಿದುಬಂದಿದೆ.

ಅವೀವಾ ಬೇಗ್ ಯಾರು?

ಅವೀವಾ ಅವರು ಇಮ್ರಾನ್ ಬೇಗ್ ಹಾಗೂ ನಂದಿತಾ ಬೇಗ್ ದಂಪತಿಯ ಮಗಳು. ಮಾಧ್ಯಮ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಪದವಿ ಪಡೆದಿದ್ದಾರೆ. ತಮ್ಮ ಆರಂಭಿಕ ಶಿಕ್ಷಣವನ್ನು ದೆಹಲಿಯಲ್ಲೇ ಪೂರ್ಣಗೊಳಿಸಿದ್ದಾರೆ.

ಅವೀವಾ ಕೂಡ ಸೃಜನಶೀಲ ಕಲೆಗಳಲ್ಲಿ ವೃತ್ತಿಜೀವನ ರೂಪಿಸಿಕೊಂಡಿದ್ದಾರೆ. ಪ್ರಚಾರದಿಂದ ದೂರ ಉಳಿದಿರುವ ಇವರು, ದೆಹಲಿ ಮೂಲದ ಛಾಯಾಗ್ರಾಹಕಿ. ಅಲ್ಲದೇ, ನಿರ್ಮಾಣ ಕಂಪನಿಯಾದ 'ಅಟೆಲಿಯರ್ 11'ರ ಸಹ ಸಂಸ್ಥಾಪಕಿ. ಅವೀವಾ ಪ್ರಸ್ತುತ ವೃತ್ತಿಪರ ಛಾಯಾಗ್ರಾಹಕಿ ಮತ್ತು ನಿರ್ಮಾಪಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ಫುಟ್‌ಬಾಲ್ ಆಟದಲ್ಲಿ ರಾಷ್ಟ್ರದ ತಂಡವನ್ನು ಪ್ರತಿನಿಧಿಸಿದ್ದರು.

ಚಿತ್ರಾವಳಿ

ಓಂ ಶಕ್ತಿ ದೇವಿಗೆ (ಮೇಲ್ಮೈರುವತ್ತೂರು) ಇರುಮುಡಿ ಹೊತ್ತು ಹೊರಟ ರಾಜಾಜಿನಗರ ವಿಧಾನಸಭಾ ಕ್ಷೇತ್ರದ 500 ಮಹಿಳಾ ಮಾಲಾಧಾರಿಗಳಿಗೆ ರಘುವೀರ್ ಎಸ್‌. ಗೌಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಉಚಿತ ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ತಂಡವು ಓಂ ಶಕ್ತಿ ದೇವಿ ಕ್ಷೇತ್ರಕ್ಕೆ ಮಂಗಳವಾರ ಪ್ರಯಾಣ ಬೆಳೆಸಿತು

ಕುವೆಂಪು ಅವರ 121ನೇ ಜಯಂತಿ ಪ್ರಯುಕ್ತ ಕನ್ನಡ ಸಂಘರ್ಷ ಸಮಿತಿ ವತಿಯಿಂದ ಲಾಲ್‌ಬಾಗ್‌ನ ಪಶ್ಚಿಮ ದ್ವಾರದಲ್ಲಿರುವ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಸಮಿತಿಯ ಅಧ್ಯಕ್ಷ ಎ.ಎಸ್‌. ನಾಗರಾಜಸ್ವಾಮಿ, ಪ್ರಧಾನ ಕಾರ್ಯದರ್ಶಿ ತಾ.ಸಿ. ತಿಮ್ಮಯ್ಯ, ಕನ್ನಡ ಹೋರಾಟಗಾರ ರಾಮಣ್ಣ ಎಚ್‌. ಕೋಡಿಹೊಸಹಳ್ಳಿ, ಮಾಜಿ ಉಪ ಮೇಯರ್ ಶ್ರೀರಾಮೇಗೌಡ, ಗುಡ್ಡದಹಳ್ಳಿ ಕೃಷ್ಣಪ್ಪ, ಬಿ. ನಾಗೇಶ್‌, ಬಿ. ನಾರಾಯಣ ಸ್ವಾಮಿ, ಎಚ್‌. ಶಂಕರ್‌, ಗಾಯತ್ರಿ ರಾಮಣ್ಣ, ಇಂದಿರಾ ಶರಣ್ ಜಮ್ಮಲದಿನ್ನಿ, ಎಂ. ಪ್ರಕಾಶ ಮೂರ್ತಿ, ಪುಟ್ಟಕಾಮಯ್ಯ, ಸಂಪಿಗೆ ಶಿವಪ್ರಕಾಶ್ ಹಾಗೂ ಶರಣ್ ಉಪಸ್ಥಿತರಿದ್ದರು

ನಗರದ ನಯನ ಸಭಾಂಗಣದಲ್ಲಿ ಈಚೆಗೆ ನಡೆದ 26ನೇ ವರ್ಷದ ಸಪ್ತಸ್ವರ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಪ್ರಸನ್ನ ಕುಮಾರ್ ಹಾಗೂ ಸಂಸ್ಥೆಯ ಅಧ್ಯಕ್ಷೆ ಜಯಲಕ್ಷ್ಮಿ ನಾಗೇಂದ್ರ ಅವರು ಮಾಜಿ ಪೊಲೀಸ್ ಆಯುಕ್ತ ಭಾಸ್ಕರ್ ರಾವ್‌, ಡಿಸಿಪಿ ಮಂಜುನಾಥ್ ಬಾಬು ಅವರನ್ನು ಗೌರವಿಸಿದರು. ನಟಿ ವಿನಯಾ ಪ್ರಸಾದ್ ಇದ್ದರು

ಕೆಎಂಎಫ್‌ನಿಂದಲೂ ಮೆಕ್ಕೆಜೋಳ ಖರೀದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಬಲ ಬೆಲೆ ನೀಡಿ ರೈತರಿಂದ ನೇರವಾಗಿ ಮೆಕ್ಕೆಜೋಳ ಖರೀದಿಸುವ ಪ್ರಕ್ರಿಯೆಯನ್ನು ಇದೇ ಮೊದಲ ಬಾರಿಗೆ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಆರಂಭಿಸಿದೆ.

ಸರ್ಕಾರವು 50ರಿಂದ 60 ಟನ್ ಮೆಕ್ಕೆಜೋಳವನ್ನು ಖರೀದಿಸುವಂತೆ ಮಹಾಮಂಡಳಿಗೆ ಸೂಚನೆ ನೀಡಿದೆ. ಈ ಕಾರಣದಿಂದ ಕೆಲ ದಿನಗಳ ಹಿಂದೆ ರೈತರ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಶಿವಸ್ವಾಮಿ ತಿಳಿಸಿದ್ದಾರೆ.

ಪ್ರತಿ ರೈತರಿಂದ ಗರಿಷ್ಠ 5 ಟನ್ ಮೆಕ್ಕೆಜೋಳವನ್ನು ಕ್ವಿಂಟಲ್‌ಗೆ ₹2,400 ದರದಲ್ಲಿ ಖರೀದಿಸಬೇಕು ಎನ್ನುವ ಸೂಚನೆ ನೀಡಿದ್ದು, ಈಗಾಗಲೇ 15 ಸಾವಿರ ಟನ್ ಮೆಕ್ಕೆಜೋಳವನ್ನು ಖರೀದಿ ಮಾಡಲಾಗಿದೆ ಎಂದಿದ್ದಾರೆ.

ಮೆಕ್ಕೆಜೋಳ ಖರೀದಿಗಾಗಿ ₹100 ಕೋಟಿ ತೆಗೆದಿರಿಸಲಾಗಿದೆ. ಈಗಾಗಲೇ ಮೆಕ್ಕೆಜೋಳ ಮಾರಾಟ ಮಾಡಿರುವ ರೈತರ ಖಾತೆಗಳಿಗೆ ಮುಂದಿನ ವಾರದಲ್ಲಿ ನೇರವಾಗಿ ಹಣ ವರ್ಗಾವಣೆ ಮಾಡಲಾಗುತ್ತದೆ ಎಂದು ಹೇಳಿದ್ದಾರೆ.

ಟೆಂಡರ್ ಮೂಲಕ ಖರೀದಿ: ಮಹಾಮಂಡಳಿಗೆ ಪ್ರತಿ ವರ್ಷ 1 ಲಕ್ಷ ಟನ್ ಮೆಕ್ಕೆಜೋಳ ಬೇಕು. ಟೆಂಡರ್ ಮೂಲಕ ₹2,100 ರಿಂದ ₹2,200ರ ದರದಲ್ಲಿ 80 ಸಾವಿರ ಟನ್ ಮೆಕ್ಕೆಜೋಳವನ್ನು ಇದುವರೆಗೆ ಖರೀದಿ ಮಾಡಲಾಗಿದೆ. ಇದನ್ನು ಶಿಕಾರಿಪುರ, ಧಾರವಾಡ, ಹಾಸನ, ಗುಬ್ಬಿ, ರಾಜಾನುಕುಂಟೆಯಲ್ಲಿರುವ ಪಶುಆಹಾರ ಸಂಸ್ಕರಣಾ ಕೇಂದ್ರಗಳಿಗೆ ಸರಬರಾಜು ಮಾಡಿ ಪಶು ಆಹಾರ ಸಿದ್ಧಪಡಿಸಲು ಬಳಸಲಾಗುತ್ತಿದೆ ಎಂದು ವಿವರಿಸಿದ್ದಾರೆ.

'ಜನವರಿ ಅಂತ್ಯದವರೆಗೂ ಮೆಕ್ಕೆಜೋಳ ಖರೀದಿಗೆ ಸಮಯ ನಿಗದಿಪಡಿಸಿದ್ದು, ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮೆಕ್ಕೆಜೋಳ ಖರೀದಿ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಶಿವಸ್ವಾಮಿ ತಿಳಿಸಿದ್ದಾರೆ.

'ವೈದ್ಯಕೀಯ, ಎಂಜಿನಿಯರಿಂಗ್ ಹೊರತಾದ ವೃತ್ತಿಪರ ಶಿಕ್ಷಣ ಅಗತ್ಯ'

ಮುಖ್ಯ ಅತಿಥಿ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅವರನ್ನು ಸನ್ಮಾನಿಸಲಾಯಿತು. ಕುಲಪತಿ ಬಿ. ರಮೇಶ್ ಮತ್ತಿತರರು ಇದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೋಷಕರು ಅಂಕ ಗಳಿಕೆ ಬಗ್ಗೆ ವಿದ್ಯಾರ್ಥಿಗಳ ಮೇಲೆ ವಿಪರೀತ ಒತ್ತಡ ಹೇರುವ ಜೊತೆಗೆ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದ್ದಾರೆ. ಪರ್ಯಾಯ ವೃತ್ತಿಪರ ಶಿಕ್ಷಣದ ಆಯ್ಕೆಗಳತ್ತ ಗಮನಹರಿಸುತ್ತಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ವತಿಯಿಂದ ಸೆಂಟ್ರಲ್ ಕಾಲೇಜು ಆವರಣದಲ್ಲಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಮಂಗಳವಾರ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಮಾಲೋಚನೆ ಸಭೆ ಏರ್ಪಡಿಸಲಾಗಿತ್ತು. ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, 'ನಿರ್ಣಾಯಕ ಹಂತವಾದ ಪದವಿ ಪೂರ್ವ ಶಿಕ್ಷಣದಲ್ಲಿ ಪೋಷಕರು ಮತ್ತು ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಭವಿಷ್ಯದ ಕುರಿತ ಸೂಕ್ತ ಮಾರ್ಗದರ್ಶನ ನೀಡುವ ಅಗತ್ಯವಿದೆ' ಎಂದು ಅಭಿಪ್ರಾಯಪಟ್ಟರು.

'ಪದವಿಪೂರ್ವ ಶಿಕ್ಷಣ ಮಂಡಳಿ ತನ್ನ ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು ಸಕಾಲಿಕ ಮಾಹಿತಿ ಒದಗಿಸಬೇಕು. ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಶೇ 90ರಷ್ಟು ಬೋಧಕ ಹುದ್ದೆಗಳು ಖಾಲಿ ಇರುವುದು ಕಳವಳಕಾರಿ' ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಬಿ. ರಮೇಶ್ ಮಾತನಾಡಿ, 'ಉನ್ನತ ಶಿಕ್ಷಣ ಹಂತದಲ್ಲಿ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹೊರಗೆ ಉಳಿಯುತ್ತಿರುವುದು ಗಂಭೀರ ಬಿಕ್ಕಟ್ಟು ಸೃಷ್ಟಿಸುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಜಿ–ರಾಮ್‌ಜಿ ವಾಪಸ್ ಪಡೆಯಿರಿ: ಸಿಎಂ

ನರೇಗಾ ಮರುಸ್ಥಾಪನೆಗೆ ಒತ್ತಾಯಿಸಿ ಪ್ರಧಾನಿಗೆ ಸಿದ್ದರಾಮಯ್ಯ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ಯೋಗ ಖಾತರಿಯನ್ನು ಇಲ್ಲವಾಗಿಸುವ ಮತ್ತು ಒಕ್ಕೂಟ ವ್ಯವಸ್ಥೆಯ ಆಶಯಗಳಿಗೆ ವ್ಯತಿರಿಕ್ತವಾಗಿರುವ 'ವಿಕಸಿತ ಭಾರತ- ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ-ಜಿ ರಾಮ್ ಜಿ) ಕಾಯ್ದೆ'ಯನ್ನು ವಾಪಸ್ ಪಡೆಯಿರಿ' ಎಂದು ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

'ವಿಬಿ-ಜಿ ರಾಮ್ ಜಿ' ಕಾಯ್ದೆಯನ್ನು ವಿರೋಧಿಸಿ ಮಂಗಳವಾರ ಪತ್ರ ಬರೆದಿರುವ ಅವರು, 'ನರೇಗಾ ಯೋಜನೆ ಅಡಿ ಇದ್ದ 100 ದಿನಗಳ ಕೆಲಸದ ಗ್ಯಾರಂಟಿಯನ್ನು ವಿಬಿ-ಜಿ ರಾಮ್‌ಜಿಯಲ್ಲಿ 125 ದಿನಕ್ಕೆ ಹೆಚ್ಚಿಸಿದ್ದೀರಿ. ಮೇಲ್ನೋಟಕ್ಕೆ ಉದ್ಯೋಗದ ದಿನಗಳು ಹೆಚ್ಚಾದಂತೆ ಕಾಣುತ್ತದೆ. ಆದರೆ ವಾಸ್ತವದಲ್ಲಿ ಈ ಕಾಯ್ದೆಯು ಉದ್ಯೋಗ ಖಾತರಿಯನ್ನೇ ಇಲ್ಲವಾಗಿಸುತ್ತದೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

'ನರೇಗಾವು ಬೇಡಿಕೆ ಆಧಾರಿತ ಯೋಜನೆಯಾಗಿತ್ತು. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗದ ಅಗತ್ಯವನ್ನು ಆಧರಿಸಿ, ಕೆಲಸದ ದಿನಗಳನ್ನು ಸೃಷ್ಟಿಸಲಾಗುತ್ತಿತ್ತು. ರಾಜ್ಯದ ಯಾವುದೇ ಭಾಗದಲ್ಲಿಯಾದರೂ ಉದ್ಯೋಗ ಸೃಷ್ಟಿಗೆ ಅವಕಾಶವಿತ್ತು. ಆದರೆ ವಿಬಿ-ಜಿ ರಾಮ್ ಜಿಯು ಇದಕ್ಕೆ ಸಂಪೂರ್ಣ ವಿರುದ್ಧವಾಗಿದೆ' ಎಂದಿದ್ದಾರೆ.

'ಕೇಂದ್ರ ಸರ್ಕಾರವು ಅಧಿಸೂಚಿಸಿದ ಪ್ರದೇಶದಲ್ಲಿ ಮಾತ್ರವೇ ವಿಬಿ-ಜಿ ರಾಮ್ ಜಿ ಅಡಿಯಲ್ಲಿ ಉದ್ಯೋಗ ನೀಡಬೇಕಾಗುತ್ತದೆ. ಅಂದರೆ, ರಾಜ್ಯದ ಎಲ್ಲ ಭಾಗದ ಜನರಿಗೆ ಉದ್ಯೋಗ ಸಿಗುವುದಿಲ್ಲ. ಕೇಂದ್ರವು ಸೂಚಿಸಿದ ಪ್ರದೇಶದಲ್ಲಿ, ಕೇಂದ್ರವು ಸೂಚಿಸಿದ ಸ್ವರೂಪದ ಕೆಲಸಗಳನ್ನಷ್ಟೇ ಮಾಡಬೇಕಾಗುತ್ತದೆ. ನರೇಗಾವು ನೀಡಿದ್ದ ಉದ್ಯೋಗ ಖಾತರಿಯನ್ನು ನೂತನ ಕಾಯ್ದೆಯು ಸಂಪೂರ್ಣವಾಗಿ ನಾಶಪಡಿಸುತ್ತದೆ' ಎಂದು ವಿವರಿಸಿದ್ದಾರೆ.

'ನರೇಗಾದ ಅಡಿಯಲ್ಲಿ ಗ್ರಾಮ ಪಂಚಾಯಿತಿಗಳು ಉದ್ಯೋಗ ಖಾತರಿಯ ಕಾಮಗಾರಿಗಳನ್ನು ನಿರ್ಧರಿಸುತ್ತಿದ್ದವು. ಈಗ ಕೇಂದ್ರ ಸರ್ಕಾರವು ಆ ಅಧಿಕಾರವನ್ನು ಕಸಿದುಕೊಂಡಿದೆ. ಅಧಿಕಾರ ವಿಕೇಂದ್ರೀಕರಣಕ್ಕೆ ಅವಕಾಶ ಮಾಡಿಕೊಟ್ಟಿದ್ದ ಸಂವಿಧಾನದ 73ನೇ ತಿದ್ದುಪಡಿಯ ಉದ್ದೇಶವನ್ನೇ ವಿಬಿ-ಜಿ ರಾಮ್ ಜಿ ಕಾಯ್ದೆಯು ಬುಡಮೇಲು ಮಾಡುತ್ತದೆ' ಎಂದು ಆರೋಪಿಸಿದ್ದಾರೆ.

'ನರೇಗಾವು ಕೇಂದ್ರ ಪ್ರಾಯೋಜಿತ ಕಾರ್ಯಕ್ರಮವಾಗಿದ್ದು, ಶೇ 90ರಷ್ಟು ವೆಚ್ಚವನ್ನು ಕೇಂದ್ರವೇ ಭರಿಸುತ್ತಿತ್ತು. ರಾಜ್ಯವು ಶೇ 10ರಷ್ಟು ವೆಚ್ಚ ಭರಿಸಿದರೆ ಸಾಕಿತ್ತು. ಆದರೆ ನೂತನ ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವೆಚ್ಚದ ಪಾಲನ್ನು ಕ್ರಮವಾಗಿ ಶೇ 60 ಮತ್ತು ಶೇ 40ರಷ್ಟಕ್ಕೆ ನಿಗದಿ ಮಾಡಲಾಗಿದೆ. ಜಿಎಸ್‌ಟಿ ನೀತಿಯಿಂದ ಆದಾಯ ಖೋತಾ ಎದುರಿಸುತ್ತಿರುವ ರಾಜ್ಯಗಳು, ಇಷ್ಟು ಪ್ರಮಾಣದ ವೆಚ್ಚವನ್ನು ಭರಿಸಲಾಗದೆ ಯೋಜನೆಯ ಅನುಷ್ಠಾನವೇ ಅಸಾಧ್ಯವಾಗಬಹುದು' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಒಕ್ಕೂಟ ವ್ಯವಸ್ಥೆಗೆ ಧಕ್ಕೆ'

'ರಾಜ್ಯ ಸರ್ಕಾರಗಳ ಜತೆಗೆ ಸಮಾಲೋಚನೆ ನಡೆಸದೆಯೇ ಕೇಂದ್ರವು ನಿರ್ಧಾರ ತೆಗೆದುಕೊಳ್ಳಲು ಅವಕಾಶವಿರುವ ವಿಬಿ-ಜಿ ರಾಮ್ ಜಿ ಕಾಯ್ದೆಯು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುತ್ತದೆ. ಇದು ಸಂವಿಧಾನದ 258 ಮತ್ತು 280ನೇ ವಿಧಿಗಳ ಸ್ಪಷ್ಟ ಉಲ್ಲಂಘನೆ' ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ.

'ಕೇಂದ್ರ ಸರ್ಕಾರವು ಯಾವ ಆಧಾರದಲ್ಲಿ ಅಧಿಸೂಚಿತ ಪ್ರದೇಶಗಳನ್ನು ಆಯ್ಕೆ ಮಾಡುತ್ತದೆ ಮತ್ತು ಕೆಲಸದ ಸ್ವರೂಪಗಳು ಎಂತಹವು ಎಂಬುದನ್ನು ಕಾಯ್ದೆಯಲ್ಲಿ ಉಲ್ಲೇಖಿಸಿಲ್ಲ. ಕೇಂದ್ರವು ತನ್ನ ಇಚ್ಛೆಯಂತೆ ಈ ನಿಯಮ, ಷರತ್ತು, ಮಾನದಂಡಗಳನ್ನು ಬದಲಿಸಲು ಅವಕಾಶವಿದೆ. ಇದು ರಾಜ್ಯ ಸರ್ಕಾರಗಳ ಹಕ್ಕು ಮತ್ತು ಅಧಿಕಾರವನ್ನು ಮೊಟಕು ಮಾಡುತ್ತದೆ' ಎಂದಿದ್ದಾರೆ.

ಮರುಳಸಿದ್ದಪ್ಪಗೆ 'ಶ್ರೀ ಸಾಹಿತ್ಯ ಪ್ರಶಸ್ತಿ'

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನ ನೀಡುವ 2026ನೇ ಸಾಲಿನ 'ಶ್ರೀ ಸಾಹಿತ್ಯ ಪ್ರಶಸ್ತಿ'ಗೆ ಸಾಹಿತಿ ಕೆ.ಮರುಳಸಿದ್ದಪ್ಪ ಆಯ್ಕೆಯಾಗಿದ್ದಾರೆ.

ಕಮಲಿನಿ ಶಾ. ಬಾಲುರಾವ್ ಅವರು ಪ್ರತಿಷ್ಠಾನದಲ್ಲಿ ಈ ದತ್ತಿ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ದತ್ತಿ ಪ್ರಶಸ್ತಿಯು ₹1 ಲಕ್ಷ ನಗದು ಒಳಗೊಂಡಿದೆ. ಚನ್ನಪ್ಪ ಕಟ್ಟಿ, ಎಚ್. ದಂಡಪ್ಪ, ಎಚ್.ಎನ್. ಮುರಳೀಧರ ಅವರ ಸಮಿತಿ ಈ ಆಯ್ಕೆ ಮಾಡಿದೆ.ಜನವರಿ 4ರಂದು ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ತಿಳಿಸಿದ್ದಾರೆ.

ಡಿಎನ್‌ಎ ಪರೀಕ್ಷೆ: ಸೆಷನ್ಸ್ ಕೋರ್ಟ್ ಆದೇಶ ಎತ್ತಿಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಕರಣವೊಂದರಲ್ಲಿ, 21 ವರ್ಷದ ಮಗಳ ತಂದೆ ಯಾರು ಎಂಬ ವಿವಾದಕ್ಕೆ ಸಂಬಂಧಿಸಿದಂತೆ ಡಿಎನ್‌ಎ ಪರೀಕ್ಷೆ ನಡೆಸಲು ಅನುಮತಿ ನೀಡಿದ್ದ ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

'ಮಗಳ ಪಿತೃತ್ವದ ಸತ್ಯ ಪತ್ತೆ ಹಚ್ಚಲು ಡಿಎನ್‌ಎ ಪರೀಕ್ಷೆ ಅಗತ್ಯವಿದೆ' ಎಂಬ ವಿಜಯಪುರ ಜಿಲ್ಲಾ 4ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ಆದೇಶ ರದ್ದುಗೊಳಿಸುವಂತೆ ಕೋರಿದ್ದ 56 ವರ್ಷದ ಶಿಕ್ಷಕರೊಬ್ಬರ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರ್ಗಿ) ವಜಾಗೊಳಿಸಿದೆ.

'ವ್ಯಾಜ್ಯ ಪರಿಹರಿಸಲು ಡಿಎನ್‌ಎ ಪರೀಕ್ಷೆ ನಿರ್ಣಾಯಕವಾಗಿದೆ' ಎಂದು ಅಭಿಪ್ರಾಯಪಟ್ಟಿದೆ.

'ಪ್ರತಿವಾದಿಯಾಗಿರುವ 46 ವರ್ಷದ ಮಹಿಳೆ ನನ್ನ ಹೆಂಡತಿಯಲ್ಲ ಮತ್ತು ಆಕೆಯ 21 ವರ್ಷದ ಮಗಳಿಗೆ ನಾನು ತಂದೆಯಲ್ಲ' ಎಂಬ ಅರ್ಜಿದಾರರ ವಾದವನ್ನು ಸೆಷನ್ಸ್ ನ್ಯಾಯಾಲಯ ತಳ್ಳಿ ಹಾಕಿತ್ತು.

ಡಿಎನ್‌ಎ ಪರೀಕ್ಷೆಗೆ ಕೋರಿದ್ದ ಮಹಿಳೆಯ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ ವಿಜಯಪುರ ನ್ಯಾಯಾಲಯ 2025ರ ಜುಲೈ 10ರಂದು ಆದೇಶಿಸಿತ್ತು.

1,500 ಹೆಲಿಕಾಪ್ಟರ್ ಮಾರಾಟದ ಗುರಿ: ಎಚ್‌ಎಎಲ್ ಅಧ್ಯಕ್ಷ ಡಿ.ಕೆ.ಸುನಿಲ್

ವಾಣಿಜ್ಯ ಬಳಕೆಗೆ 'ಧ್ರುವ ಎನ್–ಜೆನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕ-ವಾಣಿಜ್ಯ ಬಳಕೆಗೆಂದೇ ಮಾರ್ಪಾಡು ಮಾಡಲಾದ, ಎಚ್‌ಎಎಲ್‌ನ 'ಧ್ರುವ ಎನ್-ಜೆನ್ (ನ್ಯೂ ಜನರೇಷನ್)' ಹೆಲಿಕಾಪ್ಟರ್ ಅನ್ನು ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಅವರು ಮಂಗಳವಾರ ಅನಾವರಣ ಮಾಡಿ ಹಾರಾಟಕ್ಕೆ ಚಾಲನೆ ನೀಡಿದರು.

2004ರಲ್ಲಿ ಅಭಿವೃದ್ಧಿಪಡಿಸಲಾದ ಧ್ರುವ ಹೆಲಿಕಾಪ್ಟರ್‌ನ ಸೇನಾ ಅವತರಣಿಕೆಯನ್ನು ಭಾರತೀಯ ಸೇನೆಯ ಮೂರೂ ಪಡೆಗಳು ಬಳಸುತ್ತಿವೆ. ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಈ ಹೆಲಿಕಾಪ್ಟರ್ ಅನ್ನು ನಾಗರಿಕ-ವಾಣಿಜ್ಯ ಬಳಕೆಗೂ ಬಿಡುಗಡೆ ಮಾಡುವ ಗುರಿಯನ್ನು ಎಚ್‌ಎಎಲ್ ಹಾಕಿಕೊಂಡಿದೆ. ಇದರ ಭಾಗವಾಗಿ ಧ್ರುವ್ ಹೆಲಿಕಾಪ್ಟರ್‌ನಲ್ಲಿ ಗಣನೀಯ ಬದಲಾವಣೆಗಳನ್ನು ಮಾಡಿ, 'ಧ್ರುವ ಎನ್-ಜೆನ್' ಅನ್ನು ಎಚ್‌ಎಎಲ್ ರೂಪಿಸಿದೆ.

'ಧ್ರುವ ಎನ್-ಜೆನ್' ಅನ್ನು ನಾಗರಿಕ ಬಳಕೆಗೆ ಬಿಡುಗಡೆ ಮಾಡುವುದಕ್ಕೂ ಮುನ್ನ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ), ಹೆಲಿಕಾಪ್ಟರ್‌ಗೆ ಪ್ರಮಾಣಪತ್ರ ನೀಡಬೇಕಿದೆ. ಅದರ ಭಾಗವಾಗಿ ಹೆಲಿಕಾಪ್ಟರ್‌ನ ತಾಂತ್ರಿಕ ವಿವರಗಳು ಮತ್ತು ನಾಗರಿಕ ಬಳಕೆಯ ಸಾಧ್ಯತೆಗಳ ಕುರಿತಾಗಿ ಎಚ್‌ಎಎಲ್, ವಿಮಾನಯಾನ ಸಚಿವರಿಗಾಗಿ ಪ್ರಾತ್ಯಕ್ಷಿಕೆಯನ್ನು ಆಯೋಜಿಸಿತ್ತು.

ಈ ಹೆಲಿಕಾಪ್ಟರ್‌ನಲ್ಲಿ 'ಶಕ್ತಿ 1ಎಚ್1ಸಿ' ಸರಣಿಯ ಎಂಜಿನ್‌ಗಳನ್ನು ಅವಳಿ ಸಂಯೋಜನೆಯಲ್ಲಿ ಕೂರಿಸಲಾಗಿದೆ. ಈ ಸಂಯೋಜನೆಗೆ ಡಿಜಿಸಿಎಯು ಈಗಾಗಲೇ ಪ್ರಮಾಣಪತ್ರ ನೀಡಿದೆ. ಹೆಲಿಕಾಪ್ಟರ್‌ನಲ್ಲಿ ಇರುವ ಇತರ ಸವಲತ್ತುಗಳ ಬಗ್ಗೆ ಮಾಹಿತಿ ಪಡೆದುಕೊಂಡ ಸಚಿವ ನಾಯ್ಡು ಅವರು, 'ಎರಡು-ಮೂರು ತಿಂಗಳಲ್ಲಿ ಪ್ರಮಾಣಪತ್ರ ಒದಗಿಸಲು ಕ್ರಮವಹಿಸಲಾಗುವುದು' ಎಂದರು.

ನಾಗರಿಕ ವಾಯುಯಾನಕ್ಕೆ ಎಚ್‌ಎಎಲ್

ಎಚ್‌ಎಎಲ್ ಅಧ್ಯಕ್ಷ ಡಿ.ಕೆ.ಸುನಿಲ್, 'ಧ್ರುವ ಹೆಲಿಕಾಪ್ಟರ್ 20 ವರ್ಷಗಳಿಂದ ಬಳಕೆಯಲ್ಲಿದೆ. ಇಷ್ಟು ದೀರ್ಘ ಅವಧಿಯಲ್ಲಿ ಎದುರಾದ ತಾಂತ್ರಿಕ ಸಮಸ್ಯೆಗಳು, ಸವಾಲುಗಳು ಮತ್ತು ಹೆಲಿಕಾಪ್ಟರ್‌ನ ಹೆಗ್ಗಳಿಕೆಗಳನ್ನು ಗಮನದಲ್ಲಿ ಇರಿಸಿಕೊಂಡು 'ಧ್ರುವ ಎನ್-ಜೆನ್' ಅನ್ನು ರೂಪಿಸಲಾಗಿದೆ. ನಾಗರಿಕರ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಶೀಘ್ರದಲ್ಲೇ ನಾಗರಿಕ ಬಳಕೆ ಪ್ರಮಾಣ ಪತ್ರ ದೊರೆಯುವ ನಿರೀಕ್ಷೆ ಇದೆ' ಎಂದು ಹೇಳಿದರು.

'ಮುಂದಿನ ಹತ್ತು ವರ್ಷಗಳಲ್ಲಿ ಪ್ರವಾಸೋದ್ಯಮ, ಹೆಲಿ-ಆಂಬುಲೆನ್ಸ್, ಸಾಗರದಲ್ಲಿನ ತೈಲ ಬಾವಿ ಘಟಕಗಳ ಕ್ಷೇತ್ರದಲ್ಲಿ ಹೆಲಿಕಾಪ್ಟರ್‌ಗಳಿಗೆ ಬೇಡಿಕೆ ಹೆಚ್ಚಲಿದೆ. ಈ ಅವಧಿಯಲ್ಲಿ 1,000–1,500 ಧ್ರುವ ಎನ್-ಜೆನ್ ಹೆಲಿಕಾಪ್ಟರ್‌ಗಳನ್ನು ಮಾರಾಟ ಮಾಡುವ ಗುರಿ ಹಾಕಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

ತಾಂತ್ರಿಕ ವಿವರ

- ಹಗಲು, ರಾತ್ರಿ ಮತ್ತು ಮಂಜಿನ ವಾತಾವರಣದಲ್ಲೂ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ
- ಎರಡು ಎಂಜಿನ್‌ಗಳಿದ್ದು, ಒಂದು ವಿಫಲವಾದರೂ ಮತ್ತೊಂದರಲ್ಲಿ ಹಾರಾಟ ನಡೆಸಬಹುದು
- ನೆಲ ಮತ್ತು ನೀರು ಎರಡರ ಮೇಲೂ ಲ್ಯಾಂಡಿಂಗ್ ಸವಲತ್ತು
- ಆಂಬುಲೆನ್ಸ್, ಸರಕು ಸಾಗಣೆ, ಐಷಾರಾಮದ ಪ್ರಯಾಣಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುವ ಸವಲತ್ತು

5,500 ಕೆ.ಜಿ. ಹೆಲಿಕಾಪ್ಟರ್‌ನ ತೂಕ

1,055 ಕೆ.ಜಿ. ತೂಕದಷ್ಟು ಇಂಧನ ಸಾಮರ್ಥ್ಯ

250 ಕಿ.ಮೀ. ಗರಿಷ್ಠ ಹಾರಾಟ ವೇಗ

630 ಕಿ.ಮೀ. ಒಮ್ಮೆಗೆ ಕ್ರಮಿಸಬಹುದಾದ ಗರಿಷ್ಠ ಅಂತರ

'ಆತ್ಮನಿರ್ಭರ ಭಾರತದ ಹೆಜ್ಜೆ'

'ದೇಶದ ನಾಗರಿಕ- ವಾಣಿಜ್ಯ ಹೆಲಿಕಾಪ್ಟರ್ ಸೇವಾ ಕ್ಷೇತ್ರವು ಅತ್ಯಂತ ಕ್ಷಿಪ್ರವಾಗಿ ಬೆಳೆಯುತ್ತಿದೆ. ಆದರೆ, ಈ ಕ್ಷೇತ್ರದಲ್ಲಿ ರಷ್ಯಾ, ಅಮೆರಿಕ ಮತ್ತು ಐರೋಪ್ಯ ಕಂಪನಿಗಳದ್ದೇ ಏಕಸ್ವಾಮ್ಯ ಇದೆ. ಇದರಲ್ಲಿ ಸ್ವಾವಲಂಬನೆ ಸಾಧಿಸಬೇಕಿದೆ. ಎಚ್‌ಎಎಲ್‌ನ ಈ ಪ್ರಯತ್ನವು ಆತ್ಮನಿರ್ಭರ ಭಾರತದತ್ತ ಮಹತ್ವದ ಹೆಜ್ಜೆಯಾಗಿದೆ' ಎಂದು ಸಚಿವ ಕೆ.ರಾಮಮೋಹನ್ ನಾಯ್ಡು ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಐದಾರು ರಾಜ್ಯಗಳು, ತೈಲ ಕಂಪನಿಗಳು, ಪ್ರವಾಸೋದ್ಯಮ ಸಂಸ್ಥೆಗಳು ಹೆಲಿಕಾಪ್ಟರ್‌ಗಳನ್ನು ದೊಡ್ಡ ಸಂಖ್ಯೆಯಲ್ಲಿ ಖರೀದಿಸುತ್ತಿವೆ. ಧ್ರುವ್ ಎನ್-ಜೆನ್ ನಾಗರಿಕ ಬಳಕೆಗೆ ಲಭ್ಯವಾದರೆ, ಆ ಮಾರುಕಟ್ಟೆಯ ದೊಡ್ಡ ಪಾಲನ್ನು ಪಡೆದುಕೊಳ್ಳಬಹುದು. ಇದಕ್ಕಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ' ಎಂದು ವಿವರಿಸಿದರು.

'ವಿದೇಶಿ ಹೆಲಿಕಾಪ್ಟರ್‌ಗಳ ನಿರ್ವಹಣೆ, ಬಿಡಿಭಾಗಗಳು ದುಬಾರಿ. ಅವುಗಳ ನಿರ್ವಹಣಾ ಕಾರ್ಯಕ್ಕೆ ವಿದೇಶಿಯರನ್ನೇ ಅವಲಂಬಿಸಬೇಕಿದೆ. ಆದರೆ ಧ್ರುವ ಎನ್-ಜೆನ್ ಈ ಸಮಸ್ಯೆಗಳನ್ನು ನಿವಾರಿಸಲಿದೆ. ವರ್ಷದ 365 ದಿನವೂ ಎಚ್‌ಎಎಲ್‌ನಿಂದ ನಿರ್ವಹಣಾ ಸೇವೆ ಲಭ್ಯವಿರಲಿದೆ. ಹೀಗಾಗಿ ಈ ಹೆಲಿಕಾಪ್ಟರ್‌ಗೆ ಮಾರುಕಟ್ಟೆಯಿಂದ ಉತ್ತಮ ಸ್ಪಂದನೆ ದೊರೆಯುವ ನಿರೀಕ್ಷೆ ಇದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಲೋಕಾಯುಕ್ತ ದಾಳಿ: ಡಿಸಿಎಫ್ ಮನೆಯಲ್ಲಿ 1.25 ಕೆಜಿ ಚಿನ್ನ ಪತ್ತೆ

ಪ್ರಜಾವಾಣಿ ವಾರ್ತೆ

ಮೈಸೂರು/ಗುಂಡ್ಲುಪೇಟೆ: ಇಲ್ಲಿನ ಪ್ರಾದೇಶಿಕ ಅರಣ್ಯ ವಿಭಾಗದ ಡಿಸಿಎಫ್ ಪರಮೇಶ್ ಅವರಿಗೆ ಸೇರಿದ ಆಸ್ತಿಗಳ ಮೇಲೆ ಲೋಕಾಯುಕ್ತ ಪೊಲೀಸರು ಮಂಗಳವಾರ ದಾಳಿ ನಡೆಸಿದ್ದು, ಆ ವೇಳೆ ಮನೆಯಲ್ಲಿ 1.25 ಕೆ.ಜಿ. ಚಿನ್ನ ಹಾಗೂ 6 ಕೆ.ಜಿ. ಬೆಳ್ಳಿ ಸಿಕ್ಕಿದೆ.

ಮೈಸೂರು ಲೋಕಾಯುಕ್ತದ ಪೊಲೀಸರು ಅಧಿಕಾರಿಗೆ ಸೇರಿದ ಆಸ್ತಿಗಳ ಮೇಲೆ ಬೆಳಿಗ್ಗೆ 6ಕ್ಕೆ ದಾಳಿ ನಡೆಸಿದರು. ಅಶೋಕಪುರಂನ ಅರಣ್ಯಭವನದ ಕಚೇರಿ, ವಸತಿಗೃಹ, ಹಿನಕಲ್‌ನ ಆದಿತ್ಯ ಲೇಔಟ್‌ನಲ್ಲಿರುವ ಮನೆ, ಬೋಗಾದಿ 2ನೇ ಹಂತದಲ್ಲಿರುವ ಸಹೋದರ ಜಗದೀಶ್ ಮನೆ ಹಾಗೂ ಬೆಂಗಳೂರಿನ ಬನಶಂಕರಿಯಲ್ಲಿರುವ ಅತ್ತೆ ಮನೆ ಮೇಲೂ ದಾಳಿ ನಡೆಯಿತು.

ಲೋಕಾಯುಕ್ತ ಮೈಸೂರು ಎಸ್‌ಪಿ ಟಿ.ಜೆ.ಉದೇಶ್ ನಿರ್ದೇಶನದಂತೆ ಡಿವೈಎಸ್‌ಪಿ ಅರಗ ಶೈಲೇಂದ್ರ, ಕೊಡಗು ಡಿವೈಎಸ್‌ಪಿ ದಿನಕರ್ ಶೆಟ್ಟಿ, ಇನ್‌ಸ್ಪೆಕ್ಟರ್ ಗಿರೀಶ್, ಜಯಕುಮಾರ್, ಶಾಂತಿನಾಥ ಹೊನ್ನೂರು, ಬೆಂಗಳೂರು ಲೋಕಾಯುಕ್ತ ಇನ್‌ಸ್ಪೆಕ್ಟರ್ ಆನಂದ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಆರ್‌ಎಫ್‌ಒ ಮನೆಯಲ್ಲಿ ದಾಖಲೆ: ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕುಂದಕೆರೆ ವಲಯದ ಆರ್‌ಎಫ್‌ಒ ನಾಗೇಂದ್ರ ನಾಯಕ್ ಅವರ ನಿವಾಸ, ಕಚೇರಿ, ಫಾರ್ಮ್ ಹೌಸ್ ಸೇರಿದಂತೆ ಐದು ಕಡೆ ಅಧಿಕಾರಿಗಳು ದಾಳಿ ನಡೆಸಿದರು.

ಡಿಸಿಎಫ್ ಪರಮೇಶ್ ಮನೆಯಲ್ಲಿ ವಶಪಡಿಸಿಕೊಂಡಿರುವ ಚಿನ್ನಾಭರಣ

ಕೆ. ಪರಮೇಶ್

ನಾಗೇಂದ್ರ ನಾಯಕ್

ಗುಂಡ್ಲುಪೇಟೆ ಪಟ್ಟಣದ ದರ್ಶನ್ ಲೇಔಟ್‌ನಲ್ಲಿರುವ ಅಧಿಕಾರಿಯ ನಿವಾಸ ಹಾಗೂ ಮಾವನ ಮನೆ, ಕುಂದುಕೆರೆ ವಲಯ ಅರಣ್ಯಾಧಿಕಾರಿ ಕಚೇರಿ, ವಸತಿ ಗೃಹ ಹಾಗೂ ಲಕ್ಕೂರು ಬಳಿಯ ಫಾರ್ಮ್‌ಹೌಸ್ ಮೇಲೆ ಏಕಕಾಲಕ್ಕೆ ದಾಳಿ ನಡೆಸಿದ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್ ನೇತೃತ್ವದ ತಂಡ ಪರಿಶೀಲನೆ ನಡೆಸಿತು.

ದಾಳಿ ವೇಳೆ 580 ಗ್ರಾಂ ಚಿನ್ನ, 250 ಗ್ರಾಂ ಬೆಳ್ಳಿ, 2 ಮನೆ, ಒಂದು ನಿವೇಶನ, ಒಂದು ಫಾರ್ಮ್‌ಹೌಸ್‌ಗೆ ಸೇರಿದ ಆಸ್ತಿಯ ದಾಖಲೆಗಳು ಪತ್ತೆಯಾಗಿವೆ.

ವಿಶೇಷ ಸರ್ಕಾರಿ ಅಭಿಯೋಜಕ ಬಲೆಗೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಕ್ಷಿದಾರರೊಬ್ಬರ ಪರವಾಗಿ ಉತ್ತಮವಾಗಿ ವಾದ ಮಂಡಿಸಲು ₹50 ಸಾವಿರಕ್ಕೆ ಬೇಡಿಕೆ ಇಟ್ಟು, ₹25 ಸಾವಿರ ಲಂಚ ಪಡೆಯುತ್ತಿದ್ದ ನಗರದ ಎರಡನೇ ಪಿಡಿಜೆ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕ ರಾಜಮಹೇಂದ್ರ ಜಿ. ಅವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ತೆಲಂಗಾಣದ ವಿಕಾರಾಬಾದ್ ಜಿಲ್ಲೆಯ ಕಂದನುಲಿ ಗ್ರಾಮದ ಕಕ್ಷಿದಾರ ನವೀನ್ ಅನಂತಯ್ಯ ಅವರು ದಾಖಲಿಸಿದ್ದ ಜಾತಿನಿಂದನೆ ಪ್ರಕರಣವನ್ನು ರಾಜಮಹೇಂದ್ರ ಅವರು ನಿರ್ವಹಿಸುತ್ತಿದ್ದರು. ಪ್ರಕರಣದಲ್ಲಿ ಉತ್ತಮವಾಗಿ ವಾದ ಮಾಡಲು ₹50 ಸಾವಿರ ಲಂಚ ಕೊಡುವಂತೆ ನವೀನ್‌ಗೆ, ಆರೋಪಿ ರಾಜಮಹೇಂದ್ರ ಬೇಡಿಕೆ ಇಟ್ಟಿದ್ದರು. ಈಗಾಗಲೇ ₹20 ಸಾವಿರ ಹಣವನ್ನೂ ಪಡೆದಿದ್ದರು. ಉಳಿದ ಹಣಕ್ಕೆ ಬೇಡಿಕೆ ಇಟ್ಟಾಗ ಬೇಸತ್ತ ನವೀನ್ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ರಾಜಮಹೇಂದ್ರ

ಲೋಕಾಯುಕ್ತ ಎಸ್‌ಪಿ ಸಿದ್ದರಾಜು ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿದ ಡಿವೈಎಸ್‌ಪಿ ಶೀಲವಂತ ಅವರು ₹25 ಸಾವಿರ ನಗದು ಪಡೆಯುವಾಗ ದಾಳಿ ನಡೆಸಿ ಅವರನ್ನು ಬಂಧಿಸಿದ್ದಾರೆ.

ಕರ್ನಾಟಕ ಸರ್ಕಾರ ಕಂದಾಯ ಇಲಾಖೆ
ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
ಫೋನ್ ನಂ:08194–222811/222538, ಇ–ಮೇಲ್:deo.chitradurga@gmail.com
ಸಂಖ್ಯೆ:ಸಿಬ್ಬಂದಿ(1)ಸಿಆರ್/68/2019–20 ದಿನಾಂಕ: 29.12.2025

ಇ–ಪ್ರಕ್ಯೂರ್‌ಮೆಂಟ್ ಇ–ಟೆಂಡರ್ ಪ್ರಕಟಣೆ

ಚಿತ್ರದುರ್ಗ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಮತ್ತು ಭೂ ಸುರಾಕ್ಷ ಕಾರ್ಯಕ್ರಮದಡಿ 36–ಬೆರಳಚ್ಚುಗಾರ, 05–ವಾಹನಚಾಲಕ ಮತ್ತು 13–ಗ್ರೂಪ್–ಡಿ ವೃಂದದ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ನೇಮಕ ಮಾಡುವ ಕುರಿತು ನೋಂದಾಯಿತ ಹೊರ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಇ–ಪೋರ್ಟಲ್ ಮುಖಾಂತರ ದಿನಾಂಕ:29.12.2025 ರಂದು ಟೆಂಡರ್ ಕರೆಯಲಾಗಿದ್ದು (ಟೆಂಡರ್ ಸಂಖ್ಯೆ–RD/2025-26/SE0495), ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 12.01.2026ರ ಅಪರಾಹ್ನ 4.00 ಗಂಟೆಗೆ ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.inರಲ್ಲಿ ನೋಡಬಹುದಾಗಿದೆ.
ಟೆಂಡರ್ ಪ್ರಾರಂಭವಾದ ದಿನಾಂಕ:– 29.12.2025.
ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:–12.01.2026.
ಟೆಂಡರ್ ನ ಅಂದಾಜು ಮೊತ್ತ ರೂ.1,53,95,078.44/–
ಇಎಂಡಿ ಮೊತ್ತ ರೂ.3,07,902/–
DIPR/CTA/KSMCA/567/2025-26
ಸಹಿ/–ಅಪರ ಜಿಲ್ಲಾಧಿಕಾರಿಗಳು ಚಿತ್ರದುರ್ಗ ಜಿಲ್ಲೆ.

ಕರ್ನಾಟಕ ಸರ್ಕಾರ
ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628, ಫ್ಯಾಕ್ಸ್ : 080–22226630
ಇಮೇಲ್ : dultbangalore@gmail.com, dult@karnataka.gov.in ಜಾಲತಾಣ: https://dult.karnataka.gov.in
ಸಂಖ್ಯೆ: DULT-TECH/59/2025 ದಿನಾಂಕ: 30.12.2025

ಟೆಂಡರ್ ಪ್ರಕಟಣೆ

ನಗರ ಭೂ ಸಾರಿಗೆ ನಿರ್ದೇಶನಾಲಯ, ಕರ್ನಾಟಕದಲ್ಲಿನ 7 ಜಿಲ್ಲಾ ಕೇಂದ್ರಗಳ ಸಂಚಾರ ನಿರ್ವಹಣಾ ಯೋಜನೆಯ (TMP) ಸಿದ್ಧತೆಗಾಗಿ ಸಮಾಲೋಚಕರ ಸೇವೆಗಳಿಗಾಗಿ ಪ್ರತ್ಯೇಕ ಟೆಂಡರ್ (ಪ್ಯಾಕೇಜ್) (ಇ–ಬಿಡ್) ಅನ್ನು ಆಹ್ವಾನಿಸಿದ್ದು, ಬಿಡ್ಡುದಾರರು **https://kppp.karnataka.gov.in** ವೆಬ್‌ಸೈಟ್‌ನಿಂದ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **11.02.2026, ಸಂಜೆ 5.30 ರೊಳಗೆ.**

ಪ್ಯಾಕೇಟ್ ಸಂಖ್ಯೆ	ಜಿಲ್ಲಾ ಕೇಂದ್ರ	ಟೆಂಡರ್ ಸಂಖ್ಯೆ.
1	ಮಡಿಕೇರಿ	DULT/2025-26/SE0032
	ಚಾಮರಾಜನಗರ	
	ಚಿಕ್ಕಬಳ್ಳಾಪುರ	
2	ಹಾವೇರಿ	DULT/2025-26/SE0033
	ಕಾರವಾರ	
3	ಕೊಪ್ಪಳ	DULT/2025-26/SE0034
	ಯಾದಗಿರಿ	

ಸಹಿ/– ಜಂಟಿ ನಿರ್ದೇಶಕರು (ಆಡಳಿತ) ನಗರ ಭೂ ಸಾರಿಗೆ ನಿರ್ದೇಶನಾಲಯ ನಗರಾಭಿವೃದ್ಧಿ ಇಲಾಖೆ
ವಾಸಾಸಂಇ/ವಾಪ್ರ/4727/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ ಆಯುಷ್ ಇಲಾಖೆ
ಜಿಲ್ಲಾ ಪಂಚಾಯತ್, ಹಾಸನ
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಆಯುಷ್ ಇಲಾಖೆ, ಹೊಸಲೈನ್ ರಸ್ತೆ, ಹಾಸನ–573201
E-mail: dao.hassan09@gmail.com ದೂರವಾಣಿ ಸಂ:08172–272272
ಸಂ: ಜಿಆಕಹಾ/38/ಸಿಬ್ಬಂದಿ(1)/ಗ್ರೂ.ಟೆಂಡರ್/2025–26 ದಿನಾಂಕ: 29–12–2025.

ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆಯುಷ್ ಕಛೇರಿ, ಹಾಸನ ವ್ಯಾಪ್ತಿಯ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್–ಡಿ ನೌಕರರ ಸೇವೆಯನ್ನು ಒದಗಿಸಲು ನೋಂದಾಯಿತ ಹೊರ ಸಂಪನ್ಮೂಲ ಏಜೆನ್ಸಿಯವರಿಂದ 01 ವರ್ಷದ ಅವಧಿಯವರೆಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ: 29–12–2025 ರಿಂದ 12.01.2026 ರವರೆಗೆ ಆನ್ ಲೈನ್ ನಲ್ಲಿ ಅರ್ಜಿಯನ್ನು ಪಡೆದು ಸಲ್ಲಿಸುವುದು. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ವೆಬ್‌ಸೈಟ್ ಅಧಿಸೂಚನೆ ಸಂ: AYD/2025-26/SE0167/CALL-2 ನಲ್ಲಿ ನೋಡಬಹುದಾಗಿದೆ.
ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ಹಾಸನ ಜಿಲ್ಲೆ.
ವಾಸಾಸಂಇ/ಹಿಸನಿ/ಹಾಸನ/893/ಕೆಎಸ್‌ಎಂಸಿಎ/2025–26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ವಿಭಾಗ ಕಚೇರಿ, ಎಂ.ಜಿ ರಸ್ತೆ, ಕಾರವಾರ – 581301
Email: eekuwsdbkwr@gmail.com ದೂ. ಸಂಖ್ಯೆ: 08382201080

ಟೆಂಡರ್ ಅಧಿಸೂಚನೆ
(ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಕೆ.ಪಿ.ಪಿ ಪೋರ್ಟಲ್ https://kppp.karnataka.gov.in ಮೂಲಕ (ದ್ವಿ–ಟೆಂಡರ್ ದಾಖಲೆ ಪದ್ದತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 1679, ದಿನಾಂಕ: 30/12/2025.

2025–26ನೇ ಸಾಲಿನ ಕಾರವಾರ–ಅಂಕೋಲಾ ನಗರ ನೀರು ಸರಬರಾಜು ಯೋಜನೆಯ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿಯಡಿಯಲ್ಲಿ ಕಾರವಾರ ವಿಭಾಗ ಕಛೇರಿಯನ್ನು ಉನ್ನತೀಕರಣ ಮಾಡುವ ಕಾಮಗಾರಿ (Lumpsum Tender). KUWSDB/2025-26/BD/WORK_INDENT450/Call2. ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಕಾರವಾರ ಕಚೇರಿಯನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಕಾರವಾರ
DIPR/ADK/KSMCA/885/25-26 dt. 30.12.2025

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು–560001
ದೂರವಾಣಿ : 080–25581383, ಫ್ಯಾಕ್ಸ್ : 080–25586321
ಸಂಖ್ಯೆ: ಪಿಸಿಬಿ/04/ಬಿಎಲ್‌ಡಿ/2024/2025–26/3887 ದಿನಾಂಕ: 23.12.2025

ಟೆಂಡರ್ ಆಹ್ವಾನ ಪ್ರಕಟಣೆ (ಕರೆ–3)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯ ಸದಸ್ಯ ಕಾರ್ಯದರ್ಶಿಯವರು ಈ ಕೆಳಗಿನ ಕಾಮಗಾರಿಗಾಗಿ ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ http://kppp.karnataka.gov.in ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕೆಲಸದ ಹೆಸರು: ಬೆಂಗಳೂರಿನ ಎಸ್.ಜಿ.ಹಳ್ಳಿಯಲ್ಲಿರುವ ಕೆ.ಎಸ್.ಪಿ.ಸಿ.ಬಿ ನಿಸರ್ಗ ಭವನದಲ್ಲಿರುವ ಕೇಂದ್ರ ಪರಿಸರ ಪ್ರಯೋಗಾಲಯ –1 ರಲ್ಲಿ ಅಸ್ತಿತ್ವದಲ್ಲಿರುವ ವಾಯು ಪರೀಕ್ಷಾ ಪ್ರಯೋಗಾಲಯ (ಏರ್ ಟೆಸ್ಟಿಂಗ್ ಲ್ಯಾಬೊರೇಟರಿ)ದ ಉನ್ನತೀಕರಣ. ಕೆಲಸದ ಅಂದಾಜು ಮೌಲ್ಯ: **ರೂ.39.79 ಲಕ್ಷಗಳು.** ಟೆಂಡರ್ ವೆಚ್ಚ, ಇಎಂಡಿ ಇತ್ಯಾದಿ ಎಲ್ಲಾ ಪಾವತಿಗಳನ್ನು ಇ–ಪಾವತಿ ವಿಧಾನದಲ್ಲಿ ಮಾತ್ರ ಪಾವತಿಸುವುದು.

ಹೆಚ್ಚಿನ ವಿವರಗಳಿಗೆ, ದಯವಿಟ್ಟು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: http://kppp.karnataka.gov.in ಅನ್ನು ಪರಿವೀಕ್ಷಿಸಿ.
ಸಹಿ/– ಮುಖ್ಯ ಪರಿಸರ ಅಧಿಕಾರಿ–2 (ಪ್ರ), ಕೆಎಸ್‌ಪಿಸಿಬಿ
ವಾ.ಸಾ.ಸಂ.ಇ/ವಾಪ್ರ/4725/ಆಕಾರ್/2025–26
ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ : ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಅಲ್ಪಸಂಖ್ಯಾತರ ನಿರ್ದೇಶನಾಲಯ
ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.
ಸಂಖ್ಯೆ: ಅಸಂನಿ/ಅ/ಮೊದೇವಶಾ/ಸಿಆರ್–118/2025–26 ದಿನಾಂಕ: 29–12–2025

ಪ್ರಕಟಣೆ

ವಿಷಯ: 2025–26ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದ ವಿವಿಧ ವಸತಿ ಶಾಲೆ ಮತ್ತು ಕಾಲೇಜುಗಳಿಗೆ Smart Pay Phone Communication System ದೂರವಾಣಿ ಸಂಪರ್ಕ ಕಲ್ಪಿಸಲು ಪ್ರಸ್ತಾವನೆಯನ್ನು (Expression of Interest) ಆಹ್ವಾನಿಸುವ ಬಗ್ಗೆ.
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಒಟ್ಟು 169 ವಸತಿ ಶಾಲೆ ಮತ್ತು 13 ವಸತಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು. ಸದರಿ ಸುಮಾರು 52,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ. ಈ ವಸತಿ ಶಾಲಾ/ಕಾಲೇಜುಗಳಲ್ಲಿನ ವಿದ್ಯಾರ್ಥಿಗಳು ತಮ್ಮ ಪೋಷಕರನ್ನು ಸಂಪರ್ಕಿಸಲು ಅನುಕೂಲವಾಗುವ ನಿಟ್ಟಿನಲ್ಲಿ Smart Pay Phone Communication System ದೂರವಾಣಿಯನ್ನು ಅಳವಡಿಸಲು ಉದ್ದೇಶಿಸಲಾಗಿರುತ್ತದೆ.
ಮೇಲ್ಕಂಡ ವಸತಿ ಶಾಲಾ/ಕಾಲೇಜುಗಳಲ್ಲಿ ಸರ್ಕಾರದ ಯಾವುದೇ ಅನುದಾನ ನಿರೀಕ್ಷಿಸದೆ Smart Pay Phone Communication System ದೂರವಾಣಿಯನ್ನು ಅಳವಡಿಸಲು ಪ್ರಸ್ತಾವನೆಯನ್ನು Expression of Interest ನಿರ್ದೇಶನಾಲಯಕ್ಕೆ ಸಲ್ಲಿಸಲು ಕೋರಿದೆ. ಆಸಕ್ತ ಅರ್ಹ ಸಂಸ್ಥೆಗಳು ಇಲಾಖೆಯ ವೆಬ್‌ಸೈಟ್ https://dom.karnataka.gov.in ರಲ್ಲಿ ನೀಡಿರುವ ನಮೂನೆಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು **ದಿನಾಂಕ:16.01.2026ರ ಸಂಜೆ 5.00 ಗಂಟೆಯೊಳಗೆ** ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ.
ವೆಬ್‌ಸೈಟ್: https://dom.karnataka.gov.in
ಸ್ಥಳ: **ಅಲ್ಪಸಂಖ್ಯಾತರ ನಿರ್ದೇಶನಾಲಯ,** ನಂ.16ಸಿ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು 560052.
ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ:**16.01.2026 ಸಂಜೆ 5:00ಗಂಟೆ.**
ಸಹಿ/– ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/4714/ವಾಪ್ರ/ಎಂಎಎ/2025–26

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ ಅರಣ್ಯ ಸಂಚಾರಿ ದಳ ಬೆಂಗಳೂರು ರವರ ಕಛೇರಿ,
ಜಾರಕ್‌ಬಂಡೆ ಅರಣ್ಯ ವಸತಿ ಸಂಕೀರ್ಣ, ಕಮ್ಮಗೊಂಡನಹಳ್ಳಿ, ಬೆಂಗಳೂರು–560 015.
ಫೋನ್: 080-28387672 । ಇ–ಮೇಲ್: dcffms@gmail.com
ಸಂ.: KFD/2025-26/IND0320 ದಿನಾಂಕ: 26.12.2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಅರಣ್ಯ ಸಂರಕ್ಷಣಾಧಿಕಾರಿ ಅರಣ್ಯ ಸಂಚಾರಿ ದಳ ಬೆಂಗಳೂರು ರವರ ಕಛೇರಿ, ಬೆಂಗಳೂರು ರವರು ನಿಸ್ತಂತು ಉಪಕರಣಗಳ **"Supply of Digital VHF Mobile station, Digital VHF static for wireless communication"** KPP Portal (https://kppp.karnataka.gov.in). ಮುಖಾಂತರ ಟೆಂಡರ್ ಆಹ್ವಾನಿಸಿರುತ್ತಾರೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ಸಿದ್ಧರಿರುವ ನಿರೀಕ್ಷಿತ ಪೂರೈಕೆದಾರರು ಅಗತ್ಯವಾಗಿ ಮೇಲೆ ತಿಳಿಸಿದ ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.
1) ಟೆಂಡರ್ ಪೂರ್ವಬಾವಿ ಸಭೆಯ **ದಿನಾಂಕ ಮತ್ತು ಸಮಯ: 02.01.2026ರ ಬೆಳಿಗ್ಗೆ 11:30 ಗಂಟೆಗೆ.** 2) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ: 12.01.2026ರ ಸಂಜೆ 4:00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ: 15.01.2026ರ ಬೆಳಿಗ್ಗೆ 11:30 ಗಂಟೆಗೆ.** 4) ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ **ದಿನಾಂಕ ಮತ್ತು ಸಮಯ: 19.01.2026ರ ಬೆಳಿಗ್ಗೆ 11:30 ಗಂಟೆಗೆ.** 5) ಟೆಂಡರ್ ಪೂರ್ವಬಾವಿ ಸಭೆ ಮತ್ತು ಟೆಂಡರ್‌ಗಳನ್ನು ತೆರೆಯುವುದು ಹಾಗೂ ಸಂವಹನದ ವಿಳಾಸ : **ಮೇಲ್ಕಂಡ ವಿಳಾಸ.**
ಈ ಟೆಂಡರ್ ಭಾಗವಹಿಸಲು ಸಿದ್ದರಿರುವ ನಿರೀಕ್ಷಿತ ಪೂರೈಕೆದಾರರು ವೆಬ್‌ಸೈಟ್: **https://kppp.karnataka.gov.in**ಗೆ ಭೇಟಿ ನೀಡುವ ಮೂಲಕ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ರಣ್ಯ ಸಂಚಾರಿ ದಳ ಬೆಂಗಳೂರು ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ
ವಾಸಾಸಂಇ/ವಾ.ಪ್ರ/ಜಿಎ/4701/2025–26

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಸಮನ್ವಯ ಮತ್ತು ಯೋಜನೆ, ವಲಯ–1, ಜಯನಗರ ವಲಯ ಕಚೇರಿ ಸಂಕೀರ್ಣ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು–560011
ನಂ. ಕಾಅ(ಸಿಓಪಿ)/ವ–1/ಬೆದನಪಾ/ಕೆಪಿಪಿಪಿ/ಟೆಂಡರ್–02/2025–26 ದಿನಾಂಕ : 30.12.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಅಲ್ಪಾವಧಿ ಟೆಂಡರ್ ಪ್ರಕಟಣೆ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಸಮನ್ವಯ ಮತ್ತು ಯೋಜನೆ, ವಲಯ–1, ಬೆಂದನಪಾ ರವರು ಬೆಂದನಪಾ, ಬೆಂಗಳೂರು ಇಲ್ಲಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಸೇವೆಗಳಿಗಾಗಿ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಕಂದಾಯ ಮತ್ತು ಐಟಿ ಕಾಮಗಾರಿಗಳಿಗಾಗಿ 1 ವರ್ಷದ ಅವಧಿಗೆ ಹೊರಗುತ್ತಿಗೆ ಒಪ್ಪಂದದ ಆಧಾರದ ಮೇಲೆ ಸಿಬ್ಬಂದಿಯನ್ನು ಒದಗಿಸುವುದು ಮತ್ತು ಪೂರೈಸುವುದು. **ಟೆಂಡರ್‌ಗಿಟ್ಟ ಮೊತ್ತ (ರೂಪಾಯಿಗಳಲ್ಲಿ & ಜಿಎಸ್‌ಟಿ ಸೇರಿದಂತೆ) : ರೂ. 2,55,60,000/– ಇಎಂಡಿ ಮೊತ್ತ : : ರೂ. 3,83,400/–**

ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್‌ಗಳನ್ನು ಕೆಪಿಪಿಪಿ ಇ–ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ : **06.01.2026 ರಂದು ಸಂಜೆ 5.00 ಗಂಟೆ** ಅಥವಾ ಅದಕ್ಕಿಂತ ಮೊದಲು. (2) ಬಿಡ್ ಪೂರ್ವ ಸಭೆಯು ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ : **31.12.2025 ರಂದು ಸಂಜೆ 4:00 ಗಂಟೆಗೆ** ಜಂಟಿ ಆಯುಕ್ತರ ಕಚೇರಿ, ವಲಯ–1 ಬೆಂಗಳೂರು ದಕ್ಷಿಣ ನಗರ ಪಾಲಿಕೆ, 9ನೇ ಮುಖ್ಯ ರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು–560011. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **06.01.2026 ರಿಂದ 5.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **07.01.2026 ರಂದು ಸಂಜೆ 5.00 ಗಂಟೆಗೆ.** (5) ಹಣಕಾಸು ಬಿಡ್ ಅನ್ನು ಬಿಡ್‌ದಾರರಿಗೆ ತಿಳಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಸಮನ್ವಯ ಮತ್ತು ಯೋಜನೆ, ವಲಯ–1, ಬೆಂದನಪಾ

ಕರ್ನಾಟಕ ಸರ್ಕಾರ
ಸಮಗ್ರ ಶಿಕ್ಷಣ ಕರ್ನಾಟಕ,
ಮಂಡ್ಯ ಜಿಲ್ಲೆ ಕೆ.ಆರ್.ರಸ್ತೆ, ಸುಭಾಷ್ ನಗರ, ಮಂಡ್ಯ,
ದೂ: 08232–297199,
ಇ–ಮೇಲ್–sskmandya@gmail.com
ಸಂಖ್ಯೆ:ಸಶಿಕ/ಸಿ2/ಕೆಜಿಬಿವಿ ಟೈ–1& ಟೈ–4 ವಸತಿ ಶಾಲೆ/ನಿಲಯ ಅಲ್ಪಾವದಿ ಟೆಂಡರ್/08ಎ/2025–26 ದಿನಾಂಕ:19.12.2025

ಪ್ರಕಟಣೆ

2025–26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಲ್ಲಿ ಹೊರಡಿಸಲಾಗದ ಟೆಂಡರ್ ವಿವರ.
ಕ್ರ.ಸಂ. : 01. ಟೆಂಡರ್ ವಿವರ : ಜಿಲ್ಲಾ ಮತ್ತು ಬ್ಲಾಕ್ ಹಂತಕ್ಕೆ ಒಟ್ಟು 35 ಹೊರಗುತ್ತಿಗೆ ಆಧಾರದ ಮೂಲಕ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು. ಟೆಂಡರ್ ರೆಫರೆನ್ಸ್ ಸಂಖ್ಯೆ : DPI/2025/SE0416. ಟೆಂಡರ್ ಇಟ್ಟ ಮೊತ್ತ (ರೂ.ಗಳಲ್ಲಿ) : 90,93,312=00.
ಕ್ರ.ಸಂ. : 02. ಟೆಂಡರ್ ವಿವರ : ಜಿಲ್ಲೆಯ ಕೆ.ಜಿ.ಬಿ.ಬಿ ಟೈಪ್–1 ಎರಡು (02) ವಸತಿ ಶಾಲೆಗಳು ಮತ್ತು ಕೆ.ಜಿ.ಬಿ.ವಿ ಟೈಪ್–4 ಎರಡು (02) ವಸತಿ ನಿಲಯಗಳಿಗೆ ಒಟ್ಟು 18 ಅರೆಕಾಲಿಕ ಸಿಬ್ಬಂದಿ ಸೇವೆ. ಟೆಂಡರ್ ರೆಫರೆನ್ಸ್ ಸಂಖ್ಯೆ : DPI/2025/SE0417. ಟೆಂಡರ್ ಇಟ್ಟ ಮೊತ್ತ (ರೂ.ಗಳಲ್ಲಿ) : 32,43,000–00
ಅಲ್ಪಾವಧಿಯ ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿವುಳ್ಳ ಟೆಂಡರ್‌ದಾರರು http://www.eproc.karnataka.gov.in ,ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ನೋಡಲ್ ಅಧಿಕಾರಿರವರ ಮೊಬೈಲ್ ಸಂಖ್ಯೆ: 9448739714.
ಸಹಿ/–ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಮಂಡ್ಯ
ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/677/2025–26

ಕರ್ನಾಟಕ ಸರ್ಕಾರ
ಮೈಸೂರು ಅರಮನೆ ಮಂಡಳಿ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು.
ದೂರವಾಣಿ: 0821–2421051, ಫ್ಯಾಕ್ಸ್: 2434425, ಇ–ಮೇಲ್: ddmysorepalace@gmail.com
ಟೆಂಡರ್ ಅಧಿಸೂಚನೆ ಸಂಖ್ಯೆ: EO/MPB/DD/AEE/ELECT/T.NO.14/2025-26 ದಿನಾಂಕ: 26.12.2025
ಇ–ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿಯಲ್ಲಿ) ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರು, ಮೈಸೂರು ಅರಮನೆಯ ವಿದ್ಯುತ್ ಉಪ–ವಿಭಾಗದ ನಿರ್ವಹಣಾ ಕಾಮಗಾರಿಯಾದ **"Comprehensive Annual Maintenance Contract (CAMC) for existing X&Ray Baggage Scanners & Door Frame Metal Detector System installed at Mysuru Palace Board, Mysuru" & "Comprehensive Annual Maintenance Contract (CAMC) of existing CCTV Surveillance System installed at Mysuru Palace Board, Mysuru"** ಸಂಬಂಧಿಸಿದಂತೆ ಒಟ್ಟು ಮೊತ್ತ **ರೂ. 89.00 ಲಕ್ಷದ** ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ನೊಂದಾಯಿತ ಅರ್ಹ ಗುತ್ತಿಗೆದಾರರು / ಏಜೆನ್ಸಿ / ಸಂಸ್ಥೆಯವರಿಂದ ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. (1) ವಿದ್ಯುನ್ಮಾನ (ಇ–ಟೆಂಡರ್) ವ್ಯವಸ್ಥೆ ಮುಖಾಂತರ ಮಾತ್ರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **09.01.2026 ಸಂಜೆ 5.00 ಗಂಟೆಯವರೆಗೆ.** (2) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **12.01.2026 ಬೆಳಿಗ್ಗೆ 10.30 ಗಂಟೆಯ ನಂತರ** (3) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **13.01.2026 ಬೆಳಿಗ್ಗೆ 11.00 ಗಂಟೆಯ ನಂತರ ಅಥವಾ ನಂತರ ದಿನಗಳಲ್ಲಿ** ತೆರೆಯಲಾಗುವುದು, (4) ಟೆಂಡರ್‌ಗಿಟ್ಟಿರುವ **ಗರಿಷ್ಠ ಮೊತ್ತ ರೂ. 62.00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ. 27.00 ಲಕ್ಷಗಳು,** ಟೆಂಡರ್‌ನ ನಿಬಂಧನೆಗಳು, ಷರತ್ತುಗಳು ಹಾಗೂ ಕಾಮಗಾರಿಯ ಹೆಚ್ಚಿನ ವಿವರಗಳಿಗೆ **http://www.kppp.karnataka.gov.in** ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು, ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಆನಂತರದ ದಿನಗಳನ್ನು ಪರಿಗಣಿಸಲಾಗುವುದು.
ಸಹಿ/– ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು
ವಾಸಾಸಂಇ/ಮೈಸೂರು/ಶಿರಡಿ ಸಾಯಿ/1446/2025–26

33.59 ಲಕ್ಷ ಮಕ್ಕಳಲ್ಲಿ ಸಮಸ್ಯೆ ಕಾಡುತ್ತಿದೆ ನಾನಾ ಅನಾರೋಗ್ಯ ಸಮಸ್ಯೆ

• ವರುಣ ಹೆಗಡೆ

ಬೆಂಗಳೂರು: ಬದಲಾದ ಜೀವನಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಮಕ್ಕಳಲ್ಲಿಯೂ ಅನಾರೋಗ್ಯ ಸಮಸ್ಯೆಗಳು ಹೆಚ್ಚುತ್ತಿವೆ. ಆರೋಗ್ಯ ಇಲಾಖೆಯ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ (ಆರ್‌ಬಿಎಸ್‌ಕೆ) ನಡೆಸಿದ ತಪಾಸಣೆಯಲ್ಲಿ 33.59 ಲಕ್ಷ ಮಕ್ಕಳಲ್ಲಿ ವಿವಿಧ ಅನಾರೋಗ್ಯ ಸಮಸ್ಯೆಗಳು ಪತ್ತೆಯಾಗಿವೆ.

ಆರಂಭಿಕ ಹಂತದಲ್ಲಿಯೇ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಪತ್ತೆ ಹಚ್ಚಿ, ಚಿಕಿತ್ಸೆ ಒದಗಿಸುವ ಸಲುವಾಗಿ ಅಂಗನವಾಡಿ ಹಾಗೂ ಶಾಲಾ ಹಂತದಲ್ಲಿಯೇ ಈ ಕಾರ್ಯಕ್ರಮದಡಿ 18 ವರ್ಷದೊಳಗಿನವರಿಗೆ ತಪಾಸಣೆ ನಡೆಸಲಾಗುತ್ತಿದೆ. ಹುಟ್ಟಿನ ದೋಷಗಳು, ರೋಗಗಳು, ನ್ಯೂನತೆ ಮತ್ತು ಬೆಳವಣಿಗೆ ಕುಂಠಿತವಾಗಿರುವುದನ್ನು ಗುರುತಿಸುವುದು ಹಾಗೂ ಉಚಿತವಾಗಿ ಚಿಕಿತ್ಸೆ ಒದಗಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. 2025–26ನೇ ಸಾಲಿನಲ್ಲಿ 93.41 ಲಕ್ಷ ಮಕ್ಕಳು ತಪಾಸಣೆಗೆ ನೋಂದಣಿಯಾಗಿದ್ದು, ಏಪ್ರಿಲ್‌ನಿಂದ ನವೆಂಬರ್ ಅವಧಿಯಲ್ಲಿ 80.27 ಲಕ್ಷ ಮಕ್ಕಳನ್ನು ತಪಾಸಣೆ ಮಾಡಲಾಗಿದೆ.

ತಪಾಸಣೆಗೆ ಒಳಪಟ್ಟ ಹಲವು ಮಕ್ಕಳಲ್ಲಿ ಚರ್ಮ ಹಾಗೂ ದಂತದ ಸಮಸ್ಯೆ, ದೃಷ್ಟಿ ಹಾಗೂ ಶ್ರವಣ ದೋಷ, ಶ್ವಾಸಕೋಶ ಹಾಗೂ ಹೃದಯ ಸಂಬಂಧಿ ಸಮಸ್ಯೆ, ಬೆಳವಣಿಗೆ ಕುಂಠಿತವಾಗಿರುವುದು, ಕಲಿಕಾ ನ್ಯೂನತೆ, ಅಪೌಷ್ಟಿಕತೆ, ಅನಿಮಿಯಾ (ರಕ್ತಹೀನತೆ) ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳು ದೃಢಪಟ್ಟಿವೆ.

ಮಕ್ಕಳಿಗೆ ಅಗತ್ಯ ಚಿಕಿತ್ಸೆ: ಆರ್‌ಬಿಎಸ್‌ಕೆ ತಂಡ ನಡೆಸಿದ ತಪಾಸಣೆಯಲ್ಲಿ ಸಮಸ್ಯೆ ಪತ್ತೆಯಾದ 33.59 ಲಕ್ಷ ಮಕ್ಕಳಲ್ಲಿ, 31.22 ಲಕ್ಷ ಮಕ್ಕಳಿಗೆ ಚಿಕಿತ್ಸೆ ಪಡೆಯಲು ಶಿಫಾರಸು ಮಾಡಲಾಗಿದೆ. ಅವರಲ್ಲಿ 27.74 ಲಕ್ಷ ಮಕ್ಕಳನ್ನು ಈಗಾಗಲೇ ಚಿಕಿತ್ಸೆಗೆ ಒಳಪಡಿಸಲಾಗಿದೆ. ನೇತ್ರ ಸಮಸ್ಯೆ ಪತ್ತೆಯಾದ ಮಕ್ಕಳಿಗೆ ಹೆಚ್ಚಿನ ತಪಾಸಣೆ ನಡೆಸಿ, ಕನ್ನಡಕಗಳನ್ನೂ ವಿತರಿಸಲಾಗುತ್ತಿದೆ. ಅದೇ ರೀತಿ, ದಂತ, ಶ್ರವಣ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳಿಗೂ ಅಗತ್ಯ ಚಿಕಿತ್ಸೆ ನೀಡಲಾಗುತ್ತಿದೆ.

'ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಈ ತಪಾಸಣೆ ನಡೆಸುತ್ತಿದ್ದು, ಸಮಸ್ಯೆ ಪತ್ತೆಯಾದವರಿಗೆ ಸುವರ್ಣ ಸುರಕ್ಷಾ ಟ್ರಸ್ಟ್ ಅಡಿ ನೋಂದಾಯಿತ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಒದಗಿಸಲಾಗುತ್ತಿದೆ. ಜನ್ಮತಃ ಬಂದಿರುವ ರೋಗಗಳನ್ನು ಗುರುತಿಸುವ ಜತೆಗೆ, ವಿವಿಧ ಅನಾರೋಗ್ಯ ಸಮಸ್ಯೆಗಳು, ಪೋಷಕಾಂಶ ಕೊರತೆ, ಬೆಳವಣಿಗೆ ಕುಂಠಿತ ಆಗಿರುವುದು ಹಾಗೂ ಅಂಗವಿಕಲತೆಯನ್ನೂ ಗುರುತಿಸಲಾಗುತ್ತಿದೆ. ಅಗತ್ಯ ಚಿಕಿತ್ಸೆಗಳನ್ನು ಒದಗಿಸುವ ಮೂಲಕ ಮಕ್ಕಳ ಆರೋಗ್ಯ ವೃದ್ಧಿಗೆ ಶ್ರಮಿಸಲಾಗುತ್ತಿದೆ' ಎಂದು ಆರ್‌ಬಿಎಸ್‌ಕೆ ತಂಡದ ಪ್ರತಿನಿಧಿಯೊಬ್ಬರು ತಿಳಿಸಿದರು.

ಮಕ್ಕಳಲ್ಲಿನ ಅನಾರೋಗ್ಯ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿದಲ್ಲಿ, ಚಿಕಿತ್ಸೆ ಸುಲಭ ಸಾಧ್ಯವಾಗಲಿದೆ. ಕಲಿಕಾ ತೊಡಕುಗಳನ್ನೂ ನಿವಾರಿಸಬಹುದು
ಡಾ. ಸಂಜಯ್ ಕೆ.ಎಸ್., ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ

ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ

430 ಮೊಬೈಲ್ ಆರೋಗ್ಯ ತಂಡ

ಆರ್‌ಬಿಎಸ್‌ಕೆ ಅಡಿ ಅಂಗನವಾಡಿ ಮಕ್ಕಳಿಗೆ ವರ್ಷಕ್ಕೆ ಎರಡು ಬಾರಿ, ಶಾಲಾ ಮತ್ತು ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ವರ್ಷಕ್ಕೆ ಒಂದು ಬಾರಿ ತಪಾಸಣೆ ಮಾಡಲಾಗುತ್ತಿದೆ. ಸರ್ಕಾರಿ ಮತ್ತು ಅನುದಾನಿತ ಶಾಲಾ– ಕಾಲೇಜುಗಳ ಮಕ್ಕಳ ತಪಾಸಣೆಗೆ 430 ಮೊಬೈಲ್ ಆರೋಗ್ಯ ತಂಡಗಳನ್ನು ರಚಿಸಲಾಗಿದೆ.

ಮಕ್ಕಳಲ್ಲಿನ ಅನಾರೋಗ್ಯ ಸಮಸ್ಯೆಯನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಲು ರಾಜ್ಯದ 18 ಜಿಲ್ಲೆಗಳಲ್ಲಿ ಜಿಲ್ಲಾ ಶೀಘ್ರ ಮಧ್ಯಸ್ಥಿಕೆ ಕೇಂದ್ರಗಳು (ಡಿಇಐಸಿ) ಕಾರ್ಯನಿರ್ವಹಿಸುತ್ತಿವೆ. ಶಾಲೆಗಳಿಗೆ ಭೇಟಿ ನೀಡುವ ಮೊಬೈಲ್ ಆರೋಗ್ಯ ತಂಡಗಳು, ಸಮಸ್ಯೆ ಎದುರಿಸುತ್ತಿರುವ ಮಕ್ಕಳನ್ನು ಡಿಇಐಸಿ ಕೇಂದ್ರಗಳಿಗೆ ಶಿಫಾರಸು ಮಾಡುತ್ತಿವೆ. ಇಲ್ಲಿ ತಜ್ಞ ವೈದ್ಯರು ಚಿಕಿತ್ಸೆ ಒದಗಿಸಲಿದ್ದಾರೆ.

'ಸ್ಥೂಲಕಾಯ, ಅಧಿಕ ರಕ್ತದೊತ್ತಡ'

'ಸ್ಥೂಲಕಾಯ, ಅಧಿಕ ರಕ್ತದೊತ್ತಡದಂತಹ ಸಮಸ್ಯೆ ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಅತಿಯಾಗಿ ಮೊಬೈಲ್ ಬಳಸುವುದರಿಂದ ದೃಷ್ಟಿ ಸಂಬಂಧಿತ ಸಮಸ್ಯೆಗಳ ಜತೆಗೆ, ನಿದ್ರೆ ಹಾಗೂ ಕಲಿಕೆಯಲ್ಲಿಯೂ ವ್ಯತ್ಯಾಸವಾಗುತ್ತಿದೆ. ಉತ್ತಮ ಆರೋಗ್ಯಕ್ಕಾಗಿ ಕುರುಕಲು ತಿಂಡಿಗಳ ಸೇವನೆಯನ್ನು ತ್ಯಜಿಸಬೇಕು. ದೈಹಿಕ ಚಟುವಟಿಕೆಗೆ ಆದ್ಯತೆ ನೀಡಿ, ಪೌಷ್ಟಿಕಾಂಶಯುಕ್ತ ಆಹಾರ ಸೇವಿಸಬೇಕು' ಎಂದು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ ಡಾ.ಸಂಜಯ್ ಕೆ.ಎಸ್. ತಿಳಿಸಿದರು.

ಸುದ್ದಿ 2 ನಿಮಿಷ

'ಝೀರೊ ಟ್ರಾಫಿಕ್'ನಲ್ಲಿ ಸಾಗಿಸಿ ಚಿಕಿತ್ಸೆ, ಆದರೂ ಬದುಕುಳಿಯದ ಶಿಶು

ಕೊಪ್ಪಳ: ಸಾವು–ಬದುಕಿನ ನಡುವೆ ಹೋರಾಟ ನಡೆಸಿ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಇಲ್ಲಿಂದ 'ಝೀರೊ ಟ್ರಾಫಿಕ್'ನಲ್ಲಿ ಸಾಗಿಸಲಾಗಿದ್ದ ನವಜಾತ ಗಂಡು ಶಿಶು ಚಿಕಿತ್ಸೆಗೆ ಸ್ಪಂದಿಸದೇ ಸೋಮವಾರ ರಾತ್ರಿ ಮೃತಪಟ್ಟಿದೆ.

ಜಿಲ್ಲೆಯ ಕುಕನೂರು ತಾಲ್ಲೂಕಿನ ಬೂದಗುಂಪಾ ಗ್ರಾಮದ ವಿಜಯಲಕ್ಷ್ಮಿ ಎಂಬುವವರಿಗೆ ಶನಿವಾರ ಮಧ್ಯರಾತ್ರಿ ಸಹಜ ಹೆರಿಗೆಯಾಗಿತ್ತು. ನವಜಾತ ಶಿಶುವಿಗೆ ಹೊಟ್ಟೆ ಮೇಲಿನ ಚರ್ಮ ಸರಿಯಾಗಿ ಬೆಳೆಯದ ಕಾರಣ ಕಿಡ್ನಿ, ಕರುಳು ಸೇರಿದಂತೆ ಕೆಲ ಅಂಗಗಳು ಹೊರಗಡೆ ಬಂದಿದ್ದವು. ಇಲ್ಲಿನ ಆಂಬುಲೆನ್ಸ್ ಸಿಬ್ಬಂದಿ 120 ಕಿ.ಮೀ. ದೂರವನ್ನು 60 ನಿಮಿಷಗಳಲ್ಲಿ ಕ್ರಮಿಸಿ ಮಗುವನ್ನು ಹುಬ್ಬಳ್ಳಿಗೆ ತಲುಪಿಸಿದ್ದರು.

'ಶಿಶುವಿನ ಹೊಟ್ಟೆಯ ಭಾಗದ ಚರ್ಮ ಬೆಳವಣಿಗೆಯಾಗಿರದ ಕಾರಣ ಕರುಳು, ಕಿಡ್ನಿ ಹೊರಗೆ ಬಂದಿತ್ತು. ವಿವಿಧ ಅಂಗಾಂಗಗಳಿಗೂ ಸೋಂಕು ಆವರಿಸಿತ್ತು. ಮಕ್ಕಳ ವಿಭಾಗದ ತಜ್ಞರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು, ಚಿಕಿತ್ಸೆಗೆ ಸ್ಪಂದಿಸದೇ ಸೋಮವಾರ ತಡರಾತ್ರಿ ಮೃತಪಟ್ಟಿದೆ' ಎಂದು ಹುಬ್ಬಳ್ಳಿಯ ಕೆಎಂಸಿಆರ್‌ಐ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಈಶ್ವರ ಹಸಬಿ ತಿಳಿಸಿದ್ದಾರೆ.



ಮುಳ್ಳುಕಂಟಿಯಲ್ಲಿ ಹೆಣ್ಣು ನವಜಾತ ಶಿಶು ಪತ್ತೆ

ಕೊಪ್ಪಳ: ತಾಲ್ಲೂಕಿನ ಹುಲಿಗಿಯ ಹುಲಿಗೆಮ್ಮ ದೇವಿ ದೇವಸ್ಥಾನದ ಪ್ರಸಾದ ನಿಲಯದ ಸಮೀಪದ ಮುಳ್ಳುಕಂಟಿಯಲ್ಲಿ ಮಂಗಳವಾರ ನವಜಾತ ಹೆಣ್ಣು ಶಿಶು ಪತ್ತೆಯಾಗಿದ್ದು, ಸಾರ್ವಜನಿಕರ ಕಾಳಜಿಯಿಂದ ಮಗು ಬದುಕುಳಿದಿದೆ.

ಮುಳ್ಳಿನ ಕಂಟಿಯಿಂದ ಶಿಶು ಅಳುವ ಸದ್ದು ಕೇಳಿಬಂದಾಗ ಸಾರ್ವಜನಿಕರು ಅಲ್ಲಿನ ಹೋಂಗಾರ್ಡ್ ಸಿಬ್ಬಂದಿ ಗಮನಕ್ಕೆ ತಂದು ಮಕ್ಕಳ ಸಹಾಯವಾಣಿಗೆ ಮಾಹಿತಿ ನೀಡಿದ್ದಾರೆ. ಬಳಿಕ ಶಿಶುವನ್ನು ರಕ್ಷಣೆ ಮಾಡಿ ಸ್ಥಳೀಯ ಆಸ್ಪತ್ರೆಯಲ್ಲಿಯೇ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಜಿಲ್ಲಾ ಕೇಂದ್ರದಲ್ಲಿರುವ ತಾಯಿ ಮತ್ತು ಮಗುವಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಗು ಜನಿಸಿ ಕೆಲವು ಗಂಟೆಗಳಷ್ಟೇ ಆಗಿತ್ತು. ಕರಳು ಬಳ್ಳಿ ಕೂಡ ಶಿಶುವಿನೊಂದಿಗೆ ಇತ್ತು. ಶಿಶುವಿನ ತೂಕ 2.4 ಕೆ.ಜಿ. ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಹೋಂಗಾರ್ಡ್‌ಗಳಾದ ಶಿವಕುಮಾರ್ ಹಾಗೂ ಮಾರುತಿ ಅವರ ಸಮಯ ಪ್ರಜ್ಞೆಯಿಂದ ಶಿಶು ಬದುಕಿದೆ. ಮುಳ್ಳಿನ ಕಂಟಿಯಲ್ಲಿ ಬಿದ್ದಿದ್ದರಿಂದ ಶಿಶುವಿಗೆ ಹುಳುಗಳು ಕಚ್ಚಿ ನಂಜಾಗಿರುವ ಸಾಧ್ಯತೆಯಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಕೋಗಿಲು ತೆರವು ಕಾರ್ಯಾಚರಣೆ: ರಾಜ್ಯ ಸರ್ಕಾರದ ಕ್ರಮ ಸರಿಯೇ?

- ಸರಿಯಾಗಿದೆ. ಒತ್ತುವರಿ ತೆರವು ಅನಿವಾರ್ಯ
- ಇಲ್ಲ. ಪುನರ್ವಸತಿ ಕಲ್ಪಿಸಬೇಕಿತ್ತು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕೋಗಿಲು: ಸರ್ಕಾರದ ಕ್ರಮಕ್ಕೆ ಆಕ್ಷೇಪ

ಬೆಂಗಳೂರು: ಕೋಗಿಲು ಗ್ರಾಮದ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸಿದ್ದವರಿಗೆ, ರಾಜ್ಯ ಸರ್ಕಾರವೇ ಬೇರೆ ಕಡೆ ವಸತಿ ಕಲ್ಪಿಸಲು ಮುಂದಾಗಿರುವುದಕ್ಕೆ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ಈ ಸಂಬಂಧ ಮಂಗಳವಾರ ಸಾಲು–ಸಾಲು ಸುದ್ದಿಗೋಷ್ಠಿ ನಡೆಸಿರುವ ಬಿಜೆಪಿ ನಾಯಕರು, 'ಸರ್ಕಾರವು ಯಾವ ಆಧಾರದಲ್ಲಿ ಮನೆ ನಿರ್ಮಿಸಿಕೊಡುತ್ತಿದೆ' ಎಂದು ಪ್ರಶ್ನಿಸಿದ್ದಾರೆ. ಸರ್ಕಾರದ ಈ ನಡೆಯು ಭೂಮಾಫಿಯಾ, ಸರ್ಕಾರಿ ಜಮೀನು ಒತ್ತುವರಿ ಮತ್ತು ಅಕ್ರಮ ವಲಸೆಯನ್ನು ಉತ್ತೇಜಿಸುತ್ತದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಜೆಡಿಎಸ್ ಸಹ ಸರ್ಕಾರದ ಕ್ರಮವನ್ನು ಖಂಡಿಸಿದೆ

'ಸಿಎಂ, ಡಿಸಿಎಂಗೆ ಶಕ್ತಿ ಇಲ್ಲವೇ?'

ಅಕ್ರಮ ವಲಸಿಗರನ್ನು ಗುರುತಿಸಿ, ಅವರು ಮಾಡಿಕೊಂಡಿದ್ದ ಒತ್ತುವರಿಯನ್ನು ತೆರವುಗೊಳಿಸಿ ರಾಜ್ಯ ಸರ್ಕಾರ ಉತ್ತಮ ಕೆಲಸ ಮಾಡಿತ್ತು. ಆದರೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರಿಗೆ ಮಣಿಯಿತು. ಈ ಮೂಲಕ ಅಕ್ರಮ ವಲಸಿಗರಿಗೆ ಕಾಯಂ ವಿಳಾಸ ನೀಡಲು ಮುಂದಾಗಿದೆ. ಕಾಂಗ್ರೆಸ್ ಹೈಕಮಾಂಡ್‌ನ ಒತ್ತಡವನ್ನು ಮೀರಿ ನಿಲ್ಲುವ ಶಕ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಇಲ್ಲವೇ?

ಹೊರದೇಶಗಳಿಂದ ಕರ್ನಾಟಕಕ್ಕೆ ಬಂದಿರುವ ಅಕ್ರಮ ವಲಸಿಗರು ಮತ್ತು ರೋಹಿಂಗ್ಯಾಗಳನ್ನು ರಾಜ್ಯ ಸರ್ಕಾರವೇ ಸಕ್ರಮಗೊಳಿಸುವುದು ಎಷ್ಟು ಸರಿ? ಇವರಿಂದ ಅಪರಾಧ, ಮಾದಕವಸ್ತು ಜಾಲದ ಹಾವಳಿ ಹೆಚ್ಚಾಗಲಿದೆ. ಅಂತಹವರನ್ನು ಗುರುತಿಸಿ, ಹೊರಹಾಕಲು ಕೇಂದ್ರ ಸರ್ಕಾರಕ್ಕೆ ಸಹಕಾರ ನೀಡಬೇಕಾದುದು ರಾಜ್ಯ ಸರ್ಕಾರದ ಕರ್ತವ್ಯ.

ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

'ರಾಜ್ಯಕ್ಕೆ ಇಬ್ಬರು ಮುಖ್ಯಮಂತ್ರಿ'

ಕರ್ನಾಟಕಕ್ಕೆ ಒಬ್ಬರೇ ಮುಖ್ಯಮಂತ್ರಿ ಎಂದು ನಾನು ಭಾವಿಸಿದ್ದೆ. ಆದರೆ ಇಬ್ಬರು ಮುಖ್ಯಮಂತ್ರಿಗಳು ಇದ್ದಾರೆ ಎಂಬುದು ಈಚೆಗಷ್ಟೇ ನನಗೆ ಗೊತ್ತಾಯಿತು. ದೆಹಲಿಯಲ್ಲಿರುವ ಕೆ.ಸಿ.ವೇಣುಗೋಪಾಲ್ ರಾಜ್ಯದ ಮುಖ್ಯಮಂತ್ರಿ. ಅವರ ಆದೇಶವನ್ನು ಪಾಲಿಸುವ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದು ಈಗ ಬಹಿರಂಗವಾಗಿದೆ.

ವೇಣುಗೋಪಾಲ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ 24 ಗಂಟೆಗಳಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಸಭೆ ನಡೆಸಿ, ತೆರವು ಕಾರ್ಯಾಚರಣೆಯಲ್ಲಿ ಮನೆ ಕಳೆದುಕೊಂಡವರಿಗೆ ವಸತಿ ಕಲ್ಪಿಸಲು ಕ್ರಮ ತೆಗೆದು ಕೊಂಡಿದ್ದಾರೆ. ಈ ಮೂವರಲ್ಲಿ ಯಾರು ಪ್ರಬಲರು ಎಂಬುದು ಇದರಿಂದಲೇ ಗೊತ್ತಾಗುತ್ತದೆ.

ಲಹರ್ ಸಿಂಗ್ ಸಿರೋಯ, ರಾಜ್ಯಸಭೆ ಸದಸ್ಯ

'ನಮ್ಮವರಿಗೆ ಸುಣ್ಣ, ಹೊರಗಿನವರಿಗೆ ಬೆಣ್ಣೆ'

ರಾಜ್ಯದ ಜನರಿಗೆ ಸುಣ್ಣ, ಹೊರ ರಾಜ್ಯದವರಿಗೆ ಬೆಣ್ಣೆ, ಇದು ಹೊಸ ವರ್ಷಕ್ಕೆ ಕಾಂಗ್ರೆಸ್ ಸರ್ಕಾರದ ಹೊಸ ಗ್ಯಾರಂಟಿ. ಉತ್ತರ ಕರ್ನಾಟಕದ ಕಲಬುರಗಿ, ಬೀದರ್,ವಿಜಯಪುರ, ಯಾದಗಿರಿಯ 117 ಹಳ್ಳಿಗಳು ಜಲಾವೃತವಾಗಿ 20,000ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. 14.58 ಲಕ್ಷ ಹೆಕ್ಟೇರ್‌ನಷ್ಟು ಬೆಳೆ ನಾಶವಾಗಿದೆ. ಉತ್ತರ ಕರ್ನಾಟಕದ ಜನರು ಮತ್ತು ರೈತರ ಕಣ್ಣೀರು ಕಾಂಗ್ರೆಸ್ ಸರ್ಕಾರಕ್ಕೆ ಕಾಣಲಿಲ್ಲವೇ? ಕೆ.ಜಿ.ಹಳ್ಳಿಯಲ್ಲಿ 29 ದಲಿತ ಕುಟುಂಬಗಳ ಮನೆಗಳನ್ನು ತೆರವು ಮಾಡುವಾಗ ಸರ್ಕಾರಕ್ಕೆ ಕಣ್ಣು–ಕಿವಿ ಇರಲಿಲ್ಲವೇ? ಕೇರಳದ ವಲಸಿಗರ ಕಣ್ಣೀರು ಒರೆಸಲು ಮುಂದಾಗಿರಲು ಕಾರಣವೇನು?

ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ

ಕನ್ನಡಿಗರಿಗೆ ಮನೆ ನೀಡಿ: ಛಲವಾದಿ

'ಉತ್ತರ ಕರ್ನಾಟಕದಿಂದ ಬಂದಿರುವ ಸಾವಿರಾರು ಮಂದಿ ಬೆಂಗಳೂರಿನ ಹಲವು ಕೊಳೆಗೇರಿಗಳಲ್ಲಿ ನಿರ್ಗತಿಕರಾಗಿ ಜೀವನ ದೂಡುತ್ತಿದ್ದಾರೆ. ಸರ್ಕಾರವು ನಮ್ಮದೇ ಕನ್ನಡಿಗರಿಗೆ ಪಕ್ಕಾ ಮನೆಯ ವ್ಯವಸ್ಥೆ ಮಾಡಿಕೊಡಬೇಕು' ಎಂದು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ ನಾರಾಯಣಸ್ವಾಮಿ ಅವರು ಪತ್ರ ಬರೆದಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿಗೂ ಪತ್ರ ಬರೆದಿದ್ದಾರೆ.

'ಬೆಂಗಳೂರನ್ನು ಬೆಳೆಸುವಲ್ಲಿ ಉತ್ತರ ಕರ್ನಾಟಕದ ಈ ಮಂದಿಯ ಶ್ರಮ, ತ್ಯಾಗ ಮಹತ್ತರವಾದುದು. 'ನಮ್ಮವರಿಗೆ' ಶಾಶ್ವತ ನೆಲೆ ಕಲ್ಪಿಸಲು ಸರ್ಕಾರ ಮುಂದಾಗಬೇಕು ಎಂದು ಕೋರಿಕೊಳ್ಳುತ್ತೇನೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

ಕೇರಳಿಗರ ವಿರುದ್ಧ ಹೇಳಿಕೆ ನೀಡಿಲ್ಲ: ಡಿಕೆಶಿ

'ಕೇರಳ ಮುಖ್ಯಮಂತ್ರಿ, ಕೇರಳ ಸರ್ಕಾರ ಕರ್ನಾಟಕದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದು ಎಂದಿದ್ದೇನೆ. ಕೇರಳಿಗರ ವಿರುದ್ಧ ಮಾತನಾಡಿಲ್ಲ. ಬಿಜೆಪಿ ನಾಯಕ ರಾಜೀವ್ ಚಂದ್ರಶೇಖರ್ ಅವರು ನನ್ನ ಹೇಳಿಕೆ ತಿರುಚಿ ಜನರ ದಾರಿ ತಪ್ಪಿಸುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ನಮಗೆ ಕೇರಳಿಗರ ಅಗತ್ಯವಿಲ್ಲ ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ' ಎಂಬ ಆರೋಪದ ಕುರಿತು ಪ್ರತಿಕ್ರಿಯಿಸಿದ ಅವರು, 'ಕೇರಳದ ಜನರು ಹಾಗೂ ನನ್ನ ನಡುವೆ ಉತ್ತಮ ಬಾಂಧವ್ಯವಿದೆ. ಅವರು ನನ್ನನ್ನು ಬಹಳ ಪ್ರೀತಿಸುತ್ತಾರೆ. ನನಗೂ ಅವರ ಮೇಲೆ ಗೌರವವಿದೆ' ಎಂದರು.

'ಕೇರಳ ಚುನಾವಣೆ ಪ್ರಚಾರಕ್ಕೆ ಹೋಗುತ್ತೇನೆ. ಅಲ್ಲಿ ಕಾಂಗ್ರೆಸ್ ಸರ್ಕಾರ ಬರುವುದು ನಿಶ್ಚಿತ. ಹಾಗಾಗಿ, ಬಿಜೆಪಿ ಗೊಂದಲ ಸೃಷ್ಟಿಸಲು ಮುಂದಾಗಿದೆ. ಎರಡೂ ರಾಜ್ಯಗಳ ಜನರ ಬಾಂಧವ್ಯಕ್ಕೆ ಹುಳಿ ಹಿಂಡುತ್ತಿದ್ದಾರೆ' ಎಂದು ದೂರಿದರು.

'ಕೋಗಿಲು ಒತ್ತುವರಿ ತೆರವು ವಿಚಾರದಲ್ಲಿ ಸರ್ಕಾರ ಮುಸ್ಲಿಮರ ಓಲೈಕೆ ಮಾಡುತ್ತಿಲ್ಲ. ಪಾಕಿಸ್ತಾನ ವಿದೇಶಾಂಗ ಸಚಿವರು ಕರ್ನಾಟಕದ ಬಗ್ಗೆ ಮಾತನಾಡಿದ್ದರೆ ಅದಕ್ಕೆ ದೇಶದ ನಾಯಕರು ತಕ್ಕ ಉತ್ತರ ಕೊಡುತ್ತಾರೆ' ಎಂದರು.

'ಅಕ್ರಮ ವಲಸಿಗರಿಗೆ ಕಾಂಗ್ರೆಸ್‌ನಿಂದ ವಸತಿ'

'ಬಾಂಗ್ಲಾದೇಶದಿಂದ ಅಕ್ರಮವಾಗಿ ವಲಸೆ ಬಂದಿದ್ದ ಮುಸ್ಲಿಮರಿಗೆ ಕಾಂಗ್ರೆಸ್ ನಾಯಕರೇ ಕೋಗಿಲು ಗ್ರಾಮದಲ್ಲಿ ಮನೆ ಮಾಡಿಕೊಟ್ಟಿದ್ದರು. ಈಗ ರಾಜ್ಯ ಸರ್ಕಾರವೇ ಮನೆ ನಿರ್ಮಿಸಿಕೊಡಲು ಮುಂದಾಗಿದೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕೋಗಿಲು ಗ್ರಾಮದ ಈ 15 ಎಕರೆ ಜಮೀನಿನ ತುಂಬಾ ಕಲ್ಲು ಬಂಡೆಯಿತ್ತು. ಅಲ್ಲಿ ಕ್ವಾರಿ ನಡೆದಿದ್ದು, 2023ರವರೆಗೆ ಜನವಸತಿ ಇರಲಿಲ್ಲ. ಆದರೆ ಈಚಿನ ಆರು ತಿಂಗಳಲ್ಲಿ ಆ ಜಾಗದಲ್ಲಿ ಮನೆ–ಗುಡಿಸಲುಗಳನ್ನು ನಿರ್ಮಿಸಲಾಗಿದೆ. ಈ ಎಲ್ಲ ವಿವರ ಗೂಗಲ್ ಅರ್ಥ್‌ನ ನಕ್ಷೆಗಳಲ್ಲಿ ದಾಖಲಾಗಿದೆ' ಎಂದು ನಕ್ಷೆಗಳನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದರು.

'ಕಾಂಗ್ರೆಸ್‌ನ ಸ್ಥಳೀಯ ಮುಖಂಡನೊಬ್ಬ ಪ್ರತಿ ಕುಟುಂಬದಿಂದ ₹4 ಲಕ್ಷದಿಂದ ₹5 ಲಕ್ಷ ಪಡೆದುಕೊಂಡು, ಮನೆ ನಿರ್ಮಿಸಲು ಅವಕಾಶ ಮಾಡಿಕೊಟ್ಟಿದ್ದಾನೆ. ಈ ಎಲ್ಲ ಮಾಹಿತಿ ಸರ್ಕಾರಕ್ಕೆ ಇದೆ. ಕಾಂಗ್ರೆಸ್ ಮುಖಂಡ ಮಾಡಿದ ಅಕ್ರಮಕ್ಕೆ, ಸರ್ಕಾರವು ರಾಜ್ಯದ ಜನರ ತೆರಿಗೆ ಹಣದಿಂದ ಪರಿಹಾರ ಒದಗಿಸಲು ಮುಂದಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕೋಗಿಲು ಗ್ರಾಮದ ಈ ಪ್ರದೇಶದಲ್ಲಿ ಇರುವ ಎಲ್ಲರ ಬಳಿಯೂ ಆಧಾರ್ ಕಾರ್ಡ್‌ಗಳು ಇವೆ. ಅವನ್ನು ಹೇಗೆ ಪಡೆದುಕೊಂಡರು, ದೇಶದ ಯಾವ ಭಾಗದಿಂದ ಅವರು ಬಂದರು ಎಂಬುದನ್ನು ಪರಿಶೀಲಿಸುವ ಗೋಜಿಗೆ ಹೋಗದೆ ಸರ್ಕಾರವು ಮನೆ ನಿರ್ಮಿಸಿಕೊಡಲು ಮುಂದಾಗಿದೆ. ಇದರಿಂದ ಭೂಮಾಫಿಯಾಕ್ಕೆ ಉತ್ತೇಜನ ದೊರೆಯಲಿದೆ. ಮಾದಕ ವಸ್ತು ಹಾವಳಿ ಹೆಚ್ಚಾಗಲಿದೆ. ಅಕ್ರಮ ವಲಸಿಗರ ಸಮಸ್ಯೆ ತಲೆದೋರಲಿದೆ' ಎಂದರು.

'ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿಗಾಗಿ ನಿಗದಿ ಮಾಡಲಾದ ಜಾಗದ ಒತ್ತುವರಿ ತೆರವು ಕಾರ್ಯಾಚರಣೆಗೆ ಒಂದೆಡೆ ಕೇರಳ ಮುಖ್ಯಮಂತ್ರಿ ಆಕ್ಷೇಪ ವ್ಯಕ್ತಪಡಿಸುತ್ತಿದ್ದರೆ, ಮತ್ತೊಂದೆಡೆ ಪಾಕಿಸ್ತಾನ ಕಳವಳ ವ್ಯಕ್ತಪಡಿಸುತ್ತಿದೆ. ಕಾಂಗ್ರೆಸ್ ಸರ್ಕಾರದ ಈ ಕ್ರಮ ಓಲೈಕೆ ರಾಜಕಾರಣವಲ್ಲದೆ ಮತ್ತೇನು' ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ 37 ಲಕ್ಷ ಮಂದಿ ವಸತಿರಹಿತರಿದ್ದಾರೆ. ಅವರಿಗೆ ಮನೆ ನೀಡುವುದನ್ನು ಬಿಟ್ಟು, ಅಕ್ರಮ ವಲಸಿಗರಿಗೆ ಸರ್ಕಾರ ವಸತಿ ಕಲ್ಪಿಸಲು ಹೊರಟಿದೆ
ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಬೆಂಗಳೂರಿನ ಬೈಯಪ್ಪನಹಳ್ಳಿಯಲ್ಲಿ ಕನ್ನಡಿಗರಿಗೆ ಹಸ್ತಾಂತರಿಸಲು ನಿರ್ಮಿಸಿದ ಮನೆಗಳನ್ನು ಕೇರಳದ ಅಕ್ರಮ ವಲಸಿಗರಿಗೆ ನೀಡಿ, ರಾಜಕೀಯ ಲಾಭಕ್ಕೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮುಂದಾಗಿದ್ದಾರೆ. ಇದಕ್ಕೆ ಅವಕಾಶ ಕೊಡಲ್ಲ
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಚಿಟಿಕೆ ಸುದ್ದಿ

ಶಾಸಕ ವೀರೇಂದ್ರಗೆ ಜಾಮೀನು

ಬೆಂಗಳೂರು: ಹಣ ಅಕ್ರಮ ವರ್ಗಾವಣೆ ಆರೋಪದಡಿ ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿರುವ ಕ್ರಿಮಿನಲ್ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ ಅವರಿಗೆ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ವೀರೇಂದ್ರ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಪುರಸ್ಕರಿಸಿ ಮಂಗಳವಾರ ಆದೇಶಿಸಿದ್ದಾರೆ.

ಶಿಕ್ಷಕರು, ಪದವೀಧರರ ಕ್ಷೇತ್ರ: 'ಕೈ' ಪಟ್ಟಿ ಪ್ರಕಟ

ಬೆಂಗಳೂರು: ವಿಧಾನಪರಿಷತ್‌ನ ಶಿಕ್ಷಕರು ಹಾಗೂ ಪದವೀಧರರ ಕ್ಷೇತ್ರಗಳಿಗೆ 2026ರ ನವೆಂಬರ್‌ನಲ್ಲಿ ನಡೆಯುವ ಚುನಾವಣೆಗೆ ಸ್ಪರ್ಧಿಸುವ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಕಾಂಗ್ರೆಸ್ ಬಿಡುಗಡೆ ಮಾಡಿದೆ.

ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ವಿಧಾನಪರಿಷತ್‌ನ ಹಾಲಿ ಸದಸ್ಯ ಪುಟ್ಟಣ್ಣ ಅವರನ್ನೇ ಕಣಕ್ಕೆ ಇಳಿಸಲಾಗುತ್ತಿದೆ. ಪಶ್ಚಿಮ ಪದವೀಧರರ ಕ್ಷೇತ್ರಕ್ಕೆ ಮೋಹನ್ ಲಿಂಬಿಕಾಯಿ, ಆಗ್ನೇಯ ಪದವೀಧರರ ಕ್ಷೇತ್ರಕ್ಕೆ ಶಶಿ ಹುಲಿಕುಂಟೆ ಮಠ್, ಈಶಾನ್ಯ ಶಿಕ್ಷಕರ ಕ್ಷೇತ್ರಕ್ಕೆ ಶರಣಪ್ಪ ಮತ್ತೂರು ಅವರನ್ನು ಆಯ್ಕೆ ಮಾಡಲಾಗಿದೆ.

ಪೂರ್ಣಗೊಳ್ಳದ ವಸತಿ ಸಮುಚ್ಚಯ

ಒಂದನೇ ಪುಟದಿಂದ...

'ಸಂತ್ರಸ್ತ ಕುಟುಂಬಗಳಿಗೆ 'ಇ' ಮತ್ತು 'ಎಫ್' ಬ್ಲಾಕ್‌ಗಳಲ್ಲಿ ಫ್ಲ್ಯಾಟ್‌ಗಳನ್ನು ನೀಡಲಾಗುತ್ತದೆ. 'ಇ' ಬ್ಲಾಕ್‌ನ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿದ್ದು, 'ಎಫ್' ಬ್ಲಾಕ್‌ನಲ್ಲಿ ಲಿಫ್ಟ್‌ಗಳ ಅಳವಡಿಕೆ ಸೇರಿದಂತೆ ಕೆಲವೊಂದು ಕೆಲಸಗಳು ಬಾಕಿ ಇವೆ. ಮನೆಗಳ ಹಂಚಿಕೆ ಪ್ರಕ್ರಿಯೆಗೆ ಸರ್ಕಾರ ಮುಂದಾದರೆ, ವಾರದೊಳಗೆ ಕಾಮಗಾರಿ ಪೂರ್ಣಗೊಳಿಸಬಹುದು' ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ವಸತಿ ಸಮುಚ್ಚಯಕ್ಕೆ ಹೋಗುವ ಮಾರ್ಗದ ರಸ್ತೆ ಹದಗೆಟ್ಟಿರುವ ಕಾರಣ ಸಂಚಾರಕ್ಕೆ ತೊಂದರೆಯಾಗಿದೆ. ಮರಳು, ಸಿಮೆಂಟ್ ವಾಹನಗಳು ಹೆಚ್ಚಾಗಿ ಸಂಚರಿಸುತ್ತಿರುವುದರಿಂದ ಕನಿಷ್ಠ ಎರಡು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ದೂಳು ಆವರಿಸಿಕೊಳ್ಳುತ್ತದೆ. ಮಿಟ್ಟಗಾನಹಳ್ಳಿ ಕಸ ವಿಲೇವಾರಿ ಕೇಂದ್ರ ಸಮೀಪವಿರುವುದೂ ಆತಂಕಕ್ಕೆ ಕಾರಣವಾಗಿದೆ. ಅಲ್ಲದೇ ಹತ್ತಿರದ ಬಸ್ ನಿಲ್ದಾಣ ಕನಿಷ್ಠ ಐದು ಕಿಲೋ ಮೀಟರ್ ದೂರದಲ್ಲಿರುವುದರಿಂದ ಸಂಚಾರಕ್ಕೆ ಕಷ್ಟವಾಗಲಿದೆ.

ಈ ವಸತಿ ಸಮುಚ್ಚಯದಲ್ಲಿ ಒಟ್ಟು ಆರು ಬ್ಲಾಕ್‌ಗಳಿದ್ದು, 585 ಚದರ ಅಡಿ ವಿಸ್ತೀರ್ಣ ಹೊಂದಿರುವ 1,187 (ಒಂದು ಬಿಎಚ್‌ಕೆ) ಫ್ಲ್ಯಾಟ್‌ಗಳಿವೆ. ಈ ಪೈಕಿ 579 ಫ್ಲ್ಯಾಟ್‌ಗಳಿಗೆ ಗ್ರಾಹಕರು ಪ್ರಾರಂಭಿಕ ಹಣ ನೀಡಿ ಕಾಯ್ದಿರಿಸಿದ್ದಾರೆ.

'ವಾಸವಿದ್ದ ಮನೆಗಳನ್ನು ಕೆಡವಿದ ಬಳಿಕ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಿಲ್ಲ. ಹಾಗಾಗಿ ಇನ್ನೂ ಎರಡು ತಿಂಗಳು ಕಾಯುವುದು ಅಸಾಧ್ಯ. ಸಂಬಂಧಿಕರ ಮನೆಯಲ್ಲಿ ವಾಸಿಸುತ್ತಿದ್ದು, ಹೆಚ್ಚಿನ ದಿನ ಇರುವುದು ಕಷ್ಟ. ಮಲಗಲು ಸಹ ಸರಿಯಾದ ಜಾಗವಿಲ್ಲ. ಸಾಧ್ಯವಾದಷ್ಟು ಬೇಗ ಸರ್ಕಾರ ಮನೆಗಳನ್ನು ಹಂಚಿಕೆ ಮಾಡಬೇಕು' ಎಂದು ಸಂತ್ರಸ್ತೆ ಜಬೀನಾ ಹೇಳಿದರು.

ಧನಸಹಾಯ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಧನಸಹಾಯ' ಯೋಜನೆಯಡಿ ಅರ್ಜಿ ಸಲ್ಲಿಕೆ ಅವಧಿಯನ್ನು 2026ರ ಜ.9ರವರೆಗೆ ವಿಸ್ತರಿಸಿದೆ.

ಅರ್ಹ ಸಾಂಸ್ಕೃತಿಕ ಸಂಘ– ಸಂಸ್ಥೆಗಳಿಗೆ ಈ ಯೋಜನೆಯಡಿ ಆರ್ಥಿಕ ನೆರವು ಒದಗಿಸಲಾಗುತ್ತದೆ. 2025–26ನೇ ಸಾಲಿಗೆ ಯೋಜನೆಯಡಿ ಆರ್ಥಿಕ ನೆರವಿಗೆ ಸಂಬಂಧಿಸಿದಂತೆ ಡಿ.1ರಿಂದ ಡಿ.30ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ತಾಂತ್ರಿಕ ಕಾರಣದಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗದವರು, ಅವಧಿ ವಿಸ್ತರಿಸಲು ಇಲಾಖೆಗೆ ಆಗ್ರಹಿಸಿದ್ದರು.

ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಎಂದು ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪ್ರಜಾವಾಣಿ' ಸಹಯೋಗದಲ್ಲಿ 'ಮಾಧ್ಯಮದಲ್ಲಿ ಕನಕಪ್ರಜ್ಞೆ' ವಿಚಾರ ಸಂಕಿರಣದಲ್ಲಿ ಪುರುಷೋತ್ತಮ ಬಿಳಿಮಲೆ

'ಪ್ರಭುತ್ವದ ಮೌಲ್ಯ ವಿವೇಚನೆಯೇ ಕನಕಪ್ರಜ್ಞೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮಾಧ್ಯಮಗಳು ಪ್ರಭುತ್ವದ ಭಾಷೆಯನ್ನೇ ತಮ್ಮ ಭಾಷೆ ಎಂದುಕೊಂಡಿದ್ದು, ಅವುಗಳಿಗೆ ಕನಕಪ್ರಜ್ಞೆ ಅಗತ್ಯ. ಮಾಧ್ಯಮಗಳು ಪ್ರಭುತ್ವದ ಮೌಲ್ಯವಿವೇಚನೆ, ವಿಮರ್ಶೆಯ ಭಾಷೆಯನ್ನು ರೂಢಿಸಿಕೊಳ್ಳಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಪ್ರತಿಪಾದಿಸಿದರು.

ನಗರದಲ್ಲಿ 'ಪ್ರಜಾವಾಣಿ'ಯು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ 'ಮಾಧ್ಯಮದಲ್ಲಿ ಕನಕಪ್ರಜ್ಞೆ' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, 'ಪರಂಪರೆಯನ್ನು ಗೌರವಿಸುತ್ತಲೇ ಅದರಿಂದ ಸಿಡಿದ ಕನಕದಾಸರು, ತಮ್ಮತನವನ್ನು ಪ್ರತ್ಯೇಕವಾಗಿ ಬೆಳೆಸಿಕೊಂಡ ಗುಣವೇ ಕನಕಪ್ರಜ್ಞೆಯಾಗಿದೆ' ಎಂದರು.

'ಪ್ರಭುತ್ವವು ನಮ್ಮ ಮಿದುಳು, ಭಾಷೆ, ಚಿಂತನಾಕ್ರಮವನ್ನೇ ಆಕ್ರಮಿಸಿಕೊಳ್ಳುತ್ತದೆ. ಅದರ ಭಾಷೆಯಲ್ಲೇ ಮಾತನಾಡುವುದನ್ನು ಕೆಲವರು ಕರಗತ ಮಾಡಿಕೊಂಡಿದ್ದಾರೆ. ಅದನ್ನು ಪ್ರಭುತ್ವವೂ ಸಂಭ್ರಮಿಸುತ್ತದೆ. ಪ್ರಶಸ್ತಿಯನ್ನೂ ನೀಡಿ ಗೌರವಿಸುತ್ತವೆ. ಆದರೆ, ಕನಕಪ್ರಜ್ಞೆ ಇದಕ್ಕೆ ಹೊರತು' ಎಂದರು.

'ರಾಮಾಯಣ, ಮಹಾಭಾರತಗಳ ಕಾವ್ಯ ಚೌಕಟ್ಟು ಮೀರಿ ನೈಷಧೀಯ ಚರಿತ್ರೆ ಬರೆದ ಶ್ರೀಹರ್ಷನಂತೆ ಕನಕದಾಸರು ನಳಚರಿತ್ರೆ, ರಾಮಧಾನ್ಯ ಚರಿತೆ ಬರೆದರು. ಕುವೆಂಪು ಭಾರತದ ಸಾರ್ವಭೌಮತೆಗೆ ಗೌರವ ತೋರುತ್ತ ಕರ್ನಾಟಕವನ್ನೇ ಕಾವ್ಯವಾಗಿಸಿದರು. ಪ್ರಭುತ್ವದಿಂದ ಸಿಡಿದು ಭಿನ್ನವಾಗಿ ಮಾತನಾಡಿದರೆ ಕನಕಪ್ರಜ್ಞೆ ಕಾಣುತ್ತದೆ' ಎಂದರು.

'1875ರಲ್ಲಿ ದೇಶದಲ್ಲಿದ್ದ 374 ಪತ್ರಿಕೆಗಳ ಪೈಕಿ, ಸ್ಥಳೀಯ ಭಾಷೆಯ 70 ಪತ್ರಿಕೆಗಳನ್ನು ಬ್ರಿಟಿಷರು ನಿಷೇಧಿಸಿದ್ದರು. ಈಗಲೂ ರಾಷ್ಟ್ರವಾದಿ ಪತ್ರಕರ್ತರನ್ನು ಪ್ರಭುತ್ವವು ತಮ್ಮವನೆಂದುಕೊಳ್ಳುತ್ತದೆ. ಮಾಧ್ಯಮಗಳು ಕನಕಪ್ರಜ್ಞೆ ಮೈಗೂಡಿಸಿಕೊಂಡರೆ ಪತ್ರಿಕೆಯ ಪ್ರಸರಣ, ವೀಕ್ಷಣೆಗಳು ಕಡಿಮೆಯಾಗುತ್ತವೆ. ದೇಶದ್ರೋಹಿ ಪಾಕಿಸ್ತಾನಕ್ಕೆ ಹೋಗೆಂದು ವೀಸಾ ಕೊಡುವವರು ಹೆಚ್ಚಾಗುತ್ತಾರೆ. ಆದರೂ, ಕನಕಪ್ರಜ್ಞೆಯನ್ನು ವಿಸ್ತರಿಸಿಕೊಂಡು ಓದುಗ ವರ್ಗವನ್ನು ಸೃಷ್ಟಿಸಿಕೊಳ್ಳಬೇಕು' ಎಂದರು.

ವಿಚಾರ ಸಂಕಿರಣವನ್ನು ಉದ್ಘಾಟಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ ಮಾತನಾಡಿದರು. ವಿ.ಎನ್‌.ಮಲ್ಲಿಕಾರ್ಜುನಸ್ವಾಮಿ, ಕೆ.ದೀಪಕ್, ಕಾ.ತ.ಚಿಕ್ಕಣ್ಣ, ರವೀಂದ್ರ ಭಟ್ಟ, ಪ್ರೊ.ಎನ್‌.ಮಮತಾ, ಕೆ.ನರಸಿಂಹಮೂರ್ತಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಕವಿ, ದಾಸ, ಸಂತ, ಅನುಭಾವಿ, ಸಮಾಜ ವಿಜ್ಞಾನಿಯಾಗಿ ಕನಕದಾಸ ಕಾಣುತ್ತಾರೆ. ಕನಕನ ಕಿಂಡಿ ಎಂಬುದು ಬಹುತ್ವದ ನೆಲೆ
ಕಾ.ತ.ಚಿಕ್ಕಣ್ಣ, ಅಧ್ಯಕ್ಷ, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ

'ಮಾಧ್ಯಮಗಳಿಗೆ ಮಾದರಿ ಕನಕ'

'ಏಕವ್ಯಕ್ತಿ ಮಾಧ್ಯಮವಾಗಿದ್ದ ಕನಕದಾಸರು ಇಂದಿನ ಮಾಧ್ಯಮಗಳಿಗೆ ಮಾದರಿ. ವ್ಯವಸ್ಥೆಯನ್ನು ತಿದ್ದಲು ಪ್ರತಿಭಟಿಸುವ, ಪ್ರಶ್ನಿಸುವ ಸಾಮಾಜಿಕ ಹೊಣೆಗಾರಿಕೆಯನ್ನು ಮಾಧ್ಯಮಗಳು ಪ್ರದರ್ಶಿಸಬೇಕು' ಎಂದು ಚಿಂತಕ ಎ.ನಾರಾಯಣ ಹೇಳಿದರು.

'ಧರ್ಮ, ಭಕ್ತಿ, ಅನುಭಾವ' ಕುರಿತು ವಿಷಯ ಮಂಡಿಸಿ, 'ಎಲ್ಲೆಲ್ಲೂ ದೇವರಿದ್ದಾನೆ ಎನ್ನುತ್ತಾ ಉಡುಪಿಗೆ ಹೋಗಿ, ನನಗೇಕೆ ಪ್ರವೇಶವಿಲ್ಲವೆಂದರು. 'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ' ಎನ್ನುತ್ತಾ ಪ್ರತಿಭಟಿಸಿದರು. ವ್ಯವಸ್ಥೆಯೊಳಗಿದ್ದುಕೊಂಡೇ ತಾರತಮ್ಯ ಪ್ರಶ್ನಿಸಿದರು' ಎಂದರು.

'ಪ್ರತಿಕ್ರಾಂತಿಯ ಭಾಗ'

'ದೇಶದ ಇತಿಹಾಸ ಕ್ರಾಂತಿ–ಪ್ರತಿಕ್ರಾಂತಿಯಿಂದ ಕೂಡಿದೆ. ಕನಕದಾಸರು ಪ್ರತಿಕ್ರಾಂತಿಯ ಭಾಗ. ಬುದ್ಧ, ಬಸವಾದಿ ವಚನಕಾರರ ಪ್ರಜ್ಞೆಯ ಮುಂದುವರಿಕೆಯೇ ಕನಕಪ್ರಜ್ಞೆಯಾಗಿದೆ' ಎಂದು ಪತ್ರಕರ್ತ ಡಿ.ಉಮಾಪತಿ ವಿಶ್ಲೇಷಿಸಿದರು.

'ವರ್ತಮಾನದ ತವಕ, ತಲ್ಲಣಗಳು: ಕನಕದಾಸರು ಮತ್ತು ಮಾಧ್ಯಮ' ವಿಷಯ ಮಂಡಿಸಿ, '19–20ನೇ ಶತಮಾನದಲ್ಲೂ ಕನಕ ಮಾದರಿಯ ಪ್ರತಿಭಟನೆ ದೇಶದಲ್ಲಿ ನಡೆದಿದೆ. ರಾಮನಾಮಿಗಳು ರಾಮನಾಮವನ್ನು ಮೈಮೇಲೆ ಬರೆದುಕೊಂಡರು. ಅದನ್ನು ಮೇಲ್ವರ್ಗದವರು ಸುಟ್ಟು, ನ್ಯಾಯಾಲಯದ ಮೆಟ್ಟಿಲೇರಿದ್ದರು' ಎಂದು ಸ್ಮರಿಸಿದರು.

ಸಮಾನತೆ, ಸೌಹಾರ್ದ, ಸೋದರತ್ವ ಕುರಿತು ಸಂಶೋಧಕಿ ಸಿ.ಎಸ್.ಪೂರ್ಣಿಮ ವಿಷಯ ಮಂಡಿಸಿದರು.

'ನಾಯಕತ್ವ: ಬಜೆಟ್ ಸಭೆ ಒಳಗೆ ನಿರ್ಧಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿನ ನಾಯಕತ್ವ ಗೊಂದಲ ಕುರಿತು ಬಜೆಟ್ ಪೂರ್ವಭಾವಿ ಸಭೆ ಆರಂಭಕ್ಕೂ ಮೊದಲೇ ಹೈಕಮಾಂಡ್ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ರಾಜ್ಯ ಕಾಂಗ್ರೆಸ್‌ನ ಗೊಂದಲಗಳ ಕುರಿತು ಹೈಕಮಾಂಡ್‌ಗೆ ಮಾಹಿತಿ ಇದೆ. ವಿವಿಧ ಮೂಲಗಳಿಂದ ಮಾಹಿತಿ ಪಡೆದಿರುತ್ತಾರೆ. ಸೂಕ್ತ ಸಮಯದಲ್ಲಿ, ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತಾರೆ. ಫೆಬ್ರುವರಿಯಲ್ಲಿ ಬಜೆಟ್ ಪೂರ್ವಭಾವಿ ಸಭೆಗಳು ಆರಂಭವಾಗುತ್ತವೆ. ಅಷ್ಟರ ಒಳಗೆ ಸ್ಪಷ್ಟ ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ' ಎಂದರು.

'ದಲಿತರಿಗೆ ಮುಖ್ಯಮಂತ್ರಿ ಸ್ಥಾನ ಕೊಡಬೇಕು. ಹಿರಿಯರಾದ ಪರಮೇಶ್ವರ ಅವರಿಗೆ ಆ ಸ್ಥಾನ ಸಿಗಬೇಕು ಎಂದು ಹಲವರು ಹೇಳುತ್ತಿದ್ದಾರಲ್ಲ' ಎಂಬ ಪ್ರಶ್ನೆಗೆ 'ಅವರ ಅಭಿಮಾನ, ಪ್ರೀತಿಗೆ ಹಾಗೆ ಹೇಳುತ್ತಾರೆ. ಹೇಳಬೇಡಿ ಎನ್ನಲು ಆಗುತ್ತದೆಯೇ' ಎಂದು ಮರು ಪ್ರಶ್ನಿಸಿದರು.

'ಇಬ್ಬರೂ ತಮ್ಮಂದಿರು'

ಕಾಂಗ್ರೆಸ್‌ನ ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಮಾತನಾಡಿ, 'ವಿಧಾನಸಭೆಗೆ 9 ಬಾರಿ ಆಯ್ಕೆಯಾಗಿರುವ ನಾನೇ ಹಿರಿಯ ಶಾಸಕ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರೂ ತಮ್ಮಂದಿರಿದ್ದಂತೆ. ಮುಖ್ಯಮಂತ್ರಿ ಬದಲಾವಣೆ, ಖಾತೆ ಹಂಚಿಕೆ ಕುರಿತು ಹೇಳುವುದೂ ಇಲ್ಲ, ಪ್ರತಿಕ್ರಿಯೆ ನೀಡುವುದೂ ಇಲ್ಲ' ಎಂದರು.

ನಿಧನ ವಾರ್ತೆ

ರಾಮಕುಮಾರ ಶಿಂಧೆ

ಧಾರವಾಡ: ಹುಬ್ಬಳ್ಳಿಯ ಗಾಯಕ ರಾಮಕುಮಾರ ಶಿಂಧೆ (83) ಬೆಂಗಳೂರಿನಲ್ಲಿ ಮಂಗಳವಾರ ನಿಧನರಾದರು.

ಧಾರವಾಡ ಜಿಲ್ಲೆಯ ಅಳ್ನಾವರ ಗ್ರಾಮದ ರಾಮಕುಮಾರ ಶಿಂಧೆ ಅವರು ಕೆಇಬಿಯಲ್ಲಿ ಲೆಕ್ಕಾಧಿಕಾರಿಯಾಗಿ ನಿವೃತ್ತರಾಗಿದ್ದರು. ಅಂತ್ಯಕ್ರಿಯೆ ಬುಧವಾರ ಬೆಳಿಗ್ಗೆ 11 ಗಂಟೆಗೆ ಹುಬ್ಬಳ್ಳಿಯ ಹೆಗ್ಗೇರಿ ರುದ್ರಭೂಮಿಯಲ್ಲಿ ನೆರವೇರಲಿದೆ.

ಹೆಗ್ಗೇರಿಯಲ್ಲಿ ನೆಲೆಸಿದ್ದ ರಾಮಕುಮಾರ ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ. ಕನ್ನಡ, ಹಿಂದಿ ಮತ್ತು ಮರಾಠಿ ಗೀತೆಗಳನ್ನು ಹಾಡುತ್ತಿದ್ದರು. ಬಸವಣ್ಣನವರ ವಚನಗಳನ್ನು ಹಿಂದಿಗೆ ಅನುವಾದಿಸಿ ದೇಶ–ವಿದೇಶಗಳಲ್ಲಿ ಪರಿಚಯಿಸಿದ್ದರು. 'ಅಂಬೇಡ್ಕರ್ ಪ್ರಶಸ್ತಿ', 'ಬಸವ ಪುರಸ್ಕಾರ', 'ದೆಹಲಿಯ ಕರ್ನಾಟಕ ಸಂಘದ ಪುರಸ್ಕಾರ ಸೇರಿ ಇತರ ಪ್ರಶಸ್ತಿಗಳು ಸಂದಿದ್ದವು.

ಎಂ.ಜೆ.ಕಮಲಾಕ್ಷಿ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರೂ ಆದ ಕಲಾವಿದೆ ಎಂ.ಜೆ. ಕಮಲಾಕ್ಷಿ (82) ನಿಧನರಾಗಿದ್ದಾರೆ.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಕ್ರೆಸೆಂಟ್ ರಸ್ತೆಯ ಮಲ್ಲಿಗೆ ಆಸ್ಪತ್ರೆಗೆ ದಾಖಲಾಗಿದ್ದ ಅವರು, ಮಂಗಳವಾರ ಮಧ್ಯಾಹ್ನ 1.30ರ ವೇಳೆಗೆ ಮೃತಪಟ್ಟಿದ್ದಾರೆ. ಮಲ್ಲೇಶ್ವರದಲ್ಲಿರುವ ಅವರ ನಿವಾಸದಲ್ಲಿ ಬುಧವಾರ ಬೆಳಿಗ್ಗೆ 8ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಬಳಿಕ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ.

ರಾಷ್ಟ್ರ ಮಟ್ಟದಲ್ಲಿ ಚಿತ್ರಕಲಾ ಪ್ರದರ್ಶನ ನೀಡಿದ್ದ ಅವರು, ಕರ್ನಾಟಕ ಚಿತ್ರಕಲಾ ಪರಿಷತ್ತಿನ ಪ್ರಾಂಶುಪಾಲರಾಗಿ, ಕಾರ್ಯಕಾರಿ ಸಮಿತಿ ಸದಸ್ಯೆಯಾಗಿ, ಖಜಾಂಚಿಯಾಗಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. ಕಲಾ ಕ್ಷೇತ್ರದ ಸಾಧನೆಗೆ ಅವರಿಗೆ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಗೌರವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ಜತೆಗೆ ವಿವಿಧ ಸಂಘ–ಸಂಸ್ಥೆಗಳ ಪ್ರಶಸ್ತಿಗಳು ಸಂದಿವೆ.

ಒಳನುಸುಳುವಿಕೆ: ಜಟಾಪಟಿ ಜೋರು

ದುಶ್ಯಾಸನ –ದುರ್ಯೋಧನ ಪ. ಬಂಗಾಳಕ್ಕೆ ಬಂದಿಳಿಯುತ್ತಾರೆ: ಮಮತಾ

ಕೋಲ್ಕತ್ತ(ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಗೆ ಕೆಲವೇ ತಿಂಗಳಲ್ಲಿ ಚುನಾವಣೆ ನಡೆಯಲಿದೆ. ಈ ನಡುವೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನಡುವೆ ಜಟಾಪಟಿ ಆರಂಭವಾಗಿದ್ದು, ಈಗಲೇ ಚುನಾವಣಾ ಕಾವು ಏರಿದಂತಾಗಿದೆ.

‘ಬಾಂಗ್ಲಾದೇಶದ ನುಸುಳುಕೋರರಿಗೆ ಮಮತಾ ಬ್ಯಾನರ್ಜಿ ಕುಮ್ಮಕ್ಕು ನೀಡುತ್ತಿದ್ದು, ಇದು ಪಶ್ಚಿಮ ಬಂಗಾಳದಲ್ಲಿ ಜನಸಂಖ್ಯೆಯ ಸಾಂದ್ರತೆಯನ್ನು ಅಪಾಯಕಾರಿ ಮಟ್ಟದಲ್ಲಿ ಬದಲಿಸಿದೆ’ ಎಂದು ಅಮಿತ್ ಶಾ ಆರೋಪಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿದ ಶಾ,‘ಏಪ್ರಿಲ್‌ನಲ್ಲಿ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ನುಸುಳುಕೋರರನ್ನು ದೇಶದಿಂದ ಹೊರಹಾಕುವುದೇ ಈ ಚುನಾವಣೆಯ ಮುಖ್ಯ ಕಾರ್ಯಸೂಚಿ’ ಎಂದು ಅಬ್ಬರಿಸಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ಮಮತಾ ಬ್ಯಾನರ್ಜಿ,‘ರಾಜ್ಯಕ್ಕೆ ಈ ದಿನ ದುಶ್ಯಾಸನ ಬಂದಿದ್ದಾನೆ. ಚುನಾವಣೆಗಳು ಘೋಷಣೆಯಾದಾಗಲೆಲ್ಲಾ, ಈ ದುಶ್ಯಾಸನ ಮತ್ತು ದುರ್ಯೋಧನ ರಾಜ್ಯಕ್ಕೆ ಬಂದಿಳಿಯುತ್ತಾರೆ’ ಎಂದು ಯಾರ ಹೆಸರನ್ನೂ ಪ್ರಸ್ತಾಪಿಸದೇ ಟೀಕಾಪ್ರಹಾರ ನಡೆಸಿದ್ದಾರೆ.

ಬಾಂಕುರಾ ಜಿಲ್ಲೆಯ ಬರ್ಜೋರಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಮಮತಾ ಬ್ಯಾನರ್ಜಿ, ‘ಜಮ್ಮು–ಕಾಶ್ಮೀರದಲ್ಲಿ ಉಗ್ರರ ದಾಳಿ ನಡೆಯಿತು, ದೆಹಲಿಯಲ್ಲಿ ಬಾಂಬ್ ಸ್ಫೋಟಗೊಂಡಿತು. ಆದಾಗ್ಯೂ ಯಾವಾಗಲೂ ಒಳನುಸುಳುವಿಕೆ ವಿಚಾರವಾಗಿ ಪದೇಪದೇ ರಾಜ್ಯವನ್ನೇ ಏಕೆ ದೂಷಿಸಲಾಗುತ್ತಿದೆ’ ಎಂದು ಕಿಡಿಕಾರಿದರು.

> ರಾಜ್ಯದಲ್ಲಿ ಕಮ್ಯುನಿಸ್ಟರು ಸೋತ ಬಳಿಕ ಹಿಂಸೆ ಮತ್ತು ಪ್ರತೀಕಾರದ ರಾಜಕೀಯ ನಿಲ್ಲುತ್ತದೆ ಎಂದು ನಂಬಲಾಗಿತ್ತು. ಆದರೆ, ಈ ವಿಚಾರದಲ್ಲಿ ಟಿಎಂಸಿ ಆಡಳಿತ ಕಮ್ಯುನಿಸ್ಟರನ್ನೂ ಮೀರಿಸಿದೆ
> **ಅಮಿತ್ ಶಾ**, ಕೇಂದ್ರ ಗೃಹ ಸಚಿವ

> ದೇಶದ ಗೃಹ ಸಚಿವರಾಗಿ ನಿಮ್ಮ ಸಾಧನೆ ಏನು? ನೀವು ಸಂಪೂರ್ಣ ವಿಫಲರಾಗಿದ್ದು, ಕೂಡಲೇ ನಿಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು
> **ಮಮತಾ ಬ್ಯಾನರ್ಜಿ**, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಅಮಿತ್ ಶಾ ಆರೋಪಗಳು


ಅಮಿತ್ ಶಾ

- ಒಳನುಸುಳುವಿಕೆ ಸಮಸ್ಯೆಯಿಂದ ಪಶ್ಚಿಮ ಬಂಗಾಳ ಜನರು ಆತಂಕಕ್ಕೆ ಒಳಗಾಗಿದ್ದಾರೆ. 2026ರಲ್ಲಿ ನಡೆಯುವ ಚುನಾವಣೆಯಲ್ಲಿ ಪ್ರಚಂಡ ಬಹುಮತ ಪಡೆದು ಅಧಿಕಾರಕ್ಕೇರುವ ಬಿಜೆಪಿ ಈ ಸಮಸ್ಯೆಗೆ ಅಂತ್ಯ ಹಾಡಲಿದೆ
- ಈ ಬಾರಿ ರಾಜ್ಯದ ಜನರು ಸರ್ಕಾರ ಬದಲಿಸಲು ದೃಢಸಂಕಲ್ಪ ಮಾಡಿದ್ದಾರೆ. 2026ರ ಏಪ್ರಿಲ್ 15ರಂದು ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ.
- ನುಸುಳುಕೋರರನ್ನು ತಡೆಯುವುದಕ್ಕಾಗಿ ರಾಜ್ಯದ ಗಡಿಗಳಲ್ಲಿ ಬಲಿಷ್ಠವಾದ ‘ರಾಷ್ಟ್ರೀಯ ಗ್ರಿಡ್’ ಸ್ಥಾಪಿಸಲಾಗುವುದು. ಮನುಷ್ಯರಲ್ಲ, ಪಕ್ಷಿಗಳು ಕೂಡ ಈ ಗ್ರಿಡ್‌ಗಳನ್ನು ದಾಟಿ ಬರಲು ಸಾಧ್ಯವಾಗುವುದಿಲ್ಲ
- ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ, ನುಸುಳುವಿಕೆಯನ್ನು ಮಾತ್ರ ತಡೆಯುವುದಷ್ಟೇ ಅಲ್ಲ. ದೇಶದಲ್ಲಿರುವ ಪ್ರತಿಯೊಬ್ಬ ನುಸುಳುಕೋರನನ್ನು ಗುರುತಿಸಿ, ಹೊರ ಹಾಕಲಾಗುವುದು
- ಪಶ್ಚಿಮ ಬಂಗಾಳ ಸರ್ಕಾರ ಅಗತ್ಯವಿರುವ ಭೂಮಿ ನೀಡದ ಕಾರಣ ಭಾರತ–ಬಾಂಗ್ಲಾದೇಶ ನಡುವೆ ಬೇಲಿ ಅಳವಡಿಸುವ ಕಾರ್ಯವನ್ನು ಪೂರ್ಣಗೊಳಿಸಲು ಕೇಂದ್ರ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ
- ಬಿಜೆಪಿ ಆಡಳಿತವಿರುವ ಅಸ್ಸಾಂ, ತ್ರಿಪುರಾ ಅಥವಾ ಪಶ್ಚಿಮದ ರಾಜ್ಯಗಳಾದ ರಾಜಸ್ಥಾನ, ಗುಜರಾತ್, ಪಂಜಾಬ್ ಮತ್ತು ಕಾಶ್ಮೀರಕ್ಕೆ ಹೋಲಿಸಿದರೆ ಪಶ್ಚಿಮ ಬಂಗಾಳದಲ್ಲಿ ನುಸುಳುವಿಕೆ ಸಮಸ್ಯೆ ಇಷ್ಟೊಂದು ತೀವ್ರವಾಗಿರುವುದು ಏಕೆ ಎಂಬ ಬಗ್ಗೆ ಮಮತಾ ಬ್ಯಾನರ್ಜಿ ಉತ್ತರಿಸಬೇಕು
- ಮತುವಾ ಸಮುದಾಯದವರು ಎಸ್‌ಐಆರ್ ಬಗ್ಗೆ ಭಯಪಡುವ ಅಗತ್ಯ ಇಲ್ಲ. ಧಾರ್ಮಿಕವಾಗಿ ಕಿರುಕುಳಕ್ಕೆ ಒಳಗಾಗಿರುವ ಎಲ್ಲ ನಿರಾಶ್ರಿತರಿಗೂ ದೇಶದಲ್ಲಿ ಆಶ್ರಯ ನೀಡಲಾಗುವುದು. ಮತುವಾ ಸಮುದಾಯಕ್ಕೆ ಮಮತಾ ಬ್ಯಾನರ್ಜಿ ಕೂಡ ತೊಂದರೆ ಕೊಡುವುದು ಸಾಧ್ಯವಿಲ್ಲ

ಮಮತಾ ಬ್ಯಾನರ್ಜಿ ತಿರುಗೇಟು

ಮಮತಾ ಬ್ಯಾನರ್ಜಿ

- ದೇಶದ ಹಲವೆಡೆ ವಿಧ್ವಂಸಕ ಕೃತ್ಯಗಳು ನಡೆಯುತ್ತಿವೆ. ಇದರ ನೈತಿಕ ಹೊಣೆ ಹೊತ್ತು ಅಮಿತ್ ಶಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು
- ಒಳನುಸುಳುವಿಕೆ ಸಮಸ್ಯೆ ಪಶ್ಚಿಮ ಬಂಗಾಳದಲ್ಲಿ ಮಾತ್ರ ಇದೆಯೇ? ಕಾಶ್ಮೀರದಲ್ಲಿ ಇದು ನಡೆಯುತ್ತಿಲ್ಲವೇ? ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಒಳನುಸುಳುವಿಕೆ ಅಲ್ಲವೇ?
- ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕಾರು ಸ್ಫೋಟಗೊಂಡಿತ್ತು. ಪಶ್ಚಿಮ ಬಂಗಾಳ ಹೊರತುಪಡಿಸಿ ಬೇರೆ ಕಡೆ ನುಸುಳುಕೋರರು ಇಲ್ಲವೇ? ಹಾಗಾದಲ್ಲಿ, ಈ ನೀವೇ ಕಾರನ್ನು ಸ್ಫೋಟಿಸಿದ್ದಾ?
- ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದಾಗಿ ಅಮಿತ್ ಶಾ ಹೇಳುತ್ತಿದ್ದಾರೆ. ಆದರೆ, ರಾಜ್ಯದ ಜನ ನಿಮ್ಮನ್ನು ತಿರಸ್ಕರಿಸುತ್ತಾರೆ. ಈ ಬಾರಿಯ ಚುನಾವಣೆ ಬಳಿಕ ನೀವು ಎಲ್ಲ ರಾಜ್ಯಗಳಲ್ಲಿಯೂ ಅಧಿಕಾರ ಕಳೆದುಕೊಳ್ಳುತ್ತೀರಿ
- ಅಂತರರಾಷ್ಟ್ರೀಯ ಗಡಿಯಲ್ಲಿ ಬೇಲಿ ಅಳವಡಿಸಲು ಟಿಎಂಸಿ ಸರ್ಕಾರ ಜಮೀನು ನೀಡುತ್ತಿಲ್ಲ ಎಂದು ಆರೋಪಿಸಲಾಗುತ್ತಿದೆ. ಜಮೀನು ನೀಡಿರದಿದ್ದಲ್ಲಿ ತಾರಕೇಶ್ವರ–ವಿಷ್ಣುಪುರ ರೈಲು ಮಾರ್ಗ ಪೂರ್ಣಗೊಳಿಸಿದ್ದು ಯಾರು? ಕಲ್ಲಿದ್ದಲು ಗಣಿಗಾರಿಕೆಗೆ ಇಸಿಎಲ್‌ಗೆ ಜಮೀನು ಎಲ್ಲಿಂದ ಬಂತು?
- ಬೋಂಗಾಂವ್ ಮತ್ತು ಪೆಟ್ರಾಪೋಲ್‌ನಲ್ಲಿ ಜಮೀನು ಕೊಟ್ಟಿದ್ದು ಯಾರು? ಘೋಜಾಡಾಂಗಾ ಮತ್ತು ಚಂಗ್ರಬಂಧಾದಲ್ಲಿ ಕೈಗೊಂಡ ಕಾಮಗಾರಿಗೆ ಜಮೀನು ಕೊಟ್ಟವರು ಯಾರು?

ಪಂಜಾಬ್: ಜಿ ರಾಮ್ ಜಿ ವಿರುದ್ಧ ನಿರ್ಣಯ ಅಂಗೀಕಾರ

ಚಂಡೀಗಢ (ಪಿಟಿಐ): ಪಂಜಾಬ್‌ನ ಆಮ್ ಆದ್ಮಿ ಪಕ್ಷ (ಎಎಪಿ) ನೇತೃತ್ವದ ಸರ್ಕಾರವು ‘ವಿಬಿ ಜಿ ರಾಮ್ ಜಿ’ ಕಾಯ್ದೆ ವಿರುದ್ಧ ವಿಧಾನಸಭೆಯಲ್ಲಿ ಮಂಗಳವಾರ ನಿರ್ಣಯ ಅಂಗೀಕ.

ಈ ಕುರಿತು ಮಾತನಾಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವ ತರುಣ್‌ಪ್ರೀತ್ ಸಿಂಗ್ ಸೊಂದ್,‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನರೇಗಾ ಯೋಜನೆಯನ್ನು ನಾಶ ಮಾಡಲು ಹೊರಟಿದೆ’ ಎಂದು ಟೀಕಿಸಿದರು.

ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಸೊಂದ್, ಹೊಸದಾಗಿ ರೂಪಿಸಿರುವ ‘ವಿಕಸಿತ ಭಾರತ– ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ–ಜಿ ರಾಮ್ ಜಿ)’ ಕಾಯ್ದೆಯಿಂದ ತೀವ್ರ ತೊಂದರೆಯಾಗಲಿದೆ’ ಎಂದು ಹೇಳಿದರು. ಎಎಪಿ ಶಾಸಕ ಕುಲದೀಪ್ ಸಿಂಗ್ ಧಲಿವಾಲ್, ‘ಈ ನೂತನ ಕಾಯ್ದೆ ಬಡವರ ವಿರೋಧಿಯಾಗಿದ್ದು, ಕೂಡಲೇ ಇದನ್ನು ಹಿಂಪಡೆಯಬೇಕು’ ಎಂದು ಆಗ್ರಹಿಸಿದರು.

ಬೇಡಿಕೆ ಹಾಗೂ ಹಕ್ಕುಗಳನ್ನು ಆಧರಿಸಿದ ಹಾಗೂ ಕೇಂದ್ರ ಸರ್ಕಾರವೇ ಯೋಜನೆಯ ವೆಚ್ಚವನ್ನು ಭರಿಸಬೇಕು. ರಾಜ್ಯಗಳ ಮೇಲೆ ವಿತ್ತೀಯ ಹೊರೆ ಹೊರಿಸುವ ಹಾಗೂ ಗ್ರಾಮೀಣ ಭಾಗದ ಕೂಲಿಕಾರ್ಮಿಕರ ಉದ್ಯೋಗದ ಹಕ್ಕನ್ನು ಕಸಿದುಕೊಳ್ಳುವಂತಹ ಅವಕಾಶಗಳನ್ನು ವಿಬಿ–ಜಿ ರಾಮ್ ಜಿ ಕಾಯ್ದೆ ಒಳಗೊಂಡಿದೆ. ಹೀಗಾಗಿ ಈ ಅವಕಾಶಗಳ ಕುರಿತು ಮರುಪರಿಶೀಲನೆ ನಡೆಸಬೇಕು ಎಂಬ ಒತ್ತಾಯಗಳನ್ನು ನಿರ್ಣಯ ಒಳಗೊಂಡಿದೆ.

ಅಸಾಂವಿಧಾನಿಕ ನಡೆ: ಚೌಹಾಣ್


ಶಿವರಾಜ್

ಭೋಪಾಲ್: ವಿಬಿ–ಜಿ ರಾಮ್ ಜಿ ಕಾಯ್ದೆ ವಿರುದ್ಧ ಪಂಜಾಬ್ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಿರುವುದು ಅಸಾಂವಿಧಾನಿಕ ನಡೆ ಎಂದು ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮಂಗಳವಾರ ಹೇಳಿದ್ದಾರೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಂಸತ್ ರೂಪಿಸಿದ ಕಾಯ್ದೆಗಳನ್ನು ಪಾಲನೆ ಮಾಡುವುದು ರಾಜ್ಯಗಳ ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ’ ಎಂದು ಹೇಳಿದರು.

ಅರೆ ಸೇನಾ ಪಡೆ ರಾಜೀನಾಮೆಗಳೇ ಅಧಿಕ

ನವದೆಹಲಿ: ಕಳೆದ 11 ವರ್ಷಗಳಿಂದ (2014–2025) ಕೇಂದ್ರೀಯ ಅರೆ ಸೇನಾ ಪಡೆಯ (ಸಿಎಪಿಎಫ್) ಒಟ್ಟು ಏಳು ವಿಭಾಗಗಳಲ್ಲಿ ರಾಜೀನಾಮೆ ನೀಡುತ್ತಿರುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಸಿಆರ್‌ಪಿಎಫ್ ಮತ್ತು ಬಿಎಸ್‌ಎಫ್‌ನಲ್ಲಿ ಈ ಸಂಖ್ಯೆ ಗಮನಾರ್ಹ ಏರಿಕೆ ಕಂಡಿದೆ. ಏಳು ವಿಭಾಗಗಳೂ ಸೇರಿ ಇಷ್ಟು ವರ್ಷಗಳಲ್ಲಿ 23,360 ಸಿಬ್ಬಂದಿ ರಾಜೀನಾಮೆ ನೀಡಿದ್ದಾರೆ. ಎನ್‌ಎಸ್‌ಜಿಯಲ್ಲಿ ಮಾತ್ರವೇ 11 ವರ್ಷಗಳಲ್ಲಿ ಒಬ್ಬ ಸಿಬ್ಬಂದಿಯೂ ರಾಜೀನಾಮೆ ನೀಡಿಲ್ಲ. ಆತ್ಮಹತ್ಯೆ ಪ್ರಕರಣಗಳು, ಸಹೋದ್ಯೋಗಿಗಳನ್ನು ಹತ್ಯೆ ಮಾಡುವುದರಲ್ಲಿಯೂ ಸಿಆರ್‌ಪಿಎಫ್ ಮತ್ತು ಬಿಎಸ್‌ಎಫ್ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಡಿಸೆಂಬರ್‌ನಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಟಿಎಂಸಿ ಸಂಸದ ಯೂಸುಫ್ ಪಠಾಣ್ ಅವರು ಕೇಳಿದ ಪ್ರಶ್ನೆಗೆ ಕೇಂದ್ರ ಗೃಹ ಸಚಿವಾಲಯವು ನೀಡಿದ ಲಿಖಿತ ಉತ್ತರದ ಮಾಹಿತಿ ಇಲ್ಲಿದೆ

ಸಹೋದ್ಯೋಗಿಗಳನ್ನೇ ಹತ್ಯೆ ಮಾಡುವ ಪ್ರಕರಣಗಳು ಹೆಚ್ಚಾಗುತ್ತಿವೆ. 2025ರಲ್ಲಿ ಇಂಥ 4 ಪ್ರಕರಣಗಳು ವರದಿಯಾಗಿವೆ. ಸಿಆರ್‌ಪಿಎಫ್‌ನಲ್ಲಿ ಇದೇ ವರ್ಷ ಇಂಥ 2 ಘಟನೆಗಳು ನಡೆದಿವೆ. ಉಳಿದಂತೆ, ಬಿಎಸ್‌ಎಫ್ ಮತ್ತು ಐಟಿಬಿಪಿಯಲ್ಲಿ ತಲಾ ಒಂದು ಪ್ರಕರಣ ವರದಿಯಾಗಿವೆ

2024ರಲ್ಲಿ ಅಧಿಕ ರಾಜೀನಾಮೆ





> ಮಾನಸಿಕ ಆರೋಗ್ಯದ ದೃಷ್ಟಿಯಿಂದ ಎಲ್ಲ ವಿಭಾಗಗಳ ಸಿಬ್ಬಂದಿಗೆ ಬೇಕಾದ ಎಲ್ಲ ಸಹಕಾರಗಳನ್ನು ನೀಡಲಾಗುತ್ತಿದೆ. ವಿಶೇಷ ಮಾನಸಿಕ ಒತ್ತಡ ನಿವಾರಣೆ ಸೇವೆಯನ್ನೂ ನೀಡಲಾಗುತ್ತಿದೆ. ಈ ಬಗ್ಗೆ ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು, ಯೋಗ, ಧ್ಯಾನದ ಶಿಬಿರಗಳನ್ನು ಆಯೋಜಿಸಲಾಗುತ್ತದೆ
> **ಗೃಹ ಸಚಿವಾಲಯ**

ಇಳಿಕೆ ಕಂಡ ಆತ್ಮಹತ್ಯೆ ಪ್ರಕರಣ



2023ರಿಂದ 2025ರವರೆಗೆ ಸಿಆರ್‌ಪಿಎಫ್ ನಲ್ಲಿಯೇ ಅತಿ ಹೆಚ್ಚು ಅಂದರೆ, 159 ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಬಿಎಸ್‌ಎಫ್‌ನಲ್ಲಿ 120 ಪ್ರಕರಣಗಳು ದಾಖಲಾಗಿವೆ. ಇದೇ ವರ್ಷಗಳಲ್ಲಿ ಎನ್‌ಎಸ್‌ಜಿಯಲ್ಲಿ ಇಂಥ 4 ಪ್ರಕರಣಗಳು ವರದಿಯಾಗಿವೆ

ಬಿಎಸ್‌ಎಫ್ ಸಿಬ್ಬಂದಿಯೇ ಅಧಿಕ



‘ಎ.ಐ ಬಳಸಿ ಎಸ್‌ಐಆರ್ ಹಗರಣ’

ನವದೆಹಲಿ (ಪಿಟಿಐ): ‘ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ದೊಡ್ಡ ಹಗರಣ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎ.ಐ) ಬಳಸಿಕೊಂಡು ಇದನ್ನು ಮಾಡಲಾಗುತ್ತಿದೆ’ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗಂಭೀರ ಆರೋಪ ಮಾಡಿದ್ದಾರೆ.

ಮಂಗಳವಾರ ಬಾಂಕುರಾ ಜಿಲ್ಲೆಯಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಎಸ್‌ಐಆರ್ ಹೆಸರಿನಲ್ಲಿ ಆಯೋಗವು ನೀಡುತ್ತಿರುವ ಕಿರುಕುಳಕ್ಕೆ ಮತದಾರರು ಬೇಸತ್ತು ಹೋಗಿದ್ದಾರೆ. ರಾಜ್ಯದ ಅರ್ಹ ಮತದಾರರಲ್ಲಿ ಒಬ್ಬ ವ್ಯಕ್ತಿಯ ಹೆಸರಾದರೂ ಮತದಾರರ ಪಟ್ಟಿಯಿಂದ ಕೈಬಿಟ್ಟು ಹೋದರೆ, ಟಿಎಂಸಿ ಕಾರ್ಯಕರ್ತರು ನವದೆಹಲಿಯಲ್ಲಿ ಚುನಾವಣಾ ಆಯುಕ್ತರ ಕಚೇರಿಗೆ ಘೇರಾವ್ ಹಾಕಲಿದ್ದಾರೆ’ ಎಂದು ಎಚ್ಚರಿಕೆ ನೀಡಿದರು.

ಸಿಇಸಿ ಭೇಟಿ ಇಂದು: ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ‘ಎಸ್‌ಐಆರ್’ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ದಾಖಲಿಸಲು ತೃಣಮೂಲ ಕಾಂಗ್ರೆಸ್ ನಿಯೋಗವು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಬುಧವಾರ ಭೇಟಿಯಾಗಲಿದೆ. ಟಿಎಂಸಿ ಮುಖಂಡ ಅಭಿಷೇಕ್ ಬ್ಯಾನರ್ಜಿ ನೇತೃತ್ವದ ನಿಯೋಗವು ಎಸ್‌ಐಆರ್ ಬಗ್ಗೆ, ಸಿಇಒ ಅವರೊಂದಿಗೆ ಚರ್ಚೆ ನಡೆಸಲಿದೆ.

ನಕಲಿ ಸಾಫ್ಟ್‌ವೇರ್: ಚುನಾವಣಾ ಆಯೋಗವು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮುಖ್ಯವಾಗಿ, ಸಾಫ್ಟ್‌ವೇರ್‌ನಲ್ಲಿ ಪದೇ ಪದೇ ಬದಲಾವಣೆ ಮಾಡುತ್ತಿರುವುದಕ್ಕೆ ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿದೆ. ನಕಲಿ ಮತದಾರರನ್ನು ಪತ್ತೆ ಹಚ್ಚಲು, ನಕಲಿ ತಂತ್ರಾಂಶವನ್ನು ಬಳಸಲಾಗುತ್ತಿದೆಯೇ ಎಂದು ಪ್ರಶ್ನಿಸಿದೆ.

‘ಚುನಾವಣಾ ಆಯೋಗವು ಪಾರದರ್ಶಕತೆ ಇಲ್ಲದೆ ವರ್ತಿಸುತ್ತಿದೆ. ಎಸ್‌ಐಆರ್ ಪ್ರಕ್ರಿಯೆಗಳು ಜನರಲ್ಲಿ ಗೊಂದಲ ಮೂಡಿಸುತ್ತಿದೆ’ ಎಂದು ಕಾಂಗ್ರೆಸ್‌ನ ವಾರ್ ರೂಂ ಮುಖ್ಯಸ್ಥ, ಸಂಸದ ಸಸಿಕಾಂತ್ ಸೆಂಥಿಲ್ ಆರೋಪಿಸಿದ್ದಾರೆ. ಬಿಹಾರದಲ್ಲಿ ‘ಎಸ್‌ಐಆರ್’ ವೇಳೆ ಅನುಸರಿಸಿದ್ದ ಮಾದರಿಯನ್ನು ಚುನಾವಣಾ ಆಯೋಗವು ಇತರೆ ರಾಜ್ಯಗಳಲ್ಲಿ ಬದಲಿಸಿದೆ ಎಂದು ಅವರು ದೂರಿದ್ದಾರೆ.

ಸಾಮಾಜಿಕ ಮಾಧ್ಯಮ: ಎಚ್ಚರಿಕೆ

ನವದೆಹಲಿ: ಅಶ್ಲೀಲ ಮತ್ತು ಕಾನೂನು ಬಾಹಿರ ಅಂಶಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಾಮಾಜಿಕ ಮಾಧ್ಯಮ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ಸೂಚಿಸಿದೆ.

‘ಕೆಲವು ಸಾಮಾಜಿಕ ಮಾಧ್ಯಮ ಸಂಸ್ಥೆಗಳು ಅಶ್ಲೀಲ, ಕಾನೂನುಬಾಹಿರ, ಅಸಮಂಜಸ ಅಂಶಗಳ ವಿರುದ್ಧ ಕಠಿಣ ಕ್ರಮ ಜರುಗಿಸದಿರುವುದನ್ನು ಸಚಿವಾಲಯವು ಗಮನಿಸಿದೆ. ಸಾಮಾಜಿಕ ಮಾಧ್ಯಮ ಸಂಸ್ಥೆಗಳು ಐಟಿ ಕಾಯ್ದೆ ಅಥವಾ ನಿಯಮಗಳು–2021ರ ನಿಬಂಧನೆಗೆ ಒಳಪಟ್ಟಿದ್ದು, ನಿಯಮಗಳ ಪಾಲನೆ ಕಡ್ಡಾಯ’ ಎಂದು ಅದು ಹೇಳಿದೆ.

3 ವರ್ಷಗಳಿಂದ ತಂದೆ–ಮಗಳನ್ನು ಕೂಡಿ ಹಾಕಿದ್ದ ಮನೆ ಕೆಲಸದವರು

ಪ್ರಜಾವಾಣಿ ವಾರ್ತೆ

ಲಖನೌ: ನಿವೃತ್ತ ರೈಲ್ವೆ ಉದ್ಯೋಗಿ ಮತ್ತು ಮಾನಸಿಕವಾಗಿ ಅಸ್ವಸ್ಥರಾಗಿದ್ದ ಅವರ ಮಗಳನ್ನು ಮನೆ ಕೆಲಸ ಮಾಡುವ ದಂಪತಿ ಮೂರು ವರ್ಷಗಳಿಂದ ಕೂಡಿ ಹಾಕಿ ಆಹಾರ ನೀಡದೆ ಕಿರುಕುಳ ನೀಡಿದ ಅಮಾನವೀಯ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.

ಉತ್ತರಪ್ರದೇಶದ ಮಹೋಬಾ ಜಿಲ್ಲೆಯಲ್ಲಿ ಈ ಘಟನೆ ನಡೆದಿದ್ದು, ನಿವೃತ್ತ ರೈಲ್ವೆ ಉದ್ಯೋಗಿ ಮೃತಪಟ್ಟಿದ್ದು, ಅವರ ಮಾನಸಿಕ ಅಸ್ವಸ್ಥ ಮಗಳು ತೀವ್ರ ಅನಾರೋಗ್ಯದಿಂದ ಅಸ್ಥಿಪಂಜರದಂತಾಗಿದ್ದಾರೆ. ಆಸ್ತಿ ದುರಾಸೆಗೆ ಈ ಕೃತ್ಯ ನಡೆಸಿರಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ಮೃತ ವ್ಯಕ್ತಿಯನ್ನು ಓಂ ಪ್ರಕಾಶ್ ರಾಥೋಡ್ ಎಂದು ಗುರುತಿಸಲಾಗಿದೆ. ಅವರು ರೈಲ್ವೆ ಇಲಾಖೆಯಲ್ಲಿ ಕ್ಲರ್ಕ್ ಆಗಿ ನಿವೃತ್ತರಾಗಿದ್ದರು. ಸರಿಯಾಗಿ ಆಹಾರ ಮತ್ತು ಆರೈಕೆ ಸಿಗದ ಕಾರಣ ಅವರು ಸೋಮವಾರ ಮೃತಪಟ್ಟರು. ಅವರ ಪುತ್ರಿ ರಶ್ಮಿ ಮೈಮೇಲೆ ಬಟ್ಟೆಯಿಲ್ಲದೆ ಅಸ್ವಸ್ಥ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ರಶ್ಮಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾಥೋಡ್ ಅವರು ನಿವೃತ್ತಿಯ ನಂತರ ತಮ್ಮ ಮಗಳೊಂದಿಗೆ ಮಹೋಬಾ ನಗರದಲ್ಲಿ ನೆಲಸಿದ್ದರು. ಅವರ ಪತ್ನಿ ಒಂಬತ್ತು ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ತಮ್ಮ ಮತ್ತು ಮಗಳ ಆರೈಕೆಗಾಗಿ ರಾಮ್‌ಪ್ರಕಾಶ್ ಕುಶ್ವಾ ಮತ್ತು ಅವರ ಪತ್ನಿ ರಾಮ್‌ದೇವಿ ಅವರನ್ನು ನೇಮಿಸಿಕೊಂಡಿದ್ದರು. ಮನೆ ಕೆಲಸ ಮಾಡುವ ದಂಪತಿ ಇಡೀ ಮನೆಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು ಮೂರು ವರ್ಷಗಳಿಂದ ರಾಥೋಡ್ ಮತ್ತು ಅವರ ಪುತ್ರಿಯನ್ನು ಕೋಣೆಯಲ್ಲಿ ಕೂಡಿಹಾಕಿದ್ದರು ಮತ್ತು ಅವರಿಗೆ ಸರಿಯಾಗಿ ಆಹಾರ ನೀಡುತ್ತಿರಲಿಲ್ಲ. ಸಂಬಂಧಿಕರನ್ನು ಕೂಡ ಭೇಟಿಯಾಗಲು ಬಿಡುತ್ತಿರಲಿಲ್ಲ ಎಂದು ಆರೋಪಿಸಲಾಗಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು, ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–09

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೆ ಇಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
1.	ಪೂರ್ವ–2	ಬೆಂಜಮಂ/2025–26/ ಡಬ್ಲ್ಯೂಎಸ್/ವರ್ಕ್_ ಇಂಡೆಂಟ್2692 (ಕರೆ–3)	Rs.67,48,500/- / Rs.1,35,000/-	07-01-2026ರ ಸಂಜೆ 4.00 ಗಂಟೆಯವರೆಗೆ	08-01-2026ರ ಸಂಜೆ 4.00 ಗಂಟೆಗೆ
2.		ಬೆಂಜಮಂ/2025–26/ ಡಬ್ಲ್ಯೂಎಸ್/ವರ್ಕ್_ ಇಂಡೆಂಟ್2691 (ಕರೆ–2) (ಪರಿಶಿಷ್ಟ ಜಾತಿಗೆ ಮೀಸಲು)	Rs.64,89,500/- / Rs.64,900/-		
3.		ಬೆಂಜಮಂ/2025–26/ ಡಬ್ಲ್ಯೂಎಸ್/ವರ್ಕ್_ ಇಂಡೆಂಟ್2697 (ಕರೆ–2)	Rs.65,24,000/- / Rs.1,30,500/-		

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–2)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಅಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/AAPL/RO4728/25-26

ಪಿಯು ಪರೀಕ್ಷೆ: ಅಂಧರಿಗೆ ಡಿಜಿಟಲ್ ಸೌಲಭ್ಯ

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ದ್ವಿತೀಯ ಪಿಯು ಅಂಧ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಅಥವಾ ಲ್ಯಾಪ್‌ಟಾಪ್ ನಂತಹ ಡಿಜಿಟಲ್ ಸಾಧನಗಳನ್ನು ಬಳಸಿ ಪರೀಕ್ಷೆ ಬರೆಯಲು ಅನುಮತಿ ನೀಡಿದೆ.

‘ವಿದ್ಯಾರ್ಥಿಗಳಿಗೆ ಸ್ಕ್ರೈಬ್ ಬುಕ್‌ಲೆಟ್‌ನಲ್ಲಿ ಉತ್ತರ ಬರೆಯುವ ಬದಲು, ಡಿಜಿಟಲ್ ಸಾಧನ ಬಳಸಿ ಉತ್ತರಗಳನ್ನು ಟೈಪ್ ಮಾಡಬಹುದು. ಅದಕ್ಕಾಗಿ ತಮ್ಮ ಕಾಲೇಜುಗಳಲ್ಲಿ ಪ್ರತ್ಯೇಕವಾಗಿ ನೋಂದಣಿ ಮಾಡಿಕೊಳ್ಳಬೇಕು. ಡಿಜಿಟಲ್ ಸಾಧನಗಳಿಗೆ ಇಂಟರ್‌ನೆಟ್ ಸಂಪರ್ಕ ಇರಬಾರದು, ಟೈಪ್ ಮಾಡಿದ ಉತ್ತರಗಳನ್ನು ಮುದ್ರಿಸಿಕೊಂಡು ಪರೀಕ್ಷಾ ಕೇಂದ್ರದ ಮೇಲ್ವಿಚಾರಕರಿಗೆ ಸಲ್ಲಿಸಬೇಕು ಎಂದು ಮಂಡಳಿ ಹೇಳಿದೆ.

ಕಣ್ಣೀರು ತರಿಸಿದ ಈರುಳ್ಳಿ, ಸಿಹಿ ಹಂಚಿದ ಬೆಲ್ಲ

ದರ ಕುಸಿತ: ಖರ್ಚು, ಶ್ರಮ ವ್ಯರ್ಥ

ಒಂದನೇ ಪುಟದಿಂದ...

‘ಹೆಚ್ಚು ಆದಾಯ ಗಳಿಸಬಹುದು ಎಂದು ಈರುಳ್ಳಿ ಬಿತ್ತನೆ ಮಾಡಿದ್ದ ರೈತರು ಸದ್ಯ ಆಘಾತದ ಸ್ಥಿತಿಯಲ್ಲಿದ್ದಾರೆ. ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ ಮಾರುಕಟ್ಟೆಗೆ ಒಯ್ದರೆ, ಲಾರಿ ಬಾಡಿಗೆ, ಕೂಲಿ ಖರ್ಚು ವೆಚ್ಚ ಮೈಮೇಲೆ ಬರುತ್ತದೆ. ಕೆಲ ರೈತರು ಈರುಳ್ಳಿ ಮಾರಿ ಯಶವಂತಪುರ ಮಾರುಕಟ್ಟೆಯಿಂದ ಖಾಲಿ ಕೈಯಲ್ಲಿ ಮನೆಗೆ ಹಿಂದಿರುಗಿದ ಉದಾಹರಣೆಗಳಿವೆ. ಹಾಗಾಗಿ, ಸರ್ಕಾರ ಮಧ್ಯೆ ಪ್ರವೇಶಿಸಿ ಈರುಳ್ಳಿಗೆ ಬೆಂಬಲ ಬೆಲೆ ಘೋಷಿಸಿ ರೈತರ ಹಿತ ಕಾಪಾಡಬೇಕು’ ಎಂದು ರೈತ ಬಾಳಪ್ಪ ಗಂಗರಾತ್ರಿ ಹೇಳಿದರು.

> ರಾಸಾಯನಿಕ ಬಳಸಿ ತಯಾರಿಸಿದ ಬೆಲ್ಲಕ್ಕಿಂತ, ಸಾವಯವ ಬೆಲ್ಲ ತುಟ್ಟಿ. ಆದರೆ, ಆರೋಗ್ಯದ ದೃಷ್ಟಿಯಿಂದ ಎರಡು ವರ್ಷಗಳಿಂದ ಸಾವಯವ ಬೆಲ್ಲವನ್ನೇ ಖರೀದಿಸುತ್ತಿದ್ದೇವೆ
> **ಅಶೋಕ ಕೆಂಗೇರಿ,** ಗ್ರಾಹಕ, ಹೊನ್ನಿಹಾಳ

ಸಾವಯವ ಬೆಲ್ಲ ಅಚ್ಚುಮೆಚ್ಚು

ಒಂದನೇ ಪುಟದಿಂದ...

‘ಈಗ ಸಾವಯವ ಬೆಲ್ಲಕ್ಕೆ, ಅದರಲ್ಲೂ ಪುಡಿ ಬೆಲ್ಲಕ್ಕೆ ಬೇಡಿಕೆ ಹೆಚ್ಚಿದೆ. ಸಮೀಪದಲ್ಲಿ ಆಲೆಮನೆ ಹೊಂದಿದವರು, ಮಾರುಕಟ್ಟೆ ಅನುಕೂಲತೆ ಇದ್ದವರು ಸಾವಯವ ಬೆಲ್ಲ ತಯಾರಿಸಿದರೆ ಹೆಚ್ಚಿನ ಆದಾಯ ಪಡೆಯಬಹುದು. ಸಕ್ಕರೆ ಕಾರ್ಖಾನೆಗಳ ಮೇಲಿನ ಅವಲಂಬನೆ ತಪ್ಪಿಸಬಹುದು’ ಎಂದು ಯರಗಟ್ಟಿ ತಾಲ್ಲೂಕಿನ ಕಡಬಿಯ ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಕೃಷಿ ಮಾಡುತ್ತಿರುವ ಹಾಗೂ ಸಾವಯವ ಬೆಲ್ಲ ತಯಾರಕ ಸಂತೋಷ ಕಿತ್ತೂರ ಹೇಳಿದರು.

ದಶಕಗಳ ಹಿಂದೆ ಮೋದಗಾ ಗ್ರಾಮವೊಂದರಲ್ಲೇ 20ಕ್ಕೂ ಅಧಿಕ ಆಲೆಮನೆ ಇದ್ದವು. ಕಾರ್ಮಿಕರ ಕೊರತೆಯಿಂದ ಈಗ ಮೂರಷ್ಟೇ ಉಳಿದಿವೆ. ‘ಒಮ್ಮೆ ಕೊಪ್ಪರಿಗೆಯಲ್ಲಿ 1.25 ಟನ್ ಕಬ್ಬು ನುರಿಸಿದರೆ, ಒಂದೂವರೆ ಕ್ವಿಂಟಲ್‌ಗೂ ಹೆಚ್ಚು ಸಾವಯವ ಬೆಲ್ಲ ಸಿದ್ಧವಾಗುತ್ತದೆ. ಕಬ್ಬು ಕಟಾವು, ಸಾರಿಗೆ, ಆಲೆಮನೆಯಲ್ಲಿನ ಕಾರ್ಮಿಕರು, ಇತರೆ ವೆಚ್ಚವೆಲ್ಲ ತೆಗೆದರೂ, 1.25 ಟನ್ ಕಬ್ಬಿಗೆ ₹7 ಸಾವಿರ ಸಿಗುವುದು ಖಾತ್ರಿ’ ಎಂದು 30 ವರ್ಷಗಳಿಂದ ಆಲೆಮನೆ ನಡೆಸುತ್ತಿರುವ ಅಪ್ಪಯ್ಯ ಅಷ್ಟೇಕರ ಹೇಳಿದರು. ‘ನಮ್ಮಲ್ಲಿ ತಯಾರಿಸಿದ ಬೆಲ್ಲ ಖರೀದಿಗೆ ನಿರ್ದಿಷ್ಟ ಗ್ರಾಹಕರಿದ್ದಾರೆ. ಕೆಲ ರೈತರು ಆಲೆಮನೆಗಳಲ್ಲೇ ಬೆಲ್ಲ ಮಾರಿದರೆ, ಇನ್ನೂ ಕೆಲವರು ತಮ್ಮ ಮನೆ ಮತ್ತು ಅಂಗಡಿಗಳಲ್ಲಿ ಮಾರುತ್ತಾರೆ. ರುಚಿ, ಶುದ್ಧತೆ ಕಾರಣಕ್ಕೆ ನಮ್ಮ ಬೆಲ್ಲಕ್ಕೆ ದರ ಹೆಚ್ಚಿದೆ’ ಎಂದರು.

‘ಜಿಲ್ಲೆಯಲ್ಲಿ 3.25 ಲಕ್ಷ ಹೆಕ್ಟೇರ್‌ನಲ್ಲಿ ಕಬ್ಬು ಬೆಳೆಯಲಾಗುತ್ತದೆ. ಈ ಪೈಕಿ 10 ಸಾವಿರ ಹೆಕ್ಟೇರ್‌ನಲ್ಲಿ ಸಾವಯವ ಪದ್ಧತಿಯಲ್ಲಿ ಕಬ್ಬು ಬೆಳೆಯುತ್ತಾರೆ. ಕೆಲ ರೈತರು ಈಗಾಗಲೇ ಸಾವಯವ ದೃಢೀಕರಣ ಪ್ರಮಾಣಪತ್ರ ಮಾಡಿಸಿದ್ದಾರೆ. ಇನ್ನೂಳಿದವರಿಗೂ ಅಂಥ ಪ್ರಮಾಣಪತ್ರ ಪಡೆಯಲು ಉತ್ತೇಜಿಸುತ್ತಿದ್ದೇವೆ’ ಎಂದು ಕೃಷಿ ಇಲಾಖೆ ಜಂಟಿನಿರ್ದೇಶಕ ಎಚ್.ಡಿ.ಕೋಳೇಕರ ತಿಳಿಸಿದರು.

> 2020ರಲ್ಲಿ 75 ಕ್ವಿಂಟಲ್ ಸಾವಯವ ಬೆಲ್ಲ ಮಾರಾಟವಾಗಿತ್ತು. ಈಗ ಅದು 120 ಕ್ವಿಂಟಲ್‌ಗೆ ಏರಿಕೆಯಾಗಿದೆ. ವರ್ಷದಿಂದ ಮಾರಾಟ ಹೆಚ್ಚುತ್ತಿದೆ
> **ಸಂತೋಷ ಕಿತ್ತೂರ**, ಸಾವಯವ ಬೆಲ್ಲ ತಯಾರಕ, ಕಡಬಿ

> ಈರುಳ್ಳಿ ಹೆಚ್ಚು ಬೆಳೆಯುವ ರಾಜ್ಯಗಳ ರೈತರು ಈರುಳ್ಳಿಯನ್ನು ವೈಜ್ಞಾನಿಕವಾಗಿ ಸಂಗ್ರಹಿಸಿಟ್ಟು, ಬೆಲೆ ಸಿಕ್ಕಾಗ ಮಾರುತ್ತಾರೆ. ಆದರೆ, ನಮ್ಮ ರಾಜ್ಯದಲ್ಲಿ ಈ ವ್ಯವಸ್ಥೆ ಇಲ್ಲ
> **ಯಲ್ಲಪ್ಪ ಬಾಬರಿ,** ರೈತ ಮುಖಂಡ

> ನಾಸಿಕ್‌ನಿಂದ ಹೆಚ್ಚಾಗಿ ಈರುಳ್ಳಿ ರಾಜ್ಯಕ್ಕೆ ಬರುವ ಕಾರಣ, ನಮ್ಮ ಈರುಳ್ಳಿಗೆ ಬೆಲೆ ಸಿಗುತ್ತಿಲ್ಲ. ರಾಜ್ಯದ ಸರ್ಕಾರ ಹೊರ ರಾಜ್ಯದ ಈರುಳ್ಳಿ ಮಾರಾಟ ನಿರ್ಬಂಧಿಸಬೇಕು
> **ಬಾಳಪ್ಪ ಗಂಗೋತ್ರಿ,** ರೈತ ಮುಖಂಡ

ಕರ್ನಾಟಕ ಸರಕಾರ

ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ.

ಕೆ.ಎಸ್.ಎಸ್.ಟಿ. ನಂ: ಸೇವಾ 28/2025–26 ದಿನಾಂಕ: 25.12.2025

ಇ–ಟೆಂಡರು ಪ್ರಕಟಣೆ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಭಕ್ತಾದಿಗಳಿಗೆ ವಿಕ್ರಯಿಸಲ್ಪಡುವ ಲಾಡು ಪ್ರಸಾದವನ್ನು ಶ್ರದ್ಧಾ ಭಕ್ತಿಯಿಂದ ತಯಾರಿಸುವರೇ ಆಸಕ್ತ ಅನುಭವಸ್ಥ ಲಾಡು ತಯಾರಿಕರಿಂದ ಟೆಂಡರನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಆಸಕ್ತ ಟೆಂಡರುದಾರರು ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ದಿನಾಂಕ 26.01.2026ರ ಸಾಯಂಕಾಲ ಗಂಟೆ 4.00ರ ಒಳಗಾಗಿ ಸಲ್ಲಿಸುವುದು. ಟೆಂಡರ್‌ಗಳನ್ನು ದಿನಾಂಕ 27.01.2026 ಸಾಯಂಕಾಲ 4.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in websiteನಲ್ಲಿ ಅಥವಾ ಸಹಾಯವಾಣಿ ಸಂಖ್ಯೆ +91-8046010000, 8068948777 ಸಂಪರ್ಕಿಸತಕ್ಕದ್ದು.

ವಿವರ: ಕಡ್ಲೆಹಿಟ್ಟು ಕೆ.ಜಿ. 1ರಿಂದ ಲಾಡು ಪ್ರಸಾದ ತಯಾರಿಸಿ ಒದಗಿಸುವ ಬಗ್ಗೆ ಮಜೂರಿ ಸೂಚಿಸುವುದು. ಕನಿಷ್ಠ ದರವನ್ನು ಅಂಗೀಕರಿಸಲಾಗುವುದು.

ಇ–ಟೆಂಡರ್ ಷರತ್ತುಗಳು ಹಾಗು ಹೆಚ್ಚಿನ ವಿವರಗಳನ್ನು ದೇವಳದ ಪ್ರಕಟಣಾ ಫಲಕದಿಂದ ತಿಳಿದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ,
ಹಿಂದೂ ಧಾರ್ಮಿಕ ದತ್ತಿ ಇಲಾಖೆ,
ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ.

DIPR/DK/MPL/1312/25-26

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ: ಉನಸ:ಬಿ2:ಸಿಆರ್:2025–26 ದಿನಾಂಕ: 29–12–2025

ಟೆಂಡರು ಪ್ರಕಟಣೆ

2025–26ನೇ ಸಾಲಿನ ನಗರಸಭಾ ನಿಧಿಯಡಿ ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document K.W-3ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 12–01–2026 ಸಂಜೆ 5.00 ಗಂಟೆಗೆ
2) ಸ್ವೀಕರಿಸಲಾದ ಟೆಂಡರುಗಳ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 13–01–2026 ಸಂಜೆ 5.01 ಗಂಟೆಗೆ
3) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ ಅರ್ಹ ಬಿಡ್ದುದಾರರಿಗೆ ಪ್ರತ್ಯೇಕ ತಿಳಿಸಲಾಗುವುದು.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ.	ಕಾಮಗಾರಿ ಪೂರ್ತಿಗೊಳಿಸುವ ಅವಧಿ
1.	DMA/2025-26/RD/ WORK_INDENT53097	5820000.00	87300.00	3 ತಿಂಗಳು
2.	DMA/2025-26/RD/ WORK_INDENT53056	8200000.00	123000.00	3 ತಿಂಗಳು
3.	DMA/2025-26/RD/ WORK_INDENT53276	9175000.00	137625.00	3 ತಿಂಗಳು
4.	DMA/2025-26/RD/ WORK_INDENT53275	6675000.00	100125.00	3 ತಿಂಗಳು

ಸಹಿ/– ಪೌರಾಯುಕ್ತರು,
ಉಡುಪಿ ನಗರಸಭೆ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕನೀನಿನಿ, ತುಂ.ಭ.ಎ.ಕಾ. ವಿಭಾಗ ನಂ.3, ಸಿಂಧನೂರು–584128

ಸಂ:ಕನೀನಿನಿ/ಕಾನಿಅ–3/ತಾಶಾ/Consultancy/ಟೆಂಡರ್/2025–26/1844 ದಿನಾಂಕ: 23/12/2025.

ಟೆಂಡರ್ ಪ್ರಕಟಣೆ(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಈ ವಿಭಾಗದ ವ್ಯಾಪ್ತಿಯಲ್ಲಿನ Consultancy ಕಾಮಗಾರಿಗೆ ಈ ಕಛೇರಿಯಿಂದ ಇ–ಪ್ರೋಕ್ಯೂರಮೆಂಟ್ ವೇದಿಕೆ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಹ Registered Firm/Company ಇವರಿಂದ “Lumpsum” ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರಗಿಟ್ಟ ಮೊತ್ತ ರೂ. 79.22 ಲಕ್ಷಗಳು ಹಾಗೂ ಇ.ಎಂ.ಡಿ. ಮೊತ್ತ ರೂ. 158500.00 ಗಳಿರುತ್ತವೆ. ಭರ್ತಿ ಮಾಡಿದ ಟೆಂಡರನ್ನು ದಿನಾಂಕ 06.01.2026 ರ ಸಂಜೆ 4–00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ. ಹಾಗೂ ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಕಛೇರಿಯ ಸಮಯದಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ https://kppp.karnataka.gov.in/#/portal/ portal-home ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕನೀನಿನಿ, ತುಂ.ಎ.ಕಾ. ವಿಭಾಗ ನಂ.3,
ಸಿಂಧನೂರು.

DIP/RCR/624/KSMCA/626/2025-26

The Printers (Mysore) Pvt. Ltd
Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad, Mangalore, Harihara, Mysore, Gulbarga and Hospet. For the period January to March 2026

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH &PV Print waste & unsolds (Voucher & Office Copies)	12	6	4.5	4	4	4.5	2
Mixed Print & Folded waste	3	1.5	0.6	0.3	0.2	0.3	0.2
DH,PV, Sudha & Mayura White cut Peel waste	4	0.6	0.2	0.5	0.4	0.3	0.3
White Reel ends including core DH,PV, Sudha & Mayura	8	1.8	0.6	1	2	1	1
DH,PV,Sudha &Mayura Reel wrappers/Miscellaneous sweep/Bale pattie waste	6	2	0.9	1.2	1.2	0.9	0.9
Sudha & Mayura Print Waste & unsolds-Magazine	1	0.4	0.9	0.4	0.6	0.9	0.05
Miscellaneous Tissue/ Mixed White waste/Cartonboxs	2	0.2	0.3	0.4	0.2	0.5	0.2

For clarification, Contact the Procurement Head at 45557340/ Mobile No; 9900042650. Sealed Quotes/Tenders/mail may be addressed to Procurement Head babu.v@printersmysore.co.in, venu.tl@printersmysore.co.in and sent to the above address within 7 days from the date of this advertisement.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಸಾಯುವುದು ಸುಲಭ, ಬಾಳುವುದು ದೊಡ್ಡ ಹೊಣೆಗಾರಿಕೆ.

–ಎಸ್.ವಿ. ರಂಗಣ್ಣ

ಸಂಪಾದಕೀಯ

ಒತ್ತುವರಿ ತೆರವು: ಮಾನವೀಯತೆ ಅಗತ್ಯ ಸಂತ್ರಸ್ತರ ನೆರವಿಗೆ ಸರ್ಕಾರ ಧಾವಿಸಲಿ

ಮಾನವೀಯ ಸ್ಪಂದನೆಗಳನ್ನು ಕಳೆದುಕೊಂಡ ಹಾಗೂ ದೂರದೃಷ್ಟಿ ಕೊರತೆಯ ಕಾನೂನು ಕ್ರಮಗಳು ಉಂಟುಮಾಡಬಹುದಾದ ವಿಕೃತಿಗೆ ಬೆಂಗಳೂರಿನ ಯಲಹಂಕ ಸಮೀಪದಲ್ಲಿರುವ ಕೋಗಿಲು ಬಡಾವಣೆಯಲ್ಲಿ ನಡೆದ ಒತ್ತುವರಿ ತೆರವು ಕಾರ್ಯಾಚರಣೆ ನಿದರ್ಶನದಂತಿದೆ. ಸರ್ಕಾರಿ ಭೂಮಿಯ ಅತಿಕ್ರಮಣವನ್ನು ತೆರವುಗೊಳಿಸುವ ಕಾನೂನುಬದ್ಧ ಅಧಿಕಾರ ಸರ್ಕಾರಕ್ಕಿದೆ. ಆದರೆ, ಕಾರ್ಯಾಚರಣೆ ನಡೆಸುವ ಮುನ್ನ ಪಾಲಿಸಬೇಕಾದ ಮಾನವೀಯ ಹಾಗೂ ನೈತಿಕ ಸಂಗತಿಗಳನ್ನು ಮರೆತರೆ ಮುಜುಗರಕ್ಕೆ ಸಿಲುಕಬೇಕಾಗುತ್ತದೆ, ಸಾರ್ವಜನಿಕ ಪ್ರತಿರೋಧ ಎದುರಿಸಬೇಕಾಗುತ್ತದೆ. ಕೋಗಿಲು ಬಡಾವಣೆಯ ಫಕೀರ್ ಕಾಲೊನಿ ಹಾಗೂ ವಸೀಂ ಕಾಲೊನಿಯಲ್ಲಿನ 167 ಮನೆಗಳನ್ನು ಯಾವ ಮುನ್ಸೂಚನೆಯನ್ನೂ ನೀಡದೆ ತೆರವುಗೊಳಿಸಿರುವುದು ಅಧಿಕಾರಶಾಹಿ ಕಾರ್ಯಾಚರಣೆಯಂತಿರದೆ, ಮನುಷ್ಯರ ಜೀವನಗಳ ಘನತೆಯನ್ನು ಲೆಕ್ಕಿಸದೆ ನಡೆಸಿದ ಧ್ವಂಸ ಚಟುವಟಿಕೆಯಂತಿದೆ. ಬಡಾವಣೆಯ ನಿವಾಸಿಗಳು ನಿದ್ರಿಸುತ್ತಿದ್ದ ನಸುಕಿನ 4.30ರ ಸಮಯದಲ್ಲಿ ಧಾವಿಸಿದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳು, ಅಗತ್ಯ ಸಾಮಗ್ರಿಗಳನ್ನು ಮನೆಗಳಿಂದ ಹೊರಗೆ ತರಲೂ ಅವಕಾಶ ಕಲ್ಪಿಸದೆ ತೆರವು ಕಾರ್ಯಾಚರಣೆ ನಡೆಸಿದ್ದಾರೆ. ಕಾರ್ಯಾಚರಣೆಗೆ ಸಂಬಂಧಿಸಿದ ಯಾವ ಮಾಹಿತಿಯೂ ತಮಗಿರಲಿಲ್ಲ ಎಂದು ಸಂತ್ರಸ್ತರು ದೂರಿದ್ದಾರೆ. ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರನ್ನು ತೀವ್ರ ಚಳಿ–ಗಾಳಿಯ ಸಂದರ್ಭದಲ್ಲಿ ಮನೆಗಳಿಂದ ಬಲವಂತವಾಗಿ ಹೊರಗೆ ಕಳಿಸಲಾಗಿದೆ. ದುರ್ಬಲ ವರ್ಗದ ಕುರಿತ ಸ್ಪಂದನದ ಮೂಲಕ ಸರ್ಕಾರವೊಂದರ ಗುಣಮಟ್ಟವನ್ನು ನಿರ್ಣಯಿಸುವುದಾದರೆ, ಕೋಗಿಲು ಘಟನೆ ಬಹು ದೊಡ್ಡ ನೈತಿಕ ವೈಫಲ್ಯವಾಗಿದೆ.

> ಕೋಗಿಲು ಬಡಾವಣೆಯಲ್ಲಿ ನಡೆದ ಕಾರ್ಯಾಚರಣೆ ಮಾನವೀಯತೆಯನ್ನು ಅಮಾನತ್ತಿನಲ್ಲಿರಿಸಿ ನಡೆಸಿರುವ ಪ್ರಕ್ರಿಯೆ; ಸಂತ್ರಸ್ತರ ಬದುಕಿನ ಘನತೆಯ ಮೇಲೆ ನಡೆದ ತೀವ್ರ ದಾಳಿ.

ಎರಡು ದಶಕಗಳಿಗೂ ಹೆಚ್ಚಿನ ಸಮಯದಿಂದ ಆ ಪ್ರದೇಶದಲ್ಲಿ ವಾಸಿಸುತ್ತಿರುವುದಾಗಿಯೂ, ಬ್ಯಾಂಕ್‌ಗಳಿಂದ ಸಾಲ ಪಡೆದು ಮನೆಗಳನ್ನು ನಿರ್ಮಿಸಿರುವುದಾಗಿಯೂ ಕೆಲವು ಸಂತ್ರಸ್ತರು ಅಳಲು ತೋಡಿಕೊಂಡಿದ್ದಾರೆ. ಇದರ ಹೊರತಾಗಿಯೂ ಇಲ್ಲಿನ ಮನೆಗಳನ್ನು ಅಕ್ರಮ ಎಂದು ಭಾವಿಸಿದರೂ, ದಶಕಗಳಿಂದ ವಾಸಿಸುತ್ತಿರುವವರನ್ನು ತೆರವುಗೊಳಿಸುವಾಗ ಮಾನವೀಯ ನೀತಿಯನ್ನು ಅನುಸರಿಸುವುದು ಹಾಗೂ ಪುನರ್ವಸತಿಯ ಚಿಂತನೆ ಅಗತ್ಯ. ಸಂವಿಧಾನದ 21ನೇ ವಿಧಿ ನೀಡಿರುವ ವಸತಿಯ ಹಕ್ಕು ಹಾಗೂ ಘನತೆಯಿಂದ ಬಾಳುವ ಹಕ್ಕನ್ನು ಸುಪ್ರೀಂ ಕೋರ್ಟ್ ಹಲವು ಪ್ರಕರಣಗಳಲ್ಲಿ ಎತ್ತಿಹಿಡಿದಿದೆ. ಸಂವಿಧಾನ ನೀಡಿರುವ ಈ ಖಾತರಿಯ ಮೇಲೆ ಬುಲ್ಡೋಜರ್ ಓಡಿಸಿದಂತಿದೆ. ನಾಗರಿಕ ಸಂಘಟನೆಗಳು ಹಾಗೂ ಸ್ವಯಂ ಸೇವಕರು ಸಂತ್ರಸ್ತರಿಗೆ ಆಹಾರ, ಹೊದಿಕೆ ಸೇರಿದಂತೆ ಜೀವನಾವಶ್ಯಕ ವಸ್ತುಗಳನ್ನು ಒದಗಿಸುತ್ತಿದ್ದಾರೆ. ಘಟನೆಗೆ ತೀವ್ರ ಪ್ರತಿರೋಧ ವ್ಯಕ್ತವಾದ ನಂತರ, ಸಂತ್ರಸ್ತ ಕುಟುಂಬಗಳಲ್ಲಿ 'ಅರ್ಹ'ರಾದವರಿಗೆ ಬೈಯಪ್ಪನಹಳ್ಳಿಯ ವಸತಿ ಸಮುಚ್ಚಯದಲ್ಲಿ ಮನೆಗಳನ್ನು ಹಂಚಿಕೆ ಮಾಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ, ಮುಖ್ಯಮಂತ್ರಿ ಹೇಳಿರುವ 'ಅರ್ಹತೆ'ಯ ಮಾನದಂಡದ ಬಗ್ಗೆ ಸ್ಪಷ್ಟತೆಯಿಲ್ಲ. ಮಾನವೀಯ ನೆಲೆಗಟ್ಟಿನ ಈ ನಿರ್ಧಾರದಿಂದ ಸರ್ಕಾರದ ಮೇಲಿನ ರಾಜಕೀಯ ಒತ್ತಡ ಸ್ವಲ್ಪಮಟ್ಟಿಗೆ ಶಮನ ಆಗಬಹುದಾದರೂ, ಅಮಾನವೀಯ ಕಾರ್ಯಾಚರಣೆಯ ಬಗೆಗಿನ ಪ್ರಶ್ನೆಗಳು ಮುಂದುವರಿಯುತ್ತವೆ.

ತೆರವು ಕಾರ್ಯಾಚರಣೆ ರಾಜಕೀಯ ಉದ್ದೇಶಗಳಿಗೂ ಬಳಕೆಯಾಗುತ್ತಿರುವುದು ದುರದೃಷ್ಟಕರ. ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, 'ಬುಲ್ಡೋಜರ್ ನ್ಯಾಯ' ಎಂದು ಕಾರ್ಯಾಚರಣೆಯನ್ನು ಟೀಕಿಸಿದ್ದಾರೆ. ಈ ಟೀಕೆಯ ಹಿಂದೆ ಕೇರಳದಲ್ಲಿನ ರಾಜಕೀಯ ಸಮೀಕರಣಗಳ ಒತ್ತಡ ಇರುವಂತಿದೆ. ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರ ಮಧ್ಯಪ್ರವೇಶವು ಪಕ್ಷದಲ್ಲಿನ ಆಂತರಿಕ ಅಸಮಾಧಾನ ಉಲ್ಬಣಿಸಿರುವುದರ ಸಂಕೇತದಂತಿದೆ. ಜವಾಬ್ದಾರಿಯುತ ಪ್ರತಿಪಕ್ಷವಾಗಿ ಘಟನೆಗೆ ಸ್ಪಂದಿಸುವಲ್ಲಿ ಬಿಜೆಪಿಯೂ ವಿಫಲವಾಗಿದೆ. ಸಂತ್ರಸ್ತರಿಗೆ ಮನೆ ಹಂಚಿಕೆ ಮಾಡುವ ಸರ್ಕಾರದ ನೀತಿಯನ್ನು ಬಿಜೆಪಿ ನಾಯಕರು ಟೀಕಿಸಿದ್ದಾರೆ. ಮನೆ ಕಳೆದುಕೊಂಡವರ ದಾರುಣ ಸ್ಥಿತಿಗಿಂತಲೂ, ಅವರ ಧರ್ಮ ಹಾಗೂ ದೇಶ ಯಾವುದೆನ್ನುವುದೇ ಬಿಜೆಪಿಗೆ ಮುಖ್ಯವಾದಂತಿದೆ. ರಾಜ್ಯ ಸರ್ಕಾರ ತಕ್ಷಣವೇ ಸಂತ್ರಸ್ತರಿಗೆ ತಾತ್ಕಾಲಿಕ ವಸತಿಯನ್ನು ಕಲ್ಪಿಸುವುದರ ಜೊತೆಗೆ, ಆಹಾರ ಮತ್ತು ವೈದ್ಯಕೀಯ ನೆರವನ್ನು ಒದಗಿಸಬೇಕಾಗಿದೆ. ವಸತಿ ಸಮುಚ್ಚಯದಲ್ಲಿ ಮನೆಗಳನ್ನು ಹಂಚಿಕೆ ಮಾಡುವ ಪ್ರಕ್ರಿಯೆಯನ್ನು ಕಾಲಮಿತಿಯೊಳಗೆ ನಡೆಸಬೇಕಾಗಿದೆ. ತೆರವು ಕಾರ್ಯಾಚರಣೆಯಲ್ಲಿ ಆಗಿರುವ ಲೋಪಗಳ ಬಗ್ಗೆ ಸ್ವತಂತ್ರ ತನಿಖೆ ನಡೆಯಬೇಕು ಹಾಗೂ ತಪ್ಪುಗಳಿಗೆ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಬೇಕು. ಘನತ್ಯಾಜ್ಯ ವಿಲೇವಾರಿಗಾಗಿ ನೀಡಿದ್ದ ಕ್ವಾರಿ ಜಾಗದ ಒತ್ತುವರಿ ಆಗಿರುವುದರಲ್ಲಿ ಅಧಿಕಾರಿಗಳ ಪಾತ್ರವೂ ಬೆಳಕಿಗೆ ಬರಬೇಕು. ಭವಿಷ್ಯದಲ್ಲಿನ ಒತ್ತುವರಿ ತೆರವು ಕಾರ್ಯಾಚರಣೆಗಳು ದೂರದರ್ಶಿತ್ವ, ಪಾರದರ್ಶಕ ಹಾಗೂ ಸಹಾನುಭೂತಿಯಿಂದ ಕೂಡಿರುವುದಕ್ಕೆ ಕೋಗಿಲು ಘಟನೆ ಸರ್ಕಾರಕ್ಕೆ ಪಾಠವಾಗಬೇಕು.

ಚಾಟಿ

ಹೆಣ್ಣು ದನಿ ಏಕಿಲ್ಲ?

'ಬಿಗ್ ಬಾಸ್' ರಿಯಾಲಿಟಿ ಶೋನಲ್ಲಿ ಹೆಣ್ಣು ದನಿಯೊಂದನ್ನು ಊಹಿಸಿಕೊಳ್ಳಿರಿ. ಆ ಆದೇಶವನ್ನು ಗಂಡಸರು ಪಾಲಿಸುವಾಗ, ಆ ಗಂಡು ನೀವಾಗಿದ್ದರೆ ನಿಮಗೆ ಏನನಿಸುತ್ತದೆ? ಬಿಗ್ ಬಾಸ್ ಸ್ಪರ್ಧೆಯಲ್ಲಿ ಬಹುತೇಕ ಪುರುಷರೇ ಗೆಲ್ಲುವುದಕ್ಕೂ, ಪುರುಷರೇ ಕಾರ್ಯಕ್ರಮ ನಡೆಸಿಕೊಡುವುದಕ್ಕೂ ಸಂಬಂಧ ಇದೆಯಾ?

ಅಣೇಕಟ್ಟೆ ವಿಶ್ವನಾಥ್, ಜೀವನ ಕೌಶಲ ಫೆಸಿಲಿಟೇಟರ್, 'ಫೇಸ್‌ಬುಕ್'ನಿಂದ

ಕಿಡಿನುಡಿ

ಕೋಗಿಲು ಒತ್ತುವರಿ ತೆರವು ಪ್ರಕರಣದಲ್ಲಿ ಕಾಂಗ್ರೆಸ್ ಹೈಕಮಾಂಡ್ ಮೆಚ್ಚಿಸುವುದಕ್ಕೆ ಮುಖ್ಯಮಂತ್ರಿ ಕುರ್ಚಿ ಪಡೆಯುವವರ ಮತ್ತು ಉಳಿಸಿಕೊಳ್ಳುವವರ ನಡುವೆ ಹಗ್ಗಜಗ್ಗಾಟ ನಡೆಯುತ್ತಿದೆ. ಈ ಪ್ರಕರಣದಲ್ಲಿ ನಿಯಮಗಳು ಲೆಕ್ಕಕ್ಕಿಲ್ಲದಂತಾಗಿವೆ. ರಾಜ್ಯದ ಹಿತವೂ ಬಲಿಯಾಗಿದೆ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಭಾನುವಾರ, 31-12-2000

• ಮಸೀದಿ ಧ್ವಂಸ ದೊಡ್ಡ ಪ್ರಮಾದ: ಎಲ್.ಕೆ. ಅಡ್ವಾಣಿ

ನವದೆಹಲಿ, ಡಿ. 30 (ಯುಎನ್‌ಐ)– ಬಾಬ್ರಿ ಮಸೀದಿಯ ಧ್ವಂಸ 'ಒಂದು ದೊಡ್ಡ ಪ್ರಮಾದ' ಎನ್ನುವುದರಲ್ಲಿ ಸಂಶಯವಿಲ್ಲ ಎಂದು ಕೇಂದ್ರ ಗೃಹ ಸಚಿವ ಎಲ್.ಕೆ. ಅಡ್ವಾಣಿ ಅವರು, ಇಂದು ಇಲ್ಲಿ ಒಪ್ಪಿಕೊಂಡಿದ್ದಾರೆ.

'ಸ್ಟಾರ್ ನ್ಯೂಸ್'ಗೆ ನೀಡಿದ ಸಂದರ್ಶನದಲ್ಲಿ ಅಡ್ವಾಣಿ ಅವರು ಮಸೀದಿ ಧ್ವಂಸವನ್ನು ಭಾರತೀಯ ಜನತಾ ಪಕ್ಷ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ನಾಯಕತ್ವದ ವೈಫಲ್ಯ ಎಂದು ಬಣ್ಣಿಸಿದ್ದಾರೆ.

ಮಸೀದಿ ನಾಶದ ಕೆಲವೇ ದಿನಗಳಲ್ಲಿ ಪತ್ರಿಕೆಯೊಂದಕ್ಕೆ ಬರೆದ ಲೇಖನದಲ್ಲಿ ಅವರು, '1992ರ ಡಿಸೆಂಬರ್ ಆರನ್ನು ನನ್ನ ಜೀವನದ ಅತೀದುಃಖದ ದಿನ' ಎಂದು ಬಣ್ಣಿಸಿದ್ದನ್ನು ಸ್ಮರಿಸಿಕೊಂಡಿದ್ದಾರೆ.

ಆರ್‌ಎಸ್‌ಎಸ್ ತನ್ನ ಸದಸ್ಯರಲ್ಲಿ ಸದಾ ಶಿಸ್ತು ತುಂಬಲು ಪ್ರಯತ್ನಿಸುತ್ತದೆ. ಆದರೆ, ಆ ಒಂದು ದಿನ ಎಲ್ಲಾ ಶಿಸ್ತು ಮಣ್ಣುಪಾಲಾಯಿತು ಎಂದು ಹೇಳಿದರು.

75 ವರ್ಷಗಳ ಹಿಂದೆ

ಭಾನುವಾರ, 31-12-1950

• ಹಳ್ಳಿಗರಿಗೆ ಅನುಕೂಲವಾಗಲು ವಿದ್ಯಾ ಪದ್ಧತಿ ಬದಲಾಗಬೇಕು

ಅಮರಾವತಿ, ಡಿ. 30– ನಗರವಾಸಿಗಳಿಗೆ ದೊರೆಯುತ್ತಿರುವಂತೆಯೇ ಗ್ರಾಮಸ್ಥರಿಗೂ ಅನುಕೂಲಗಳು ದೊರೆಯಲು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಸೂಕ್ತವಾಗಿ ಮಾರ್ಪಡಿಸಬೇಕು ಎಂದು ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಇಂದು ತಿಳಿಸಿದರು.

ಶ್ರೀಶಿವಾಜಿ ಲೋಕ ವಿದ್ಯಾಪೀಠದ ಉದ್ಘಾಟನೆ ನಡೆಸುತ್ತಾ, ಡೆನ್ಮಾರ್ಕ್, ನಾರ್ವೆ, ಸ್ವೀಡನ್ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳು ಶಿಕ್ಷಣ ವ್ಯವಸ್ಥೆಯ ಮೂಲಕ ಅಜ್ಞಾನವನ್ನೂ, ನಿರಕ್ಷರತೆಯನ್ನೂ ಸಂಪತ್ತಿನಲ್ಲಿ ವಿಷಮತೆಗಳನ್ನೂ ತೊಡೆದು ಹಾಕಿವೆ ಎಂದು ಡಾ. ಪ್ರಸಾದರು ತಿಳಿಸಿದರು.

ಸಂವಿಧಾನ: ಆಳಲಲ್ಲ, ಬಾಳಲು!

ವಿಶ್ಲೇಷಣೆ

ಎಸ್. ನಟರಾಜ ಬೂದಾಳು

> ಅಂಬೇಡ್ಕರ್ ವಿರಚಿತ ಸಂವಿಧಾನ ದೇಶ ಒಪ್ಪಿಕೊಂಡಿರುವ ಜೀವನವಿಧಾನ. ಆದರೆ, ಧರ್ಮ, ಸಂಸ್ಕೃತಿಯ ಹೆಸರಿನಲ್ಲೂ ಕೆಲವು ಅನಧಿಕೃತ ಸಂವಿಧಾನಗಳು ನಮ್ಮ ಬದುಕನ್ನು ಆವರಿಸಿಕೊಳ್ಳಲು ಹವಣಿಸುತ್ತಿರುತ್ತವೆ. ನಮ್ಮ ಬದುಕಿನ ಹಿತ ಸಾಧ್ಯವಿರುವುದು ಅಂಬೇಡ್ಕರ್ ಸಂವಿಧಾನದಿಂದ ಮಾತ್ರ ಎನ್ನುವ ವಿವೇಕ ಮತ್ತು ಎಚ್ಚರಿಕೆ ಅಗತ್ಯ.

ಬಾಬಾ ಸಾಹೇಬ್ ಅಂಬೇಡ್ಕರ್ ಕೊಟ್ಟ ಸಂವಿಧಾನ ನಮ್ಮ ಜೀವನವಿಧಾನ ಆಗಬೇಕಿತ್ತು; ಆದರೆ ಆಗಿಲ್ಲ. ನಾವು ಯಾವ್ಯಾವ ಸಂವಿಧಾನಗಳಲ್ಲಿ ಬದುಕುತ್ತಿದ್ದೇವೆ ಎಂಬುದನ್ನು ಈ ನೆಲದ ಶೂದ್ರ, ದಲಿತ ಮತ್ತು ಮಹಿಳಾ ಸಮೂಹಗಳು ಯೋಚಿಸಬೇಕಾದ ಅಗತ್ಯವಿದೆ.

ನಾವು ಒಪ್ಪಿಕೊಂಡಿರುವ ಸಂವಿಧಾನವು ರಾಜಕೀಯ ಸಂವಿಧಾನವೂ ಹೌದು; ಜೀವನ ವಿಧಾನವೂ ಹೌದು. ಸಂವಿಧಾನ ಪೀಠಿಕೆಯ ಮಾತುಗಳನ್ನು ಈಗೀಗ ಶಾಲೆ– ಕಾಲೇಜುಗಳಲ್ಲಿ, ಸಾರ್ವಜನಿಕ ಸಮಾರಂಭಗಳಲ್ಲಿ ಎದೆಯ ಮೇಲೆ ಕೈ ಇಟ್ಟುಕೊಂಡು ಹೇಳುವ ಸಂಪ್ರದಾಯವನ್ನು ಚಾಲ್ತಿಗೆ ತರುತ್ತಿದ್ದೇವೆ. ಆದರೆ, ಅದೊಂದು ಜೀವನವಿಧಾನ ಆಗಿದೆಯೆ? ಅಥವಾ ನಮಗೆ ಕೆಲವು ಹಕ್ಕುಗಳನ್ನು ಒದಗಿಸಿಕೊಡುವ ದಾಖಲೆ ಮಾತ್ರವೆ? ನಮ್ಮ ನಡುವೆ ಇರುವುದು ಇದೊಂದೇ ಸಂವಿಧಾನವೆ? ಈ ಪ್ರಶ್ನೆಗಳನ್ನು ಇದಿರಾಗಲೇಬೇಕಿದೆ. ಯಾಕೆಂದರೆ, ನಮ್ಮ ದಿನನಿತ್ಯದ ಬದುಕನ್ನು ನಿಯಂತ್ರಿಸುತ್ತಿರುವ ಧಾರ್ಮಿಕ–ಸಾಂಸ್ಕೃತಿಕ ಅನಧಿಕೃತ ಸಂವಿಧಾನಗಳೂ ಇವೆ. ಅವುಗಳಲ್ಲಿ ಸಾವಿರಾರು ವರ್ಷ ವಯಸ್ಸಾಗಿರುವ ಕೆಲವು ಸಾಂಸ್ಕೃತಿಕ ಸಂವಿಧಾನಗಳು ನಮ್ಮ ಬದುಕನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿವೆ. ಇನ್ನು ಕೆಲವು ನೂರಾರು ವರ್ಷಗಳಿಂದ ದಿನನಿತ್ಯ ಅಪಾರವಾದ ಕೊಳಕನ್ನು ತಂದು ನಮ್ಮ ಬದುಕಿನ ಅಂಗಳಕ್ಕೆ ಸುರಿಯುವ ಕೆಲಸ ಮಾಡುತ್ತ ಬಂದಿವೆ. ಮತ್ತೆ ಕೆಲವು ಹೀಗೆ ತಂದು ಸುರಿದ ಪರಂಪರೆಯ ಕೊಳಕನ್ನು ತೊಳೆಯುವ ಕೆಲಸ ಮಾಡುತ್ತ ಬಂದು ದಣಿದು ಕೈಚೆಲ್ಲಿವೆ. ಹೀಗೆ ಜಲಗಾರನ ಕೆಲಸ ಮಾಡುತ್ತ ಬಂದ ಸಾಂಸ್ಕೃತಿಕ ಸಂವಿಧಾನಗಳನ್ನು ಆಗಾಗ್ಗೆ ನೆನಪಿಸಿಕೊಳ್ಳುವ ಜಯಂತಿಗಳನ್ನು ಆಚರಿಸುತ್ತಾ ಬಂದಿದ್ದೇವೆ. ಒಳ್ಳೆಯದನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತ, ಕೊಳಕನ್ನು ದಿನನಿತ್ಯ ಬದುಕುವ ಕಳ್ಳಾಟವನ್ನು ಅಭ್ಯಾಸ ಮಾಡಿಕೊಂಡಿದ್ದೇವೆ. ಈ ಸಮಸ್ಯೆ ಕೇವಲ ಹಿಂದೂಧರ್ಮ ಎಂದು ಕರೆದುಕೊಂಡಿರುವ ಆವರಣದ್ದು ಮಾತ್ರವೇ ಅಲ್ಲ. ಅದು ಆಯಾ ಧಾರ್ಮಿಕ/ಸಾಂಸ್ಕೃತಿಕ ಆವರಣಗಳು ನಿರ್ವಹಿಸಿಕೊಳ್ಳಬೇಕಾದ ಸಮಸ್ಯೆ.

ನಮ್ಮ ದಿನನಿತ್ಯದ ಬದುಕನ್ನು ನಿರ್ದೇಶಿಸುತ್ತಿರುವ ಸಾಂಸ್ಕೃತಿಕ ಸಂವಿಧಾನಗಳು ಶಕ್ತಿಶಾಲಿಯಾದವುಗಳು. ಈ ಸಂವಿಧಾನಗಳು ಹೆಚ್ಚೋ, ರಾಜಕೀಯ ಸಂವಿಧಾನ ಹೆಚ್ಚೋ ಎನ್ನುವ ಪ್ರಶ್ನೆಯೇ ಅನಗತ್ಯ. ಯಾಕೆಂದರೆ, ಸಾಂಸ್ಕೃತಿಕ ಸಂವಿಧಾನಗಳಾಗಲೀ ರಾಜಕೀಯ ಸಂವಿಧಾನವಾಗಲೀ ಯಾವುದೂ ಪ್ರಶ್ನಾತೀತ ಪ್ರಮಾಣವಲ್ಲ. ಆದರೆ, ನಮ್ಮನ್ನು ಪ್ರಶ್ನಿಸುವಂತಿಲ್ಲ ಎನ್ನುವ ಸಾಂಸ್ಕೃತಿಕ ಸಂವಿಧಾನಗಳು ಗಂಭೀರ ಸಮಸ್ಯೆ ಒಡ್ಡುತ್ತವೆ. ಈ ದೇಶದ ಬಹುಸಂಖ್ಯಾತರಾದ ಶೂದ್ರ, ದಲಿತ ಮತ್ತು ಮಹಿಳೆಯರ ಮೇಲೆ ಯಾವ ಯಾವ ಧಾರ್ಮಿಕ ಸಂವಿಧಾನಗಳು ಹೇಗೆ ನಿಯಂತ್ರಣ ಹೇರಿವೆ ಮತ್ತು ಎಷ್ಟರಮಟ್ಟಿಗೆ ಸಮಾನವಾಗಿ ಬದುಕಲು ಬಿಟ್ಟಿವೆ ಎನ್ನುವುದನ್ನು ಈ ಸಮೂಹಗಳು ಈಗಲಾದರೂ ಪರಿಶೀಲಿಸಿಕೊಳ್ಳಬೇಕು. ನಮ್ಮ ಬಾಳನ್ನು ನಾವು ಬಾಳಬೇಕು ಎಂದಾದರೆ, ಬೇರೆ ಯಾರೋ ಬಂದು ನಮ್ಮ ಬದುಕನ್ನು ಸರಿಮಾಡುವುದಿಲ್ಲ. ದಿನನಿತ್ಯ ಕೊಳಕನ್ನು ತಂದು ಸುರಿಯುತ್ತಿರುವವರನ್ನು ತರಾಟೆಗೆ ತೆಗೆದುಕೊಂಡು ನಮ್ಮ ನಮ್ಮ ಮನೆಯಂಗಳದ ಕೊಳಕನ್ನು ನಾವೇ ತೊಳೆದುಕೊಂಡು ಬಾಳಬೇಕು.

ನಮ್ಮ ನೆಲದಲ್ಲಿ ಪ್ರಧಾನವಾಗಿ ನಾಲ್ಕು ರೀತಿಯ ಧಾರ್ಮಿಕ–ಸಾಂಸ್ಕೃತಿಕ ಜೀವನವಿಧಾನಗಳಿವೆ. ಒಂದು, ವೇದೋಪನಿಷತ್ತುಗಳು, ಭಗವದ್ಗೀತೆ, ಮನುಸ್ಮೃತಿ ಇತ್ಯಾದಿಗಳನ್ನಾಧರಿಸಿರುವ ವೈದಿಕ ಜೀವನವಿಧಾನ. ಎರಡನೆಯದು: ಬೌದ್ಧ, ನಾಥ, ಸಿದ್ಧ, ಸೂಫಿ, ಶೈವ, ವೀರಶೈವ–ಲಿಂಗಾಯತ, ಆರೂಢ, ಅವಧೂತ, ಅಚಲ, ಜೈನ, ವಿವಿಧ ತತ್ತ್ವಪದಧಾರೆಗಳು ಮುಂತಾದ ಶ್ರಮಣ ಅಥವಾ ಅವೈದಿಕ ಎಂದು ಕರೆಯುವ ಗುಂಪು ಮುಂದಿಡುವ ಜೀವನವಿಧಾನಗಳು. ಮೂರನೆಯದು, ಈ ನೆಲದ ಮೂಲ ಬುಡಕಟ್ಟುಗಳ ಜೀವನಕ್ರಮವನ್ನಾಧರಿಸಿದ, ಕ್ರಮೇಣ ಮೇಲಿನ ಎರಡು ಜೀವನವಿಧಾನಗಳೊಡನೆ ಕೊಳು ಪಡೆ ನಡೆಸಿ ರೂಪಿಸಿಕೊಂಡಿರುವ ಶೂದ್ರ–ದಲಿತ ಜೀವನವಿಧಾನ. ನಾಲ್ಕನೆಯದು, ಅಬ್ರಹಾಮಿಕ್ ಧರ್ಮಗಳು ಎಂದು ಕರೆದುಕೊಳ್ಳುವ ಇಸ್ಲಾಂ, ಕ್ರಿಶ್ಚಿಯಾನಿಟಿ ಮತ್ತು ಯಹೂದಿ ಧರ್ಮಗಳ ಜೀವನವಿಧಾನಗಳು.

ಒಂದೊಂದು ಆವರಣಕ್ಕೂ ವಿಶಿಷ್ಟವಾದ ಗುಣ ಲಕ್ಷಣಗಳಿವೆ. ಮೊದಲಿನ ಮೂರು ಗುಂಪುಗಳನ್ನು ಒಂದೇ ಧರ್ಮ ಎಂದು ಕರೆಯುವ ನಡೆ ಇತ್ತೀಚಿನದ್ದು. ಇದರ ಹಿಂದೆ ಗಂಭೀರವಾದ ಸಾಂಸ್ಕೃತಿಕ ರಾಜಕಾರಣವಿದೆ. ಇದರಿಂದಾಗಿ ಇಲ್ಲಿನ ಸಹಜ ಬದುಕಿನ ಬಹುತ್ವವು ನಿರಾಕರಣೆಗೆ ಒಳಗಾಗುತ್ತದೆ. ಅನೇಕ ರೀತಿಯ ತಾರತಮ್ಯಗಳನ್ನು ಹೇರಲು ಅವಕಾಶವಾಗುತ್ತದೆ. ಒಂದು ಜೀವನವಿಧಾನ ಇನ್ನೊಂದರ ಮೇಲೆ ಯಾವುದೇ ರೀತಿಯ ಯಜಮಾನಿಕೆ ಹೇರುವುದು ವಸಾಹತುಶಾಹಿ ನಡವಳಿಕೆ. ಇಂತಹ ಸಾಂಸ್ಕೃತಿಕ ವಸಾಹತುಶಾಹಿಯ ಅಡಿಯಲ್ಲಿ ಈ ದೇಶ ಸಾವಿರಾರು ವರ್ಷಗಳಿಂದ ನಲುಗಿದೆ. ಶ್ರಮಣಧರ್ಮಗಳು ಅಪಮಾನಕ್ಕೀಡಾದ ಸಮೂಹಗಳ ಬಿಡುಗಡೆಗೆ ಆಗಾಗ್ಗೆ ದುಡಿದಿವೆ. ಈ ಮೂರೂ ಜೀವನಸಂವಿಧಾನಗಳ ಗುಣಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸಿಕೊಂಡರೆ, ಅವುಗಳ ಇತಿಮಿತಿಗಳು ಮತ್ತು ಕೇಡುಗಳಿಂದ ಮುಕ್ತವಾಗಲು ಸಾಧ್ಯವಾಗುತ್ತದೆ. ಆದರೆ, ಅದು ಅಷ್ಟು ಸರಳ ಸಂಗತಿ ಅಲ್ಲ. ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಒಟ್ಟಾರೆ ಬದುಕಿನಲ್ಲಿ ಇರುವ ನಾನಾ ರೀತಿಯ ತಾರತಮ್ಯಗಳಿಗೆ ಒಪ್ಪಿಗೆಯನ್ನು ಉತ್ಪಾದಿಸಿಕೊಂಡಿರುವ ವಸಾಹತುಶಾಹಿ ಜೀವನ ಸಂವಿಧಾನಗಳು ಅಷ್ಟು ಸುಲಭವಾಗಿ ತಮ್ಮ ಧಾರ್ಮಿಕ ಅಧಿಕಾರವನ್ನು ಬಿಟ್ಟುಕೊಡುವುದಿಲ್ಲ. ಜೊತೆಗೆ, ಅಧಿಕಾರ ಕೇಂದ್ರಗಳ ಜೊತೆಗೆ ಅವು ಅಪವಿತ್ರ ಮೈತ್ರಿಯನ್ನು ಸಾಧಿಸಿಕೊಂಡು ರಾಜಕೀಯ ಅಧಿಕಾರವನ್ನು ದಕ್ಕಿಸಿಕೊಂಡಿವೆ. ಅವೀಗ ಯಜಮಾನ ಸಂಸ್ಕೃತಿಗಳಾಗಿವೆ. ಸಾಂಸ್ಕೃತಿಕ ಯಜಮಾನಿಕೆ ಎನ್ನುವುದೊಂದು ನಿರ್ಲಜ್ಜ ನಡವಳಿಕೆ. ಅದಕ್ಕೆ ಒಪ್ಪಿಗೆಯನ್ನು ಪಡೆದುಕೊಳ್ಳಲಾಗಿದೆ ಎಂದ ಮಾತ್ರಕ್ಕೆ ಅದು ಸಮರ್ಥನೀಯವಲ್ಲ.

ಪ್ರಸ್ತುತ ಎಲ್ಲ ಶೂದ್ರ, ದಲಿತ, ಮಹಿಳೆಯರಿಗೆ ಬಿಡುಗಡೆಯನ್ನು ದೊರಕಿಸಿಕೊಡುವ ಸಾಧ್ಯತೆ ಇರುವುದು ನಮ್ಮ ರಾಜಕೀಯ ಸಂವಿಧಾನಕ್ಕೆ ಮಾತ್ರ. ಎಲ್ಲರ ಬದುಕಿನ ವಿಧಾನಗಳಿಗೆ ಅವಕಾಶ ನೀಡಿಯೂ ಎಲ್ಲರಿಗೂ ಸಮಾನತೆಯನ್ನು ನೀಡುತ್ತದೆ ಎನ್ನುವ ಕಾರಣದಿಂದಲೇ ಅದಕ್ಕೆ ಮಹತ್ವ ದೊರಕಿದೆ. ಹಾಗಾಗಿ, ಎಲ್ಲ ಸಾಂಸ್ಕೃತಿಕ–ಧಾರ್ಮಿಕ ಜೀವನವಿಧಾನಗಳಿಗೆ ಅವಕಾಶ ನೀಡುತ್ತಲೇ, ಸಮಾನತೆಯ ಬದುಕಿಗೆ ಕೊರತೆಯಾಗದ ಹಾಗೆ ಎಲ್ಲರನ್ನೂ ಬಾಳಿಸಿಕೊಂಡು ಬಾಳುವ ಹಕ್ಕು ಬಾಧ್ಯತೆಗಳನ್ನು ಕೊಡುವ, ಅಂಬೇಡ್ಕರ್ ನೀಡಿರುವ ಸಂವಿಧಾನವೇ ಎಲ್ಲ ಧಾರ್ಮಿಕ–ಸಾಂಸ್ಕೃತಿಕ ಸಂವಿಧಾನಗಳಿಗಿಂತ ಶ್ರೇಷ್ಠ ಹಾಗೂ ಅಂತಿಮ.

ಜಗತ್ತಿನ ಯಾವ ಧರ್ಮವೂ ಪ್ರಜಾಸತ್ತೆಗಿಂತ ದೊಡ್ಡದಲ್ಲ. ಯಾಕೆಂದರೆ, ಸಕಲ ಜೀವಗಳಿಗೂ ನಿಸರ್ಗ ನೀಡಿರುವ ಹಕ್ಕುಬಾಧ್ಯತೆಗಳನ್ನು ಒದಗಿಸಲು ಸಾಧ್ಯವಿರುವುದು ಪ್ರಜಾಸತ್ತೆಗೆ ಮಾತ್ರ. ಪ್ರಜಾಸತ್ತೆಯ ನಿಜ ಆಶಯಗಳನ್ನು ಯಾವ ಧರ್ಮ ಎಷ್ಟರ ಮಟ್ಟಿಗೆ ಒಳಗೊಳ್ಳುತ್ತದೆಯೋ ಅಷ್ಟರ ಮಟ್ಟಿಗೆ ಮಾತ್ರ ಅದು ಪಾಲಿಸಲು ಯೋಗ್ಯವಾದ ಧರ್ಮವಾಗುತ್ತದೆ. ಇದು ವಿಜ್ಞಾನಕ್ಕೂ ಅನ್ವಯವಾಗುವ ಮಾತು. ಲೋಕದ ಹಿತಕ್ಕೇ ದುಡಿಯುತ್ತದೆ ಎನ್ನುವ ವಿಜ್ಞಾನವೂ ಅಧಿಕಾರ ಕೇಂದ್ರಗಳ ಅಡಿಯಾಳಾಗಿ ಅನೇಕ ವಿಷಯಗಳಲ್ಲಿ ಲೋಕಕಂಟಕವಾಗಿರುವುದನ್ನು ನೋಡಿದ್ದೇವೆ. ಹಾಗಾಗಿ, ಮಾನವ ಸಮಾಜದ ಈವರೆಗಿನ ಅತ್ಯುತ್ತಮ ಆವಿಷ್ಕಾರವೆಂದರೆ ಪ್ರಜಾಸತ್ತೆ ಎನ್ನುವುದು ನನ್ನ ನಂಬಿಕೆ. ಪ್ರಜಾಸತ್ತೆಯು ಒಂದು ರಾಜಕೀಯ ವ್ಯವಸ್ಥೆ ಮಾತ್ರವಲ್ಲ; ಅದೊಂದು ಜೀವನವಿಧಾನ. ಮತ್ತೂ ವಿಶೇಷವೆಂದರೆ, ಪ್ರಜಾಸತ್ತೆಯು ನಿಸರ್ಗದ ಹಾಗೆ ಹೋಗಹೋಗುತ್ತಲೇ ಕಂಡುಕೊಳ್ಳಬೇಕಾದ ಮತ್ತು ನಿರಂತರ ಬದಲಾವಣೆಗೆ ತೆರೆದುಕೊಂಡಿರುವ ಸಂವಿಧಾನ. ಹಾಗಾಗಿ, ಎಲ್ಲರನ್ನೂ ಪೊರೆಯುವ ನಿಸರ್ಗದ ನಡೆಯನ್ನು ಪ್ರಜಾಸತ್ತೆಯು ಅನುಸರಿಸುತ್ತದೆ.

ಕುವೆಂಪು ಅವರ 'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಯಾವುದೂ ಯಃಕಶ್ಚಿತವಲ್ಲ!' ಮಾತುಗಳು ನಿಸರ್ಗ ಮತ್ತು ಪ್ರಜಾಸತ್ತೆಯನ್ನು ವಿವರಿಸಿಕೊಳ್ಳಲು ಒದಗಿಬರುತ್ತವೆ. ಈ ಮಾತುಗಳು, ಒಂದು ಆಯಾಮದಿಂದ ಪ್ರಜಾಸತ್ತೆಯ ಪೂರ್ವಪೀಠಿಕೆ. ಯಾರನ್ನೂ ಹೊರನೂಕಿ, ಹೊರಗೆ ನಿಲ್ಲಿಸಿ, ತುಳಿದು ಬಾಳುವುದನ್ನು ನಿಸರ್ಗವೂ ಒಪ್ಪುವುದಿಲ್ಲ; ಪ್ರಜಾಸತ್ತೆಯೂ ಒಪ್ಪುವುದಿಲ್ಲ. ಪ್ರಜಾಸತ್ತೆಯ ಪ್ರಾಥಮಿಕ ನಿಲುವುಗಳಾಗಿ ಬಹುತ್ವ, ನಿಸರ್ಗ ವಿವೇಕ ಮತ್ತು ಮನುಷ್ಯ ನಿರ್ಮಿತ ಎಲ್ಲ ತಾರತಮ್ಯಗಳನ್ನು ಮೀರಿ ನಡೆಯುವ ಜಾತ್ಯತೀತ ನಿಲುವು– ಇವುಗಳನ್ನು ಅನ್ವಯಿಸಿಕೊಂಡು ಬಾಳುವುದರಿಂದಲೇ ಲೋಕಹಿತ ಎನ್ನುವ ಧರ್ಮ ಮಾತ್ರ ಸಮ್ಯಕ್ ಧರ್ಮವಾಗಿರಲು ಸಾಧ್ಯ.

ಅಂಬೇಡ್ಕರ್ ಪ್ರಜಾಪ್ರಭುತ್ವಕ್ಕೆ ಅಗತ್ಯವಾದ ಭೂಮಿಕೆಯನ್ನು ಸಿದ್ಧಪಡಿಸುವ ಮಹತ್ತರ ಉದ್ದೇಶ ಹೊಂದಿದ್ದವರು. ಅದು ಆಗಬೇಕಾದರೆ ಮೊದಲಿಗೆ ಆಗಬೇಕಾದದ್ದು ಅತ್ಯಂತ ದೀನರ ಮತ್ತು ದಾಸ್ಯದಲ್ಲಿ ಇದ್ದವರ ವಿಮೋಚನೆ. ಅದು ಆಗದೆ ಪ್ರಜಾಪ್ರಭುತ್ವದ ಪ್ರತಿಷ್ಠಾಪನೆ ಅಸಾಧ್ಯ ಎನ್ನುವುದು ಅವರಿಗೆ ಗೊತ್ತಿತ್ತು. ಅಂಬೇಡ್ಕರ್ ಪಾಲಿಗೆ ಸ್ವಾತಂತ್ರ್ಯ ಎನ್ನುವುದು ಕೇವಲ ರಾಜಕೀಯ ಪರಿಕಲ್ಪನೆ ಅಲ್ಲ; ಅದು ಎಲ್ಲರ ಸಾಂಸ್ಕೃತಿಕ, ಧಾರ್ಮಿಕ ಜೀತಮುಕ್ತ ಬದುಕು. ಅದು ಸಾಧ್ಯವಿರುವುದು ಪ್ರಜಾಸತ್ತೆ, ಸಂವಿಧಾನದಿಂದ ಮಾತ್ರ. ಬಾಬಾ ಸಾಹೇಬರ ಈ ಸಂವಿಧಾನವನ್ನು ನಾವು ಎಚ್ಚರದಿಂದ ಉಳಿಸಿಕೊಳ್ಳಬೇಕಾಗಿದೆ.



ವಾಚಕರ ವಾಣಿ

ಮರ್ಯಾದೆ ಹತ್ಯೆ ಮತ್ತು ಜಾತಿಗ್ರಸ್ತ ಮನಸ್ಸು

ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರದಲ್ಲಿ ನಡೆದಿರುವ ಮರ್ಯಾದೆಗೇಡು ಹತ್ಯೆ ದಿಗಿಲು ಹುಟ್ಟಿಸುವಂಥದ್ದು. ಆ ಸಮಯದಲ್ಲಿ ಇದಕ್ಕೆ ಕಾರಣರಾದ ಆ ಒಟ್ಟು ಕುಟುಂಬವು ಎಂಥ ಒದ್ದಾಟಕ್ಕೆ ಸಿಕ್ಕಿಕೊಂಡಿರಬಹುದು? ಆದರೆ, ಇಂಥ ಘಟನೆ ಹೆಚ್ಚು ನಡೆಯುತ್ತಿರುವುದು ಮೇಲ್ವರ್ಗದ ಹುಡುಗಿಯು ದಲಿತ ಜಾತಿಗೆ ಸೇರಿದ ಹುಡುಗನನ್ನು ಮದುವೆಯಾದಾಗ. ಇಂಥದ್ದನ್ನು ತಡೆಯಲು ಕಾನೂನಿನ ಮೂಲಕ ಆಗುವುದಿಲ್ಲ. ಸಾಮಾಜಿಕ ಕಾರ್ಯಕರ್ತರು ಹಾಗೂ ಮಠಾಧೀಶರು ಜನಸಾಮಾನ್ಯರಲ್ಲಿ ಅರಿವು ಮೂಡಿಸಲು ಪ್ರಯತ್ನಿಸಬೇಕು.

ಮಠಾಧೀಶರ ಮಾತು ಕೆಳವರ್ಗದವರ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ. ಇದು ಒಂದು ದಿವಸ ನಡೆಯುವಂಥದ್ದಲ್ಲ. ನಿರಂತರವಾಗಿ ನಡೆಯಬೇಕಾದದ್ದು. ಜಾತಿ ವ್ಯವಸ್ಥೆ ಚೌಕಟ್ಟಿನಲ್ಲಿ ಮೇಲು–ಕೀಳು ಗಾಢವಾಗಿ ಬೇರೂರಿದೆ. ಮೇಲಿನಿಂದ ಸುಧಾರಣೆ ನಿಜವಾಗಿಯೂ ಆಗುವುದಿಲ್ಲ. ಮಠಾಧೀಶರು ಇದನ್ನು ತಮ್ಮ ಪ್ರಾಥಮಿಕ ಕರ್ತವ್ಯವೆಂದು ತಿಳಿದು ಮಾಡಬೇಕಾಗಿದೆ.

ಶೂದ್ರ ಶ್ರೀನಿವಾಸ್, ಬೆಂಗಳೂರು

ಬದುಕಿಗೆ ಬೊಗಸೆಯಷ್ಟು ಪ್ರೀತಿ ಸಾಕಲ್ಲವೆ?

ಇಂದಿನ ತಂತ್ರಜ್ಞಾನಯುಗದ ಕಾಲಘಟ್ಟದಲ್ಲಿ ಪ್ರೀತಿ ಮತ್ತು ಮಾನವೀಯ ಮೌಲ್ಯ ಕುಸಿಯುತ್ತಿವೆ. ಒಂದೇ ಮನೆಯಲ್ಲಿದ್ದರೂ ಮನುಷ್ಯನನ್ನು ಒಂಟಿತನ ಕಾಡುತ್ತಿದೆ. ಪರಸ್ಪರ ಮಾತನಾಡಲು ಆಗುತ್ತಿಲ್ಲ. ದುಬಾರಿ ವಸ್ತುಗಳು ಮಾನವನ ಜೀವನವನ್ನು ಸರಳಗೊಳಿಸುವ ಸಾಧನಗಳಷ್ಟೆ. ಅವುಗಳನ್ನು ಪಡೆಯಲು ಹಗಲುರಾತ್ರಿ ಎನ್ನದೆ ಕುಟುಂಬವನ್ನು ನಿರ್ಲಕ್ಷಿಸಿ ದುಡಿಯುವುದು ಎಷ್ಟು ಸರಿ? ಮನುಷ್ಯನಿಗೆ ಅಂತಿಮವಾಗಿ ಬೇಕಾಗಿರುವುದು ಬೊಗಸೆಯಷ್ಟು ಪ್ರೀತಿ; ಜನರ ಮನ್ನಣೆ, ಮತ್ತು ಗೌರವ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಹೊಸ ವರ್ಷವನ್ನು ಸ್ವಾಗತಿಸೋಣ.

ಶಿವಪ್ರಸಾದ, ಬೆಂಗಳೂರು

ಉನ್ನಾವೊ: ಸಮಾಧಾನ ತಂದ ತಡೆ

ಉನ್ನಾವೊ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯವು ಅಪರಾಧಿಗೆ ವಿಧಿಸಿದ್ದ ಶಿಕ್ಷೆಗೆ ದೆಹಲಿ ಹೈಕೋರ್ಟ್ ನೀಡಿದ್ದ ಅಮಾನತು ಆದೇಶವು ಸಂತ್ರಸ್ತೆ ಮತ್ತು ಜನತೆಯ ವಿಶ್ವಾಸಕ್ಕೆ ಗಾಸಿ ಉಂಟು ಮಾಡಿತ್ತು. ಇಂತಹ ಸೂಕ್ಷ್ಮ ಪ್ರಕರಣಗಳಲ್ಲೂ ಕಾನೂನು ಪ್ರಕ್ರಿಯೆ ಹಿಮ್ಮುಖ ಚಲನೆ ಕಾಣುವುದಾದರೆ ಉಳಿದ ಪ್ರಕರಣಗಳ ಗತಿ ಏನು ಎಂಬ ಪ್ರಶ್ನೆ ಕಾಡಿದ್ದು ಸಹಜ. ಬೆದರಿಕೆಗೂ ಜಗ್ಗದಿರುವ ಸಂತ್ರಸ್ತೆಯ ಹೋರಾಟ ಮೆಚ್ಚುವಂತಹದ್ದು. ಹೆಣ್ಣುಮಕ್ಕಳ ರಕ್ಷಣೆ, ದೇಶದ ಸಂಸ್ಕೃತಿ ಬಗ್ಗೆ ಮಾತನಾಡುವ ರಾಜಕೀಯ ಪಕ್ಷಗಳೇ ರಾಜಕೀಯ ಅಪರಾಧಿಗಳಿಗೆ ಚುನಾವಣೆಯಲ್ಲಿ ಟಿಕೆಟ್ ನೀಡುವುದು ಅಕ್ಷಮ್ಯ. ಇದೀಗ, ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿರುವುದು ನ್ಯಾಯಾಂಗ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸಿದೆ.

ಕೆ.ಎಂ. ನಾಗರಾಜು, ಮೈಸೂರು

ವಸತಿ ಯೋಜನೆಗಳ ಪರಾಮರ್ಶೆ ಅಗತ್ಯ

ಪುಟ್ಟ ಮನೆ ಎನ್ನುವುದು ಕೇವಲ ಇಟ್ಟಿಗೆ–ಸಿಮೆಂಟ್‌ನ ಕಟ್ಟಡವಲ್ಲ; ಅದು ಪ್ರತಿಯೊಬ್ಬರ ಅತಿದೊಡ್ಡ ಕನಸು ಮತ್ತು ಭದ್ರತೆಯ ಸಂಕೇತ. ಆದರೆ, ಇಂದು ಸ್ವಂತ ಸೂರಿಲ್ಲದವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದು ಮನಸ್ಸಿಗೆ ತೀವ್ರ ನೋವುಂಟು ಮಾಡುತ್ತದೆ. ಮಳೆ, ಗಾಳಿ, ಬಿಸಿಲಿನ ನಡುವೆ ರಸ್ತೆಬದಿಯಲ್ಲೇ ಜೀವನ ಕಳೆಯುವ ಅದೆಷ್ಟೋ ಕುಟುಂಬಗಳ ಕಣ್ಣೀರಿಗೆ ಕೊನೆಯಿಲ್ಲದಂತಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಹಲವು ವಸತಿ ಯೋಜನೆಗಳನ್ನು ಜಾರಿಗೆ ತಂದಿವೆಯಾದರೂ, ಅವು ನಿಜವಾದ ಫಲಾನುಭವಿಗಳನ್ನು ತಲಪುತ್ತಿವೆಯೇ ಎಂಬ ಪ್ರಶ್ನೆ ಕಾಡುತ್ತಿದೆ. ಅರ್ಹರಿಗೆ ತ್ವರಿತವಾಗಿ ಸೂರು ಕಲ್ಪಿಸುವುದು ಸರ್ಕಾರದ ಆದ್ಯತೆಯಾಗಬೇಕಿದೆ.

ಬಸವಚೇತನ ಎಂ. ಹೂಗಾರ್, ಬೀದರ್

ದಿನಪತ್ರಿಕೆ ಓದಲು ಮಕ್ಕಳನ್ನು ಪ್ರೇರೇಪಿಸಿ

ಶಾಲೆಗಳಲ್ಲಿ ದಿನಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಿರುವ ಉತ್ತರ ಪ್ರದೇಶ ಸರ್ಕಾರದ ಆದೇಶ ಸ್ವಾಗತಾರ್ಹ. ಈ ಬಗ್ಗೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ಅವರ ಒತ್ತಾಯವೂ ಸಮಯೋಚಿತವಾಗಿದೆ. ನಾನು ಶಾಲಾ, ಕಾಲೇಜು, ಹಾಸ್ಟೆಲ್‌ನಲ್ಲಿ ಇದ್ದಾಗ 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಹಾಗೂ ಇತರ ದಿನಪತ್ರಿಕೆಗಳನ್ನು ಆಸಕ್ತಿಯಿಂದ ಓದುತ್ತಿದ್ದೆ. ಇದರಿಂದ ಸಾಮಾನ್ಯ ಜ್ಞಾನ ಹೆಚ್ಚಿಸಿಕೊಂಡಿದ್ದರಿಂದ 1983ರಲ್ಲಿ ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಕಂದಾಯ ಇಲಾಖೆಯಲ್ಲಿ ಕ್ಲರ್ಕ್ ಆಗಿ ನೇಮಕಗೊಂಡು, 2016ರಲ್ಲಿ ತಹಶೀಲ್ದಾರ್ ಆಗಿ ನಿವೃತ್ತಿ ಹೊಂದಿದೆ. ಪೋಷಕರು ಪ್ರತಿದಿನ ದಿನಪತ್ರಿಕೆ ಓದುವಂತೆ ಮಕ್ಕಳನ್ನು ಪ್ರೇರೇಪಿಸುವುದು ಒಳಿತು.

ಎಚ್. ದೊಡ್ಡಮಾರಯ್ಯ, ಬೆಂಗಳೂರು

ಪುತ್ರನಿಗೆ ಅನಾರೋಗ್ಯ: ನೆರವಿಗೆ ಮನವಿ

ಕಲಬುರಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಸಾ. ಬಾಚನಾಳ ಗ್ರಾಮದ ನಾನು ಅಂಗವಿಕಲ. ಐದು ವರ್ಷದ ನನ್ನ ಪುತ್ರ ಮಂಜುನಾಥ ವಿಜಯಕುಮಾರ್ ಥಲಸ್ಸೇಮಿಯಾ ಕಾಯಿಲೆಯಿಂದ ಬಳಲುತ್ತಿದ್ದಾನೆ. ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ ವೈದ್ಯರು ಮಗನಿಗೆ ಶಸ್ತ್ರಚಿಕಿತ್ಸೆ ಮಾಡಿಸಲು ₹30 ಲಕ್ಷ ವೆಚ್ಚವಾಗಲಿದೆ ಎಂದು ಹೇಳಿದ್ದಾರೆ. ಕುಟುಂಬದ ಜೀವನ ನಿರ್ವಹಣೆಯೇ ಕಷ್ಟಕರವಾಗಿದೆ. ದಾನಿಗಳು ಆರ್ಥಿಕ ನೆರವು ನೀಡಬೇಕೆಂದು ಕೋರುವೆ. ಬ್ಯಾಂಕ್ ಖಾತೆ ವಿವರ: ವಿಜಯ ಕುಮಾರ ಪರಮೇಶ್ವರ, ಎಸ್‌ಬಿಐ, ಖಾತೆ ಸಂಖ್ಯೆ: 641985 55507, ಐಎಫ್‌ಎಸ್‌ಸಿ ಕೋಡ್: SBIN0041110, ಕಮಲಾಪುರ ಶಾಖೆ ಅಥವಾ ಫೋನ್‌ಪೇ ನಂಬರ್: 81970 21784.

ವಿಜಯಕುಮಾರ ಪರಮೇಶ್ವರ, ಕಲಬುರಗಿ

ಚುರುಮುರಿ

ಅಬಕಾರಿ ಹಬ್ಬ

• ಮಣ್ಣೆ ರಾಜು

'ಹೊಸ ವರ್ಷಾಚರಣೆ ಎಂಬುದು 'ಅಬಕಾರಿ ಹಬ್ಬ'ದಂತಾಗಿಬಿಟ್ಟಿದೆ ಕಣ್ರೀ...' ಅಂದಳು ಸುಮಿ.

'ಎಣ್ಣೆಯಲ್ಲಿ ಬೋಂಡಾ ತೇಲಿಸೋದು ಮಾಮೂಲಿ ಹಬ್ಬ, ಎಣ್ಣೆ ಹಾಕ್ಕೊಂಡು ತೇಲಾಡೋದು ಅಬಕಾರಿ ಹಬ್ಬ!' ಅಂದ ಶಂಕ್ರಿ.

'ಹಬ್ಬದಂದು ಬೆಳಗಿನಿಂದಲೇ ಎಣ್ಣೆ ಮಾರಾಟಕ್ಕೆ, ಲೇಟ್‌ನೈಟ್ ಪಾರ್ಟಿಗಳಿಗೆ ಸರ್ಕಾರ ಅನುಮತಿ ಕೊಟ್ಟಿದೆ. ಎಣ್ಣೆ ಮತ್ತಿನಲ್ಲಿ ವ್ಹೀಲಿಂಗ್, ಕೀಟಲೆ ಮಾಡೋರು, ರಸ್ತೆಯಲ್ಲಿ ಬಿದ್ದವರ ಬಗ್ಗೆ ಪೊಲೀಸರು ನಿಗಾ ವಹಿಸುತ್ತಾರಂತೆ'.

'ಗಂಧದನಾಡು ಗಾಂಜಾಬೀಡು ಆಗಿಬಿಟ್ಟಿದೆ ಎಂದು ವಿಪಕ್ಷದವರು ಆರೋಪ ಮಾಡ್ತಿದ್ದಾರಲ್ರೀ...'

ಅಷ್ಟರಲ್ಲಿ ಬಂದ ಗೋಪಾಲಿ, ವೈಶಾಲಿ, 'ನ್ಯೂ ಇಯರ್ ಪಾರ್ಟಿಗೆ ನೀವೂ ಬರ್ತೀರೇನ್ರೀ?' ಎಂದು ಕೇಳಿದರು.

'ಕಿಕ್–ಔಟ್ ಇವೆಂಟ್‌ನವರು ಪಾರ್ಟಿ ಅರೇಂಜ್ ಮಾಡಿದ್ದಾರೆ, ನಾವು ಬುಕ್ ಮಾಡಿದ್ದೀವಿ, ಫ್ಯಾಮಿಲಿಗೆ ಸ್ಪೆಷಲ್ ಡಿಸ್ಕೌಂಟ್ ಇದೆ' ಎಂದಳು ವೈಶಾಲಿ.

'ಕಿಕ್–ಔಟ್ ಪಾರ್ಟಿಯಲ್ಲಿ ಏನೇನಿರುತ್ತೆ?' ಶಂಕ್ರಿಗೆ ಕುತೂಹಲ.

'ತಿನ್ನುವಷ್ಟು, ಕುಡಿಯುವಷ್ಟು, ಕುಣಿಯುವಷ್ಟು ಇರುತ್ತೆ' ಗೋಪಾಲಿ ಸಂಭ್ರಮದಿಂದ ಹೇಳಿದ.

'ವಯಸ್ಸಿಗೆ ಬಂದ ಮಕ್ಕಳಿದ್ದಾರೆ, ಅಂಥಾ ಪಾರ್ಟಿಗಳಿಗೆ ನಾವು ಬರೋದಿಲ್ಲ...' ಸುಮಿ ಕಾಫಿ ತಂದುಕೊಟ್ಟಳು.

'ಡ್ರಿಂಕ್ಸ್ ಮಾಡೋದು ಈಗೆಲ್ಲಾ ಕಾಮನ್. ನಮ್ಮ ಮಗ ಹೋದ ವರ್ಷದ ಪಾರ್ಟಿಯಲ್ಲಿ ಡ್ರಿಂಕ್ಸ್ ಕಲಿತ. ಬಹುತೇಕರು ನ್ಯೂ ಇಯರ್ ಪಾರ್ಟಿಯಿಂದಲೇ ಕುಡಿತ ಕಲಿಯುತ್ತಾರೆಂದು ಅಂಕಿಅಂಶ ಹೇಳುತ್ತೆ'.

'ಮಕ್ಕಳನ್ನೂ ಪಾರ್ಟಿಗೆ ಕರೆತನ್ನಿ, ಡ್ರಿಂಕ್ಸ್ ಬೇಡಾಂದ್ರೆ ಊಟ ಮಾಡಿ ಐಸ್‌ಕ್ರೀಂ ತಿನ್ನಬಹುದು. ಐಸ್‌ಕ್ರೀಂಗೆ ಚಾರ್ಜ್ ಇಲ್ಲ' ವೈಶಾಲಿ ಹೇಳಿದಳು.

'ಕೊರೆಯೋ ಚಳಿಯಲ್ಲಿ ಐಸ್‌ಕ್ರೀಂ ಯಾರಿಗೆ ಬೇಕು... ನಾವು ಬರೋದಿಲ್ಲ, ದೇವಸ್ಥಾನಕ್ಕೆ ಹೋಗಿ ಕೈ ಮುಗಿದು ಬರ್ತೀವಿ' ಸುಮಿ ನಿಷ್ಠುರವಾಗಿ ಹೇಳಿದಳು.

'ನೀವಿನ್ನೂ ಯಾವ ಕಾಲದಲ್ಲಿದ್ದೀರಿ? ಕಾಲಕ್ಕೆ ತಕ್ಕಂತೆ ಅಪ್‌ಡೇಟ್ ಆಗಬೇಕು...' ಎಂದು ಗೋಪಾಲಿ, ವೈಶಾಲಿ ಬೇಸರ ಮಾಡಿಕೊಂಡರು.

ಸಂಗತ

ಮರ್ಯಾದೆ ಹತ್ಯೆ: ಕಠಿಣ ಕಾನೂನು ಬೇಕು

ಜಾತಿಶ್ರೇಷ್ಠತೆಯ ಹೆಸರಿನಲ್ಲಿ ಕರುಳಕುಡಿಯನ್ನೇ ಕೊಲ್ಲುವ ಘಟನೆಗಳು ಸಮಾಜಕ್ಕೆ ಕಳಂಕ. ಈ ಕೊಳಕು ಮನಃಸ್ಥಿತಿಯನ್ನು ಕಠಿಣ ಕಾನೂನಿನ ಮೂಲಕ ಹತ್ತಿಕ್ಕಬೇಕು.

• ಮಂಜುಶ್ರೀ ಎಂ. ಕಡಕೋಳ

ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರದಲ್ಲಿ ನಡೆದ ಆರು ತಿಂಗಳ ಗರ್ಭಿಣಿ ಮಾನ್ಯಳ ಹತ್ಯೆ ಎಂಥವರ ಎದೆಯನ್ನೂ ನಡುಗಿಸುವಂಥದ್ದು. ಪರಿಶಿಷ್ಟ ಜಾತಿಯ ಯುವಕನನ್ನು ಪ್ರೀತಿಸಿ ಮದುವೆಯಾಗಿ, ಮನೆತನದ ಮರ್ಯಾದೆಗೆ ಕುಂದು ತಂದಳೆಂಬ ಕಾರಣಕ್ಕಾಗಿ ತಂದೆಯೇ ಮಗಳನ್ನು ಹತ್ಯೆ ಮಾಡಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂಥ ಘಟನೆ.

ಶುದ್ಧನೆತ್ತರಿನ ಭ್ರಮೆ, ಕುಟುಂಬದ ಮರ್ಯಾದೆ, ಸಮಾಜದ ಟೀಕೆಯ ಹೆಸರಿನಲ್ಲಿ ಪ್ರತಿವರ್ಷ ಭಾರತದಲ್ಲಿ ಮರ್ಯಾದೆಗೇಡು ಹತ್ಯೆಗೀಡಾಗುತ್ತಿರುವವರ ಸಂಖ್ಯೆ ಒಂದು ಸಾವಿರದಷ್ಟಿದೆ ಎನ್ನುತ್ತವೆ 'ಹಾನರ್ ಬೇಸ್ಡ್ ವಯಲೆನ್ಸ್ ಅವೇರ್‌ನೆಸ್ ನೆಟ್‌ವರ್ಕ್'ನ ಅಂಕಿ–ಅಂಶಗಳು. ಮಾಧ್ಯಮಗಳಲ್ಲಿ ವರದಿಯಾಗುವ ಪ್ರಕರಣಗಳು ಬೆರಳೆಣಿಕೆ, ವರದಿ ಆಗದ ಪ್ರಕರಣಗಳು ನೂರಾರು.

ಈ ಮೊದಲು, ಉತ್ತರಪ್ರದೇಶ, ಹರಿಯಾಣದಂಥ ರಾಜ್ಯಗಳಲ್ಲಷ್ಟೇ ಕೇಳಿಬರುತ್ತಿದ್ದ ಮರ್ಯಾದೆಗೇಡು ಹತ್ಯೆಗಳು ದಕ್ಷಿಣ ಭಾರತಕ್ಕೂ ಕಾಲಿಟ್ಟಿರುವುದು ಆತಂಕಕಾರಿ. ಇಂಥ ಹತ್ಯೆಗಳ ಜಾಡು ಹಿಡಿದು ಹೊರಟರೆ ವರ್ಣಸಂಕರದ ಭೀತಿಯ ಕಥನಗಳು ತೆರೆದುಕೊಳ್ಳುತ್ತವೆ. ಜಾತಿಪ್ರಾಬಲ್ಯದ ಪ್ರಬಲ ಮುದ್ರೆಯಾಗಿರುವ ಹತ್ಯೆಗಳಲ್ಲಿ ಬಲಿಪೀಠದಲ್ಲಿ ಮಹಿಳೆ ಇರುವುದು ಅಚ್ಚರಿಯೇನಲ್ಲ.

'ಸ್ವಜಾತಿ, ಸ್ವಧರ್ಮದ ಹೆಣ್ಣು ವರ್ಣಸಂಕರ ಆಗಬಾರದೆಂಬ ಉದ್ದೇಶದಿಂದ ಬಾಲ್ಯವಿವಾಹ, ಸತಿ ಸಹಗಮನ ಪದ್ಧತಿಯನ್ನು ರೂಪಿಸಲಾಗಿತ್ತು. ಅಂತೆಯೇ ಜಾತಿವ್ಯವಸ್ಥೆಯನ್ನು ಉಳಿಸಿಕೊಳ್ಳಲು ಹೆಣ್ಣಿನ ಲೈಂಗಿಕ ನಿಯಂತ್ರಣವೂ ಅಗತ್ಯ ಎಂಬ ಹುನ್ನಾರ ಪುರುಷ ಪ್ರಧಾನ ವ್ಯವಸ್ಥೆಯದಾಗಿತ್ತು' ಎಂದು ಅಂಬೇಡ್ಕರ್ ತಮ್ಮ 'ಭಾರತದಲ್ಲಿ ಜಾತಿಗಳು: ಅವುಗಳ ರಚನೆ, ಮೂಲ ಮತ್ತು ಬೆಳವಣಿಗೆ' ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಕರ್ನಾಟಕದಲ್ಲಿ ಮರ್ಯಾದೆಗೇಡು ಹತ್ಯೆಯ ಇತಿಹಾಸ 12ನೇ ಶತಮಾನದಿಂದಲೂ ಇದೆ. ಜಾತಿವಿನಾಶಕಾರಿ ಚಳವಳಿಗೆ ಮುನ್ನುಡಿ ಬರೆದಿದ್ದ ಬಸವಣ್ಣನವರು, ಸಮಗಾರ ಹರಳಯ್ಯ ಅವರ ಮಗ ಶೀಲವಂತನ ಜೊತೆಗೆ ಬ್ರಾಹ್ಮಣ ಮಧುವರಸರ ಮಗಳು ಲಾವಣ್ಯಳ ಮದುವೆ ಮಾಡಿಸುತ್ತಾರೆ. ಈ ವರ್ಣಸಂಕರವನ್ನು ಸಹಿಸಲಾಗದೆ ಕುಪಿತರಾಗುವ ಮನುವಾದಿಗಳು ಚಪ್ಪಲಿ ಹೊಲೆಯುವ ಜಾತಿಯ ವರನಿಗೆ ಬ್ರಾಹ್ಮಣ ಹೆಣ್ಣನ್ನು ಕೊಡುವುದು ಧರ್ಮಬಾಹಿರ, ವಿಲೋಮ ವಿವಾಹ ಎಂದು ಕಲ್ಯಾಣದ ದೊರೆ ಬಿಜ್ಜಳನಿಗೆ ದೂರುತ್ತಾರೆ. ಶಿಕ್ಷೆಗೆ ಗುರಿಯಾಗುವ ಹರಳಯ್ಯ, ಶೀಲವಂತ ಮತ್ತು ಮಧುವರಸ ಸಾವಿಗೀಡಾಗುತ್ತಾರೆ.

ಕೃತಕ ಬುದ್ಧಿಮತ್ತೆಯ ಕಾಲದಲ್ಲೂ ಧರ್ಮ, ಜಾತಿ ಕಾರಣಕ್ಕಾಗಿ ಮರ್ಯಾದೆಗೇಡು ಹತ್ಯೆಗಳಾಗುತ್ತಿವೆ. ಧಾರ್ಮಿಕ ಭಯೋತ್ಪಾದನೆಯಂತೆ, ಜಾತಿಯ ಭಯೋತ್ಪಾದನೆ ತನ್ನ ಕಬಂಧಬಾಹು ವಿಸ್ತರಿಸುವ ಮುನ್ನವೇ ಅದನ್ನು ಚಿವುಟುವ ಅಗತ್ಯವಿದೆ. 70–80ರ ದಶಕದಲ್ಲಿ ಅಂತರ್ಜಾತಿ, ಅಂತರಧರ್ಮೀಯ ವಿವಾಹಿತರಿಗೆ ಸಾಮಾಜಿಕ ಚಳವಳಿಗಳು, ಹೋರಾಟಗಾರರ ಬೆಂಬಲವಿರುತ್ತಿತ್ತು. 'ಜಾತಿ ಸುಡುವ ಮಂತ್ರ ಪ್ರೀತಿ' ಎನ್ನುವುದು ಕುವೆಂಪು ಅವರ ಮಂತ್ರಮಾಂಗಲ್ಯದ ಆಶಯ.

ಜನಚಳವಳಿಗಳಿಗೆ ಹಿನ್ನಡೆ ಆಗುತ್ತಿರುವ ವರ್ತಮಾನದಲ್ಲಿ ಮರ್ಯಾದೆಗೇಡು ಹತ್ಯೆಗಳು ಪ್ರಾಬಲ್ಯ ಮೆರೆಯುತ್ತಿವೆ. ಇಂಥ ಹತ್ಯೆಗಳನ್ನು ಕಾನೂನಿನ ಮೂಲಕ ತಡೆಗಟ್ಟಬೇಕಿದೆ; ಅಂತರ್ಜಾತಿ, ಅಂತರಧರ್ಮೀಯ ವಿವಾಹಿತರಿಗೆ ಸಾಮಾಜಿಕ ಮಾನ್ಯತೆ ನೀಡುವ ಮೂಲಕ ಪ್ರೀತಿಸುವ ಜೀವಗಳನ್ನು ಕಾಪಾಡಬೇಕಿದೆ.

ಮರ್ಯಾದೆಗೇಡು ಹತ್ಯೆಗಳನ್ನು ತಡೆಯುವಲ್ಲಿ ಕಾನೂನು ಮಾತ್ರ ಪ್ರಬಲ ಪಾತ್ರ ವಹಿಸಬಲ್ಲದು. ಶಕ್ತಿವಾಹಿನಿ ಮತ್ತು ಭಾರತ ಸರ್ಕಾರ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 'ಸಂಗಾತಿಯ ಆಯ್ಕೆಯ ಹಕ್ಕನ್ನು' ಸಂವಿಧಾನದ ವಿಧಿ 21 ಮತ್ತು 19 (1) (ಎ) ಅಡಿಯಲ್ಲಿ ಗುರುತಿಸಿದ್ದು, ಬಾಳ ಸಂಗಾತಿಯ ಆಯ್ಕೆಯ ವಿಚಾರದಲ್ಲಿ ಹಸ್ತಕ್ಷೇಪ ಮಾಡಲು ಮೂರನೇ ವ್ಯಕ್ತಿಗೆ ಯಾವುದೇ ಅಧಿಕಾರ ಇಲ್ಲ ಎಂದು ಘೋಷಿಸಿದೆ. ವಿವಾಹದ ಹಕ್ಕುಗಳಿಗೆ ಚ್ಯುತಿ ಉಂಟು ಮಾಡುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಆದೇಶಿಸಿದೆ. ವಯಸ್ಕರ ವಿವಾಹ ಕುರಿತಾಗಿ ಮತ್ತು ಬಾಳ ಸಂಗಾತಿಯ ಆಯ್ಕೆಯ ವಿಚಾರವಾಗಿ ನಡೆಯುವ ಸಮುದಾಯದ ಸಭೆಗಳು, ಖಾಪ್ ಪಂಚಾಯತ್, ಕಟ್ಟಾ ಪಂಚಾಯತ್‌ಗಳನ್ನು ಅಕ್ರಮ ಕೂಟಗಳೆಂದು ಭಾವಿಸಬೇಕೆಂದು ಸುಪ್ರೀಂ ಕೋರ್ಟ್ ಹೇಳಿದೆ.

ಮರ್ಯಾದೆಗೇಡು ಹತ್ಯೆಗಳ ಬಗೆಗಿನ ಸುಪ್ರೀಂ ಕೋರ್ಟ್ ತೀರ್ಪುಗಳು ಮಹತ್ವದ್ದಾಗಿವೆ. ಲತಾ ವರ್ಸಸ್ ಸ್ಟೇಟ್ ಆಫ್ ಯು.ಪಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೀಗೆ ಹೇಳಿದೆ:

'ಜಾತಿ ವ್ಯವಸ್ಥೆ ಈ ದೇಶಕ್ಕೆ ಅಂಟಿದ ಶಾಪ. ಎಷ್ಟು ಬೇಗ ಅದನ್ನು ನಾಶಪಡಿಸಲಾಗುತ್ತದೆಯೋ ಅಷ್ಟು ಒಳ್ಳೆಯದು. ದೇಶವು ಒಗ್ಗಟ್ಟಾಗಿ ತನ್ನ ಮುಂದಿರುವ ಸವಾಲುಗಳನ್ನು ಎದುರಿಸಬೇಕಾದ ಸಂದರ್ಭದಲ್ಲಿ ಜಾತಿ, ದೇಶವನ್ನು ಒಡೆಯುತ್ತಿದೆ. 'ಜಾತಿ ವ್ಯವಸ್ಥೆ'ಯನ್ನು ನಾಶಪಡಿಸುವ ಕಾರಣಕ್ಕೆ ಅಂತರ್ಜಾತಿ ಮದುವೆಗಳು ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿವೆ. ಆದರೆ, ದೇಶದ ಹಲವು ಭಾಗಗಳಲ್ಲಿ ಅಂತರ್ಜಾತಿ ಮದುವೆ ಮಾಡಿಕೊಳ್ಳುತ್ತಿರುವ ಯುವ ಜೋಡಿಗಳನ್ನು ಬೆದರಿಸುವ ಅಥವಾ ಹಿಂಸೆ ನೀಡುವಂಥ ಘಟನೆಗಳು ವರದಿ ಆಗುತ್ತಿರುವುದು ಆಘಾತಕಾರಿ. ಅಂತಹ ಹಿಂಸೆಯ ಘಟನೆಗಳು, ಬೆದರಿಕೆಗಳು, ಕಿರುಕುಳಗಳು ಸಂಪೂರ್ಣ ಕಾನೂನುಬಾಹಿರ ಮತ್ತು ಅವುಗಳನ್ನು ಎಸಗುವವರನ್ನು ಕಠಿಣವಾಗಿ ಶಿಕ್ಷಿಸಬೇಕು'. ರಾಜ್ಯ ಸರ್ಕಾರವೂ ಈ ನಿಟ್ಟಿನಲ್ಲಿ ಕಠಿಣ ಕಾಯ್ದೆಗಳನ್ನು ರೂಪಿಸುವ ಅಗತ್ಯವಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಲ್ತುಳಿತದ ಕಪ್ಪುಚುಕ್ಕೆ ಅಪರಾಧ ಕೃತ್ಯಗಳ ಸದ್ದು

● ಆದಿತ್ಯ ಕೆ.ಎ.

● ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡಿದ್ದ ಆರೋಪದ ಅಡಿ ನಟಿ ರನ್ಯಾ ರಾವ್ ಅವರನ್ನು ಕೇಂದ್ರದ ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು, ಮಾರ್ಚ್ 4ರಂದು ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದರು. ಅವರು ನೆಲಸಿದ್ದ ಫ್ಲ್ಯಾಟ್ ಮೇಲೆ ತನಿಖಾ ತಂಡವು ದಾಳಿ ನಡೆಸಿ ₹17.29 ಕೋಟಿಯ ಆಭರಣ, ನಗದು ಜಪ್ತಿ ಮಾಡಿಕೊಂಡಿತ್ತು. ಮಲತಂದೆ, ಡಿಜಿಪಿ ಕೆ.ರಾಮಚಂದ್ರ ರಾವ್ ಅವರ ಹೆಸರು ಬಳಸಿಕೊಂಡು ರನ್ಯಾ ಅವರು ವಿಮಾನ ನಿಲ್ದಾಣದಿಂದ ಹೊರಕ್ಕೆ ಬರುತ್ತಿದ್ದರು. ರಾಮಚಂದ್ರ ರಾವ್ ಅವರನ್ನು ರಾಜ್ಯ ಸರ್ಕಾರವು ಕಡ್ಡಾಯ ರಜೆಯ ಮೇಲೆ ಕಳುಹಿಸಿ, ತನಿಖೆಗೂ ಆದೇಶಿಸಿತ್ತು. ರನ್ಯಾ ವಿರುದ್ಧ 'ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆ' (ಕಾಫಿಪೋಸಾ) ಅಡಿ ಕೇಂದ್ರೀಯ ಆರ್ಥಿಕ ಗುಪ್ತಚರ ಬ್ಯೂರೊ (ಸಿಇಐಬಿ) ಬಂಧನದ ಆದೇಶ ಹೊರಡಿಸಿತ್ತು. ಜಾಮೀನು ಸಿಕ್ಕಿದರೂ ಬಿಡುಗಡೆಯ ಭಾಗ್ಯ ಸಿಕ್ಕಿಲ್ಲ.

● ರಾಜ್ಯದ ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಡಿಜಿ ಮತ್ತು ಐಜಿಪಿ) ಓಂ ಪ್ರಕಾಶ್ (68) ಅವರನ್ನು ಎಚ್‌ಎಸ್‌ಆರ್ ಲೇಔಟ್‌ನ ನಿವಾಸದಲ್ಲಿ ಏಪ್ರಿಲ್ 20ರಂದು ಹತ್ಯೆ ಮಾಡಲಾಗಿತ್ತು. ಈ ಕೊಲೆ ಪ್ರಕರಣವು ರಾಜ್ಯದಲ್ಲಿ ತಲ್ಲಣ ಮೂಡಿಸಿತ್ತು. ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ, ಪುತ್ರಿ ಕೃತಿಕಾ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಪಲ್ಲವಿ ಅವರನ್ನು ಪೊಲೀಸರು ಬಂಧಿಸಿದ್ದರು. ಆಸ್ತಿ ವಿವಾದವೇ ಕೊಲೆಗೆ ಪ್ರಮುಖ ಕಾರಣ ಆಗಿದೆ ಎಂಬುದು ಪೊಲೀಸ್ ತನಿಖೆಯಿಂದ ಬಯಲಾಗಿತ್ತು.

● 18 ವರ್ಷಗಳ ಬಳಿಕ ಐಪಿಎಲ್ ಟ್ರೋಫಿ ಗೆದ್ದ ಖುಷಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವವನ್ನು ಮೇ 4ರಂದು ಚಿನ್ನಸ್ವಾಮಿ ಕ್ರೀಡಾಂಗಣ ಹಾಗೂ ವಿಧಾನಸೌಧ ಮೆಟ್ಟಿಲು ಬಳಿ ಆಯೋಜನೆ ಮಾಡಲಾಗಿತ್ತು. ಸಾಗರೋಪಾದಿಯಲ್ಲಿ ಆರ್‌ಸಿಬಿ ಅಭಿಮಾನಿಗಳು ಹರಿದು ಬಂದಿದ್ದರು. ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಮಂದಿ ದುರಂತ ಸಾವು ಕಂಡಿದ್ದರು. ಘಟನೆ ಸಂಬಂಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಜೂನ್ 6ರಂದು ಆರ್‌ಸಿಬಿಯ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ, ಡಿಎನ್‌ಎ ಮ್ಯಾನೇಜ್‌ಮೆಂಟ್ (ಇವೆಂಟ್ ಮ್ಯಾನೇಜ್‌ಮೆಂಟ್) ಸಿಬ್ಬಂದಿ ಸುನಿಲ್ ಮ್ಯಾಥ್ಯೂ, ಕಿರಣ್, ಸುಮಂತ್ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು.

ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆಯಲ್ಲಿ ಭಾರಿ ಸಂಖ್ಯೆಯಲ್ಲಿ ಸೇರಿದ್ದ ಜನರು ಪ್ರಜಾವಾಣಿ ಚಿತ್ರ: ರಂಜು ಪಿ.

ಮುಡಾ: ಸಿ.ಎಂ. ನಿರಾಳ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಸ್ವಾಧೀನಕ್ಕೆ ಪಡೆದುಕೊಂಡಿದ್ದ ಭೂಮಿಗೆ ಪರಿಹಾರದ ನಿವೇಶನಗಳನ್ನು ಅಕ್ರಮವಾಗಿ ನೀಡಿದ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರವಿಲ್ಲ ಎಂದು ಲೋಕಾಯುಕ್ತ ಪೊಲೀಸರು ಕ್ಲೀನ್‌ಚಿಟ್ ನೀಡಿದರು. ಇದೇ ಪ್ರಕರಣದಲ್ಲಿ, ಮುಡಾ ಆಯುಕ್ತರಾಗಿದ್ದ ಜಿ.ಟಿ. ದಿನೇಶ್‌ಕುಮಾರ್ ಅವರ ವಿರುದ್ಧ ತನಿಖೆ ನಡೆಯುತ್ತಿದೆ. ಇ.ಡಿ ಸಹ ತನಿಖೆ ಮುಂದುವರಿಸಿದ್ದು, ಈವರೆಗೆ ₹400 ಕೋಟಿಗೂ ಹೆಚ್ಚು ಮೌಲ್ಯದ ನಿವೇಶನ, ಕಟ್ಟಡಗಳು ಮತ್ತು ಕಾರುಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ.

● ಜುಲೈ 15ರಂದು ರೌಡಿಶೀಟರ್ ಬಿಕ್ಲು ಶಿವು ಅವರ ಕೊಲೆ ನಡೆದಿತ್ತು. ಶಿವು ತಾಯಿ ನೀಡಿದ ದೂರು ಆಧರಿಸಿ ಕೆ.ಆರ್.ಪುರ ವಿಧಾನಸಭೆ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಬಂಧನದ ಭೀತಿಯಲ್ಲಿದ್ದ ಶಾಸಕರು ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದಾರೆ.

● ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಹೈಕೋರ್ಟ್ ಮಂಜೂರು ಮಾಡಿದ್ದ ಜಾಮೀನು ಆದೇಶವನ್ನು ಆಗಸ್ಟ್ 14ರಂದು ಸುಪ್ರೀಂ ಕೋರ್ಟ್ ರದ್ದು ಮಾಡಿತ್ತು. ನಟ ದರ್ಶನ್, ಅವರ ಗೆಳತಿ ಪವಿತ್ರಾಗೌಡ ಸೇರಿ ಏಳು ಆರೋಪಿಗಳು ಮತ್ತೆ ಪರಪ್ಪನ ಅಗ್ರಹಾರ ಜೈಲು ಸೇರುವಂತೆ ಆಯಿತು. 2024ರ ಜೂನ್ 7ರಂದು ರೇಣುಕಸ್ವಾಮಿ ಕೊಲೆ ನಡೆದಿತ್ತು. ಬೆಂಗಳೂರಿನ 57ನೇ ಎಸಿಎಂಎಂ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿದೆ.

● ಎಟಿಎಂ ಕೇಂದ್ರಕ್ಕೆ ಹಣ ತುಂಬಲು ಹೊರಟಿದ್ದ ಸಿಎಂಎಸ್ ಏಜೆನ್ಸಿ ವಾಹನವನ್ನು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳ ಸೋಗಿನಲ್ಲಿ ನ.19ರಂದು ಅಡ್ಡಗಟ್ಟಿದ್ದ ಆರೋಪಿಗಳು, ₹7.11 ಕೋಟಿ ದರೋಡೆ ನಡೆಸಿದ್ದರು. ದರೋಡೆ ಪ್ರಕರಣದ ಸೂತ್ರಧಾರನೇ ಗೋವಿಂದಪುರ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಅಣ್ಣಪ್ಪನಾಯ್ಕ ಎಂಬುದು ತನಿಖೆಯಿಂದ ಬಯಲಾಗಿತ್ತು. ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣದಲ್ಲಿ ಕಾರ್ಯಾಚರಣೆ ನಡೆಸಿ ಅಣ್ಣಪ್ಪ ನಾಯ್ಕ ಸೇರಿ 10 ಮಂದಿಯನ್ನು ಬಂಧಿಸಲಾಗಿತ್ತು.

● ರಾಜ್ಯದಲ್ಲಿ ಡ್ರಗ್ಸ್ ಹಾವಳಿಗೆ 2025ರಲ್ಲೂ ಕಡಿವಾಣ ಬೀಳಲಿಲ್ಲ. 'ಡ್ರಗ್ಸ್ ಮುಕ್ತ ಸಮಾಜ ನಿರ್ಮಿಸುತ್ತೇವೆ' ಎಂಬ ಘೋಷಣೆ ಸಾಕಾರಗೊಂಡಿಲ್ಲ. ಡ್ರಗ್ಸ್ ಪೆಡ್ಲರ್‌ಗಳು, ಖರೀದಿದಾರರು, ಗ್ರಾಹಕರ ವಿರುದ್ಧ ಈ ವರ್ಷ 5,930 ಪ್ರಕರಣಗಳು ದಾಖಲಾಗಿವೆ. ಬೆಂಗಳೂರಿನಲ್ಲಿಯೇ ₹162.87 ಕೋಟಿ ಮೌಲ್ಯದ ಡ್ರಗ್ಸ್ ವಶಕ್ಕೆ ಪಡೆಯುವಲ್ಲಿ ಪೊಲೀಸರು ಯಶಸ್ವಿ ಆಗಿದ್ದಾರೆ. ವರ್ಷಾಂತ್ಯದಲ್ಲಿ ಮಹಾರಾಷ್ಟ್ರದ ಮಾದಕವಸ್ತು ನಿಗ್ರಹ ಕಾರ್ಯಪಡೆ, ಬೆಂಗಳೂರಿನಲ್ಲಿ ಕಾರ್ಯಾಚರಣೆ ನಡೆಸಿ ₹55.88 ಕೋಟಿ ಮೌಲ್ಯದ ಡ್ರಗ್ಸ್ ವಶಕ್ಕೆ ಪಡೆದಿದೆ.

ಎರಡನೇ ವಿಮಾನ ನಿಲ್ದಾಣ ಗರಿಗೆದರಿದ ಕನಸು

ಬೆಂಗಳೂರು ಆಸುಪಾಸು ಎರಡನೇ ಅಂತರರಾಷ್ಟ್ರೀಯ ವಿಮಾನನಿಲ್ದಾಣ ನಿರ್ಮಾಣದ ಆರಂಭಿಕ ಪ್ರಯತ್ನವು 2025ರಲ್ಲಿ ಚುರುಕು ಪಡೆಯಿತು.

ಸಾಕಷ್ಟು ಕಸರತ್ತಿನ ನಂತರ ಕನಕಪುರ ರಸ್ತೆಯಲ್ಲಿರುವ ಚೂಡಹಳ್ಳಿ, ಸೋಮನಹಳ್ಳಿ ಮತ್ತು ನೆಲಮಂಗಲದ ಬಳಿ ಸ್ಥಳಗಳನ್ನು ಈಗಾಗಲೇ ಗುರುತಿಸಲಾಗಿದೆ. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಉನ್ನತ ಮಟ್ಟದ ತಂಡವು ಸ್ಥಳ ಪರಿಶೀಲನೆ ನಡೆಸಿ, ಪ್ರಾಥಮಿಕ ವರದಿ ನೀಡಿದೆ. ನೂತನ ವಿಮಾನ ನಿಲ್ದಾಣಕ್ಕೆ ಸ್ಥಳದ ಅನುಕೂಲ, ತಾಂತ್ರಿಕ ಹಾಗೂ ಆರ್ಥಿಕ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಪರಿಣತ ಸಲಹಾ ಸಂಸ್ಥೆಯ ಆಯ್ಕೆಗಾಗಿ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮವು (ಕೆಎಸ್‌ಐಐಡಿಸಿ) ಟೆಂಡರ್ ಆಹ್ವಾನಿಸಿದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ಹಾಗೂ ಕೇಂದ್ರ ಸರ್ಕಾರ ಮಾಡಿಕೊಂಡ ಒಪ್ಪಂದದ ಪ್ರಕಾರ, ಕೆಂಪೇಗೌಡ ವಿಮಾನ ನಿಲ್ದಾಣದ 150 ಕಿ.ಮೀ. ವ್ಯಾಪ್ತಿಯಲ್ಲಿ 2033ರವರೆಗೆ ಯಾವುದೇ ಹೊಸ ವಿಮಾನ ನಿಲ್ದಾಣ ನಿರ್ಮಿಸುವಂತಿಲ್ಲ. ಆದರೆ, ಭೂಸ್ವಾಧೀನ ಪ್ರಕ್ರಿಯೆ, ಅನುಮತಿ, ವಿಮಾನ ನಿಲ್ದಾಣ ಕಾಮಗಾರಿಗೆ ದೀರ್ಘ ಸಮಯ ಬೇಕಾಗುತ್ತದೆ. ಈಗಲೇ ಆರಂಭವಾಗಿರುವ ಪ್ರಕ್ರಿಯೆ ಅಂದುಕೊಂಡಂತೆ ನಡೆದರೆ 2033ರ ವೇಳೆಗೆ ವಿಮಾನ ನಿಲ್ದಾಣ ಕಾರ್ಯಾಚರಣೆ ಆರಂಭಿಸಬಹುದು ಎನ್ನುವುದು ರಾಜ್ಯ ಸರ್ಕಾರದ ಆಲೋಚನೆ.

ರಾಜ್ಯದಲ್ಲಿ ಏನೇನಾಯಿತು?

ಪ್ರಜಾವಾಣಿ ವಾರ್ತೆ

● ಈ ವರ್ಷ ರಾಜ್ಯದ ಒಂಬತ್ತು ಮಂದಿ 'ಪದ್ಮ' ಪುರಸ್ಕಾರಕ್ಕೆ ಭಾಜನರಾದರು. ಖ್ಯಾತ ಪಿಟೀಲು ವಾದಕ ಎಲ್.ಸುಬ್ರಮಣಿಯನ್ ಅವರು ಪದ್ಮವಿಭೂಷಣ, ಪತ್ರಕರ್ತ ಸೂರ್ಯಪ್ರಕಾಶ್ ಮತ್ತು ನಟ ಅನಂತನಾಗ್ ಪದ್ಮಭೂಷಣ, ತೊಗಲು ಬೊಂಬೆಯಾಟದ ಹಿರಿಯ ಕಲಾವಿದೆ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ, ಸಮರ ಕಲೆ ಪರಿಣತ ಹಾಸನ್ ರಘು, ಸಂಗೀತ ನಿರ್ದೇಶಕ ರಿಕಿ ಗ್ಯಾನ್ ಕೇಜ್, ಜನಪದ ಗಾಯಕ ವೆಂಕಪ್ಪ ಅಂಬಾಜಿ ಸುಗತೇಕರ, ಉದ್ಯಮಿ ಪ್ರಶಾಂತ್ ಪ್ರಕಾಶ್, ಕ್ಯಾನ್ಸರ್ ರೋಗ ಚಿಕಿತ್ಸಾ ತಜ್ಞೆ ವಿಜಯಲಕ್ಷ್ಮಿ ದೇಶಮಾನೆ ಅವರು 'ಪದ್ಮಶ್ರೀ' ಪುರಸ್ಕಾರಕ್ಕೆ ಆಯ್ಕೆಯಾದರು

● **ಫೆ.1:** ನಕ್ಸಲ್ ಚಟುವಟಿಕೆಯಲ್ಲಿ ಗುರುತಿಸಿಕೊಂಡಿದ್ದ ಲಕ್ಷ್ಮಿ ತೊಂಬಟ್ಟು ಅವರು ಉಡುಪಿ ಜಿಲ್ಲಾಧಿಕಾರಿ ವಿದ್ಯಾಕುಮಾರಿ ಸಮ್ಮುಖದಲ್ಲಿ ಶರಣಾದರು

● **ಫೆ.13:** ಹಾಲಕ್ಕಿ ಸಮುದಾಯದ ಹಾಡುಗಾರ್ತಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕತರಾದ ಅಂಕೋಲಾ ತಾಲ್ಲೂಕು ಬಡಗೇರಿಯ ಸುಕ್ರಿ ಬೊಮ್ಮಗೌಡ (88)ಅವರು ನಿಧನರಾದರು

● **ಮಾರ್ಚ್ 6:** ಗಂಗಾವತಿ ತಾಲ್ಲೂಕಿನ ಪ್ರವಾಸಿ ತಾಣ ಸಾಣಾಪುರದಲ್ಲಿ ಇಸ್ರೇಲ್ ಮಹಿಳೆ ಮತ್ತು ಸ್ಥಳೀಯ ಹೋಮ್ ಸ್ಟೇ ಒಡತಿ ಮೇಲೆ ಹಲ್ಲೆ ಹಾಗೂ ಅತ್ಯಾಚಾರ ನಡೆಯಿತು

● **ಏ.24:** ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ರಾಜ್ಯ ಸಚಿವ ಸಂಪುಟ ಸಭೆ ನಡೆಯಿತು. ₹3,645 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಅನುಮೋದನೆ ದೊರೆಯಿತು

● **ಮೇ 21:** ಭಾರತೀಯ ನೌಕಾಸೇನೆಯ ಹಡಗು 'ಐಎನ್‌ಎಸ್ ಕೌಂಡಿನ್ಯ'ವನ್ನು ಕಾರವಾರದ ಕದಂಬ ನೌಕಾನೆಲೆಯಲ್ಲಿ ಲೋಕಾರ್ಪಣೆ ಮಾಡಲಾಯಿತು

● **ಜೂನ್ 26:** ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ವನ್ಯಧಾಮದಲ್ಲಿ ವಿಷಪ್ರಾಷನದಿಂದ ಐದು ಹುಲಿಗಳು ಮೃತಪಟ್ಟಿರುವುದು ಬೆಳಕಿಗೆ ಬಂತು

● **ಜುಲೈ 14:** ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಅಂಬಾರಗೋಡ್ಲು-ಕಳಸವಳ್ಳಿ ನಡುವೆ ನಿರ್ಮಾಣಗೊಂಡಿದ್ದ ನೂತನ ತೂಗು ಸೇತುವೆ (ಸಿಗಂದೂರು ಸೇತುವೆ) ಉದ್ಘಾಟನೆಯಾಯಿತು

● **ಆ.14:** ಕಲಬುರಗಿಯ ಶರಣಬಸವೇಶ್ವರ ಮಹಾಸಂಸ್ಥಾನದ 8ನೇ ಪೀಠಾಧಿಪತಿ, ಕಲ್ಯಾಣವನ್ನು ಶಿಕ್ಷಣದ ಕಾಶಿಯಾಗಿಸಿದ್ದ ಶರಣಬಸವಪ್ಪ ಅಪ್ಪ ಅವರು ಅಸ್ತಂಗತರಾದರು

● **ಸೆಪ್ಟೆಂಬರ್ 4:** ಹಾಸನ ತಾಲ್ಲೂಕಿನ ಮೊಸಳೆ ಹೊಸಹಳ್ಳಿಯಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ಮೇಲೆ ಕ್ಯಾಂಟರ್ ಹರಿದು 10 ಜನರು ಮೃತಪಟ್ಟರು

● **ಸೆಪ್ಟೆಂಬರ್ 17:** ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವಸೀಗರನ್ ಎಂಬ ಕರಡಿಗೆ ಕೃತಕ ಕಾಲು ಜೋಡಣೆ ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿ ನಡೆಯಿತು. ವನ್ಯಜೀವಿಗೆ ಈ ರೀತಿಯ ಶಸ್ತ್ರ ಚಿಕಿತ್ಸೆ ನಡೆದಿರುವುದು ದೇಶದಲ್ಲಿ ಇದೇ ಮೊದಲು

● **ಸೆಪ್ಟೆಂಬರ್ 21:** ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಲ್ಲಿರುವ ಪಂಚಮಸಾಲಿ ಪೀಠದಿಂದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರನ್ನು ಅಖಿಲ ಭಾರತ ಪಂಚಮಸಾಲಿ ಲಿಂಗಾಯತ ಮಹಾಸಭಾವು ಉಚ್ಚಾಟಿಸಿತು

● ಟನ್ ಕಬ್ಬಿಗೆ ₹3,500 ದರ ನೀಡಬೇಕು ಎಂದು ಆಗ್ರಹಿಸಿ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಕ್ರಾಸ್ ಬಳಿ ರೈತರಿಂದ ಅ.30ರಿಂದ ನ.8ರವರೆಗೆ ಹೋರಾಟ ನಡೆಸಿದರು. ಟನ್ ಕಬ್ಬಿಗೆ ₹3,300 ನೀಡಲು ಸರ್ಕಾರ ಹಾಗೂ ಸಕ್ಕರೆ ಕಾರ್ಖಾನೆಗಳು ಒಪ್ಪಿದವು

● **ನ.11:** ಕೋಲಾರ ಜಿಲ್ಲೆಯ ಮಾಲೂರು ವಿಧಾನಸಭಾ ಕ್ಷೇತ್ರದ ಮರು ಮತಎಣಿಕೆ ನಡೆಯಿತು. ಮುಚ್ಚಿದ ಲಕೋಟೆಯಲ್ಲಿ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಕೆ. ಫಲಿತಾಂಶದಲ್ಲಿ ಯಾವುದೇ ಬದಲಾವಣೆ ಇಲ್ಲದ ಕಾರಣ ಶಾಸಕ ನಂಜೇಗೌಡ ನಿರಾಳರಾದರು

● ನವೆಂಬರ್‌ನಲ್ಲಿ ಬೆಳಗಾವಿ ಸಮೀಪದ ಭೂತರಾಮನ ಹಟ್ಟಿಯ ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಒಟ್ಟು 31 ಕೃಷ್ಣಮೃಗಗಳು ಗಳಲೆ ರೋಗದಿಂದ (ಬ್ಯಾಕ್ಟೀರಿಯಾ ಸೋಂಕು) ಮೃತಪಟ್ಟವು

● **ನ.26:** ಕಲಬುರಗಿ ಜಿಲ್ಲೆಯ ಜೇವರ್ಗಿಯ ಗೌನಳ್ಳಿ ಕ್ರಾಸ್ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಐಎಎಸ್ ಅಧಿಕಾರಿ ಮಹಾಂತೇಶ ಬೀಳಗಿ (51) ಸೇರಿ ನಾಲ್ವರು ಮೃತಪಟ್ಟರು

● **ನ.26:** ಮುರುಘರಾಜೇಂದ್ರ ಬೃಹನ್ಮಠದ ಶಿವಮೂರ್ತಿ ಶ್ರೀಗಳನ್ನು ಚಿತ್ರದುರ್ಗದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸಿವಿಲ್ ನ್ಯಾಯಾಲಯವು ಪೋಕ್ಸೋ ಅಡಿ ದಾಖಲಾಗಿರುವ ಒಂದು ಪ್ರಕರಣದಲ್ಲಿ ಆರೋಪಮುಕ್ತಗೊಳಿಸಿತು. ಅದರ ವಿರುದ್ಧ ಸಂತ್ರಸ್ತ ಬಾಲಕಿಯರು ಡಿ.10ರಂದು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದರು

● **ನ.28:** ಪ್ರಧಾನಿ ನರೇಂದ್ರ ಮೋದಿ ಅವರು ಉಡುಪಿಯ ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಿ ಲಕ್ಷ ಕಂಠ ಗೀತಾ ಪಾರಾಯಣ ಕಾರ್ಯಕ್ರಮದಲ್ಲಿ ಪಾಲ್ಗೊಂಡರು

● **ಡಿಸೆಂಬರ್ 25:** ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಗೋರ್ಲಡುಕು ಕ್ರಾಸ್ ಬಳಿ ರಂದು ಕಂಟೇನರ್‌ವೊಂದು ಡಿವೈಡರ್‌ಗೆ ಗುದ್ದಿ ವಿರುದ್ಧ ದಿಕ್ಕಿನಿಂದ ಬರುತ್ತಿದ್ದ ಸೀಬರ್ಡ್ ಸ್ಲೀಪರ್ ಬಸ್‌ಗೆ ಡಿಕ್ಕಿ ಹೊಡೆದಿದ್ದರಿಂದ ಬೆಂಕಿ ಹೊತ್ತಿಕೊಂಡು ಐವರು ಸುಟ್ಟು ಕರಕಲಾದರು

● 73 ವರ್ಷಗಳ ಬಳಿಕ ತುಂಗಭದ್ರಾ ಜಲಾಶಯದ 33 ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸುವ ಕಾರ್ಯ ಡಿಸೆಂಬರ್‌ನಲ್ಲಿ ಆರಂಭವಾಯಿತು

ಪಥಸಂಚಲನ ವಿವಾದ

ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಹಮ್ಮಿಕೊಂಡಿದ್ದ ಪಥಸಂಚಲನವು ಈ ವರ್ಷ ವಿವಾದಕ್ಕೆ ಗುರಿಯಾಯಿತು. ಇದೊಂದು ರಾಜಕೀಯ ವಿಚಾರವಾಗಿ ಬದಲಾಗಿ ಸೈದ್ಧಾಂತಿಕ ಸಂಘರ್ಷಕ್ಕೂ ಕಾರಣವಾಯಿತು. ಕಾಂಗ್ರೆಸ್ ಪಕ್ಷ, ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಬಿಜೆಪಿ, ಆರ್‌ಎಸ್‌ಎಸ್ ನಡುವೆ ವಾದ ಪ್ರತಿವಾದಗಳು ನಡೆದವು.

ಅ.19ರಂದು ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ನಿಗದಿಯಾಗಿದ್ದ ಆರ್‌ಎಸ್‌ಎಸ್ ಪಥಸಂಚಲನಕ್ಕೆ ತಾಲ್ಲೂಕು ಆಡಳಿತ ಅವಕಾಶ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಆರ್‌ಎಸ್‌ಎಸ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ಹೈಕೋರ್ಟ್ ಪಥಸಂಚಲನಕ್ಕೆ ಅವಕಾಶ ನೀಡುವಂತೆ ಸೂಚಿಸಿತು. ನ್ಯಾಯಾಲಯದಂತೆ ಜಿಲ್ಲಾಡಳಿತ ಅವಕಾಶ ನೀಡಿತು. ಪೊಲೀಸರ ಬಿಗಿ ಭದ್ರತೆಯಲ್ಲಿ ನವೆಂಬರ್ 26ರಂದು ಮಧ್ಯಾಹ್ನ 350 ಗಣವೇಷಧಾರಿಗಳು ಪಥಸಂಚಲನ ನಡೆಸಿದರು. ಅದರ ವೀಕ್ಷಣೆಗೆ ಸಾವಿರಾರು ಜನರು ಸೇರಿದ್ದರು.

ಆರ್‌ಎಸ್‌ಎಸ್ ಪಥಸಂಚಲನಕ್ಕೆ ಪರ್ಯಾಯವಾಗಿ ವಿವಿಧ ಪ್ರಗತಿಪರ ಸಂಘಟನೆಗಳಿಂದ ಸಂವಿಧಾನ ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ಡಿ.1ರಂದು 'ಭೀಮನಡೆ' ಮೆರವಣಿಗೆ ಹಾಗೂ ಸಂವಿಧಾನ ಸಮಾವೇಶವೂ ನಡೆಯಿತು.

ಜನಪ್ರತಿನಿಧಿಗಳಿಗೆ ತನಿಖೆ ಬಿಸಿ

ಸತೀಶ್ ಸೈಲ್: ಬೇಲೆಕೇರಿ ಅದಿರು ಕಳ್ಳಸಾಗಣೆ ಪ್ರಕರಣದಲ್ಲಿ ಕಾರವಾರ ಕ್ಷೇತ್ರದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ವಿರುದ್ಧ ಆರೋಪ ಸಾಬೀತಾಗಿತ್ತು. ಈ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಸೈಲ್ ಅವರಿಗೆ ಏಳು ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಇದಕ್ಕೆ ಹೈಕೋರ್ಟ್‌ನಿಂದ ತಡೆ ತಂದರೂ ಇ.ಡಿಯು ಪ್ರಕರಣ ದಾಖಲಿಸಿ ಬಂಧಿಸಿತು. ₹40 ಕೋಟಿಗೂ ಹೆಚ್ಚು ಮೊತ್ತದ ಆಸ್ತಿ ಮುಟ್ಟುಗೋಲು ಹಾಕಿಕೊಂಡಿತು.

ಬಿ.ನಾಗೇಂದ್ರ: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಖಾತೆಗಳಿಂದ ₹89 ಕೋಟಿ ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ (ಬಳ್ಳಾರಿ ಗ್ರಾಮಾಂತರ ಕ್ಷೇತ್ರ) ಬಿ.ನಾಗೇಂದ್ರ ಅವರನ್ನು ಇ.ಡಿ ಬಂಧಿಸಿತ್ತು. ಈ ಪ್ರಕರಣದಲ್ಲಿ ಒಂದೆಡೆ ಸಿಐಡಿ, ಇನ್ನೊಂದೆಡೆ ಸಿಬಿಐ ಮತ್ತು ಇ.ಡಿ ತನಿಖೆ ನಡೆಸುತ್ತಿವೆ. ನಾಗೇಂದ್ರ ಅವರು ಜಾಮೀನಿನ ಮೇಲೆ ಹೊರಗಿದ್ದಾರೆ. ಈಚೆಗಷ್ಟೇ ₹12 ಕೋಟಿ ಮೊತ್ತದ ಆಸ್ತಿಯನ್ನು ಇ.ಡಿ ಮುಟ್ಟುಗೋಲು ಹಾಕಿಕೊಂಡಿತು.

ಶಾಸಕ ಕೆ.ಸಿ.ವೀರೇಂದ್ರ ಅವರ ಬ್ಯಾಂಕ್ ಲಾಕರ್‌ನಲ್ಲಿ ಪತ್ತೆಯಾದ ಚಿನ್ನ ಮತ್ತು ಚಿನ್ನಲೇಪಿತ ಬೆಳ್ಳಿಯ ಬಿಸ್ಕತ್ತುಗಳು

ಕೆ.ಸಿ.ವೀರೇಂದ್ರ: ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ನಡೆಸಿದ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ (ಚಳ್ಳಕೆರೆ) ಕೆ.ಸಿ.ವೀರೇಂದ್ರ ಅವರನ್ನು ಇ.ಡಿ. ಬಂಧಿಸಿತ್ತು. ದಾಳಿಯ ವೇಳೆ ಕೆ.ಜಿ.ಗಟ್ಟಲೆ ಚಿನ್ನದ ಗಟ್ಟಿಗಳು, ₹60 ಕೋಟಿಗೂ ಹೆಚ್ಚು ನಗದು, ಲಕ್ಷಾಂತರ ರೂಪಾಯಿ ಮೌಲ್ಯದ ಕೈಗಡಿಯಾರಗಳು, ₹10 ಕೋಟಿಗೂ ಹೆಚ್ಚು ಮೌಲ್ಯದ ಕಾರುಗಳನ್ನು ಇ.ಡಿ ಮುಟ್ಟುಗೋಲು ಹಾಕಿಕೊಂಡಿತು.

ವಿನಯ್ ಕುಲಕರ್ಣಿ: ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣ ಮತ್ತು ಐಶ್ವರ್ಯ ಗೌಡ ಚಿನ್ನ ವಂಚನೆ ಪ್ರಕರಣದಲ್ಲಿ ಪೊಲೀಸ್, ಲೋಕಾಯುಕ್ತ ಮತ್ತು ಇ.ಡಿ ವಿಚಾರಣೆಯನ್ನು ಧಾರವಾಡ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಎದುರಿಸುತ್ತಿದ್ದಾರೆ. ಕೊಲೆ ಪ್ರಕರಣದಲ್ಲಿ ಅವರಿಗೆ ನೀಡಿದ್ದ ಜಾಮೀನನ್ನು ಇದೇ ಜೂನ್ 6ರಂದು ಸುಪ್ರೀಂ ಕೋರ್ಟ್ ರದ್ದುಪಡಿಸಿತ್ತು, ಆ ನಂತರ ಜೂನ್ 15ರಂದು ನ್ಯಾಯಾಲಯಕ್ಕೆ ಅವರು ಶರಣಾಗಿದ್ದರು. ಈಗ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

ಜಿ.ಜನಾರ್ದನ ರೆಡ್ಡಿ: ಗಂಗಾವತಿ ಕ್ಷೇತ್ರದ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಶಾಸಕ ಜನಾರ್ದನ ರೆಡ್ಡಿ ವಿರುದ್ಧದ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಹೈದರಾಬಾದ್‌ನ ವಿಶೇಷ ನ್ಯಾಯಾಲಯವು ಏಳು ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಇದರಿಂದ ಅವರ ಶಾಸಕ ಸ್ಥಾನ ರದ್ದಾಗಿತ್ತು. ತೆಲಂಗಾಣ ಹೈಕೋರ್ಟ್‌ನಲ್ಲಿ ಶಿಕ್ಷೆ ಜಾರಿಗೆ ತಡೆ ತಂದಿದ್ದರಿಂದ, ಶಾಸಕ ಸ್ಥಾನ ಮರುಸ್ಥಾಪನೆಯಾಯಿತು.

ಮುನಿರತ್ನ: ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ಜಾತಿ ನಿಂದನೆ, ಕೊಲೆ ಬೆದರಿಕೆ, ಅತ್ಯಾಚಾರ ಆರೋಪದ ಸಂಬಂಧ ವಿವಿಧ ಪ್ರಕರಣಗಳು ದಾಖಲಾಗಿವೆ. ಹಲವು ದಿನ ಪೊಲೀಸ್ ಮತ್ತು ನ್ಯಾಯಾಂಗ ಬಂಧನಲ್ಲಿದ್ದರು. ಈಗ ಜಾಮೀನಿನ ಮೇಲೆ ಹೊರಗಿದ್ದಾರೆ.

ಧರ್ಮಸ್ಥಳ ಪ್ರಕರಣ

ಈ ವರ್ಷ ರಾಜ್ಯವಲ್ಲದೆ, ದೇಶದಾದ್ಯಂತ ಚರ್ಚೆ ಹುಟ್ಟುಹಾಕಿದ್ದು ಧರ್ಮಸ್ಥಳ ಪ್ರಕರಣ. ಧರ್ಮಸ್ಥಳದಲ್ಲಿ ಹಿಂದಿನಿಂದಲೂ ಹಲವಾರು ಅಪರಾಧ ಕೃತ್ಯಗಳು ನಡೆದಿದ್ದು, ಮೃತದೇಹಗಳನ್ನು ರಹಸ್ಯವಾಗಿ ವಿಲೇವಾರಿ ಮಾಡಿಸಿದ್ದಾರೆ ಎಂದು ವ್ಯಕ್ತಿಯೊಬ್ಬರು ಜುಲೈ 3ರಂದು ದೂರು ನೀಡಿದರು. ಅವರು ಸಾಕ್ಷಿಯಾಗಿ ಬೆಳ್ತಂಗಡಿ ನ್ಯಾಯಾಲಯಕ್ಕೆ ಜುಲೈ 11ರಂದು ಹಾಜರಾದರು. ತನಿಖೆಗಾಗಿ ರಾಜ್ಯ ಸರ್ಕಾರ ಡಿಜಿಪಿ ಪ್ರಣವ್ ಮೊಹಾಂತಿ ನೇತೃತ್ವದಲ್ಲಿ ಜುಲೈ 19ರಂದು ಎಸ್‌ಐಟಿ ರಚಿಸಿತು.

ಜುಲೈ 29ರಿಂದ ಮೃತದೇಹಗಳ ಅವಶೇಷಗಳಿಗಾಗಿ 17 ಕಡೆ ಶೋಧಕಾರ್ಯ ನಡೆಯಿತು. ನಂತರ ಪ್ರಕರಣಕ್ಕೆ ತಿರುವು ದೊರೆತು ಸಾಕ್ಷಿ ದೂರುದಾರನನ್ನೇ ಎಸ್‌ಐಟಿ ಬಂಧಿಸಿತು. ಆಗಸ್ಟ್ 23ರಂದು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಹಾಜರು ಪಡಿಸಲಾಯಿತು. ನ್ಯಾಯಾಂಗ ಬಂಧನದಲ್ಲಿದ್ದ ಸಾಕ್ಷಿ ದೂರುದಾರ ಡಿಸೆಂಬರ್ 18ರಂದು ಜಾಮೀನಿನ ಮೇಲೆ ಬಿಡುಗಡೆಯಾದರು. ನ್ಯಾಯಾಲಯಕ್ಕೆ 5,000ಕ್ಕೂ ಹೆಚ್ಚು ಪುಟಗಳ ವರದಿಯನ್ನು ಎಸ್‌ಐಟಿ ಸಲ್ಲಿಸಿದ್ದು, ಸಾಕ್ಷಿ ದೂರುದಾರ, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ ಮಟ್ಟೆಣ್ಣವರ, ಜಯಂತ್ ಟಿ., ವಿಠಲ ಗೌಡ, ಸುಜಾತಾ ಭಟ್ ಅವರು ನ್ಯಾಯಾಲಯದ ದಾರಿ ತಪ್ಪಿಸಿರುವುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಅಗಲಿದ ಪ್ರಮುಖರು

● ಕನ್ನಡದ ಖ್ಯಾತ ಕಾದಂಬರಿಕಾರರಾಗಿದ್ದ ಎಸ್.ಎಲ್.ಭೈರಪ್ಪ ಅವರು ಸೆಪ್ಟೆಂಬರ್ 24ರಂದು ತಮ್ಮ 94ನೇ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ನಿಧನರಾದರು

● ಸಾಹಿತಿ ಎಚ್.ಎಸ್. ವೆಂಕಟೇಶಮೂರ್ತಿ (80) ಅವರು ಮೇ 30ರಂದು ನಿಧನರಾದರು

● ಸಾಹಿತಿ, ವಿಮರ್ಶಕ ಜಿ.ಎಸ್.ಸಿದ್ದಲಿಂಗಯ್ಯ (94) ಅವರು ಮೇ 7ರಂದು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು

● ಸಾಹಿತಿ, ವಿಮರ್ಶಕ ಪಿ.ವಿ. ನಾರಾಯಣ (82) ಅವರು ಏಪ್ರಿಲ್ 3ರಂದು ನಿಧನರಾದರು

● ಪರಿಸರದ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದ, ಸಾಲು ಗಿಡಗಳನ್ನು ನೆಟ್ಟು ಪೋಷಿಸಿ 'ಸಾಲುಮರದ ತಿಮ್ಮಕ್ಕ' ಎಂದೇ ಖ್ಯಾತರಾಗಿದ್ದ ತಿಮ್ಮಕ್ಕ ಅವರು ನವೆಂಬರ್ 14ರಂದು ತಮ್ಮ 114ನೇ ವಯಸ್ಸಿನಲ್ಲಿ ಅಗಲಿದರು

ರೂಪಾಂತರದ ಚೆಲುವು

ನುಡಿ ಬೆಳಗು

ವಾಸುದೇವ ನಾಡಿಗ್

ಬೆಂಕಿ ನೀರು ಬಾಣಲೆ ಪಾತ್ರೆ ಯಾವುದೂ ಬದಲಾಗೊಲ್ಲ. ಅದರ ಸಂಗಕ್ಕೆ ಬಿದ್ದು ಕುದ್ದು ಹೋಗುವ ವಸ್ತುಗಳೇ ಬದಲಾಗುತ್ತವೆ ಎಂಬ ಅನೇಕ ಉದಾಹರಣೆಗಳು ನಮ್ಮನ್ನು ಇನ್ನೆಲ್ಲೋ ಕೊಂಡೊಯ್ದು ಬಿಡುತ್ತವೆ. ಇಂಥದ್ದೇ ಒಂದು ಯೋಚನೆಯನ್ನು ಒಬ್ಬ ಝೆನ್ ಗುರು ಕರೆದು ತೋರಿಸಿದ ಸಂಗತಿ ಇದು. ಒಂದೇ ಬಗೆಯ ಒಲೆ, ಒಂದೇ ಬಗೆಯ ಪಾತ್ರೆ ಮತ್ತು ಒಂದೇ ಮಟ್ಟದ ನೀರು. ಮೂರು ಪಾತ್ರೆಗಳಲ್ಲಿ ಒಂದೊಂದು ವಸ್ತುವನ್ನು ಹಾಕಿ ತೋರಿಸಲಾಗುತ್ತದೆ. ಒಂದು ಪಾತ್ರೆಯಲ್ಲಿ ಕ್ಯಾರೆಟ್, ಇನ್ನೊಂದರಲ್ಲಿ ಮೊಟ್ಟೆ, ಮತ್ತೊಂದರಲ್ಲಿ ಚಹಾ ಪುಡಿ ಹಾಕಲಾಗುತ್ತದೆ. ನೀರು ಕೊತ ಕೊತ ಕುದಿಯಲು ತೊಡಗಿದಾಗ ಗಡಸು ಕ್ಯಾರೆಟ್ ಮೃದುವಾದರೆ, ಮೊಟ್ಟೆ ಒಳಗಿನ ದ್ರವ ಗಟ್ಟಿಯಾಗುತ್ತದೆ. ಚಹಾ ನೀರಿನ ಬಣ್ಣ ಮತ್ತು ವಾಸನೆಯನ್ನೇ ಬದಲಾಯಿಸಿ ಬಿಟ್ಟಿರುತ್ತದೆ. ಎದುರಾಗುವ ಸವಾಲುಗಳು ವಸ್ತುವನ್ನು ಬದಲಾಯಿಸುವ ಪರಿ ಇದು.

ಕ್ಯಾರೆಟ್ ನೀರಿನ ಕುದಿಯನ್ನು ಸಹಿಸಲಾರದೆ ಮೆದುವಾದರೆ, ಕುದಿತಕ್ಕೆ ಮೈಗೊಟ್ಟು ಮೊಟ್ಟೆಯ ಒಳದ್ರವ ಗಟ್ಟಿಯಾಗುತ್ತದೆ. ಆದರೆ, ಚಹಾ ತನ್ನ ಇರುವಿಕೆಯನ್ನೇ ಬದಲಾಯಿಸಿಕೊಂಡು ನೀರನ್ನೂ ಬದಲಾಯಿಸಿ ಕಂಪನ್ನು ಬೀರಲು ಶುರುಮಾಡುತ್ತದೆ.

ಯಾರಿಗಿಲ್ಲ ನೋವು ಇಲ್ಲಿ? ಒಂದಿಲ್ಲೊಂದು ಸಮಸ್ಯೆಗಳ ಉರಿಯಲ್ಲಿ ಜೀವದ ಬಟ್ಟಲು ಕಾದು ನೀರನ್ನು ಕುದಿಸಿ ಜೀವವನ್ನು ಕಾಡುತ್ತದೆ. ಕೆಲವರು ತಾಳಲಾರದೆ ಕುಗ್ಗಿ ಮೃದುವಾಗಿ ಬಿಡುತ್ತಾರೆ. ಕೆಲವರು ಕವಚವನ್ನು ಬಲಪಡಿಸಿಕೊಂಡು ಗಡಸು ನಿಷ್ಠುರರಾಗಿ ಬಿಡುತ್ತಾರೆ. ಇನ್ನು ಕೆಲವರು ರೂಪಾಂತರ ಹೊಂದಿ ಜೀವನದ ಅರ್ಥವನ್ನೇ ಬದಲಾಯಿಸಿ ಬಿಡುತ್ತಾರೆ. ಚಹಾದಂತೆ ತನ್ನನ್ನು ತಾನು ಬದಲಾಯಿಸಿಕೊಂಡು ಎದುರಾದ ಬಾಳಿನ ಸ್ವರೂಪವನ್ನೇ ಬದಲಾಯಿಸಿ ಭಿನ್ನವಾದ ರುಚಿ ಮತ್ತು ಪರಿಮಳವನ್ನೇ ಹೊದ್ದುಕೊಂಡು ಅನನ್ಯರಾಗುತ್ತಾರೆ. ಚಹಾದ ಥರ ಸುತ್ತಲಿನ ಮನಸ್ಸುಗಳನ್ನೂ ಪ್ರಫುಲ್ಲಗೊಳಿಸಿಬಿಡುತ್ತಾರೆ. ಅದೇ ಹಗಲು ಅದೇ ಇರುಳು ಅದೇ ಲಯ ಅದೇ ತಾಳ ಅದೇ ಬಾಳಿನ ಸರಿದಾಟವಾದರೂ ಎದುರಾಗುವ ಸಮಸ್ಯೆ ಮತ್ತು ಸವಾಲುಗಳನ್ನು ಬಹಳ ಭಿನ್ನವಾಗಿ ಸ್ವೀಕರಿಸಿ ನಕ್ಕು ಮುನ್ನಡೆಯುತ್ತಾರೆ. ಸಂತರು, ಶರಣರು, ಚಿಂತಕರು, ಕಲಾವಿದ, ಸಾಹಿತಿಗಳು ಹೀಗೇ. ಜೀವನಶೈಲಿಯನ್ನೇ ಬದಲಾಯಿಕೊಂಡು ಗಂಧ ಬೀರುತ್ತ ಸಾಗುತ್ತಾರೆ.

ಈ ಬಾಳು ಕೂಡಾ ಹಾಗೆಯೇ; ತೀರಾ ಮೃದುವಾದರೆ ಶೋಷಣೆ ಮಾಡುತ್ತದೆ, ತೀರಾ ಒರಟಾದರೆ ಹುಂಬ ಎಂದು ಏನನ್ನೂ ಕಲಿಸಲಾರದು. ಈ ಎರಡರ ನಡುವಿನ ಒಂದು ನಿಲುವು ಇದೆ ನೋಡಿ, ಅದು ರೂಪಾಂತರ. ತನ್ನನ್ನು ತಾನೇ ಹೊಸ ರೂಪದಲ್ಲಿ ಬದಲಾಯಿಸಿಕೊಳ್ಳುವುದು ಅದು ಇಲ್ಲಿನ ಒಳ ಮಾತು.

ಬೆಂಕಿ ನೀರು ಬಟ್ಟಲು ಯಾವುದೂ ಬದಲಾಗದೇ ಇದ್ದರೂ ಅವು ನಮ್ಮನ್ನು ಬದಲಾಯಿಸುತ್ತವೆ. ಸಾವಿರಾರು ಸಲ ಒಗ್ಗರಣೆಗೆ ತನ್ನನ್ನು ತಾನು ಸುಟ್ಟುಕೊಂಡ ಸೌಟು ಬದಲಾಗೋದೇ ಇಲ್ಲ. ಆದರೆ ಅದರಾಚೆ ಸವಿದ ರುಚಿಯ ಮೂಲಕ ನಾವು ಬದಲಾಗುತ್ತಲೇ ಇರುತ್ತೇವೆ. ಸದಾ ನಮ್ಮ ಸಂಯಮವನ್ನು ಪರೀಕ್ಷೆ ಮಾಡಲು ಎದುರಾಗುವ ಸನ್ನಿವೇಶಗಳು ಕೊನೆಗೂ ನಮ್ಮಿಂದ ಬಯಸೋದಾದರೂ ಏನು? ಅದೇ ಹೊಂದಿಕೊಂಡು ಸಾಗುವ ಚಹಾಪುಡಿಯ ಅನನ್ಯ ಸೊಬಗೇ ಅಲ್ಲವೆ? ❖

ಪದಬಂಧ 6270

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

2.ಬಾಯಿ ತುಂಬುವಷ್ಟು ಆಹಾರ (3)
4.ಕೊನೆಗೆ ವೃಕ್ಷವಿದ್ದಾಗ ಆವರಿಸಿದ ಕ್ಷಾಮ (3)
5.ಸ್ವಂತ ಅನುಭವಕ್ಕೆ ಬಂದಿರುವ ತಿಳಿವು (4)
6.ನಡುವೆ ಪತ್ರ ಬಂದದಕ್ಕೇ ಈ ತೊಂದರೆ! (4)
7.ನಡುಗುವುದನ್ನ ನೋಡಿದಾಗ ಉಕ್ಕಿದ ಮಂದಹಾಸ (2)
9.ತರತಮ ಮಾಡಿದಾಗ ಆವರಿಸಿದ ಕತ್ತಲು (2)
13.ಕಳವಳ ಹೀಗೆ ಬಂದಿದೆ (4)
14.ಹಾರ ಹಿಡಿದುಕೊಂಡಿರುವ ದ್ವಾರಪಾಲಕ (4)
15.ದನಕರುಗಳ ಮೂತ್ರ (3)
16.ಈತ ಬಲಶಾಲಿಯಾದವನು (3)

ಮೇಲಿಂದ ಕೆಳಕ್ಕೆ

1.ಗಾದೆಯಂತೆ ಗಡಿಗೆ ತುಪ್ಪ ತಿನ್ನಲು ಮಾಡಬೇಕಾದ್ದು! (4)
2.ಕೈಯನ್ನು ತಟ್ಟುವಿಕೆ (5)
3.ಅನುಭೂತಿಗಾಗಿ ಧರಿಸಿರುವ ಭಸ್ಮ (3)
5.ಕಬ್ಬಿಣವನ್ನು ಆಕರ್ಷಿಸುವ ಗುಣ ಇದಕ್ಕಿದೆ (4)
8.ಆಚಾರ್ಯನಿಂದ ಮಹತ್ತರವಾದುದು ಬಂದಿದೆಯಲ್ಲಾ! (4)
10.ಅಳಿಯನನ್ನು ಹೀಗೆನ್ನಿ (5)
11.ಮರ ಬಳ್ಳಿ ಇಲ್ಲಿ ಕಾಣುತ್ತಿವೆ (4)
12.ಇದು ಗುರುತು (3)

6269ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಸುಗೂಸು 5.ವಾಮ 6.ಮದನ 7.ಪ್ರಮುಖ 9.ಚಿತ್ರದುರ್ಗ 11.ರಕುತ 13.ಗಾಣಿಗ 15.ಬೆಳಗಾವಿ 16.ಲವಣ 18.ಕಿಂದರಿ 20.ಚುಕ್ಕಿ 21.ಪುಷ್ಕರಿಣಿ

ಮೇಲಿಂದ ಕೆಳಕ್ಕೆ:
2.ಸುನಿಮು 3.ಸುಮ 4.ವನದುರ್ಗ 5.ವಾದಸರಣಿ 7.ಪ್ರಕರ 8.ಖಚಿತ 10.ದುರುಳ 12.ಕುಸುಬಲಕ್ಕಿ 13.ಗಾವಿಲ 14.ಗರ್ಹಣ 15.ಬೆಳಕಿಂಡಿ 17.ವಲ್ಲರಿ 19.ರಿಪು

ಸುಡೊಕು 6654

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5	4		7			3	
7			2		3	6		8
8				4			2	
4		3		1		8		6
			9		4		7	
9		8		3		4		1
1		9	3		5		8	7
	6			9				
5		7	4		1	9		3

6653 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

31 ಡಿಸೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ದ್ವಾದಶಿ ಗಂ 25-48 ನಕ್ಷತ್ರ: ಕೃತ್ತಿಕಾ ಗಂ 25-30 ಯೋಗ: ಸಾಧ್ಯ ಗಂ. 21-14 ಕರಣ: ಬವ ಗಂ. 15-27, ನಂತರ ಬಾಲವ ಗಂ 25-48 ಧನು ಮಾಸದ 16 ನೇ ದಿನ. ಮಳೆ ನಕ್ಷತ್ರ : ಪೂರ್ವಾಷಾಢ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 ಸೂರ್ಯೋದಯ : 06-57 ಸೂರ್ಯಾಸ್ತ : 06-10, ಮುಸ್ಲಿಂ ದಿನಾಂಕ : 10 ರಜಬ್, ದಿನ ವಿಶೇಷ : ನ್ಯೂ ಇಯರ್ ಈವ್, ಅದೃಷ್ಟ ಸಂಖ್ಯೆ : 1, 7

ಮೇಷ: ಕಾನೂನು ವಿಷಯದಲ್ಲಿ ನಂಬಿಕಸ್ಥ ಹಾಗು ತಿಳಿವಳಿಕೆಯುಳ್ಳ ವ್ಯಕ್ತಿಯಿಂದ ಸಲಹೆ ಪಡೆದುಕೊಳ್ಳುವಿರಿ. ಕೆಲಸದ ಹೊರೆ ಹೆಚ್ಚಾಗಿ ಮಡದಿ ಮಕ್ಕಳಿಂದ ಸಹಕಾರ ಯಾಚಿಸಬೇಕಾಗುವುದು.

ವೃಷಭ: ಕೌಟುಂಬಿಕವಾಗಿ ನಡೆದುಕೊಂಡು ಬಂದಂಥ ದೇವತಾ ಅಥವಾ ದೈವ ಕಾರ್ಯವನ್ನು ಹಮ್ಮಿಕೊಳ್ಳುವ ತೀರ್ಮಾನ ಆಗುವುದು. ಸಹೋದ್ಯೋಗಿಯ ನೆರವಿನಿಂದ ಕಾರ್ಯಗಳು ಶೀಘ್ರ ಸಂಪನ್ನಗೊಳ್ಳಲಿವೆ.

ಮಿಥುನ: ಸೃಜನಶೀಲ ಬರವಣಿಗೆಗಳಿಂದ ಖ್ಯಾತಿ, ಹಣವನ್ನು ಗಳಿಸುವಿರಿ. ಧ್ಯಾನ ಮತ್ತು ಯೋಗದತ್ತ ಗಮನ ಹರಿಸುವಿರಿ. ಸಾಹಿತ್ಯ ವಿದ್ವಾಂಸರು ಅನವಶ್ಯಕ ಮಾತುಗಳಿಂದ ದೂರವಿರುವುದು ಒಳಿತು.

ಕರ್ಕಾಟಕ: ಮನೆತನದ ವೃತ್ತಿಯನ್ನೇ ಮುಂದುವರಿಸಿಕೊಂಡು ಹೋಗು-ತ್ತಿರುವವರಿಗೆ ಹಿರಿಯರಿಂದ ಪಡೆದ ಸಲಹೆಯು ಜೀವನಕ್ಕೆ ಹೊಸ ಬುನಾದಿಯಾಗಲಿದೆ. ಆದಾಯ ವೆಚ್ಚಗಳನ್ನು ಸರಿದೂಗಿಸಿಕೊಳ್ಳುವಿರಿ.

ಸಿಂಹ: ಧರ್ಮ-ಕರ್ಮಗಳಲ್ಲಿ ಆಸಕ್ತಿ ತೋರಿದರೆ, ಕಾರ್ಯ ಕ್ಷೇತ್ರ ಹಾಗೂ ಜೀವನದಲ್ಲಿ ಅಭೀಷ್ಟ ಪಡೆಯಬಹುದು. ಆಸ್ಪತ್ರೆ ಸಿಬ್ಬಂದಿ ವರ್ಗಕ್ಕೆ ಸೌಲಭ್ಯ ಸಿಗಲಿದೆ. ಶಾರೀರಿಕ ಆರೋಗ್ಯ ಉತ್ತಮವಾಗುವುದು.

ಕನ್ಯಾ: ನಿರೀಕ್ಷಿಸಿದ ಕಾರ್ಯಗಳು ಅವಿಘ್ನವಾಗಿ ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗಲಿದೆ. ಕೆಲವೊಂದು ಪ್ರತಿಕೂಲ ಫಲಗಳೇ ಕಾರ್ಯಕ್ಷೇತ್ರದಲ್ಲಿದ್ದರೂ ಚಿಂತಿಸುವ ಅವಶ್ಯಕತೆ ಇಲ್ಲ. ಭಾವನೆಗಳನ್ನು ಹೊರ ಹಾಕುವಂತಾಗಲಿದೆ.

ತುಲಾ: ಪಿತ್ರಾರ್ಜಿತ ಆಸ್ತಿಗಳ ವಿಚಾರದಲ್ಲಿ ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಿಬರಲಿದೆ. ಅಂತಿಮ ಕ್ಷಣಗಳಲ್ಲಿ ಪಶ್ಚಾತ್ತಾಪ ಪಡುವ ಬದಲು ಮುಂಜಾಗ್ರತಾ ಕ್ರಮ ಕೈಗೊಳ್ಳಿ. ತೀರ್ಮಾನ ಬಹುಮಟ್ಟಿಗೆ ಸರಿಯಾಗಿರುವುದು.

ವೃಶ್ಚಿಕ: ಆದಾಯದಲ್ಲಿ ಸಣ್ಣ ಹೊಡೆತವನ್ನು ಎದುರಿಸುವಂತಾಗಬಹುದು. ಕಾರಣವನ್ನು ಹುಡುಕಿ ಪಾಠದ ರೀತಿಯಲ್ಲಿ ತೆಗೆದುಕೊಳ್ಳುವುದು ಉತ್ತಮ. ಮನೆಯಲ್ಲಿ ನವ ಶಿಶುವಿನ ಆಗಮನದಿಂದ ಸಂಭ್ರಮ ಉಂಟಾಗುವುದು.

ಧನು: ಗಂಡನ ಹಣಕಾಸಿನ ಪರಿಸ್ಥಿತಿಗೆ ಶ್ರಮಿಸಿ ಸಹಕರಿಸಬೇಕಾದಂತೆ ಆಗುವುದು. ಸುತ್ತಲಿನ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ. ತಂದೆ ತಾಯಿಯು ನಿಮ್ಮ ಕಷ್ಟಕಾರ್ಪಣ್ಯಗಳಿಗೆ ನೆರವಾಗಲಿದ್ದಾರೆ.

ಮಕರ: ಕಾರ್ಯಗಳ ಬಗ್ಗೆ ಹೆಚ್ಚಿನ ನಿಗಾವನ್ನು ಕೊಡುವಂತೆ ಅಧಿಕಾರಿಗಳಿಂದ ತೀಕ್ಷ್ಣವಾದ ಸಂದೇಶ ಬರಲಿದೆ. ವೈದ್ಯರಿಗೆ ವೃತ್ತಿಯಲ್ಲಿ ಸವಾಲೆನಿಸುವ ವಿಷಯಗಳಲ್ಲಿ ಯಶಸ್ಸು ಕಂಡುಬರಲಿದೆ. ದೇಹಕ್ಕೆ ಶೀತ ಬಾಧೆ ಬರಲಿದೆ.

ಕುಂಭ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವುದ-ನ್ನು ಸ್ನೇಹಿತರು ಅಥವಾ ಸಹೋದ್ಯೋಗಿಗಳು ತಪ್ಪಿಸುವರು. ಸಹೋದ್ಯೋಗಿಗಳೊಡನೆ ಅನವಶ್ಯಕವಾದ ವಾದ-ವಿವಾದಗಳು ನಡೆಯದಂತೆ ವರ್ತಿಸಿ.

ಮೀನ: ರಸಗೊಬ್ಬರ ಮತ್ತು ಕೀಟನಾಶಕ ವ್ಯಾಪಾರಿಗಳಿಗೆ ಲಾಭದ ಜೊತೆ ಆಯಾಸವೂ ಕಾಡಲಿದೆ. ಅನವಶ್ಯಕವಾಗಿ ದೂರದ ಪ್ರಯಾಣದ ಸಾಧ್ಯತೆ ಇದೆ. ವೆಂಕಟೇಶ ಸ್ವಾಮಿಯ ಕೃಪೆಯಿಂದ ಕಷ್ಟಗಳು ಪರಿಹಾರವಾಗಲಿವೆ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,942
ಇಂದಿನ ಅಂತ್ಯ: 25,938
ದಿನದ ಕನಿಷ್ಠ: 25,878
3.25

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹705
12 ಕ್ಕೆ ₹96
ಮೈಸೂರು: 100 ಕ್ಕೆ ₹706

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹453-728
ದ್ವಿತಳಿ (ಬಿ.ವಿ) ₹277-888

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹180.50
ಆರ್‌ಎಸ್‌ಎಸ್-5 ₹175.50
ಗುಡ್ ಲಾಟ್ ₹163.50

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹26,750
ಎಸಿ ₹14,560
ಆರ್‌ಪಿ ₹16,250
ಆರ್‌ಸಿ ₹9,620

2025ರಲ್ಲಿ ಸೆನ್ಸೆಕ್ಸ್ ಶೇ 8ರಷ್ಟು ಗಳಿಕೆ

ಷೇರುಪೇಟೆಗಳಿಗೆ ಆಸರೆಯ ರೂಪದಲ್ಲಿ ಬಂದ ದೇಶಿ ಹೂಡಿಕೆದಾರರು

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಹಣ ಹೂಡಿಕೆ ಮಾಡಿದವರು 2025ರಲ್ಲಿ ಒಟ್ಟು ₹30.20 ಲಕ್ಷ ಕೋಟಿ ಲಾಭ ಕಂಡಿದ್ದಾರೆ. ಹತ್ತು ಹಲವು ಸವಾಲುಗಳನ್ನು ಎದುರಿಸಿಯೂ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಈ ವರ್ಷದಲ್ಲಿ ಶೇಕಡ 8ರಷ್ಟಕ್ಕಿಂತ ಹೆಚ್ಚು ಲಾಭ ತಂದುಕೊಟ್ಟಿದೆ.

ದೇಶದ ಅರ್ಥವ್ಯವಸ್ಥೆಯಲ್ಲಿನ ಸ್ಥಿರತೆ ಹಾಗೂ ದೇಶಿ ಹೂಡಿಕೆದಾರರು ಷೇರುಪೇಟೆಗಳಿಗೆ ಆಸರೆಯಾಗಿ

ನಿಂತಿದ್ದುದು ಗಳಿಕೆಗೆ ಪೂರಕವಾಗಿ ಒದಗಿ ಬಂದಿವೆ ಎಂದು ತಜ್ಞರು ಹೇಳಿದ್ದಾರೆ.

ಈ ವರ್ಷದ ಡಿಸೆಂಬರ್ 29ರವರೆಗೆ ಸೆನ್ಸೆಕ್ಸ್ 6,556 ಅಂಶ (ಶೇ 8.39ರಷ್ಟು) ಏರಿಕೆ ಕಂಡಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳದ ಮೊತ್ತವು ₹30,20,367 ಕೋಟಿ ಹೆಚ್ಚಾಗಿ ₹472 ಲಕ್ಷ ಕೋಟಿಗೆ ತಲುಪಿದೆ.

ಈ ವರ್ಷದ ದೊಡ್ಡ ಐಪಿಒಗಳು
- ಟಾಟಾ ಕ್ಯಾಪಿಟಲ್
- ಎಚ್‌ಡಿಬಿ ಫೈನಾನ್ಶಿಯಲ್ ಸರ್ವಿಸಸ್
- ಎಲ್‌ಜಿ ಎಲೆಕ್ಟ್ರಾನಿಕ್ಸ್ ಇಂಡಿಯಾ
- ಹೆಕ್ಸಾವೇರ್ ಟೆಕ್ನಾಲಜೀಸ್
- ಲೆನ್ಸ್‌ಕಾರ್ಟ್ ಸಲ್ಯೂಷನ್ಸ್
- ಬಿಲಿಯನ್‌ಬ್ರೇನ್ಸ್ ಗರಾಜ್ ವೆಂಚರ್ಸ್

ಹಲವು ವರ್ಷಗಳಿಂದ ಎರಡು ಅಂಕಿಗಳ ವಾರ್ಷಿಕ ಲಾಭ ನೀಡುತ್ತಿದ್ದ ಸೂಚ್ಯಂಕಗಳು ಈ ವರ್ಷದಲ್ಲಿ ಮಧ್ಯಮ ಪ್ರಮಾಣದ ಲಾಭ ನೀಡಿವೆ. ಇದು ಕಡಿಮೆ ಅನ್ನಿಸಬಹುದಾದರೂ, ಜಾಗತಿಕ ಸವಾಲುಗಳು, ವಿದೇಶಿ ಹೂಡಿಕೆ ಹೊರಹರಿವಿನ ನಡುವೆ ಈ ಪ್ರಮಾಣದ ಲಾಭ ಆಗಿದೆ ಎಂಬುದನ್ನು ಗಮನಿಸಬೇಕು ಎಂದು ಎನ್ರಿಚ್ ಮನಿ ಸಂಸ್ಥೆಯ ಸಿಇಒ ಪೊನ್ಮುಡಿ ಆರ್. ಹೇಳಿದ್ದಾರೆ.

2025ರಲ್ಲಿ ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಗಳಿಂದ ಒಟ್ಟು ₹1.6 ಲಕ್ಷ ಕೋಟಿ ಹಣ ಹಿಂಪಡೆದಿದ್ದಾರೆ.

‘2020ರಿಂದ 2024ರ ನಡುವಿನ ಅವಧಿಯಲ್ಲಿ ಮಾರುಕಟ್ಟೆಯಲ್ಲಿ ಉತ್ತಮ ಪ್ರಮಾಣದ ಲಾಭ ಸಿಕ್ಕಿತ್ತು. ಆದರೆ 2025ರಲ್ಲಿ ಅಷ್ಟೇನೂ ದೊಡ್ಡ ಮಟ್ಟದ ಲಾಭ ಬಂದಿಲ್ಲ. ಷೇರುಪೇಟೆಯ ಕೆಲವು ವಲಯಗಳ ಮೌಲ್ಯವು ದುಬಾರಿ ಆಗಿತ್ತು... ಕಂಪನಿಗಳ ವರಮಾನದಲ್ಲಿ ದೊಡ್ಡ ಮಟ್ಟದ ಹೆಚ್ಚಳವೇನೂ ಕಾಣಲಿಲ್ಲ. ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆಗಳು ಹೆಚ್ಚಾಗಿದ್ದವು. ಇವೆಲ್ಲವೂ ವರ್ಷದ ಮೊದಲ ತ್ರೈಮಾಸಿಕದಲ್ಲಿ ಮಾರುಕಟ್ಟೆ ಕುಸಿಯಲು ಕಾರವಾದವು. ನಂತರ ಏಪ್ರಿಲ್‌ನಿಂದೀಚೆಗೆ ದೊಡ್ಡ ಗಾತ್ರದ ಕಂಪನಿಗಳ ಷೇರುಮೌಲ್ಯವು ನಿಧಾನವಾಗಿ ಚೇತರಿಸಿಕೊಂಡಿದೆ’ ಎಂದು ಎಸ್‌ಬಿಐ ಸೆಕ್ಯುರಿಟೀಸ್‌ನ ಹಿರಿಯ ಅಧಿಕಾರಿ ಸನ್ನಿ ಅಗರ್ವಾಲ್ ಹೇಳಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಮಲ್ಲೇಶಪ್ಪ, ಶ್ರೀರಾಮಪುರ, ಬೆಂಗಳೂರು

- **ಪ್ರಶ್ನೆ: ನಾನು 76 ವರ್ಷ ವಯಸ್ಸಿನ ನಿವೃತ್ತ ನೌಕರ. ನನಗೆ ಪ್ರತಿ ತಿಂಗಳು ಪಿಂಚಣಿ ಬರುತ್ತಿದೆ. ನಾನು ಕೇಳಿರುವ ಪ್ರಕಾರ, ಹಿರಿಯ ನಾಗರಿಕರಿಗೆ ಸಾಮಾನ್ಯವಾಗಿ ಮುಂಗಡ ತೆರಿಗೆ ಪಾವತಿ ಅನ್ವಯಿಸುವುದಿಲ್ಲ. ಆದರೆ, ನನ್ನ ಆದಾಯದಲ್ಲಿ ಪಿಂಚಣಿಯ ಜೊತೆಗೆ ಷೇರುಗಳ ಮಾರಾಟ, ಮ್ಯೂಚುವಲ್ ಫಂಡ್‌ಗಳ ಮಾರಾಟ ಹಾಗೂ ಬ್ಯಾಂಕ್ ಠೇವಣಿಗಳಿಂದ ಬರುವ ಬಡ್ಡಿ ಆದಾಯವೂ ಸೇರಿವೆ.**

ಪ್ರಸ್ತುತ ಆರ್ಥಿಕ ವರ್ಷದಲ್ಲಿ, ಷೇರುಗಳು ಮತ್ತು ಮ್ಯೂಚುವಲ್ ಫಂಡ್‌ಗಳ ಮಾರಾಟದಿಂದ ನನಗೆ ಸುಮಾರು ₹5 ಲಕ್ಷದಷ್ಟು ದೀರ್ಘಾವಧಿ ಬಂಡವಾಳ ಲಾಭ ದೊರೆತಿದೆ. ಬಡ್ಡಿ ಆದಾಯವೂ ಇದೆ. ಈ ಹಂತದಲ್ಲಿ ನನಗೆ ಮುಂಗಡ ತೆರಿಗೆ ಪಾವತಿ ಅನ್ವಯಿಸುತ್ತದೆಯೇ? ಹಿರಿಯ ನಾಗರಿಕರಿಗೆ ಮುಂಗಡ ತೆರಿಗೆ ವಿನಾಯಿತಿ ಪಿಂಚಣಿ ಆದಾಯಕ್ಕಷ್ಟೇ ಸೀಮಿತವೇ? ಷೇರು, ಮ್ಯೂಚುವಲ್ ಫಂಡ್ ಮತ್ತು ಬಡ್ಡಿ ಆದಾಯಕ್ಕೂ ಅನ್ವಯಿಸುತ್ತದೆಯೇ? ಇಂತಹ ಆದಾಯ ಇರುವ ಹಿರಿಯ ನಾಗರಿಕರು ಮುಂಗಡ ತೆರಿಗೆ ಪಾವತಿಸದಿದ್ದಲ್ಲಿ, ಬಡ್ಡಿ ಅಥವಾ ದಂಡ ವಿಧಿಸುವ ಸಾಧ್ಯತೆ ಇದೆಯೇ?

ಉತ್ತರ: ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 207ರ ಪ್ರಕಾರ ಹಿರಿಯ ನಾಗರಿಕರಿಗೆ (60 ವರ್ಷ ಅಥವಾ ಅದಕ್ಕಿಂತ ಹೆಚ್ಚು ವಯಸ್ಸಿನವರಿಗೆ) ಮುಂಗಡ ತೆರಿಗೆ ಪಾವತಿಯ ವಿಷಯದಲ್ಲಿ ವಿಶೇಷ ವಿನಾಯಿತಿ ನೀಡಲಾಗಿದೆ. ಈ ನಿಯಮದ ಪ್ರಕಾರ ಯಾವುದೇ ಹಿರಿಯ ನಾಗರಿಕರಿಗೆ ವ್ಯಾಪಾರ ಅಥವಾ ವೃತ್ತಿಯಿಂದ ಆದಾಯವಿಲ್ಲದಿದ್ದರೆ, ಅವರು ಮುಂಗಡ ತೆರಿಗೆ ಪಾವತಿಸುವ ಅಗತ್ಯವಿಲ್ಲ.

ನೀವು ಹಿರಿಯ ನಾಗರಿಕ ಆಗಿರುವುದರಿಂದ, ನಿಮ್ಮ ಆದಾಯವು ಮುಖ್ಯವಾಗಿ ಪಿಂಚಣಿ, ಷೇರುಗಳ ಮಾರಾಟದಿಂದ ಉಂಟಾದ ದೀರ್ಘಾವಧಿ ಬಂಡವಾಳ ಲಾಭ, ಮ್ಯೂಚುವಲ್ ಫಂಡ್‌ಗಳ ವಿಲೇವಾರಿಯಿಂದ ದೊರಕುವ ಆದಾಯ ಹಾಗೂ ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿ ಆದಾಯವನ್ನು ಒಳಗೊಂಡಿದೆ. ಇವುಗಳೆಲ್ಲವೂ ವ್ಯಾಪಾರ ಅಥವಾ ವೃತ್ತಿ ಆದಾಯಗಳಲ್ಲ. ಆದ್ದರಿಂದ, ಹಿರಿಯ ನಾಗರಿಕರಿಗೆ ನೀಡಿರುವ ವಿನಾಯಿತಿಯ ಪ್ರಕಾರ ನಿಮಗೆ ಮುಂಗಡ ತೆರಿಗೆ ಪಾವತಿ ಅನಿವಾರ್ಯ ಎದುರಾಗುವುದಿಲ್ಲ.

ಆದರೆ, ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ – ಮುಂಗಡ ತೆರಿಗೆ ವಿನಾಯಿತಿ ಇದ್ದರೂ, ಅಂತಿಮ ತೆರಿಗೆ ಪಾವತಿ ಜವಾಬ್ದಾರಿ ಇದ್ದೇ ಇದೆ. ಅಂದರೆ, ಆರ್ಥಿಕ ವರ್ಷದ ಅಂತ್ಯದಲ್ಲಿ ನಿಮ್ಮ ಒಟ್ಟು ಆದಾಯದ ಮೇಲೆ ಲೆಕ್ಕ ಹಾಕಿದ ತೆರಿಗೆಯನ್ನು ಆದಾಯ ತೆರಿಗೆ ವಿವರ ಸಲ್ಲಿಸುವಾಗ ಪಾವತಿಸಬೇಕಾಗುತ್ತದೆ.

ನಾರಾಯಣ ರಾವ್, ಕುಂದಾಪುರ

- **ಪ್ರಶ್ನೆ: ನಾನು 62 ವರ್ಷ ವಯಸ್ಸಿನ, ಪಿಂಚಣಿ ಪಡೆಯುತ್ತಿರುವ ವ್ಯಕ್ತಿ. ನನ್ನ ಆದಾಯದ ಮೂಲಗಳು ಮುಖ್ಯವಾಗಿ ಸರ್ಕಾರಿ ಪಿಂಚಣಿ ಹಾಗೂ ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿ. ವಿವರ ಸಲ್ಲಿಕೆ ವೇಳೆ ಪಿಂಚಣಿಯ ಮೇಲಿನ ತೆರಿಗೆಯನ್ನು ಸರಿಯಾಗಿ ಲೆಕ್ಕ ಹಾಕಲಾಗಿದ್ದು ಅದಕ್ಕೆ ಸಂಬಂಧಿಸಿದ ತೆರಿಗೆ ಕಡಿತವೂ ಆಗಿದೆ. ಆದರೆ, ಕೆಲವು ಬ್ಯಾಂಕ್ ಠೇವಣಿಗಳ ಬಡ್ಡಿ ಆದಾಯದ ಮೇಲೆ ಮೂಲದಲ್ಲೇ ತೆರಿಗೆ ಕಡಿತ ಆಗಿಲ್ಲ ಮತ್ತು ಈ ಬಡ್ಡಿ ಆದಾಯದ ಒಂದು ಭಾಗವು ನನ್ನ ಆದಾಯ ತೆರಿಗೆ ವಿವರ ಸಲ್ಲಿಸುವ ಸಂದರ್ಭದಲ್ಲಿ ಪರಿಗಣಿಸಲ್ಪಟ್ಟಿಲ್ಲ.**

ಈ ಮಾಹಿತಿಯನ್ನು ಈಗ ಗಮನಿಸಿದ್ದು, ಈಗಾಗಲೇ ಸಂಬಂಧಿತ ಆರ್ಥಿಕ ವರ್ಷದ ಆದಾಯ ತೆರಿಗೆ ವಿವರ ಸಲ್ಲಿಸಲಾಗಿದೆ. ಈ ಪರಿಸ್ಥಿತಿಯಲ್ಲಿ, ನಾನು ನನ್ನ ಆದಾಯ ತೆರಿಗೆ ವಿವರವನ್ನು ಸರಿಪಡಿಸಲು ಸಾಧ್ಯವೇ? ಪಿಂಚಣಿ ಮತ್ತು ಬಡ್ಡಿ ಆದಾಯವನ್ನು ಸರಿಯಾಗಿ ದಾಖಲಿಸಿ, ಬಾಕಿ ಇರುವ ತೆರಿಗೆಯನ್ನು ಪಾವತಿಸುವ ಮೂಲಕ ನನ್ನ ತೆರಿಗೆ ವಿವರ ಸರಿಪಡಿಸಬಹುದೇ? ಆದಾಯ ತೆರಿಗೆ ವಿವರ ಪರಿಷ್ಕರಣೆಗೆ ಕಾನೂನಿನ ಪ್ರಕಾರ ಇರುವ ಕಾಲಾವಧಿ ಎಷ್ಟು? ಈಗ ಪರಿಷ್ಕೃತ ವಿವರ ಸಲ್ಲಿಸುವಾಗ ನಾನು ಯಾವ ಕ್ರಮಗಳನ್ನು ಪಾಲಿಸಬೇಕು? ಬಾಕಿ ತೆರಿಗೆ ಅಥವಾ ದಂಡವನ್ನು ತಪ್ಪಿಸಲು ಅಥವಾ ಕಡಿಮೆ ಮಾಡಲು ಯಾವುದೇ ವಿಶೇಷ ಮುನ್ನೆಚ್ಚರಿಕೆ ಕ್ರಮಗಳಿವೆಯೇ?

ಉತ್ತರ: ಆದಾಯ ತೆರಿಗೆ ಕಾಯ್ದೆಯ ಪ್ರಕಾರ, ಈಗಾಗಲೇ ಸಲ್ಲಿಸಿರುವ ಆದಾಯ ತೆರಿಗೆ ವಿವರಗಳಲ್ಲಿ ತಪ್ಪುಗಳಿದ್ದಲ್ಲಿ ಅಥವಾ ಆದಾಯ ಘೋಷಿಸಲು ಬಿಟ್ಟುಹೋಗಿದ್ದಲ್ಲಿ ಅದನ್ನು ಪರಿಷ್ಕೃತ ವಿವರ ಸಲ್ಲಿಸುವ ಮೂಲಕ ಸರಿಪಡಿಸುವ ಅವಕಾಶ ಇದೆ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 139(5) ಪ್ರಕಾರ, ಸಂಬಂಧಿತ ಆರ್ಥಿಕ ವರ್ಷದ ಅಂತ್ಯದಿಂದ 31 ಡಿಸೆಂಬರ್ ತನಕ ಅಥವಾ ಅಸೆಸ್ಮೆಂಟ್ ಪೂರ್ಣಗೊಳ್ಳುವ ಮೊದಲು, ಪರಿಷ್ಕೃತ ವಿವರ ಸಲ್ಲಿಸಲು ಅವಕಾಶ ಇದೆ. ಉದಾಹರಣೆಗೆ, ಆರ್ಥಿಕ ವರ್ಷ 2024–25ಕ್ಕೆ ಸಂಬಂಧಿಸಿದ ವಿವರವನ್ನು 2025ರ ಡಿಸೆಂಬರ್ 31ರವರೆಗೆ ಪರಿಷ್ಕರಿಸಬಹುದು.

ನಿಮ್ಮ ವಿಚಾರದಲ್ಲಿ, ಬ್ಯಾಂಕ್ ಠೇವಣಿಗಳ ಬಡ್ಡಿ ಆದಾಯದ ಒಂದು ಭಾಗ ವಿವರದಲ್ಲಿ ಘೋಷಣೆ ಆಗದಿದ್ದರೆ, ಅದನ್ನು ಪರಿಷ್ಕೃತ ವಿವರದಲ್ಲಿ ಸೇರಿಸಿ ಸರಿಯಾದ ಒಟ್ಟು ಆದಾಯವನ್ನು ಮತ್ತೆ ಘೋಷಿಸಿ. ಅದಕ್ಕೆ ಅನುಗುಣವಾಗಿ ಬಾಕಿ ಇರುವ ತೆರಿಗೆಯನ್ನು ಲೆಕ್ಕ ಹಾಕಿ ಪರಿಷ್ಕೃತ ವಿವರದಲ್ಲಿ ಸಲ್ಲಿಸಿ. ಸ್ವಯಂಪ್ರೇರಿತವಾಗಿ ತಪ್ಪನ್ನು ತಿದ್ದುಪಡಿ ಮಾಡಿ ತೆರಿಗೆಯನ್ನು ಪಾವತಿಸಿದಲ್ಲಿ ಸಾಮಾನ್ಯವಾಗಿ ದಂಡದ ಸಮಸ್ಯೆ ಎದುರಾಗುವುದಿಲ್ಲ. ಮುಂದಿನ ವರ್ಷ ಮುನ್ನೆಚ್ಚರಿಕೆಯ ಕ್ರಮವಾಗಿ, ಫಾರಂ 26ಎ ಎಸ್ ಮತ್ತು ಎಐಎಸ್ ಅನ್ನು ಪರಿಶೀಲಿಸಿ, ಟಿಡಿಎಸ್ ಆಗಿರದ ಆದಾಯವೂ ಸೇರಿ ಎಲ್ಲಾ ಆದಾಯಗಳು ವಿವರದಲ್ಲಿ ಸರಿಯಾಗಿ ಒಳಗೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಒಟ್ಟಿನಲ್ಲಿ, ನೀವು ಪರಿಷ್ಕೃತ ವಿವರ ಸಲ್ಲಿಸುವ ಮೂಲಕ ನಿಮ್ಮ ತೆರಿಗೆ ಮಾಹಿತಿಯನ್ನು ಕಾನೂನಿನ ಚೌಕಟ್ಟಿನೊಳಗೆ ಸರಿಪಡಿಸಬಹುದು.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಮುಂಬೈ ಧಾರಣೆ (ಶೇಂಗಾ)
30-12-2025

ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1585)
ಒಂದು ವಾರದ ಡೆಲಿವರಿ	1595 (1580)
ಪಾಮ್ ವಾರದ ಡೆಲಿವರಿ	1248 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1425)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,34,300 (1,35,400)
ಬೆಳ್ಳಿ ಕೆ.ಜಿಗೆ	2,36,000 (2,27,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹26500-26706
ಬೆಂಗಳೂರು ₹29000-33000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1590 (1575)
ಸೋಯಾ (ರಿಫೈನ್ಡ್)	₹1285 (1280)
ಸೂರ್ಯಕಾಂತಿ (ರಿಫೈನ್ಡ್)	₹1490 (1485)
ಪಾಮೋಲಿನ್	₹1250 (1250)

ಅಡಿಕೆ ಜಿಲ್ಲೆಗಳತ್ತ ಮ್ಯಾಮ್ಕೋಸ್ ಚಿತ್ತ

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ಮಲೆನಾಡಿಗೆ ಸೀಮಿತವಾಗಿದ್ದ ಶಿವಮೊಗ್ಗದ ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ (ಮ್ಯಾಮ್ಕೋಸ್) ರಾಜ್ಯದಲ್ಲಿ ಅಡಿಕೆ ಬೆಳೆಯುವ ಎಲ್ಲ ಜಿಲ್ಲೆಗಳಿಗೆ ವಹಿವಾಟು ವಿಸ್ತರಿಸಲು ಮುಂದಾಗಿದೆ. ಮಂಡ್ಯ ಜಿಲ್ಲೆ ಕೆ.ಆರ್.ಪೇಟೆಯಲ್ಲಿ ಡಿಸೆಂಬರ್ 1ರಿಂದ ಅಡಿಕೆ ಖರೀದಿ ಕೇಂದ್ರ ಆರಂಭಿಸಿದೆ.

ಮ್ಯಾಮ್ಕೋಸ್ ಸದ್ಯ ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ದಾವಣಗೆರೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕುಗಳಿಗೆ ಸೀಮಿತವಾಗಿದ್ದು, ವಾರ್ಷಿಕ ₹ 1,400 ಕೋಟಿ ವಹಿವಾಟು ನಡೆಸುತ್ತಿದೆ.

‘ಮುಂದಿನ ನಾಲ್ಕು ವರ್ಷಗಳಲ್ಲಿ ಸಂಸ್ಥೆಯ ವಹಿವಾಟನ್ನು ₹2,500 ಕೋಟಿಗೆ ವಿಸ್ತರಿಸುವ ಗುರಿ ಹೊಂದಿದ್ದೇವೆ. ಅದಕ್ಕಾಗಿ ಅಡಿಕೆ ಬೆಳೆಯುತ್ತಿರುವ ರಾಜ್ಯದ 16 ಜಿಲ್ಲೆಗಳಿಗೂ (ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರಕನ್ನಡ, ರಾಮನಗರ, ಮಂಡ್ಯ, ಹಾಸನ, ಮೈಸೂರು, ಚಾಮರಾಜನಗರ, ಹಾವೇರಿ, ಕೊಡಗು) ವಹಿವಾಟು ವಿಸ್ತರಿಸಲಿದ್ದೇವೆ’ ಎಂದು ಮ್ಯಾಮ್ಕೋಸ್ ವ್ಯವಸ್ಥಾಪಕ ನಿರ್ದೇಶಕ ಶ್ರೀಕಾಂತ್ ಬರುವಾ ಹೇಳಿದ್ದಾರೆ.

‘ಈ ಮೊದಲು ಕೆ.ಆರ್. ಪೇಟೆಯಲ್ಲಿ ಸಣ್ಣ ಬೆಳೆಗಾರರು ಸ್ಥಳೀಯ ಕೈ ವ್ಯಾಪಾರದವರಿಗೆ (ತೋಟಕ್ಕೆ ಹೋಗಿ ಖರೀದಿಸುವವರು) ಅಡಿಕೆ ಮಾರುತ್ತಿದ್ದರು. ಅತಿದೊಡ್ಡ ಬೆಳೆಗಾರರು ಚಿಕ್ಕಮಗಳೂರು ಜಿಲ್ಲೆ ಬೀರೂರು ಮಾರುಕಟ್ಟೆಗೆ ಒಯ್ಯುತ್ತಿದ್ದರು. ಸಾಗಣೆ ವೆಚ್ಚ ಪ್ರತಿ ಮೂಟೆಗೆ ₹200 ಕೊಡಬೇಕಿತ್ತು. ಕೈ ವ್ಯಾಪಾರಸ್ಥರು ಖರೀದಿ ವೇಳೆ 50 ಕೆ.ಜಿ ತೂಕದ ಅಡಿಕೆ ಮೂಟೆಗೆ 1,600 ಗ್ರಾಂ ತೂಕ ಕಳೆಯುತ್ತಿದ್ದರು.

ನಮಗೆ ಖರೀದಿ, ವಿಕ್ರಯಕ್ಕೆ ನಿರ್ದಿಷ್ಟ ಕಾರ್ಯವ್ಯಾಪ್ತಿ ಇಲ್ಲ. ಹೀಗಾಗಿ ಅಡಿಕೆ ಬೆಳೆಯುವ ಕರ್ನಾಟಕದ ಎಲ್ಲ ಜಿಲ್ಲೆಗಳನ್ನೂ ಕೇಂದ್ರೀಕರಿಸಲು ನಿರ್ಧರಿಸಿದ್ದೇವೆ
ಶ್ರೀಕಾಂತ್ ಬರುವಾ, ವ್ಯವಸ್ಥಾಪಕ ನಿರ್ದೇಶಕ, ಮ್ಯಾಮ್ಕೋಸ್

ಮನಸ್ಸಿಗೆ ಬಂದಂತೆ ಅಡಿಕೆ ದರ ನಿಗದಿ ಮಾಡುತ್ತಿದ್ದರು. ಜೊತೆಗೆ ಬೆಳೆಗಾರರು ಅಡಿಕೆ ಇಟ್ಟು ಪಡೆಯುತ್ತಿದ್ದ ಅಡಮಾನ ಸಾಲಕ್ಕೆ ಬಡ್ಡಿ ದರ ಕೂಡ ಹೆಚ್ಚು ವಿಧಿಸಲಾಗುತ್ತಿತ್ತು’ ಎನ್ನುತ್ತಾರೆ.

ಮಧ್ಯವರ್ತಿಗಳ ಶೋಷಣೆ ತಪ್ಪಿಸಿ ಬೆಳೆಗಾರರಿಗೆ ಅನುಕೂಲ ಕಲ್ಪಿಸುವುದು ಸಂಸ್ಥೆಯ ಆಶಯ. ಈಗ ಸಂಸ್ಥೆಯಿಂದ (ಮ್ಯಾಮ್ಕೋಸ್) ಆಯಾ ದಿನದ ಮಾರುಕಟ್ಟೆ ದರ ಆಧರಿಸಿ ಅಡಿಕೆ ಖರೀದಿ ಮಾಡಲಾಗುತ್ತಿದೆ. ಜೊತೆಗೆ ವಹಿವಾಟು ಪಾರದರ್ಶಕವಾಗಿದೆ. ಅಡಮಾನ ಸಾಲಕ್ಕೆ ಬಡ್ಡಿ ದರವೂ ಕಡಿಮೆ ಇದೆ. ಹೀಗಾಗಿ ರೈತರು ಸಂಸ್ಥೆಯ ಖರೀದಿಯತ್ತ ಆಸಕ್ತಿ ತೋರುತ್ತಿದ್ದಾರೆ. ಕಳೆದ 29 ದಿನಗಳಲ್ಲಿ 2,000 ಮೂಟೆ ಅಡಿಕೆ ಖರೀದಿ ಮಾಡಿದ್ದೇವೆ’ ಎಂದು ಶ್ರೀಕಾಂತ್ ಬರುವಾ ಮಾಹಿತಿ ನೀಡಿದರು.

ಶೀಘ್ರ ಏಳು ಕಡೆ ಖರೀದಿ ಕೇಂದ್ರ: ವಹಿವಾಟು ವಿಸ್ತರಣೆಯ ಭಾಗವಾಗಿ ಮ್ಯಾಮ್ಕೋಸ್ ಶೀಘ್ರ ತುಮಕೂರು ಜಿಲ್ಲೆ ಕುಣಿಗಲ್, ಶಿರಾ, ದಾವಣಗೆರೆ ಜಿಲ್ಲೆಯ ಬಸವಾಪಟ್ಟಣ, ದಾವಣಗೆರೆ, ಹೊನ್ನಾಳಿ, ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ, ಚಿಕ್ಕಮಗಳೂರು ಜಿಲ್ಲೆಯ ಸಖರಾಯಪಟ್ಟಣದಲ್ಲಿ ಖರೀದಿ ಕೇಂದ್ರ ಆರಂಭಿಸಲು ಸಿದ್ಧತೆ ನಡೆಸಿದೆ. ಹಂತಹಂತವಾಗಿ ಉಳಿದ ಜಿಲ್ಲೆಗಳಲ್ಲೂ ಖರೀದಿ ಆರಂಭಿಸಲಿದ್ದೇವೆ ಎನ್ನುತ್ತಾರೆ.

ಅಡಿಕೆ ಧಾರಣೆ

ಭದ್ರಾವತಿ		ಕೋಕ	19519-30199	ರಾಶಿ	47009-57699
ಇತರೆ	27600-42823	ರಾಶಿ	55669-57170	**ಯಲ್ಲಾಪುರ**	
ರಾಶಿ	36199-57819	**ಸಿದ್ದಾಪುರ**		ಅಪಿ	64599-70499
ಸಿಪ್ಪೆಗೋಟು	10000-10000	ಬಿಳಿಗೋಟು	25689-36899	ಬಿಳಿಗೋಟು	13909-35699
ಚಿತ್ರದುರ್ಗ		ಚಾಲಿ	44569-48239	ಕೋಕ	11069-29899
ಅಪಿ	55600-56000	ಕೋಕ	20699-32299	ಹಳೆಚಾಲಿ	36669-39500
ಬೆಟ್ಟೆ	36600-37000	ಹೊಸಚಾಲಿ	35809-38899	ಹೊಸಚಾಲಿ	34166-38750
ಕೆಂಪುಗೋಟು	31600-32000	ಕೆಂಪುಗೋಟು	28680-34289	ಕೆಂಪುಗೋಟು	14899-37772
ರಾಶಿ	55100-55500	ರಾಶಿ	46599-56899	ರಾಶಿ	51499-62821
ಪುತ್ತೂರು		ತಟ್ಟಿಬೆಟ್ಟೆ	31099-53099	ತಟ್ಟಿಬೆಟ್ಟೆ	37819-53090
ಕೋಕ	20000-35000	**ಶಿರಸಿ**		**ಶಿವಮೊಗ್ಗ**	
ಹೊಸತು	26000-41500	ಬೆಟ್ಟೆ	37189-52108	ಸರಕು/ಹಸ	60399-94899
ಹಳತು	45000-53000	ಬಿಳಿಗೋಟು	20600-38689	ಬೆಟ್ಟೆ	61154-65599
ಸಾಗರ		ಚಾಲಿ	44299-49819	ರಾಶಿ/ಇಡಿ	40009-58369
ಬಿಳಿಗೋಟು	33285-33285	ಕೆಂಪುಗೋಟು	19219-38489	ಗೊರಬಲು	19000-43509
ಚಾಲಿ	37099-42899				

ಸುಧಾರಣೆಗಳಿಗೆ ಆದ್ಯತೆ: ಪ್ರಧಾನಿ

ನವದೆಹಲಿ (ಪಿಟಿಐ): 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತವನ್ನು ರೂಪಿಸಲು ಸುಧಾರಣೆಗಳನ್ನು ಆದ್ಯತೆಯ ಮೇರೆಗೆ ಕೈಗೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಹೇಳಿದರು.

ಕೇಂದ್ರ ಬಜೆಟ್‌ಗೆ ಪೂರ್ವಭಾವಿಯಾಗಿ ಹಿರಿಯ ಅರ್ಥಶಾಸ್ತ್ರಜ್ಞರ ಜೊತೆ ಅವರು ಸಮಾಲೋಚನೆ ನಡೆಸಿದರು. ‘ಆತ್ಮನಿರ್ಭರತೆ ಮತ್ತು ರಾಚನಿಕ ಪರಿವರ್ತನೆ: ವಿಕಸಿತ ಭಾರತಕ್ಕೆ ಕಾರ್ಯಸೂಚಿ’ ಎಂಬ ವಿಷಯವಾಗಿ ಸಮಾಲೋಚನೆ ನಡೆಯಿತು.

ದೇಶವು ನೀತಿ ನಿರೂಪಣೆ ಸಂದರ್ಭದಲ್ಲಿ ಹಾಗೂ ಬಜೆಟ್ ರೂಪಿಸುವಾಗ 2047ರ ಗುರಿಗಳ ಮೇಲೆ ಗಮನ ಇರಿಸಿರಬೇಕು ಎಂದು ಅವರು ಒತ್ತಿಹೇಳಿದರು.

ತಯಾರಿಕೆ ಹಾಗೂ ಸೇವಾ ವಲಯಗಳ ಉತ್ಪಾದಕತೆ ಮತ್ತು ಸ್ಪರ್ಧಾತ್ಮಕತೆಯನ್ನು ಇನ್ನಷ್ಟು ಹೆಚ್ಚಿಸಲು ಅರ್ಥಶಾಸ್ತ್ರಜ್ಞರು ಸಭೆಯಲ್ಲಿ ಸಲಹೆ ನೀಡಿದರು.

ಹೈದರಾಬಾದ್‌ನಲ್ಲಿ ಮಂಗಳವಾರ ವೈಕುಂಠ ಏಕಾದಶಿಯ ಧಾರ್ಮಿಕ ಮೆರವಣಿಗೆ ಸಂದರ್ಭದಲ್ಲಿ ಕಲಾವಿದೆಯರು ಕೋಲಾಟ ಪ್ರದರ್ಶಿಸಿದರು –ಪಿಟಿಐ ಚಿತ್ರ

ಯೆಮನ್ ಬಂದರು ನಗರದ ಮೇಲೆ ಸೌದಿ ದಾಳಿ

ದುಬೈ (ಎಪಿ): ಯೆಮನ್‌ನಲ್ಲಿರುವ ಬಂಡುಕೋರರ ಗುಂಪಿಗೆ ಯುಎಇ ಶಸ್ತ್ರಾಸ್ತ್ರ ಪೂರೈಸಿದೆ ಎಂದು ಆರೋಪಿಸಿ ಸೌದಿ ಅರೇಬಿಯಾವು ಮಂಗಳವಾರ ಬಂದರು ನಗರ ಮುಕಾಲಾ ಮೇಲೆ ವಾಯು ದಾಳಿ ನಡೆಸಿದೆ.

ಯುಎಇಯ ನಡೆ ‘ಅತ್ಯಂತ ಅಪಾಯಕಾರಿ’ ಎಂದು ಸೌದಿ ಬಣ್ಣಿಸಿದೆ. ಆದರೆ, ಬಂಡುಕೋರರ ಗುಂಪಿಗೆ ಶಸ್ತ್ರಾಸ್ತ್ರ ಪೂರೈಸಿದ ಆರೋಪವನ್ನು ಯುಎಇ ಅಲ್ಲಗಳೆದಿದೆ. ವೈಮಾನಿಕ ದಾಳಿಯ ಬೆನ್ನಲ್ಲೇ ಯೆಮನ್‌ನ ಸೌದಿ ಬೆಂಬಲಿತ ಸರ್ಕಾರ, ರಾಷ್ಟ್ರೀಯ ತುರ್ತು ಪರಿಸ್ಥಿತಿ ಘೋಷಿಸಿದೆ.

ಯುಎಇ ಬೆಂಬಲಿತ ಸದರ್ನ್ ಟ್ರಾನ್ಸಿಷನಲ್ ಕೌನ್ಸಿಲ್ (ಎಸ್‌ಟಿಸಿ) ಹೆಸರಿನ ಬಂಡುಕೋರರ ಗುಂಪು ಈಚೆಗೆ ಯೆಮನ್‌ನ ಬಂದರು ನಗರ ಮುಕಾಲಾ ಸೇರಿದಂತೆ ಕೆಲವು ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದೆ. ಇದು ಸೌದಿ ಅರೇಬಿಯಾದ ಕೆಂಗಣ್ಣಿಗೆ ಕಾರಣವಾಗಿದೆ.

ತಾನು ವಶಪಡಿಸಿಕೊಂಡಿರುವ ಪ್ರದೇಶದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಎಸ್‌ಟಿಸಿ ಹೇಳಿದೆ. ‘ಹಿಂದಕ್ಕೆ ಸರಿಯುವ ಯಾವುದೇ ಚಿಂತನೆ ಇಲ್ಲ. ಭೂಮಾಲೀಕನಿಗೆ ತನ್ನ ಸ್ವಂತ ಭೂಮಿಯನ್ನು ಬಿಡುವಂತೆ ಹೇಳುವುದನ್ನು ಒಪ್ಪಲಾಗದು’ ಎಂದು ಎಸ್‌ಟಿಸಿ ವಕ್ತಾರ ಅನ್ವರ್ ಅಲ್ ತಮೀಮಿ ಹೇಳಿದ್ದಾರೆ.

ಈ ಬೆಳವಣಿಗೆಯು ಸೌದಿ ಅರೇಬಿಯಾ ಮತ್ತು ಯುಎಇ ನಡುವಿನ ಸಂಬಂಧವನ್ನು ಮತ್ತಷ್ಟು ಹದಗೆಡಿಸಿದೆ. ಜತೆಗೆ ದಶಕಗಳಿಂದಲೂ ಯುದ್ಧದಿಂದ ಜರ್ಜರಿತವಾಗಿರುವ ಯೆಮನ್‌ನಲ್ಲಿ ಹೊಸ ಸಂಘರ್ಷದ ಭೀತಿ ಮೂಡಿಸಿದೆ.

ರಷ್ಯಾದಿಂದ ಒರೆಶ್ನಿಕ್ ಕ್ಷಿಪಣಿ ವ್ಯವಸ್ಥೆ ನಿಯೋಜನೆ

ಮಾಸ್ಕೊ (ಎಪಿ): ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತು ಸಾಗಿ, ಗುರಿ ನಾಶ ಮಾಡಬಲ್ಲ ಸಾಮರ್ಥ್ಯ ಹೊಂದಿರುವ ಒರೆಶ್ನಿಕ್ ಕ್ಷಿಪಣಿ ವ್ಯವಸ್ಥೆ ದೇಶದ ಸೇನೆಯ ಬತ್ತಳಿಕೆ ಸೇರಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಮಂಗಳವಾರ ಹೇಳಿದೆ.

ಉಕ್ರೇನ್ ವಿರುದ್ಧ ನಡೆಯುತ್ತಿರುವ ಯುದ್ಧವನ್ನು ಅಂತ್ಯಗೊಳಿಸಿ, ಶಾಂತಿ ಸ್ಥಾಪನೆ ಕುರಿತು ಮಾತುಕತೆಗಳು ನಡೆಯುತ್ತಿರುವ ಸಂದರ್ಭದಲ್ಲಿಯೇ, ಈ ಕ್ಷಿಪಣಿ ವ್ಯವಸ್ಥೆಯನ್ನು ನಿಯೋಜಿಸಿರುವುದಾಗಿ ರಷ್ಯಾ ಹೇಳಿದೆ.

ನೆರೆ ರಾಷ್ಟ್ರ ಬೆಲರೂಸ್‌ನಲ್ಲಿ ಈ ಕ್ಷಿಪಣಿ ವ್ಯವಸ್ಥೆಯನ್ನು ನಿಯೋಜನೆ ಮಾಡಲಾಗಿದೆ. ಇದರ ಅಂಗವಾಗಿ ಸೇನೆ ಕಾರ್ಯಕ್ರಮವೊಂದನ್ನು ಆಯೋಜಿಸಿತ್ತು ಎಂದು ಸಚಿವಾಲಯ ತಿಳಿಸಿದೆ. ಇಂತಹ ಎಷ್ಟು ಕ್ಷಿಪಣಿ ವ್ಯವಸ್ಥೆಗಳನ್ನು ನಿಯೋಜನೆ ಮಾಡಲಾಗಿದೆ ಎಂಬ ಬಗ್ಗೆ ಅದು ಹೆಚ್ಚಿನ ವಿವರಗಳನ್ನು ನೀಡಿಲ್ಲ.

ನೆರೆ ರಾಷ್ಟ್ರ ಬೆಲರೂಸ್‌ನಲ್ಲಿ ರಷ್ಯಾ ಸೇನೆ ಅಣ್ವಸ್ತ್ರ ಹೊರುವ ಸಾಮರ್ಥ್ಯದ ಒರೆಶ್ನಿಕ್ ಕ್ಷಿಪಣಿ ವ್ಯವಸ್ಥೆಯನ್ನು ನಿಯೋಜನೆ ಮಾಡಿದೆ ಎಎಫ್‌ಪಿ ಚಿತ್ರ

ಖಾಲಿದಾ ಜಿಯಾ ನಿಧನ

ಬಾಂಗ್ಲಾದ ಮೊದಲ ಮಹಿಳಾ ಪ್ರಧಾನಿ, 3 ಬಾರಿ ಆಯ್ಕೆ

ಢಾಕಾ (ಪಿಟಿಐ): ಮಿಲಿಟರಿ ಆಡಳಿತದ ನಂತರ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮತ್ತು ಹಲವು ದಶಕ ದೇಶದ ರಾಜಕೀಯದಲ್ಲಿ ಸಕ್ರಿಯವಾಗಿದ್ದ ಬಾಂಗ್ಲಾದೇಶದ ಮೊದಲ ಮಹಿಳಾ ಪ್ರಧಾನಿ ಖಾಲಿದಾ ಜಿಯಾ (79) ಮಂಗಳವಾರ ನಿಧನರಾದರು.

ಮೂರು ಸಲ ಪ್ರಧಾನಿಯಾಗಿದ್ದ ಖಾಲಿದಾ ಅವರು ಸುದೀರ್ಘ ಅವಧಿಗೆ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷದ (ಬಿಎನ್‌ಪಿ) ಅಧ್ಯಕ್ಷರಾಗಿದ್ದರು. ‘ನನ್ನ ಅಮ್ಮ ಇನ್ನಿಲ್ಲ’ ಎಂದು ಜಿಯಾ ಅವರ ಹಿರಿಯ ಮಗ, ಬಿಎನ್‌ಪಿ ಹಂಗಾಮಿ ಅಧ್ಯಕ್ಷ ತಾರಿಕ್ ರೆಹಮಾನ್ ಅವರು ನಿಧನ ಸುದ್ದಿಯನ್ನು ಪ್ರಕಟಿಸಿದರು.

ಢಾಕಾದ ಎವರ್‌ಕೇರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಸ್ಥಳೀಯ ಕಾಲಮಾನ ಬೆಳಿಗ್ಗೆ 6ಕ್ಕೆ ಕೊನೆಯುಸಿರೆಳೆದರು ಎಂದು ಅವರ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದ ಡಾ. ಜಾಹಿದ್ ಹುಸೇನ್ ಹೇಳಿದರು. ತಾರಿಕ್ ರೆಹಮಾನ್, ಅವರ ಪತ್ನಿ ಜುಬೇದಾ ರೆಹಮಾನ್ ಮತ್ತು ಪುತ್ರಿ ಝೈಮಾ ಸೇರಿದಂತೆ ಜಿಯಾ ಅವರ ಕುಟುಂಬದ ಸದಸ್ಯರು ಈ ವೇಳೆ ಆಸ್ಪತ್ರೆಯಲ್ಲಿದ್ದರು.

ಆರೋಗ್ಯ ತಪಾಸಣೆಗಾಗಿ ಜಿಯಾ ಅವರನ್ನು ನವೆಂಬರ್ 23ರಂದು ಎವರ್‌ಕೇರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈ ವೇಳೆ ವೈದ್ಯರು ಅವರ ಎದೆಯಲ್ಲಿ ಸೋಂಕು ಇರುವುದನ್ನು ಪತ್ತೆಹಚ್ಚಿ ಚಿಕಿತ್ಸೆ ಮುಂದುವರಿಸಲು ನಿರ್ಧರಿಸಿದ್ದರು. ನವೆಂಬರ್ 27ರಂದು ಆರೋಗ್ಯ ಸ್ಥಿತಿ ಹದಗೆಟ್ಟದ್ದರಿಂದ ಆಸ್ಪತ್ರೆಯ ಕೊರೊನರಿ ಕೇರ್ ವಿಭಾಗಕ್ಕೆ (ಸಿಸಿಯು) ಸ್ಥಳಾಂತರಿಸಲಾಗಿತ್ತು.

ಜಿಯಾ ಅವರು ಯಕೃತ್ತು ಮತ್ತು ಮೂತ್ರಪಿಂಡದ ಸಮಸ್ಯೆ, ಹೃದಯ ಸಂಬಂಧಿ ಕಾಯಿಲೆ, ಅಧಿಕ ರಕ್ತದೊತ್ತಡ, ಮಧುಮೇಹ, ಸಂಧಿವಾತ ಮತ್ತು ಸೋಂಕು ಸಂಬಂಧಿತ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು. ಈ ವರ್ಷದ ಆರಂಭದಲ್ಲಿ ಅವರು ಲಂಡನ್‌ನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು.

ಜಿಯಾ ಅವರು ನವೆಂಬರ್ 21ರಂದು ಢಾಕಾ ಕಂಟೋನ್ಮೆಂಟ್‌ನಲ್ಲಿ ನಡೆದ ಸಶಸ್ತ್ರ ಪಡೆಗಳ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು. ಅವರು ಕೊನೆಯದಾಗಿ ಸಾರ್ವಜನಿಕವಾಗಿ ಕಾಣಿಸಿಕೊಂಡ ಸಮಾರಂಭ ಅದಾಗಿದೆ.

ಅವರ ನಾಲ್ಕು ದಶಕಗಳ ರಾಜಕೀಯ ಪ್ರಯಾಣವು ಹಲವು ಏರಿಳಿತಗಳಿಂದ ಕೂಡಿದೆ. ದೇಶದ ಪ್ರಮುಖ ಪಕ್ಷವನ್ನು ಮುನ್ನಡೆಸಿ ಪ್ರಧಾನಿ ಹುದ್ದೆಗೆ ಏರಿದ ಅವರು ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಶಿಕ್ಷೆಯನ್ನೂ ಅನುಭವಿಸಿದರು.

ಅವರ ರಾಜಕೀಯ ಪ್ರವೇಶ ಪೂರ್ವಯೋಜಿತವಾಗಿರಲಿಲ್ಲ. ಅದನ್ನು ಆಕಸ್ಮಿಕ ಎಂದೇ ನೋಡಲಾಗುತ್ತದೆ. 35ನೇ ವಯಸ್ಸಿನಲ್ಲಿ ವಿಧವೆಯಾದ ಅವರು ಒಂದು ದಶಕದ ಬಳಿಕ ಪ್ರಧಾನಿ ಹುದ್ದೆಗೆ ಏರಿದರು.

ಪತಿ ಹಾಗೂ ಬಾಂಗ್ಲಾದ ಮಾಜಿ ಅಧ್ಯಕ್ಷ ಜಿಯಾವುರ್ ರೆಹಮಾನ್ ಅವರು ಸೇನಾ ದಂಗೆಯಲ್ಲಿ 1981ರ ಮೇ 30ರಂದು ಹತ್ಯೆಯಾದ ಬಳಿಕವಷ್ಟೇ ಅವರು ರಾಜಕೀಯ ಪ್ರವೇಶಿಸಿದರು. ಅದುವರೆಗೂ ಅವರು ಬಾಂಗ್ಲಾದ ‘ಪ್ರಥಮ ಮಹಿಳೆ’ ಎಂದಷ್ಟೇ ಗುರುತಿಸಲ್ಪಡುತ್ತಿದ್ದರು. ರಾಜಕೀಯ ಕ್ಷೇತ್ರದೊಂದಿಗೆ ಹೆಚ್ಚಿನ ಒಡನಾಟ ಇಟ್ಟುಕೊಂಡಿರಲಿಲ್ಲ.

> **ಜಿಯಾ ಅವರ ಕುಟುಂಬ ಮತ್ತು ಬಾಂಗ್ಲಾದೇಶದ ಎಲ್ಲಾ ಜನರಿಗೆ ನಮ್ಮ ಸಂತಾಪಗಳು. ಅವರ ಕುಟುಂಬ ಸದಸ್ಯರಿಗೆ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ದೇವರು ನೀಡಲಿ**
> **ನರೇಂದ್ರ ಮೋದಿ**, ಪ್ರಧಾನಿ

> **ಮೊದಲ ಮಹಿಳಾ ಪ್ರಧಾನಿಯಾಗಿ ಮತ್ತು ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ನಡೆದ ಹೋರಾಟಕ್ಕೆ ನೀಡಿದ ಬೆಂಬಲಕ್ಕಾಗಿ ಜಿಯಾ ಅವರು ಸದಾ ಸ್ಮರಿಸಲ್ಪಡುವರು**
> **ಶೇಖ್ ಹಸೀನಾ**, ಬಾಂಗ್ಲಾದ ಪದಚ್ಯುತ ಪ್ರಧಾನಿ

> **ರಾಷ್ಟ್ರವು ಒಬ್ಬ ರಾಜಕೀಯ ನಾಯಕಿಯನ್ನು ಮಾತ್ರವಲ್ಲದೆ ಬಾಂಗ್ಲಾದ ಇತಿಹಾಸದಲ್ಲಿ ಪ್ರಮುಖ ಅಧ್ಯಾಯವನ್ನು ಪ್ರತಿನಿಧಿಸಿದ ಒಬ್ಬ ಮುತ್ಸದ್ದಿಯನ್ನು ಕಳೆದುಕೊಂಡಿದೆ**
> **ಮೊಹಮ್ಮದ್ ಯೂನುಸ್**, ಬಾಂಗ್ಲಾ ಮಧ್ಯಂತರ ಸರ್ಕಾರದ ಮುಖ್ಯಸ್ಥ

ಖಾಲಿದಾ ಸಾಗಿದ ಹಾದಿ...
- 1946ರ ಆಗಸ್ಟ್ 15ರಂದು ಅವಿಭಜಿತ ಭಾರತದ ದಿನಾಜ್‌ಪುರ (ಪಶ್ಚಿಮ ಬಂಗಾಳದಲ್ಲಿದೆ) ಜಿಲ್ಲೆಯಲ್ಲಿ ತಯ್ಯಬಾ– ಇಸ್ಕಂದರ್ ಮಜುಮ್ದಾರ್ ದಂಪತಿಗೆ ಜನನ
- 1981ರ ಮೇ 30ರಂದು ಪತಿ, ಮಾಜಿ ಅಧ್ಯಕ್ಷ ಜಿಯಾವುರ್ ರೆಹಮಾನ್ ಹತ್ಯೆಯ ಬಳಿಕ ಸಕ್ರಿಯ ರಾಜಕಾರಣ ಪ್ರವೇಶ
- 1982ರ ಜನವರಿ 3ರಂದು ಬಿಎನ್‌ಪಿ ಪಕ್ಷದ ಸದಸ್ಯರಾದರು. ಈ ಪಕ್ಷವನ್ನು ಜಿಯಾವುರ್ ರೆಹಮಾನ್ ಅವರು 1978ರಲ್ಲಿ ಸ್ಥಾಪಿಸಿದ್ದರು
- 1983ರ ಮಾರ್ಚ್‌ನಲ್ಲಿ ಪಕ್ಷದ ಉಪಾಧ್ಯಕ್ಷರಾದ ಅವರು 1984ರ ಮೇನಲ್ಲಿ ಅಧ್ಯಕ್ಷರಾದರು
- 1982ರಲ್ಲಿ ಅಂದಿನ ಸೇನಾ ಮುಖ್ಯಸ್ಥ ಜನರಲ್ ಎಚ್.ಎಂ.ಇರ್ಷಾದ್ ನೇತೃತ್ವದಲ್ಲಿ ನಡೆದ ಸೇನಾ ದಂಗೆಯ ಬಳಿಕ ಪ್ರಜಾಪ್ರಭುತ್ವ ಮರುಸ್ಥಾಪಿಸುವ ನಿಟ್ಟಿನಲ್ಲಿ ಹೋರಾಟ ಆರಂಭಿಸಿದರು
- 1990ರ ಡಿಸೆಂಬರ್‌ನಲ್ಲಿ ಇರ್ಷಾದ್ ನೇತೃತ್ವದ ಸೇನಾಡಳಿತ ಕೊನೆಗೊಂಡ ಬಳಿಕ 1991ರ ಫೆಬ್ರುವರಿಯಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು
- ಚುನಾವಣೆಯಲ್ಲಿ ಗೆದ್ದ ಬಿಎನ್‌ಪಿ ಪಕ್ಷದ ಖಾಲಿದಾ ಅವರು 1991ರಲ್ಲಿ ಬಾಂಗ್ಲಾದ ಮೊದಲ ಮಹಿಳಾ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು
- 1996ರ ಚುನಾವಣೆಯಲ್ಲೂ ಬಿಎನ್‌ಪಿ ಗೆಲುವು ಸಾಧಿಸಿ ಖಾಲಿದಾ ಎರಡನೇ ಬಾರಿ ಪ್ರಧಾನಿ ಹುದ್ದೆಗೇರಿದರು. ಆದರೆ ಅವರ ಸರ್ಕಾರ 12 ದಿನ ಮಾತ್ರ ಅಧಿಕಾರದಲ್ಲಿತ್ತು. ಜಿಯಾ ಅವರ ಸರ್ಕಾರ ಹಂಗಾಮಿ ಸರ್ಕಾರಕ್ಕೆ ಅಧಿಕಾರ ಹಸ್ತಾಂತರಿಸಿತು
- 1999ರಲ್ಲಿ ಇತರ ಪಕ್ಷಗಳ ಜತೆ ಸೇರಿಕೊಂಡು ಮೈತ್ರಿಕೂಟ ರಚಿಸಿದರು. 2001ರ ಚುನಾವಣೆಯಲ್ಲಿ ಗೆದ್ದು ಮೂರನೇ ಬಾರಿ ಪ್ರಧಾನಿ ಹುದ್ದೆಗೇರಿ 2006ರವರೆಗೆ ಅಧಿಕಾರ ನಡೆಸಿದರು
- 2007ರಲ್ಲಿ ಭ್ರಷ್ಟಾಚಾರ ಆರೋಪದಲ್ಲಿ ಬಂಧನಕ್ಕೆ ಒಳಗಾದರು. ಸೇನಾಡಳಿತದ ಅವಧಿಯಲ್ಲಿ ಹಲವು ಬಾರಿ ಗೃಹಬಂಧನಕ್ಕೂ ಒಳಗಾದರು

ಅಂತ್ಯಕ್ರಿಯೆ ಇಂದು

ಖಾಲಿದಾ ಜಿಯಾ ನಿಧನದ ಕಾರಣದಿಂದ ಬಾಂಗ್ಲಾದೇಶದಲ್ಲಿ ಮೂರು ದಿನ ಶೋಕಾಚರಣೆ ನಡೆಯಲಿದೆ. ಅಂತ್ಯಕ್ರಿಯೆ ನಡೆಯಲಿರುವ ಬುಧವಾರ ಸಾರ್ವಜನಿಕ ರಜೆ ಘೋಷಿಸಲಾಗಿದೆ ಎಂದು ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ಪ್ರಕಟಿಸಿದರು.

ಜೈಶಂಕರ್ ಭಾಗಿ (ನವದೆಹಲಿ ವರದಿ): ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಭಾರತದ ಪ್ರತಿನಿಧಿಯಾಗಿ ಖಾಲಿದಾ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ
ನಿಮ್ಮ ಪ್ರೀತಿಯ ಸ್ಮರಣೆಯಲ್ಲಿ

ಶ್ರೀ ರಾಜ್ ಕೃಷ್ಣಮೂರ್ತಿ
10-01-1943 to 20-12-2025
ವೈಕುಂಠ ಸಮಾರಾಧನೆ – ಜನವರಿ 1, 2026
ಬಸವೇಶ್ವರ ನಗರ, ಬೆಂಗಳೂರು
ಶ್ರೀಮತಿ ರಮಾ ರಾಜ್ ಕೆ ಮತ್ತು ಕುಟುಂಬವರ್ಗ
Ph - 7975072170

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಿಸಿ
90083 66666
support@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
https://bit.ly/40dPCqy

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 17,000/ ರಿಂದ 20,000/. ESI, PF ಸೌಲಭ್ಯವಿರುತ್ತದೆ. ಬೆಂಗಳೂರು76. ಸಂಪರ್ಕಿಸಿ: 96063 85001, 96063 84001

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

BGS College of Engineering and Technology
BANGALORE
(Approved by AICTE, New Delhi and Affiliated to VTU, Belagavi)
Department of Mechanical Engineering
Announcement for Junior Research Fellow (JRF)
Duration: Two years or till closure of the project whichever is earlier. Performance evaluation will be done each year.
Qualification: Essential: B.E./B.Tech. in Mechanical Engineering
How to apply?
Online Mode: Send Updated CV Soft copy through email (hod.mech@bgscet.ac.in) (careers@bgscet.ac.in)
Last date to apply: 30/01/2026 @11.59 pm
Email: hod.mech@bgscet.ac.in
Note: • The position is purely temporary
• List of eligible candidates will be intimated through email or phone
• Shortlisted candidates will have to attend an interview (ONLINE/OFFLINE)
• If interviews need to be conducted online, candidates are expected to have a good internet connection
• No TA/DA will be paid for attending the interview

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9019593297, 8095133188.

Wanted

ತಕ್ಷಣ ಬೇಕಾಗಿದ್ದಾರೆ, ಮಾರ್ಕೆಟಿಂಗ್ ಅಲ್ಲ ಕರ್ನಾಟಕದಲ್ಲಿರುವ ಕಂಪನಿಗಳಿಗೆ ಹಳ್ಳಿಗಳಿಂದ ಬರುವ ಯುವಕರಿಗೆ ಯುವತಿಯರಿಗೆ ಸಂಬಳ 20000-35000 (ವಿದ್ಯಾರ್ಹತೆಯಿಲ್ಲದವರಿಗು) ವಸತಿಯೂಟವಿರುತ್ತದೆ. 9916788422

ವ್ಯಾಪಾರ

Business Offers

Distributors

ತನ್ಮಯಿ ಆಯಿಲ್ ಕಂಪನಿಯಲ್ಲಿ ಪ್ಯಾಕಿಂಗ್ ಕೆಲಸ ಮಾಡಲು 10 ಜನ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 15 ರಿಂದ 18 ಸಾವಿರ. ಸ್ಥಳ: ಶೇಷಾದ್ರಿಪುರಂ ಬೆಂಗಳೂರು ದೂರವಾಣಿ ಸಂಖ್ಯೆ: 9019626612.

ಭವಿಷ್ಯ

Astrology

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2 ದಿನಗಳಲ್ಲಿ ಪರಿಹಾರ. 9886755306

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು



ಚಿತ್ರದ ಮುಹೂರ್ತ ಕಾರ್ಯಕ್ರಮ

‘ಗಲಿಬಿಲಿ ಗೋವಿಂದ’ನಿಗೆ ಮುಹೂರ್ತ

ಕಿರುತೆರೆಯ ಜನಪ್ರಿಯ ಧಾರಾವಾಹಿ ‘ಸಿಲ್ಲಿಲಲ್ಲಿ’ಯ ‘ಗೋವಿಂದ’ನ ಪಾತ್ರದಲ್ಲಿ ಮಿಂಚಿದ್ದ ನಟ ಸಂಗಮೇಶ ಉಪಾಸೆ ನಿರ್ದೇಶನಕ್ಕೆ ಇಳಿದಿದ್ದಾರೆ.

‘ಗಲಿಬಿಲಿ ಗೋವಿಂದ’ ಸಿನಿಮಾದ ಮುಹೂರ್ತ ಇತ್ತೀಚೆಗೆ ಚಡಚಣ ಸಮೀಪವಿರುವ ಇಂಚಗೇರಿ ಮಠದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಸೇರಿದಂತೆ ಹಲವರು ಹಾಜರಿದ್ದರು.

ಧಾರಾವಾಹಿಯಲ್ಲಿ ‘ಅರ್ಥವಾಯಿತು ಬಿಡಿ..’ ಎನ್ನುವ ಸಂಭಾಷಣೆ ಮೂಲಕ ನಗಿಸುತ್ತಿದ್ದ ಸಂಗಮೇಶ, ಹಲವು ಸಿನಿಮಾಗಳಲ್ಲಿ ಹಾಸ್ಯ-ಪಾತ್ರಗಳನ್ನು ನಿಭಾಯಿಸಿದ್ದಾರೆ. ಇವೆಲ್ಲದರ ಅನುಭವದ ಹೂರಣವಾಗಿ ಈ ಸಿನಿಮಾ ತೆರೆಗೆ ಬರಲಿದೆ. ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ಮುಖ್ಯ ಪಾತ್ರದಲ್ಲೂ ಸಂಗಮೇಶ ನಟಿಸುತ್ತಿದ್ದಾರೆ. ಅಂಬರೀಷ ಬಣಜಿಗೇರ, ಸಂದೀಪ್ ರಾಠೋಡ್, ಚಿದಾನಂದ ಪರಗೊಂಡ, ಮಡಿವಾಳಪ್ಪ.ಎಂ.ಗೋಗಿ ಮತ್ತು ಚಿದಾನಂದ ಪತ್ತಾರ ಜಂಟಿಯಾಗಿ ಈ ಸಿನಿಮಾಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಸಿನಿಮಾಗೆ ‘ನಗುವವರಿಗೆ ಮಾತ್ರ’ ಎಂಬ ಅಡಿಬರಹವಿದೆ.

‘ಗೋವಿಂದ’ ಪಾತ್ರ ಜನರ ಮನಸ್ಸಿನಲ್ಲಿ ಉಳಿದಿರುವ ಕಾರಣ ಅದನ್ನೇ ಚಿತ್ರದ ಆಕರ್ಷಣೆಯ ಕೇಂದ್ರಬಿಂದುವಾಗಿ ಮಾಡಿಕೊಳ್ಳಲಾಗಿದೆ’ ಎಂದಿದ್ದಾರೆ ಸಂಗಮೇಶ.

‘ಗ್ರಾಮೀಣ ಭಾಗದಲ್ಲಿ ಅನಾಥ ಮಕ್ಕಳ ಕುರಿತು, ಅವರ ಸಮಸ್ಯೆ ಮೇಲೆ ಬೆಳಕು ಚೆಲ್ಲುವ ಹಾಗೂ ಮಕ್ಕಳು ಇದ್ದವರು, ಇಲ್ಲದವರ ಪೋಷಕರ ಪಾಡು ಹೇಗಿರುತ್ತದೆ ಎಂಬುದನ್ನು ಹಾಸ್ಯ ಧಾಟಿಯಲ್ಲಿ ತೋರಿಸಲಾಗುವುದು. ಎಲ್ಲರಿಗೂ ಮನಮುಟ್ಟುವಂತಹ ಸಂದೇಶವೂ ಸಿನಿಮಾದಲ್ಲಿರಲಿದೆ. ಹೊರ್ತಿ, ಅಂಜುಟಗಿ, ವಿಜಯಪುರ, ಇಂಡಿ ಮುಂತಾದ ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗುವುದು. ಕಲಾವಿದರ ವಿವರಗಳನ್ನು ಮುಂದಿನ ದಿನಗಳಲ್ಲಿ ನೀಡಲಾಗುವುದು’ ಎಂದರು ಸಂಗಮೇಶ ಉಪಾಸೆ.

ಚಿತ್ರಕ್ಕೆ ಪಳನಿ ಡಿ.ಸೇನಾಪತಿ ಸಂಗೀತ, ಆನಂದ ದಿಂಡ್ವರ್ ಛಾಯಾಚಿತ್ರಗ್ರಹಣ, ರವಿತೇಜ್ ಸಿ.ಎಚ್ ಸಂಕಲನ, ಮಾಲೂರು ಶ್ರೀನಿವಾಸ್ ನೃತ್ಯ ನಿರ್ದೇಶನವಿರಲಿದೆ.

‘ರಕ್ಕಸಪುರದೋಳ್’ಗೆ ರಾಜ್ ರೌದ್ರಾವತಾರ

ರಾಜ್ ಬಿ ಶೆಟ್ಟಿ ನಾಯಕ ನಟನಾಗಿರುವ ‘ರಕ್ಕಸಪುರದೋಳ್’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರವಿ ಸಾರಂಗ ನಿರ್ದೇಶನದ ಚೊಚ್ಚಲ ಸಿನಿಮಾದಲ್ಲಿ ರಾಜ್ ಶೆಟ್ಟಿ ಮಾಸ್ ಅವತಾರದಲ್ಲಿ ಕಾಣಿಸಿಕೊಂಡು ಗಮನ ಸೆಳೆದಿದ್ದಾರೆ. ಸಾಹಸ ನಿರ್ದೇಶಕ ರವಿವರ್ಮ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

‘ಕೊಳ್ಳೇಗಾಲವನ್ನು ಆಧರಿಸಿದ ಕ್ರೈಮ್ ಥ್ರಿಲ್ಲರ್ ಕಥೆ ಇದು. ಜತೆಗೆ ಮನುಷ್ಯನ ಒಳಗಿನ ದೈತ್ಯನ ಬಗೆಗಿನ ಕಥೆ ಕೂಡ. ಪ್ರತಿಯೊಬ್ಬ ವ್ಯಕ್ತಿಗೂ ಎರಡು ಮುಖಗಳಿರುತ್ತವೆ. ಒಂದು ಒಳ್ಳೆಯದು ಮತ್ತು ಇನ್ನೊಂದು ಕೆಟ್ಟದ್ದು. ಆ ಕತ್ತಲೆಯೇ ರಕ್ಕಸ. ಮುಖ್ಯ ಪಾತ್ರವು ತನ್ನ ಆಂತರಿಕ ಹೋರಾಟಗಳನ್ನು ಹೇಗೆ ಎದುರಿಸುತ್ತದೆ ಎಂಬುದನ್ನು ಈ ಚಿತ್ರವು ಹೇಳುತ್ತದೆ’ ಎನ್ನುತ್ತಾರೆ ನಿರ್ದೇಶಕ.

‘ಗರುಡ ಗಮನ’, ‘ಟೋಬಿ’ ಚಿತ್ರಗಳ ಬಳಿಕ ರಾಜ್ ಮತ್ತೆ ಮಾಸ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಪೊಲೀಸ್ ಅಧಿಕಾರಿಯಾಗಿ ದುಷ್ಟರನ್ನು ಸಂಹಾರ ಮಾಡುವ ಪಾತ್ರ ಇವರದ್ದು ಎಂದು ಟೀಸರ್‌ನಿಂದ ಗೊತ್ತಾಗುತ್ತದೆ.

2026 ಫೆಬ್ರುವರಿ 6ಕ್ಕೆ ಚಿತ್ರ ತೆರೆಗೆ ಬರಲಿದೆ. ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ, ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನವಿದೆ. ಸ್ವಾತಿಷ್ಟ ಕೃಷ್ಣನ್, ಗೋಪಾಲಕೃಷ್ಣ ದೇಶಪಾಂಡೆ, ಬಿ.ಸುರೇಶ್, ಅರ್ಚನಾ ಕೊಟ್ಟಿಗೆ ಮುಂತಾದವರು ಚಿತ್ರದಲ್ಲಿದ್ದಾರೆ.



ರಾಜ್ ಬಿ ಶೆಟ್ಟಿ

ಸುದೀಪ್

‘ಮಾರ್ಕ್’ ಗಳಿಕೆ ₹35 ಕೋಟಿ

ನಟ ಸುದೀಪ್ ನಟನೆಯ, ಸತ್ಯಜ್ಯೋತಿ ಫಿಲ್ಮ್ಸ್ ಹಾಗೂ ಕಿಚ್ಚ ಕ್ರಿಯೇಷನ್ಸ್ ನಿರ್ಮಾಣದ ‘ಮಾರ್ಕ್’ ಸಿನಿಮಾ ಮೊದಲ ವಾರಾಂತ್ಯದಲ್ಲಿ ₹35 ಕೋಟಿ ಗಳಿಕೆ ಮಾಡಿದೆ ಎಂದು ಚಿತ್ರತಂಡ ತಿಳಿಸಿದೆ.

ಮೈಸೂರು, ಶಿವಮೊಗ್ಗ, ತುಮಕೂರು, ಬೆಂಗಳೂರು, ದಾವಣಗೆರೆ ಮತ್ತು ಚಾಮರಾಜನಗರದಾದ್ಯಂತದ ಹಲವಾರು ಏಕಪರದೆ ಚಿತ್ರಮಂದಿರಗಳಲ್ಲಿ ಸಿನಿಮಾ ಹೌಸ್‌ಫುಲ್ ಪ್ರದರ್ಶನಗಳನ್ನು ಕಂಡಿದೆ ಎಂದಿದ್ದಾರೆ ಸಿನಿಮಾದ ಪಿಆರ್‌ಒ. ಬುಧವಾರ(ಡಿ.31) ಚಿತ್ರತಂಡದೊಂದಿಗೆ ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಸಂತೋಷ್ ಚಿತ್ರಮಂದಿರದಲ್ಲಿ ಹಾಗೂ ಸಂಜೆ 4.30ಕ್ಕೆ ಮೈಸೂರಿನ ಸಂಗಮ್ ಚಿತ್ರಮಂದಿರದಲ್ಲಿ ಸುದೀಪ್ ‘ಮಾರ್ಕ್’ ಸಿನಿಮಾ ವೀಕ್ಷಿಸಲಿದ್ದಾರೆ.

ಚಿತ್ರದ ಪೋಸ್ಟರ್

ಸೆಟ್ಟೇರಲು ಸಜ್ಜಾದ ‘ಕೆ ಪಾಪ್’

ಕೊರಿಯನ್ ಪಾಪ್ ಸಂಸ್ಕೃತಿ ಕುರಿತಾದ ಕಥೆಯನ್ನು ಹೊಂದಿರುವ ‘ಕೆ ಪಾಪ್’ ಚಿತ್ರದ ಟೈಟಲ್ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕೆವಿನ್ ಲೂಕ್ ನಿರ್ದೇಶನದ ಚಿತ್ರ ಶೀಘ್ರದಲ್ಲಿ ಸೆಟ್ಟೇರಲಿದೆ.

‘ಕರ್ನಾಟಕ, ನಮ್ಮ ದೇಶ ಸೇರಿದಂತೆ ಜಗತ್ತಿನ ವಿವಿಧ ದೇಶಗಳಲ್ಲಿ ಕೊರಿಯನ್ ಪಾಪ್ ಸಂಸ್ಕೃತಿ ಹೇಗೆಲ್ಲಾ ಪ್ರಭಾವ ಬೀರಿದೆ ಎನ್ನುವುದನ್ನು ತಿಳಿಸುವ ಪ್ರಯತ್ನ ಇದಾಗಿದೆ. ಇದರೊಂದಿಗೆ ಹಲವು ವಿಷಯಗಳು ಬರುತ್ತವೆ. ಶನಿ, ಯಮನ ಪಾತ್ರಗಳು ಬರುತ್ತವೆ. ಅವರೆಲ್ಲ ಯಾಕೆ ಬರುತ್ತಾರೆ ಎಂಬುದೇ ಚಿತ್ರಕಥೆ. ಕನಸಿನಲ್ಲಿ ನಡೆಯುವ ಕಥೆಯಿದು. ಮುಂದಿನ ತಿಂಗಳಿನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ’ ಎಂದರು ನಿರ್ದೇಶಕ.

ಅಲಗಾನಿ ಕಿರಣ್ ಕುಮಾರ್ ಬಂಡವಾಳ ಹೂಡುತ್ತಿದ್ದಾರೆ. ಕನ್ನಡ ಮತ್ತು ತೆಲುಗಿನಲ್ಲಿ ಚಿತ್ರೀಕರಣ ಮಾಡಲು ಚಿತ್ರತಂಡ ಯೋಚಿಸಿದೆ. ಸಂಜಯ್ ಚಿತ್ರದ ನಾಯಕ. ಗರುಡ ರಾಮ್, ವಿಷ್ಣು ಮುಂತಾದವರು ಚಿತ್ರದಲ್ಲಿದ್ದಾರೆ. ರಾಜ್‌ಕಾಂತ್ ಛಾಯಾಚಿತ್ರಗ್ರಹಣ, ಶಶಿಧರ್ ಸಂಕಲನವಿದೆ.

‘ಬ್ಯಾಟಲ್ ಆಫ್ ಗಾಲ್ವಾನ್’ ಚಿತ್ರಕ್ಕೆ ಚೀನಾ ಆಕ್ಷೇಪ; ಭಾರತ ತಿರುಗೇಟು

‘ಸಿನಿಮಾ ಕಲಾತ್ಮಕ ಅಭಿವ್ಯಕ್ತಿ, ನಿರ್ಬಂಧ ಸಾಧ್ಯವಿಲ್ಲ’

ನವದೆಹಲಿ (ಪಿಟಿಐ): 2020ರಲ್ಲಿ ಗಾಲ್ವಾನ್ ಕಣಿವೆಯಲ್ಲಿ ಚೀನಾ ಹಾಗೂ ಭಾರತದ ಸೇನಾ ಪಡೆಗಳ ನಡುವೆ ನಡೆದ ಸಂಘರ್ಷದ ಕಥೆ ಆಧರಿಸಿ ತಯಾರಾಗಿರುವ ನಟ ಸಲ್ಮಾನ್ ಖಾನ್ ನಟನೆಯ ‘ಬ್ಯಾಟಲ್ ಆಫ್ ಗಾಲ್ವಾನ್’ ಸಿನಿಮಾದ ಕುರಿತು ಚೀನಾ ಆಕ್ಷೇಪ ವ್ಯಕ್ತಪಡಿಸಿದೆ.

ಇದಕ್ಕೆ ತಿರುಗೇಟು ನೀಡಿರುವ ಭಾರತ, ‘ಸಿನಿಮಾಗಳು ಕಲಾತ್ಮಕ ಅಭಿವ್ಯಕ್ತಿಯಾಗಿದ್ದು, ಅದರ ಮೇಲೆ ನಿರ್ಬಂಧ ವಿಧಿಸಲು ಸಾಧ್ಯವಿಲ್ಲ’ ಎಂದು ತಿಳಿಸಿದೆ.

ಭಾರಿ ಬಜೆಟ್‌ನ ಸಿನಿಮಾ ನಿರ್ಮಾಣಕ್ಕೆ ಚೀನಾದ ಸರ್ಕಾರಿ ಸ್ವಾಮ್ಯದ ಪತ್ರಿಕೆ ‘ಗ್ಲೋಬಲ್ ಟೈಮ್ಸ್’ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. 1.12 ನಿಮಿಷದ ಟೀಸರ್ ಉತ್ಪ್ರೇಕ್ಷೆಯಿಂದ ಕೂಡಿದ್ದು, ನೈಜ ಅಂಶಗಳನ್ನು ತಿರುಚಲಾಗಿದೆ ಎಂದು ತಿಳಿಸಿದೆ.

ಸಿನಿಮಾವನ್ನು ಅಪೂರ್ವ ಲಾಖಿಯಾ ಅವರು ನಿರ್ದೇಶನ ಮಾಡುತ್ತಿದ್ದು, ನಟ ಸಲ್ಮಾನ್ ಅವರು ‘ಬಿಕ್ಕುಮಲ್ಲಾ’ ಪಾತ್ರ ನಿರ್ವಹಿಸುತ್ತಿದ್ದಾರೆ. 2020ರಲ್ಲಿ ನಡೆದ ಚೀನಾದ ಜೊತೆಗಿನ ಸಂಘರ್ಷದಲ್ಲಿ 16ನೇ ಬಿಹಾರ್ ರೆಜಿಮೆಂಟ್‌ನ ಕರ್ನಲ್ ಬಿಕ್ಕುಮಲ್ಲಾ ಸಂತೋಷ್ ಬಾಬು ಸೇರಿದಂತೆ 19 ಮಂದಿ ಮೃತಪಟ್ಟಿದ್ದರು. ಬಾಬು ಅವರಿಗೆ ಮರಣೋತ್ತರವಾಗಿ ‘ಮಹಾವೀರ ಚಕ್ರ’ ಗೌರವ ನೀಡಲಾಗಿತ್ತು.

‘ಬ್ಯಾಟಲ್ ಆಫ್ ಗಾಲ್ವಾನ್’ ಸಿನಿಮಾದ ಪೋಸ್ಟರ್

ಸಲ್ಮಾನ್ ಖಾನ್ ಅವರ 60ನೇ ವರ್ಷದ ಜನ್ಮ ದಿನದ ಅಂಗವಾಗಿ ಶನಿವಾರ ಟೀಸರ್ ಅನ್ನು ಬಿಡುಗಡೆಗೊಳಿಸಲಾಗಿತ್ತು. ಭಾರತದ ಸೇನಾಧಿಕಾರಿ ಹಾಗೂ ಸೈನಿಕರು ಚೀನಾ ಪಡೆಗಳ ಮೇಲೆ ದಾಳಿ ನಡೆಸಲು ಸಿದ್ಧವಾಗಿರುವುದನ್ನು ತೋರಿಸಲಾಗಿದ್ದು, ‘ಮೇರಾ ಭಾರತ್ ದೇಶ ಮಹಾನ್ ಹೈ’ ಎಂಬ ಹಾಡು ಬಳಸಲಾಗಿದೆ.

‘ಸೈನಿಕರೇ ನೆನಪಿಡಿ, ನಿಮಗೆ ನೋವಾದರೆ, ಪದಕದಂತೆ ಗೌರವಿಸಿ. ನಿಮಗೆ ಸಾವು ಎದುರಾದರೆ, ಅದಕ್ಕೆ ಸೆಲ್ಯೂಟ್ ಮಾಡಿ’ ಎಂದು ಸಲ್ಮಾನ್ ಅವರ ಧ್ವನಿಯಲ್ಲಿ ಹೇಳಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಈ ಟೀಸರ್ ಅನ್ನು 6 ಕೋಟಿಗೂ ಅಧಿಕ ಮಂದಿ ವೀಕ್ಷಣೆ ಮಾಡಿದ್ದಾರೆ. ಏಪ್ರಿಲ್ 17ರಂದು ಈ ಸಿನಿಮಾ ಬಿಡುಗಡೆಯಾಗಲಿದೆ.

‘ರೈಲ್‌ಒನ್’ನಿಂದ ಟಿಕೆಟ್: ಶೇ 3 ರಿಯಾಯಿತಿ

ನವದೆಹಲಿ (ಪಿಟಿಐ): ‘ರೈಲ್‌ಒನ್’ ಅಪ್ಲಿಕೇಷನ್ ಮೂಲಕ ಕಾಯ್ದಿರಿಸದ ಟಿಕೆಟ್ ಖರೀದಿಸುವ ಪ್ರಯಾಣಿಕರಿಗೆ ಒಟ್ಟು ಮೊತ್ತದಲ್ಲಿ ಶೇ 3ರಷ್ಟು ರಿಯಾಯಿತಿ ಕೊಡುಗೆಯನ್ನು ರೈಲ್ವೆ ಸಚಿವಾಲಯ ಪ್ರಕಟಿಸಿದೆ.

2026ರ ಜನವರಿ 14ರಿಂದ ಜುಲೈ 14ರವರೆಗೆ ಈ ಕೊಡುಗೆ ಲಭಿಸಲಿದೆ. ಗ್ರಾಹಕರು ‘ರೈಲ್‌ಒನ್ ಆ್ಯಪ್’ ಮೂಲಕ ‘ಆರ್- ವಾಲೆಟ್’ ಬಳಸಿ ಟಿಕೆಟ್ ಖರೀದಿಸಿದಾಗ ಮಾತ್ರ ಈ ಕೊಡುಗೆ ಲಭಿಸಲಿದೆ. ಇತರೆ ಅಪ್ಲಿಕೇಷನ್ ಅಥವಾ ಡಿಜಿಟಲ್ ವೇದಿಕೆಗಳ ಮೂಲಕ ಕಾಯ್ದಿರಿಸದ ಟಿಕೆಟ್‌ಗಳಿಗೆ ಈ ರಿಯಾಯಿತಿ ಇರುವುದಿಲ್ಲ ಎಂದು ರೈಲ್ವೆ ಸಚಿವಾಲಯ ಹೇಳಿದೆ.

ರಿಯಾಯಿತಿ ಕೊಡುಗೆಗೆ ಸಂಬಂಧಿಸಿದಂತೆ ರೈಲ್‌ಒನ್ ಅಪ್ಲಿಕೇಷನ್ ತಂತ್ರಾಂಶದಲ್ಲಿ ಅಗತ್ಯ ಬದಲಾವಣೆ ತರುವಂತೆ ಸಚಿವಾಲಯವು, ರೈಲ್ವೆ ಮಾಹಿತಿ ವ್ಯವಸ್ಥೆಯ ಕೇಂದ್ರಕ್ಕೆ ಸೂಚನೆ ನೀಡಿದೆ.

ರೈಲ್‌ಒನ್ ಅಪ್ಲಿಕೇಷನ್ ಮೂಲಕ ಟಿಕೆಟ್ ಖರೀದಿಸುವಾಗ ‘ಆರ್–ವಾಲೆಟ್’ ಮೂಲಕ ಪಾವತಿ ಮಾಡಿದರೆ ಈಗಾಗಲೇ ಜಾರಿಯಲ್ಲಿರುವ ಶೇ 3ರಷ್ಟು ‘ಕ್ಯಾಶ್‌ಬ್ಯಾಕ್ ಕೊಡುಗೆ’ಯು ಹಿಂದಿನಂತೆಯೇ ಮುಂದುವರಿಯಲಿದೆ ಎಂದೂ ರೈಲ್ವೆ ಸಚಿವಾಲಯ ಸ್ಪಷ್ಟಪಡಿಸಿದೆ.

‘ಉತ್ತರ ಭಾರತೀಯನೆಂಬ ಕಾರಣಕ್ಕೆ ಹಲ್ಲೆ ಮಾಡಿಲ್ಲ’

ಚೆನ್ನೈ: ಒಡಿಶಾದ ವಲಸೆ ಕಾರ್ಮಿಕ ಸೂರಜ್ ಉತ್ತರ ಭಾರತೀಯ ಎಂಬ ಕಾರಣಕ್ಕಾಗಿ ಕಾನೂನು ಸಂಘರ್ಷಕ್ಕೆ ಒಳಗಾದ ನಾಲ್ವರು ಬಾಲಕರು ಆತನ ಮೇಲೆ ಹಲ್ಲೆ ನಡೆಸಿಲ್ಲ ಎಂದು ಐಜಿಪಿ(ಉತ್ತರ ವಲಯ) ಅಸ್ರಾ ಗರ್ಗ್ ಮಂಗಳವಾರ ಹೇಳಿದ್ದಾರೆ.

‘ಚೆನ್ನೈ– ತಿರುತ್ತಣಿ ಎಮು ರೈಲಿನಲ್ಲಿ ಪ್ರಯಾಣಿಸುವ ವೇಳೆ, ಸೂರಜ್ ತಮ್ಮನ್ನು ಗುರಾಯಿಸಿದ ಎಂದು ನಾಲ್ವರು ಬಾಲಕರು ಶಂಕಿಸಿದರು. ಇದು ಅವರ ನಡುವೆ ಮಾತಿನ ಚಕಮಕಿಗೆ ಕಾರಣವಾಯಿತು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಹೇಳಿದ್ದಾರೆ.

ಎನ್‌ಡಿಎ ಬಲ ಹೆಚ್ಚಳ ಸಾಧ್ಯತೆ

ರಾಜ್ಯಸಭೆ: ಹೊಸ ವರ್ಷದಲ್ಲಿ 72 ಸ್ಥಾನಗಳಿಗೆ ಚುನಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೊಸ ವರ್ಷ 2026ರಲ್ಲಿ ರಾಜ್ಯಸಭೆಯ 72 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಈಗಿರುವ ಬಲಾಬಲ ಹಾಗೂ ಮೈತ್ರಿಯ ಶಕ್ತಿಯನ್ನು ಅವಲೋಕಿಸಿದಾಗ ಎನ್‌ಡಿಎ ತನ್ನ ಸಂಖ್ಯೆ ಹೆಚ್ಚಿಸಿಕೊಳ್ಳುವ ಸಾಧ್ಯತೆ ಇದೆ.

ವಿವಿಧ ಪಕ್ಷಗಳ ರಾಜ್ಯಸಭಾ ಸದಸ್ಯರ ಅವಧಿ ಅಂತ್ಯಗೊಳ್ಳುವುದರ ಆಧಾರದಲ್ಲಿ ಏಪ್ರಿಲ್, ಜೂನ್, ಜುಲೈ ಹಾಗೂ ನವೆಂಬರ್‌ನಲ್ಲಿ ಚುನಾವಣೆ ನಡೆಯಲಿವೆ.

ಪ್ರಸ್ತುತ, ರಾಜ್ಯಸಭೆಯಲ್ಲಿ ಎನ್‌ಡಿಎ ಸಂಖ್ಯಾಬಲ 40 ಇದ್ದು, ಮುಂದಿನ ವರ್ಷ ನಡೆಯುವ ಚುನಾವಣೆಗಳಲ್ಲಿ ಅದು 50 ಸ್ಥಾನಗಳಲ್ಲಿ ಗೆಲ್ಲುವ ನಿರೀಕ್ಷೆ ಇದೆ. ‘ಇಂಡಿಯಾ’ ಮೈತ್ರಿಕೂಟದ ಸದಸ್ಯರ ಸಂಖ್ಯೆ 25 ಇದ್ದು, ಇದು 5 ಸ್ಥಾನಗಳನ್ನು ಕಳೆದುಕೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ರಾಜ್ಯ ವಿಧಾನಸಭೆಗಳಲ್ಲಿ ವಿವಿಧ ಪಕ್ಷಗಳು ಹೊಂದಿರುವ ಸದಸ್ಯರ ಸಂಖ್ಯೆಯನ್ನು ಪರಿಗಣಿಸಿದಾಗ, ಬಿಜೆಪಿಯು 37–38 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ. ಆದರೆ, ಈ ಗೆಲುವು ತನ್ನ ಮಿತ್ರ ಪಕ್ಷಗಳಿಗೆ ಎಷ್ಟು ಸ್ಥಾನಗಳನ್ನು ಬಿಟ್ಟು ಕೊಡಲಿದೆ ಎಂಬುದನ್ನು ಅವಲಂಬಿಸಿದೆ.

ಒಂದು ವೇಳೆ, ಬಿಜೆಪಿಯು ಇಷ್ಟು ಸಂಖ್ಯೆಯ ಸ್ಥಾನಗಳಲ್ಲಿ ಗೆಲ್ಲುವಲ್ಲಿ ವಿಫಲವಾದಲ್ಲಿ ಕಾಂಗ್ರೆಸ್ ಪಕ್ಷ 8–9 ಹೆಚ್ಚು ಸ್ಥಾನಗಳನ್ನು ಗೆಲ್ಲಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಕಾಂಗ್ರೆಸ್‌ನ ಶಕ್ತಿ ಸಿನ್ಹ ಗೋಹಿಲ್ ಅವರ ಅವಧಿ ಜೂನ್‌ನಲ್ಲಿ ಅಂತ್ಯಗೊಳ್ಳಲಿದೆ. ಆಗ, ರಾಜ್ಯಸಭೆಯಲ್ಲಿ ಗುಜರಾತ್‌ನಿಂದ ಕಾಂಗ್ರೆಸ್ ಸದಸ್ಯರೇ ಇಲ್ಲದಂತಾಗಲಿದೆ. ಪಶ್ಚಿಮ ಬಂಗಾಳದಿಂದ ಆಯ್ಕೆಯಾಗಿರುವ ವಿಕಾಶ್ ರಂಜನ್ ಭಟ್ಟಾಚಾರ್ಯ ಅವರ ಅವಧಿ ಏಪ್ರಿಲ್‌ನಲ್ಲಿ ಮುಗಿಯಲಿದೆ. ಆಗ, ರಾಜ್ಯಸಭೆಯಲ್ಲಿ ಕೇರಳದಿಂದ ಮಾತ್ರ ಸಿಪಿಎಂ ತನ್ನ ಪ್ರತಿನಿಧಿಯನ್ನು ಹೊಂದಿರಲಿದೆ.

ಬಲಾಬಲ: ಪ್ರಸ್ತುತ ರಾಜ್ಯಸಭೆಯಲ್ಲಿ, ಎನ್‌ಡಿಎ 135 ಸದಸ್ಯ ಬಲ ಹೊಂದಿದೆ. ‘ಇಂಡಿಯಾ’ ಒಕ್ಕೂಟವು 80 ಸದಸ್ಯ ಬಲ ಹೊಂದಿದೆ. 29 ಸಂಸದರು ಯಾವ ಮೈತ್ರಿಕೂಟದ ಭಾಗವೂ ಆಗಿಲ್ಲ. ಮುಂದಿನ ವರ್ಷ ನವೆಂಬರ್ ವೇಳೆಗೆ ಚುನಾವಣೆ ಪೂರ್ಣಗೊಂಡಾಗ, ಎನ್‌ಡಿಎ ಸಂಖ್ಯಾಬಲ 145 ಹಾಗೂ ‘ಇಂಡಿಯಾ’ದ ಸದಸ್ಯರ ಸಂಖ್ಯೆ 75ಕ್ಕೆ ತಲುಪುವ ಸಾಧ್ಯತೆ ಇದೆ.

ಅವಧಿ ಅಂತ್ಯ ಆಗಲಿರುವ ನಾಯಕರು

ಮಲ್ಲಿಕಾರ್ಜುನ ಖರ್ಗೆ, ಹರಿವಂಶ ಸಿಂಗ್, ಎಚ್‌.ಡಿ. ದೇವೇಗೌಡ, ಶರದ್ ಪವಾರ್, ರಾಮಗೋಪಾಲ್ ಯಾದವ್, ಹರದೀಪ್ ಸಿಂಗ್ ಪುರಿ, ರಾಮದಾಸ್ ಆಠವಲೆ, ದಿಗ್ವಿಜಯ್ ಸಿಂಗ್, ಅಭಿಷೇಕ್ ಸಿಂಘ್ವಿ, ತಿರುಚ್ಚಿ ಶಿವ, ಉಪೇಂದ್ರ ಕುಶ್ವಾಹ, ಪ್ರಿಯಾಂಕಾ ಚತುರ್ವೇದಿ, ನಿವೃತ್ತ ಸಿಜೆಐ ರಂಜನ್ ಗೊಗೊಯ್ (ನಾಮನಿರ್ದೇಶಿತ)

ಪ್ರಮುಖ ಅಂಶಗಳು

- ಜೂನ್ ಬಳಿಕ 17 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಂದ ರಾಜ್ಯಸಭೆಯಲ್ಲಿ ಕಾಂಗ್ರೆಸ್‌ಗೆ ಪ್ರತಿನಿಧಿಗಳು ಇಲ್ಲದಂತಾಗಲಿದೆ
- ಆಂಧ್ರದಲ್ಲಿ ಟಿಡಿಪಿ ನೇತೃತ್ವದ ಎನ್‌ಡಿಎ ಎಲ್ಲ 4 ಸ್ಥಾನ ಗೆಲ್ಲುವ ಸಾಧ್ಯತೆ
- ಬಿಜೆಪಿಯು ಆಂಧ್ರಪ್ರದೇಶದಲ್ಲಿ ಹೆಚ್ಚುವರಿಯಾಗಿ ಒಂದು ಸ್ಥಾನ ಗೆಲ್ಲಲಿದ್ದರೆ, ಒಡಿಶಾದಲ್ಲಿ ಸಂಖ್ಯಾಬಲವನ್ನು ನಾಲ್ಕಕ್ಕೆ ಹೆಚ್ಚಿಸಿಕೊಳ್ಳಬಹುದು
- ಜಾರ್ಖಂಡ್‌ನಲ್ಲಿ ಬಿಜೆಪಿಗೆ ಒಂದು ಸ್ಥಾನ ನಷ್ಟವಾಗಬಹುದು
- ಕಾಂಗ್ರೆಸ್ ಪಕ್ಷ ಮಹಾರಾಷ್ಟ್ರ, ಛತ್ತೀಸಗಢ, ಗುಜರಾತ್‌ನಲ್ಲಿ ತಲಾ ಒಂದು ಸ್ಥಾನ ಕಳೆದುಕೊಳ್ಳುವ ಸಾಧ್ಯತೆ ಇದೆ. ಹರಿಯಾಣ, ಕರ್ನಾಟಕ, ಹಿಮಾಚಲ ಪ್ರದೇಶದಲ್ಲಿ ಹೆಚ್ಚುವರಿಯಾಗಿ ತಲಾ ಒಂದು ಸೀಟು ಗೆಲ್ಲಬಹುದು
- ಬಿಹಾರದಲ್ಲಿ 5 ಸ್ಥಾನಗಳಿಗೆ ಚುನಾವಣೆ ನಡೆಯುವುದು. ಬಿಜೆಪಿ ಎರಡು ಸ್ಥಾನಗಳಿಗೆ ಪಟ್ಟು ಹಿಡಿಯಬಹುದು. ಉಳಿದ ಒಂದು ಸ್ಥಾನಕ್ಕಾಗಿ ವಿರೋಧ ಪಕ್ಷಗಳ ನಡುವೆ ಪೈಪೋಟಿ ಏರ್ಪಡಬಹುದು

ತ್ರಿಪುರಾ ವಿದ್ಯಾರ್ಥಿ ಏಂಜಲ್ ಚಕ್ಮಾ ಸಾವು ಪ್ರಕರಣ ● ಐವರನ್ನು ವಶಕ್ಕೆ ಪಡೆದ ಪೊಲೀಸರು

‘ಜನಾಂಗೀಯ ನಿಂದೆ: ಸಾಕ್ಷ್ಯ ಸಿಕ್ಕಿಲ್ಲ’

ಡೆಹ್ರಾಡೂನ್ (ಪಿಟಿಐ): ತ್ರಿಪುರಾ ವಿದ್ಯಾರ್ಥಿ ಏಂಜಲ್ ಚಕ್ಮಾ ಸಾವಿಗೆ ಜನಾಂಗೀಯ ನಿಂದನೆ ಕಾರಣ ಎಂಬುದಕ್ಕೆ ಯಾವುದೇ ಪುರಾವೆಗಳು ಈವರೆಗೆ ಲಭ್ಯವಾಗಿಲ್ಲ ಎಂದು ಡೆಹ್ರಾಡೂನ್ ಪೊಲೀಸರು ಮಂಗಳವಾರ ತಿಳಿಸಿದರು.

ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಅಜಯ್ ಸಿಂಗ್ ಅವರು, ‘ವಿದ್ಯಾರ್ಥಿ ಸಾವಿಗೆ ಜನಾಂಗೀಯ ನಿಂದನೆ ಕಾರಣವಿರಬಹುದು ಎಂಬ ಸಾಮಾಜಿಕ ಜಾಲತಾಣಗಳ ಆರೋಪವನ್ನು ಪರಿಗಣಿಸಿ ಈ ಆಯಾಮದಲ್ಲಿಯೂ ತನಿಖೆ ನಡೆಸಲಾಗುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಈವರೆಗೆ ಯಾವುದೇ ಸಾಕ್ಷ್ಯಗಳು ಲಭ್ಯವಾಗಿಲ್ಲ’ ಎಂದು ತಿಳಿಸಿದರು.

ಡಿಸೆಂಬರ್ 9ರಿಂದ 26ರವರೆಗೆ ಜನಾಂಗೀಯ ನಿಂದನೆಗೆ ಸಂಬಂಧಿಸಿದಂತೆ ಯಾವುದೇ ದೂರು ದಾಖಲಾಗಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾದ ಎಫ್‌ಐಆರ್‌ನಲ್ಲೂ ಈ ಅಂಶ ಉಲ್ಲೇಖಿಸಿಲ್ಲ ಎಂದು ಹೇಳಿದರು.

ಡಿಸೆಂಬರ್ 9ರಂದು ಆರೋಪಿಗಳ ಪೈಕಿ ಮಣಿಪುರದ ನಿವಾಸಿ ಸೂರಜ್ ಖ್ವಾಸ್ ಎಂಬಾತ ಜನ್ಮ ದಿನದ ಔತಣಕೂಟ ಆಯೋಜಿಸಿದ್ದ. ಮೃತ ವಿದ್ಯಾರ್ಥಿ, ಆತನ ಸಹೋದರ ಇದ್ದ ಒಂದು ಗುಂಪು ಮತ್ತು ಆರು ಜನರಿದ್ದ ಇನ್ನೊಂದು ಗುಂಪಿನ ಮಧ್ಯೆ ವಾದ–ಪ್ರತಿವಾದ ನಡೆದಿತ್ತು. ಸಂಘರ್ಷವು ಅತಿರೇಕಕ್ಕೆ ತಲುಪಿ ವಿದ್ಯಾರ್ಥಿಯ ಮೇಲೆ ಹಲ್ಲೆ ನಡೆದಿತ್ತು. ತೀವ್ರ ಗಾಯಗೊಂಡಿದ್ದ ವಿದ್ಯಾರ್ಥಿ ಮೃತಪಟ್ಟಿದ್ದ’ ಎಂದರು.

ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾದ ಆರು ಆರೋಪಿಗಳ ಪೈಕಿ ಐವರನ್ನು ವಶಕ್ಕೆ ಪಡೆಯಲಾಗಿದೆ. ಈ ಪೈಕಿ ಕಾನೂನು ಸಂಘರ್ಷಕ್ಕೆ ಒಳಪಟ್ಟ ಇಬ್ಬರು ಬಾಲಕರನ್ನು ಬಾಲ ಮಂದಿರಕ್ಕೆ ಕಳುಹಿಸಲಾಗಿದೆ. ಮೂವರನ್ನು ನ್ಯಾಯಾಂಗದ ವಶಕ್ಕೆ ನೀಡಲಾಗಿದೆ. ತಲೆಮರೆಸಿಕೊಂಡ ಆರೋಪಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ವಲಸೆ ಕಾರ್ಮಿಕ ಮೇಲೆ ದಾಳಿ: ಪ್ರಧಾನಿಗೆ ಚೌಧರಿ ಪತ್ರ

ನವದೆಹಲಿ: ‘ಪಶ್ಚಿಮ ಬಂಗಾಳದ ವಲಸೆ ಕಾರ್ಮಿಕರನ್ನು ಬಾಂಗ್ಲಾದೇಶದ ಒಳನುಸುಳುಕೋರರು ಎಂದು ಭಾವಿಸಿ ಹತ್ಯೆ ಮಾಡಲಾಗುತ್ತಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲೇ ಇಂಥ ಪ್ರಕರಣಗಳು ನಡೆಯುತ್ತಿವೆ’ ಎಂದು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಂಗಳವಾರ ಭೇಟಿ ಮಾಡಿ ಪತ್ರ ನೀಡಿದರು.

‘ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಪಶ್ಚಿಮ ಬಂಗಾಳದ ವಲಸೆ ಕಾರ್ಮಿಕರು ತಾರತಮ್ಯ, ಹಿಂಸೆ, ದ್ವೇಷ, ದೌರ್ಜನ್ಯವನ್ನು ಎದುರಿಸುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಅವರನ್ನು ಹೊಡೆದು ಕೊಲ್ಲಲಾಗುತ್ತಿದೆ. ಬಂಗಾಳಿ ಭಾಷೆ ಮಾತನಾಡುತ್ತಾರೆ ಎನ್ನುವ ಕಾರಣಕ್ಕೆ ಅವರನ್ನು ಬಾಂಗ್ಲಾದೇಶದವರು ಎಂದು ತಪ್ಪಾಗಿ ಭಾವಿಸಲಾಗುತ್ತಿದೆ’ ಎಂದು ಪತ್ರದಲ್ಲಿ ಹೇಳಿದ್ದಾರೆ.

ಸರಣಿ ಕ್ಲೀನ್‌ಸ್ವೀಪ್ ಮಾಡಿದ ಕೌರ್ ಪಡೆ

ಹರ್ಮನ್ ಅರ್ಧಶತಕ • ಶ್ರೀಲಂಕಾ ವಿರುದ್ಧ ಭಾರತ ಮಹಿಳಾ ತಂಡಕ್ಕೆ 15 ರನ್ ಗೆಲುವು

ತಿರುವನಂತಪುರ (ಪಿಟಿಐ): ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಅರ್ಧ ಶತಕದ ಆಟವು ವ್ಯರ್ಥವಾಗದಂತೆ ಭಾರತ ತಂಡದ ಬೌಲರ್‌ಗಳು ನೋಡಿಕೊಂಡರು. ಇದರಿಂದಾಗಿ ಆತಿಥೇಯ ತಂಡವು ಶ್ರೀಲಂಕಾ ಎದುರಿನ 5 ಪಂದ್ಯಗಳ ಟಿ20 ಕ್ರಿಕೆಟ್ ಸರಣಿಯಲ್ಲಿ ಕ್ಲೀನ್‌ಸ್ವೀಪ್ ಸಾಧನೆ ಮಾಡಿತು.

ಮಂಗಳವಾರ ಇಲ್ಲಿ ನಡೆದ ಸರಣಿಯ ಕೊನೆಯ ಪಂದ್ಯದಲ್ಲಿ ಶ್ರೀಲಂಕಾ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ತಂಡವು 77 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೀಡಾಯಿತು. ಈ ಸಂದರ್ಭದಲ್ಲಿ ಹರ್ಮನ್ (68; 43ಎ, 4X9, 6X1) ಮತ್ತು ಅಮನ್ಜೋತ್ ಕೌರ್ (21; 18ಎ, 4X1, 6X1) ಅವರು ಆರನೇ ವಿಕೆಟ್ ಜೊತೆಯಾಟದಲ್ಲಿ 37 ಎಸೆತಗಳಲ್ಲಿ 61 ರನ್ ಸೇರಿಸಿದರು.

ಇನಿಂಗ್ಸ್‌ನ ಕೊನೆಯ ಹಂತದಲ್ಲಿ ಅರುಂಧತಿ ರೆಡ್ಡಿ 11 ಎಸೆತಗಳಲ್ಲಿ 27 ರನ್ ಸಿಡಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 175 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಶ್ರೀಲಂಕಾ ತಂಡವು ದಿಟ್ಟ ಹೋರಾಟ ಮಾಡಿತು. ಹಾಸಿನಿ ಪೆರೆರಾ (65; 42ಎ, 4X8, 6X1) ಮತ್ತು ಇಮೇಶಾ ದುಲಾನಿ (50; 39ಎ, 4X8) ಉತ್ತಮ ಬ್ಯಾಟಿಂಗ್ ಮಾಡಿದರು. ಆದರೂ ಗುರಿ ಮುಟ್ಟಲು ಸಾಧ್ಯವಾಗಲಿಲ್ಲ. ಲಂಕಾ ತಂಡವು 20 ಓವರ್‌ಗಳಲ್ಲಿ 7ಕ್ಕೆ160 ರನ್ ಗಳಿಸಿತು. ಭಾರತ ತಂಡದ ಏಳು ಬೌಲರ್‌ಗಳೂ ತಲಾ ಒಂದು ವಿಕೆಟ್ ಗಳಿಸಿದರು.

ಹರ್ಮನ್ ಅರ್ಧಶತಕ: ಅಗ್ರಕ್ರಮಾಂಕದ ಬ್ಯಾಟರ್‌ಗಳು ಆಡಲು ಕಷ್ಟಪಟ್ಟಿದ್ದ ಪಿಚ್‌ನಲ್ಲಿ ಹರ್ಮನ್ ಲೀಲಾಜಾಲವಾಗಿ ಬ್ಯಾಟಿಂಗ್ ಮಾಡಿದರು. ಅನುಭವಿ ಆಟಗಾರ್ತಿ ಲಂಕಾದ ಎಲ್ಲ ಬೌಲರ್‌ಗಳನ್ನೂ ದಂಡಿಸಿದರು. ಕವಿಶಾ ದಿಲ್ಹರಿ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆಗುವ ಮುನ್ನ ಕೌರ್ ಅವರು ತಮ್ಮ ತಂಡವನ್ನು ಉತ್ತಮ ಸ್ಥಿತಿಗೆ ತಂದಿದ್ದರು.

ಟೂರ್ನಿಯಲ್ಲಿ ಸತತ ಮೂರು ಅರ್ಧಶತಕ ಗಳಿಸಿದ್ದ ಶಫಾಲಿ ವರ್ಮಾ ಅವರು ಜಿ. ಕಮಲಿನಿ ಅವರೊಂದಿಗೆ ಇನಿಂಗ್ಸ್ ಆರಂಭಿಸಿದರು. ಎಡಗೈ ಆಟಗಾರ್ತಿ ಸ್ಮೃತಿ ಮಂದಾನ ಅವರಿಗೆ ವಿಶ್ರಾಂತಿ ನೀಡಲಾಯಿತು.

ಶಫಾಲಿ ಕೇವಲ 5 ರನ್ ಗಳಿಸಿದರು. ನಿಮಿಷಾ ಮಧುಶಾನಿ ಅವರ ಎಸೆತದಲ್ಲಿ ಇಮೇಶಾ ದುಲಾನಿಗೆ ಕ್ಯಾಚಿತ್ತರು. ಕಮಲಿನಿ (12 ರನ್) ಅವರು ಕವಿಶಾ ದಿಲ್ಹರಿ ಎಸೆತದಲ್ಲಿ ಎಲ್‌ಬಿಡಬ್ಲ್ಯು ಆದರು. ಉತ್ತಮ ಲಯದಲ್ಲಿದ್ದಂತೆ ಕಂಡ ಹರ್ಲೀನ್ ಡಿಯೊಲ್ (13 ರನ್) ಅವರನ್ನು ರಶ್ಮಿಕಾ ಸೆವಂಡಿ ಕ್ಲೀನ್‌ಬೌಲ್ಡ್ ಮಾಡಿದರು. ರಿಚಾ ಘೋಷ್ ಹಾಗೂ ದೀಪ್ತಿ ಶರ್ಮಾ ಕೂಡ ಎರಡಂಕಿ ಮುಟ್ಟಲಿಲ್ಲ.

152 ವಿಕೆಟ್
ಭಾರತ ತಂಡದ ಆಲ್‌ರೌಂಡರ್ ದೀಪ್ತಿ ಶರ್ಮಾ ಅವರು ಮಹಿಳಾ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಅತಿಹೆಚ್ಚು ವಿಕೆಟ್ (152) ಪಡೆದ ದಾಖಲೆ ನಿರ್ಮಿಸಿದರು

12
ಭಾರತ ತಂಡದ ಹರ್ಮನ್‌ಪ್ರೀತ್ ಕೌರ್ ಅವರು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ 12ನೇ ಬಾರಿಗೆ 'ಪಂದ್ಯದ ಆಟಗಾರ್ತಿ' ಗೌರವಕ್ಕೆ ಪಾತ್ರರಾದರು. ಅದರೊಂದಿಗೆ ಅತಿ ಹೆಚ್ಚು ಬಾರಿ ಈ ಗೌರವ ಪಡೆದ ಭಾರತದ ಆಟಗಾರ್ತಿ ಎನಿಸಿದ್ದ ಮಿಥಾಲಿರಾಜ್ ಅವರ ದಾಖಲೆಯನ್ನು ಸರಿಗಟ್ಟಿದರು

ಸರಣಿಯ ಟ್ರೋಫಿಯೊಂದಿಗೆ ಭಾರತ ತಂಡದ ಆಟಗಾರ್ತಿಯರ ಸಂಭ್ರಮ — ಪಿಟಿಐ ಚಿತ್ರ

ಟಿ20 ರ್‍ಯಾಂಕಿಂಗ್: ಅಗ್ರಸ್ಥಾನದಲ್ಲಿ ದೀಪ್ತಿ, 6ನೇ ಸ್ಥಾನಕ್ಕೆ ಶಫಾಲಿ

ದುಬೈ (ಪಿಟಿಐ): ಶ್ರೀಲಂಕಾ ವಿರುದ್ಧದ ಟಿ20 ಸರಣಿಯಲ್ಲಿ ಹ್ಯಾಟ್ರಿಕ್ ಅರ್ಧಶತಕ ಬಾರಿಸಿರುವ ಭಾರತ ಮಹಿಳಾ ತಂಡದ ಆರಂಭ ಆಟಗಾರ್ತಿ ಶಫಾಲಿ ವರ್ಮಾ ಅವರು ಐಸಿಸಿ ಮಹಿಳಾ ಟಿ20 ರ್‍ಯಾಂಕಿಂಗ್‌ನ ಬ್ಯಾಟರ್‌ಗಳ ವಿಭಾಗದಲ್ಲಿ 6ನೇ ಸ್ಥಾನಕ್ಕೇರಿದ್ದಾರೆ.

ಶಫಾಲಿ ವರ್ಮಾ

ಐಸಿಸಿ ಮಂಗಳವಾರ ರ್‍ಯಾಂಕಿಂಗ್ ಪಟ್ಟಿ ಪ್ರಕಟಿಸಿದ್ದು, ಶಫಾಲಿ (736 ಪಾಯಿಂಟ್ಸ್) ಅವರು ನಾಲ್ಕು ಸ್ಥಾನ ಬಡ್ತಿ ಪಡೆದಿದ್ದಾರೆ. ತಾರಾ ಆಲ್‌ರೌಂಡರ್ ದೀಪ್ತಿ ಶರ್ಮಾ (738 ಪಾಯಿಂಟ್ಸ್) ಅವರು ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ.

21 ವರ್ಷ ವಯಸ್ಸಿನ ಹರಿಯಾಣದ ಬಲಗೈ ಬ್ಯಾಟರ್ ಶಫಾಲಿ ಅವರು ವಿಶಾಖಪಟ್ಟಣದಲ್ಲಿ ನಡೆದ ಶ್ರೀಲಂಕಾ ವಿರುದ್ಧದ ಎರಡನೇ ಟಿ20 ಪಂದ್ಯದಲ್ಲಿ ಅಜೇಯ 69 ರನ್ ಬಾರಿಸಿದ್ದರು. ಮೂರನೇ ಪಂದ್ಯದಲ್ಲಿ ಔಟಾಗದೇ 79 ರನ್ ಗಳಿಸಿದ್ದರು. ತಿರುವನಂತಪುರದಲ್ಲಿ ನಡೆದ ನಾಲ್ಕನೇ ಪಂದ್ಯದಲ್ಲಿ ಅವರ ಬ್ಯಾಟ್‌ನಿಂದ 79 ರನ್‌ಗಳು ಮೂಡಿಬಂದಿದ್ದವು.

ಭಾರತ ತಂಡದ ಉಪನಾಯಕಿ ಸ್ಮೃತಿ ಮಂದಾನ (767 ಪಾಯಿಂಟ್ಸ್) ಮೂರನೇ ಕ್ರಮಾಂಕದಲ್ಲಿ ಮುಂದುವರಿದಿದ್ದಾರೆ. ಜೆಮಿಮಾ ರಾಡ್ರಿಗಸ್ (643) ಒಂದು ಸ್ಥಾನ ಕುಸಿತದೊಂದಿಗೆ 10ನೇ ಕ್ರಮಾಂಕದಲ್ಲಿದ್ದಾರೆ. ಆಸ್ಟ್ರೇಲಿಯಾದ ಬೆಥ್ ಮೂನಿ (794) ಹಾಗೂ ವೆಸ್ಟ್ ಇಂಡೀಸ್‌ನ ಹೇಲಿ ಮ್ಯಾಥ್ಯೂಸ್ (774) ಕ್ರಮವಾಗಿ ಮೊದಲ ಎರಡು ಸ್ಥಾನಗಳಲ್ಲಿ ಇದ್ದಾರೆ.

ಬೌಲರ್‌ಗಳ ವಿಭಾಗದಲ್ಲಿ ರೇಣುಕಾ ಸಿಂಗ್ ಠಾಕೂರ್ (705) ಜಂಟಿ 6ನೇ ಸ್ಥಾನಕ್ಕೆ ಏರಿಕೆ ಕಂಡಿದ್ದಾರೆ. ಅವರಿಗೆ 8 ಸ್ಥಾನ ಬಡ್ತಿ ದೊರಕಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 7ಕ್ಕೆ175 (ಹರ್ಮನ್‌ಪ್ರೀತ್ ಕೌರ್ 68, ಅಮನ್ಜೋತ್ ಕೌರ್ 21, ಅರುಂಧತಿ ರೆಡ್ಡಿ ಔಟಾಗದೇ 27, ಕವಿಶಾ ದಿಲ್ಹರಿ 11ಕ್ಕೆ2, ರಶ್ಮಿಕಾ ಸೆವಂಡಿ 42ಕ್ಕೆ2, ಚಾಮರಿ ಅಟಪಟ್ಟು 21ಕ್ಕೆ2). ಶ್ರೀಲಂಕಾ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 160 (ಹಾಸಿನಿ ಪೆರೆರಾ 65, ಇಮೇಶಾ ದುಲಾನಿ 50; ದೀಪ್ತಿ ಶರ್ಮಾ 28ಕ್ಕೆ1, ಶ್ರೀಚರಣಿ 31ಕ್ಕೆ1). **ಪಂದ್ಯದ ಆಟಗಾರ್ತಿ:** ಹರ್ಮನ್‌ಪ್ರೀತ್ ಕೌರ್ **ಸರಣಿಯ ಆಟಗಾರ್ತಿ:** ಶಫಾಲಿ ವರ್ಮಾ

ವಿಶ್ವ ಬ್ಲಿಟ್ಜ್ ಚೆಸ್ ಚಾಂಪಿಯನ್‌ಷಿಪ್ • ಅರ್ಜುನ್‌ಗೆ ಕಂಚು

ಕಾರ್ಲ್‌ಸನ್‌ಗೆ 9ನೇ ಬಾರಿ ಕಿರೀಟ

ದೋಹಾ (ಪಿಟಿಐ): ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಫಿಡೆ ವಿಶ್ವ ಬ್ಲಿಟ್ಜ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ದಾಖಲೆಯ 9ನೇ ಬಾರಿ ಪ್ರಶಸ್ತಿ ಗೆದ್ದುಕೊಂಡರು.

ಮಂಗಳವಾರ ಮುಕ್ತಾಯಗೊಂಡ ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಕಂಚು ಜಯಿಸಿದರು.

34 ವರ್ಷ ವಯಸ್ಸಿನ ಕಾರ್ಲ್‌ಸನ್ ಅವರು ಫೈನಲ್‌ನಲ್ಲಿ 2.5-1.5 ರಿಂದ ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ ಅವರನ್ನು ಸೋಲಿಸಿದರು. ಫೈನಲ್‌ನ ಮೊದಲ ಮೂರು ಆಟಗಳು ಡ್ರಾ ಆದವು. ಅಂತಿಮ ಹಾಗೂ ನಾಲ್ಕನೇ ಆಟದಲ್ಲಿ ಕಾರ್ಲ್‌ಸನ್ ನಿರ್ಣಾಯಕ ಜಯ ಸಾಧಿಸಿ, ರಾಜನಾಗಿ ಮೆರೆದರು.

ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ (ಎಡ) — ಎಎಫ್‌ಪಿ ಚಿತ್ರ

ಸೆಮಿಫೈನಲ್ ಪಂದ್ಯಗಳಲ್ಲಿ ಕಾರ್ಲ್‌ಸನ್ 3-1 ರಿಂದ ಅಮೆರಿಕದ ಫ್ಯಾಬಿಯಾನೊ ಕರುವಾನ ಅವರನ್ನು ಹಾಗೂ ಅಬ್ದುಸತ್ತಾರೋವ್ 2.5-0.5 ರಿಂದ ಅರ್ಜುನ್ ಅವರನ್ನು ಮಣಿಸಿದ್ದರು. ಅಬ್ದುಸತ್ತಾರೋವ್ ಮೊದಲ ಎರಡು ಪಂದ್ಯಗಳನ್ನು ಗೆದ್ದು, ಮೂರನೆಯದನ್ನು ಡ್ರಾ ಮಾಡಿಕೊಂಡಿದ್ದರು.

ಬಿಬಿಸಾರಾ ಅಸೌಬಯೇವಾ

ನಾರ್ವೆಯ ಆಟಗಾರ ಕಾರ್ಲ್‌ಸನ್ ಹಾಗೂ ವಾರಂಗಲ್‌ನ ಅರ್ಜುನ್ ಎರಡು ದಿನ ಹಿಂದಷ್ಟೇ ವಿಶ್ವ ರ್‍ಯಾಪಿಡ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಚಿನ್ನ ಹಾಗೂ ಕಂಚಿನ ಪದಕ ಗೆದ್ದಿದ್ದರು.

ಕಜಕಸ್ತಾನದ ಬಿಬಿಸಾರಾ ಅಸೌಬಯೇವಾ ಅವರು ಮಹಿಳಾ ವಿಭಾಗದಲ್ಲಿ ಕಿರೀಟ ತಮ್ಮದಾಗಿಸಿಕೊಂಡರು. ಏಳನೇ ಶ್ರೇಯಾಂಕದ ಬಿಬಿಸಾರಾ, ಫೈನಲ್‌ನಲ್ಲಿ 2.5-1.5 ರಿಂದ ಉಕ್ರೇನಿನ ಅನ್ನಾ ಮುಝಿಚುಕ್ ವಿರುದ್ಧ ಗೆಲುವು ಸಾಧಿಸಿದರು.

ಸುವಿಕ್ ಮಿಂಚು; ಕರ್ನಾಟಕಕ್ಕೆ ಇನಿಂಗ್ಸ್ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಡಗೈ ಸ್ಪಿನ್ನರ್ ಸುವಿಕ್ ಗಿಲ್ ಅವರು ಒಟ್ಟು 11 ವಿಕೆಟ್ ಗಳಿಸುವ ಮೂಲಕ ಕರ್ನಾಟಕ ತಂಡವು ವಿಜಯ್ ಮರ್ಚೆಂಟ್ ಟ್ರೋಫಿ (16 ವರ್ಷದೊಳಗಿನವರ) ಎಲೀಟ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಸುವಿಕ್ ಗಿಲ್

ನಿರಂಜನ್ ಅಶೋಕ್

ಮಂಗಳವಾರ ನಡೆದ ಪಂದ್ಯದಲ್ಲಿ ಗೋವಾ ತಂಡದ ಎದುರು ಕರ್ನಾಟಕವು ಇನಿಂಗ್ಸ್ ಹಾಗೂ 147 ರನ್‌ಗಳಿಂದ ಗೋವಾ ತಂಡವನ್ನು ಮಣಿಸಿತು. ಕರ್ನಾಟಕ ತಂಡದ ಆರಂಭ ಆಟಗಾರರಾದ ನಿರಂಜನ್ ಅಶೋಕ್ ಮತ್ತು ಆರ್.ರೋಹಿತ್ ರೆಡ್ಡಿ ಅವರೂ ಶತಕಗಳ ಕಾಣಿಕೆ ನೀಡಿದರು.

ಛತ್ತೀಸಗಡದ ರಾಯಪುರದ ಆರ್‌ಡಿಸಿಎ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ವಿಕೆಟ್ ನಷ್ಟವಿಲ್ಲದೆ 154 ರನ್‌ಗಳೊಂದಿಗೆ ಆಟ ಮುಂದುವರಿಸಿದ ಆರೂಷ್ ಜೈನ್ ಬಳಗವು 76 ಓವರ್‌ಗಳಲ್ಲಿ 6 ವಿಕೆಟ್‌ಗೆ 434 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ನಿರಂಜನ್ (130) ಹಾಗೂ ರೋಹಿತ್ (104) ಶತಕ ದಾಖಲಿಸಿದರು. ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿದ ಶ್ಯಮಂತಕ್ ಅನಿರುದ್ಧ್ ಅವರು 64 ಎಸೆತಗಳಲ್ಲಿ 82 ರನ್ ಗಳಿಸಿದರು. ಮೃಣಾಲ್ ನಾಯಕ್ (130ಕ್ಕೆ3) ಅವರು ಗೋವಾ ತಂಡದ ಯಶಸ್ವಿ ಬೌಲರ್ ಎನಿಸಿದರು.

ಬ್ಯಾಟಿಂಗ್‌ನಲ್ಲಿ ಮತ್ತೆ ವೈಫಲ್ಯ ಎದುರಿಸಿದ ವಿನೀತ್ ಕಾಮತ್ ಪಡೆಯು ಸುವಿಕ್ (55ಕ್ಕೆ6) ಬೌಲಿಂಗ್ ಎದುರು ಎರಡನೇ ಇನಿಂಗ್ಸ್‌ನಲ್ಲಿ 127 ರನ್‌ಗಳಿಗೆ ಕುಸಿಯಿತು. ಅದೀಪ್ ಮಿಸ್ಕಿನ್ (27) ಹಾಗೂ ಶೌನಕ್ ತೇಲಿ (ಔಟಾಗದೇ 23) ಕೊಂಚ ಹೋರಾಟ ತೋರಿದ್ದು ಬಿಟ್ಟರೆ, ಉಳಿದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ಸುಕೃತ್ ಜೆ. 23 ರನ್‌ಗಳಿಗೆ 2 ವಿಕೆಟ್ ಪಡೆದರೆ, ಅಥರ್ವ ಎಸ್. ದೇಶಪಾಂಡೆ (19ಕ್ಕೆ1) ಹಾಗೂ ವಿಧಾತ್ ಎಸ್. (3ಕ್ಕೆ1) ಉತ್ತಮ ಬೌಲಿಂಗ್ ಮಾಡಿದರು.

ಸುವಿಕ್ ಅವರು ಮೊದಲ ಇನಿಂಗ್ಸ್‌ನಲ್ಲಿ 32 ರನ್ ನೀಡಿ 5 ವಿಕೆಟ್ ಪಡೆದಿದ್ದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಗೋವಾ: 160; ಕರ್ನಾಟಕ: 76 ಓವರ್‌ಗಳಲ್ಲಿ 6 ವಿಕೆಟ್‌ಗೆ 434 ಡಿ. (ನಿರಂಜನ್ ಅಶೋಕ್ 130, ಆರ್. ರೋಹಿತ್ ರೆಡ್ಡಿ 104, ಶ್ಯಮಂತಕ್ ಅನಿರುದ್ಧ್ 82, ಸುಕೃತ್ ಜೆ. 37; ಮೃಣಾಲ್ ನಾಯಕ್ 130ಕ್ಕೆ3). ಎರಡನೇ ಇನಿಂಗ್ಸ್: ಗೋವಾ 39 ಓವರ್‌ಗಳಲ್ಲಿ 127 (ಅದೀಪ್ ಮಿಸ್ಕಿನ್ 27, ಶೌನಕ್ ತೇಲಿ ಔಟಾಗದೇ 23; ಸುವಿಕ್ ಗಿಲ್ 55ಕ್ಕೆ6, ಸುಕೃತ್ ಜೆ. 23ಕ್ಕೆ2).

ಮಾರ್ತಾಂಡನ್‌ಗೆ ಚಾಂಪಿಯನ್ ಪಟ್ಟ

ಮಂಗಳೂರು: ಮೂರು ಮತ್ತು ನಾಲ್ಕನೇ ಸುತ್ತುಗಳಲ್ಲಿ ಹಿನ್ನಡೆ ಅನುಭವಿಸಿದರೂ ಚೇತರಿಸಿಕೊಂಡು ಮುನ್ನಡೆದ ಅಗ್ರ ಶ್ರೇಯಾಂಕಿತ, ಕೇರಳದ ಮಾರ್ತಾಂಡನ್ ಕೆ.ಯು. ಫಿಡೆ ರೇಟೆಡ್ ರಾಷ್ಟ್ರೀಯ ಚೆಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು.

ಟೂರ್ನಿಯ ಕೊನೆಯ ಹಾಗೂ ಒಂಬತ್ತನೇ ಸುತ್ತಿನಲ್ಲಿ ಮಂಗಳವಾರ ಜಯ ಗಳಿಸುವ ಮೂಲಕ ಮಾರ್ತಾಂಡನ್ 7.5 ಪಾಯಿಂಟ್ ಕಲೆಹಾಕಿದರು. ಕರ್ನಾಟಕದ ಇಶಾನ್ ಬನ್ಸಾಲಿ, ಗೋವಾದ ಜೋಶುವಾ ಮಾರ್ಕ್ ಟೆಲಿಸ್, ಕೇರಳದ ವೈಷ್ಣವ್ ಮತ್ತು ಅಜೀಶ್ ಆ್ಯಂಟನಿ, ಕರ್ನಾಟಕದ ಗವಿಸಿದ್ದಯ್ಯ, ಗುಜರಾತ್‌ನ ಅಡಲ್ಜ ವಂಶ್, ತಮಿಳುನಾಡಿನ ವಿಘ್ನೇಶ್ವರನ್ ಮತ್ತು ಕರ್ನಾಟಕದ ಲಕ್ಷಿತ್ ಸಾಲಿಯಾನ್ ತಲಾ 7 ಪಾಯಿಂಟ್‌ಗಳನ್ನು ಗಳಿಸಿದರು. ಉತ್ತಮ ಟೈಬ್ರೇಕರ್ ಆಧಾರದಲ್ಲಿ ಇಶಾನ್ ರನ್ನರ್ ಅಪ್ ಆದರೆ ಜೋಶುವಾ ಮೂರನೇ ಸ್ಥಾನ ಗಳಿಸಿದರು.

ಭಾನುವಾರ 7 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದ ಏಕೈಕ ಆಟಗಾರ ಇಶಾನ್ ಕೊನೆಯ ಸುತ್ತಿನಲ್ಲಿ ಮಾರ್ತಾಂಡನ್ ಎದುರು ಆಡಿದರು. ಪಂದ್ಯವನ್ನು ಗೆದ್ದು ಮಾರ್ತಾಂಡನ್ ಟ್ರೋಫಿ ಮತ್ತು ₹50 ಸಾವಿರ ನಗದು ತಮ್ಮದಾಗಿಸಿಕೊಂಡರು.

ಗೆಲುವಿನತ್ತ ಮಯಂಕ್ ಪಡೆ ಚಿತ್ತ

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ಕರ್ನಾಟಕ–ಪುದುಚೇರಿ ಹಣಾಹಣಿ ಇಂದು

ಮಯಂಕ್ ಅಗರವಾಲ್

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಹಾಲಿ ಚಾಂಪಿಯನ್ ಕರ್ನಾಟಕ ತಂಡವು ಈ ಸಲದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಆರಂಭ ಮಾಡಿದೆ. ಮೊದಲ ಮೂರು ಪಂದ್ಯಗಳಲ್ಲಿಯೂ ಗೆದ್ದು ಭರ್ತಿ ಆತ್ಮವಿಶ್ವಾಸದಲ್ಲಿದೆ. ಇದರಿಂದಾಗಿ ನಾಕೌಟ್ ಹಂತ ತಲುಪುವ ಹಾದಿಯಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ.

ಮಯಂಕ್ ಅಗರವಾಲ್ ನಾಯಕತ್ವದ ಬಳಗವು ಬುಧವಾರ ನಡೆಯುವ ಎಲೀಟ್ ಎ ಗುಂಪಿನ ಪಂದ್ಯದಲ್ಲಿ ಪುದುಚೇರಿಯನ್ನು ಎದುರಿಸಲಿದೆ. ಟೂರ್ನಿಯಲ್ಲಿ ಪುದುಚೇರಿ ತಂಡವು ಮೂರು ಸುತ್ತುಗಳಲ್ಲಿ ಆಡಿದ್ದರೂ ಗೆಲುವಿನ ಖಾತೆ ತೆರೆದಿಲ್ಲ. ಅನುಭವಿ ಆಟಗಾರರ ಕೊರತೆ ತಂಡವನ್ನು ಕಾಡುತ್ತಿದೆ. ಇದರಿಂದಾಗಿ ಮಯಂಕ್ ಬಳಗಕ್ಕೆ ಪುದುಚೇರಿ ತಂಡವು ಸುಲಭವಾಗಿ ಮಣಿಯುವ ನಿರೀಕ್ಷೆ ಇದೆ.

ಕರ್ನಾಟಕ ತಂಡವು ಕಳೆದ ಮೂರು ಪಂದ್ಯಗಳಲ್ಲಿ ಜಾರ್ಖಂಡ್, ಕೇರಳ ಹಾಗೂ ತಮಿಳುನಾಡು ತಂಡಗಳನ್ನು ಮಣಿಸಿದೆ. 12 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಇಷ್ಟೇ ಪಂದ್ಯಗಳನ್ನು ಗೆದ್ದಿರುವ ಮಧ್ಯಪ್ರದೇಶ ನಿವ್ವಳ ರನ್‌ರೇಟ್ ಆಧಾರದಲ್ಲಿ ಅಗ್ರಸ್ಥಾನದಲ್ಲಿದೆ.

ಟೂರ್ನಿಯಲ್ಲಿ ಕರ್ನಾಟಕದ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಎರಡು ಹಾಗೂ ಕರುಣ್ ನಾಯರ್ ಒಂದು ಶತಕ ಗಳಿಸಿದ್ದಾರೆ. ಮಯಂಕ್ ಅವರು ಎರಡು ಅರ್ಧಶತಕ ಗಳಿಸಿದ್ದಾರೆ. ತಮಿಳುನಾಡು ವಿರುದ್ಧದ ಪಂದ್ಯದಲ್ಲಿ ದೇವದತ್ತ ಮತ್ತು ಕರುಣ್ ಅವರು ದೊಡ್ಡ ಇನಿಂಗ್ಸ್ ಆಡುವಲ್ಲಿ ವಿಫಲರಾದರು. ಆದರೆ ಕೆಳಕ್ರಮಾಂಕದಲ್ಲಿ ಆಡುವ ಕೆ.ಎಲ್. ಶ್ರೀಜಿತ್ ಮತ್ತು ಆಲ್‌ರೌಂಡರ್ ಶ್ರೇಯಸ್ ಜೈಸ್ವಾಲ್ ಅವರು ಅರ್ಧಶತಕ ಗಳಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಅಭಿನವ್ ಮನೋಹರ್ ಕೂಡ ಉತ್ತಮ ಲಯದಲ್ಲಿದ್ದಾರೆ. ಭರ್ಜರಿ ಫಾರ್ಮ್‌ನಲ್ಲಿರುವ ಎಡಗೈ ವೇಗಿ ಅಭಿಲಾಷ್ ಶೆಟ್ಟಿ ಕಳೆದ ಪಂದ್ಯದಲ್ಲಿ 4 ವಿಕೆಟ್ ಗಳಿಸಿದ್ದರು. ವಿದ್ಯಾಧರ್ ಪಾಟೀಲ ಮತ್ತು ನವಪ್ರತಿಭೆ ಶ್ರೀಶಾ ಆಚಾರ್ ತಲಾ ಎರಡು ವಿಕೆಟ್ ಗಳಿಸಿದ್ದರು. ಅದರಿಂದಾಗಿ ಇವರ ಪರಿಣಾಮಕಾರಿ ದಾಳಿ ಎದುರಿಸುವ ಕಠಿಣ ಸವಾಲು ಪುದುಚೇರಿ ಬ್ಯಾಟರ್‌ಗಳಿಗೆ ಇದೆ.

ಪುದುಚೇರಿಯ ಯುವ ಬ್ಯಾಟರ್ ಜೆಶ್ವಂತ್ ಶ್ರೀರಾಮ್, ಅನುಭವಿ ಆಲ್‌ರೌಂಡರ್ ಜಯಂತ್ ಯಾದವ್ ಅವರು ಉತ್ತಮವಾಗಿ ಆಡಬಲ್ಲ ಸಮರ್ಥರು. ಆದರೆ ಕರ್ನಾಟಕದ ಬೌಲಿಂಗ್ ಪಡೆಯನ್ನು ಎದುರಿಸಬೇಕಾದ ಸವಾಲು ಇವರ ಮುಂದೆ ಇದೆ.

ಪಂದ್ಯ ಆರಂಭ: ಬೆಳಿಗ್ಗೆ 9

ಸ್ಪಾರ್ಟನ್ಸ್ ಕ್ಲಬ್‌ಗೆ ಪ್ರಶಸ್ತಿ

ಸ್ಪಾರ್ಟನ್ಸ್ ಕ್ರಿಕೆಟ್ ಕ್ಲಬ್ ತಂಡವು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಫೈನಲ್‌ನಲ್ಲಿ 6 ವಿಕೆಟ್‌ಗಳಿಂದ ಸಫೈರ್ ಕ್ರಿಕೆಟ್ ಕ್ಲಬ್ ತಂಡವನ್ನು ಮಣಿಸಿತು. ಅದರೊಂದಿಗೆ, 2025–26ನೇ ಸಾಲಿನ ಮೆಟ್ರೊ ಶೀಲ್ಡ್‌ಗಾಗಿ ನಡೆದ ಕೆಎಸ್‌ಸಿಎ ಗುಂಪು–1ರ (4ನೇ ಡಿವಿಷನ್) ಲೀಗ್ ಕಮ್ ನಾಕೌಟ್ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿತು. (ಎಡದಿಂದ) (ನಿಂತವರು): ಚಿನ್ನ, ರೈಯಾನ್ ತೋಮರ್, ಆದಿತ್ಯ ಸಿಂಗ್, ಪ್ರವೀಣ್ ಕುಮಾರ್ ಎಂ.ಎಲ್., ಹರ್ಷಿತ್, ಸಂಜಯ್ ಆರ್., ಲಕ್ಷ್ಮೀಸಾಗರ್, ನೂಮಾನ್, ತೇಜಸ್. (ಕುಳಿತವರು): ನಿತಿನ್ ನಾಯ್ಡು, ರೋಹಿತ್ ಗೌಡ, ವೀರೇಂದ್ರ ಸಿಂಗ್ (ನಾಯಕ), ಕೆ. ಮೆಹಫುಝ್ ಅಲಿ ಖಾನ್ (ಕಾರ್ಯದರ್ಶಿ), ಮೊಹಮ್ಮದ್ ತಾಹಾ (ಕೋಚ್), ಡೆಸ್ಮಂಡ್ ಅಂಥೋಣಿ, ಅಶೋಕ್ ಡಿ. ಹಾಗೂ ಆಯುಷ್ ಶೆಟ್ಟಿ

ಆರ್‌ಸಿಬಿಗೆ ಬೆಥೆಲ್ ಧನ್ಯವಾದ

ಮೆಲ್ಬರ್ನ್ (ಪಿಟಿಐ): ಆ್ಯಷಸ್ ಸರಣಿಯ ನಾಲ್ಕನೇ ಟೆಸ್ಟ್ (ಬಾಕ್ಸಿಂಗ್ ಡೇ) ಪಂದ್ಯದಲ್ಲಿ ಇಂಗ್ಲೆಂಡ್ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದ 22 ವರ್ಷ ವಯಸ್ಸಿನ ಬ್ಯಾಟಿಂಗ್ ಆಲ್‌ರೌಂಡರ್ ಜೇಕಬ್ ಬೆಥೆಲ್ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಹಾಗೂ ಐಪಿಎಲ್‌ಗೆ ಧನ್ಯವಾದ ಅರ್ಪಿಸಿದ್ದಾರೆ.

ಐಪಿಎಲ್‌ನಲ್ಲಿ ಆರ್‌ಸಿಬಿ ಜೊತೆಗಿನ ಅನುಭವವು ಆ್ಯಷಸ್ ಸರಣಿಯ ಪದಾರ್ಪಣೆ ಪಂದ್ಯದ ಒತ್ತಡ ನಿಭಾಯಿಸುವಲ್ಲಿ ನೆರವಾಯಿತು ಎಂದಿದ್ದಾರೆ. 'ಪಂದ್ಯದಲ್ಲಿ ಕಣಕ್ಕಿಳಿಯುವಾಗ ಅಂಜಿಕೆ ಇತ್ತು. ಆದರೆ, ಐಪಿಎಲ್ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಾವಿರಾರು ಜನರ ಎದುರು ಆಡಿದ್ದ ಅನುಭವವು ಧೈರ್ಯ ತುಂಬಿತು' ಎಂದು ಬೆಥೆಲ್ 'ಇಎಸ್‌ಪಿಎನ್ ಕ್ರಿಕ್‌ಇನ್ಫೊ'ಗೆ ಹೇಳಿದ್ದಾರೆ.

3–0ಯಿಂದ ಸರಣಿ ಕಳೆದುಕೊಂಡಿದ್ದ ಇಂಗ್ಲೆಂಡ್ ತಂಡ ಮೆಲ್ಬರ್ನ್‌ನಲ್ಲಿ ನಡೆದ ನಾಲ್ಕನೇ ಪಂದ್ಯವನ್ನ 4 ವಿಕೆಟ್‌ಗಳಿಂದ ಜಯಿಸಿತ್ತು. ಗೆಲುವಿಗೆ 175 ರನ್ ಗುರಿ ಪಡೆದಿದ್ದ ಇಂಗ್ಲೆಂಡ್‌ಗೆ ಬೆಥೆಲ್ ಅವರು 46 ಎಸೆತಗಳಲ್ಲಿ 40 ರನ್ ಬಾರಿಸಿ ಆಸರೆಯಾಗಿದ್ದರು.

ಕೊಡವ ಕೌಟುಂಬಿಕ ಹಾಕಿ ಚಾಂಪಿಯನ್ಸ್ ಟ್ರೋಫಿಯ ಫೈನಲ್ ಪಂದ್ಯದಲ್ಲಿ ಚೆಪ್ಪುಡಿರ ಮತ್ತು ಕುಲ್ಲೇಟಿರ ತಂಡಗಳ ಆಟಗಾರರು ಚೆಂಡಿಗಾಗಿ ಸೆಣಸಿದರು

ಹಾಕಿ: ಚೆಪ್ಪುಡಿರ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮಡಿಕೇರಿ: ಚೆಪ್ಪುಡಿರ ತಂಡವು ತಾಲ್ಲೂಕಿನ ಮೂರ್ನಾಡು ಗ್ರಾಮದಲ್ಲಿ ನಡೆದ 'ಲೆವಿಸ್ಟಾ ಕೊಡವ ಕೌಟುಂಬಿಕ ಹಾಕಿ ಚಾಂಪಿಯನ್ಸ್ ಟ್ರೋಫಿ' ಟೂರ್ನಿಯಲ್ಲಿ ಚೊಚ್ಚಲ ಪ್ರಶಸ್ತಿ ಎತ್ತಿಹಿಡಿಯಿತು.

ಫೈನಲ್ ಪಂದ್ಯದಲ್ಲಿ ಚೆಪ್ಪುಡಿರ 1–0 ಅಂತರದಿಂದ ಕುಲ್ಲೇಟಿರ ತಂಡವನ್ನು ಮಣಿಸಿತು. ವಿಜೇತ ತಂಡದ ಪರ ಸೋಮಣ್ಣ ಒಂದು ಗೋಲು ಗಳಿಸಿದರು.

ವಿಜೇತ ತಂಡಕ್ಕೆ ₹2 ಲಕ್ಷ, ದ್ವಿತೀಯ ಸ್ಥಾನ ಪಡೆದ ಕುಲ್ಲೇಟಿರ ತಂಡಕ್ಕೆ ₹1 ಲಕ್ಷ, ಸೆಮಿಫೈನಲ್ಸ್ ಪ್ರವೇಶಿಸಿದ ಮಂಡೇಪಂಡ ಮತ್ತು ಕುಪ್ಪಂಡ ತಂಡಗಳಿಗೆ ತಲಾ ₹50 ಸಾವಿರ ಹಾಗೂ ಟೂರ್ನಿಯಲ್ಲಿ ಆಡಿದ ಎಲ್ಲ ತಂಡಗಳಿಗೂ ತಲಾ ₹25 ಸಾವಿರ ಬಹುಮಾನ ನೀಡಲಾಯಿತು.

ಕೊಡವ ಹಾಕಿ ಅಕಾಡೆಮಿಯು ಹಾಕಿ ಕೂರ್ಗ್, ಎಂ.ಬಾಡಗ ಸ್ಪೋರ್ಟ್ಸ್ ರಿಕ್ರಿಯೇಷನ್ ಸಂಸ್ಥೆ ಮತ್ತು ಮೂರ್ನಾಡು ವಿದ್ಯಾಸಂಸ್ಥೆಯ ಸಹಯೋಗದಲ್ಲಿ ಟೂರ್ನಿ ಆಯೋಜಿಸಿತ್ತು.

ಕಳೆದ 25 ವರ್ಷಗಳ ಕಾಲ ನಡೆದ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ತಂಡಗಳು ಈ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾಗವಹಿಸಿದ್ದವು.

ಡಬ್ಲ್ಯುಪಿಎಲ್: ಪೆರಿ, ಸದರ್ಲೆಂಡ್ ಅಲಭ್ಯ

ಮುಂಬೈ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎಲಿಸ್ ಪೆರಿ ಮತ್ತು ಡೆಲ್ಲಿ ಕ್ಯಾಪಿಟಲ್ಸ್‌ನ ಅನಾಬೆಲ್ ಸದರ್ಲೆಂಡ್ ಅವರು ಮುಂದಿನ ತಿಂಗಳು ಆರಂಭವಾಗಲಿರುವ ಮಹಿಳಾ ಪ್ರಿಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ವೈಯಕ್ತಿಕ ಕಾರಣಗಳಿಂದ ಈ ನಿರ್ಧಾರ ಕೈಗೊಂಡಿರುವುದಾಗಿ ಅವರು ಹೇಳಿದ್ದಾರೆ.

ಆಸ್ಟ್ರೇಲಿಯಾದ ಆಲ್‌ರೌಂಡರ್ ಎಲಿಸ್ ಅವರ ಸ್ಥಾನಕ್ಕೆ ಆರ್‌ಸಿಬಿಯು ಭಾರತದ ಸಯಾಲಿ ಸತಘರೆ ಅವರನ್ನು ಆಯ್ಕೆ ಮಾಡಿದೆ. ಡೆಲ್ಲಿ ತಂಡವು ಸದರ್ಲೆಂಡ್ ಬದಲಿಗೆ ಆಸ್ಟ್ರೇಲಿಯಾದ ಲೆಗ್‌ಸ್ಪಿನ್ನರ್ ಅಲನಾ ಕಿಂಗ್ ಅವರನ್ನು ಸೇರಿಸಿಕೊಂಡಿದೆ.


ಎಲಿಸ್ ಪೆರಿ


ಅನಾಬೆಲ್ ಸದರ್ಲೆಂಡ್

'ಆಸ್ಟ್ರೇಲಿಯಾದ ಆಲ್‌ರೌಂಡರ್‌ಗಳಾದ ಎಲಿಸ್ ಪೆರಿ (ಆರ್‌ಸಿಬಿ) ಮತ್ತು ಅನಾಬೆಲ್ ಸದರ್ಲೆಂಡ್ (ಡೆಲ್ಲಿ ಕ್ಯಾಪಿಟಲ್ಸ್) ಅವರು ಮುಂಬರುವ ಡಬ್ಲ್ಯುಪಿಎಲ್ ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿಲ್ಲ. ವೈಯಕ್ತಿಕ ಕಾರಣಗಳಿಗಾಗಿ ಆಡುತ್ತಿಲ್ಲವೆಂದೂ ತಿಳಿಸಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಆರ್‌ಸಿಬಿಗೆ ಸಯಾಲಿ ಅವರು ಮೀಸಲು ಮೌಲ್ಯ ₹30 ಲಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಆಸ್ಟ್ರೇಲಿಯಾದ ಲೆಗ್‌ಸ್ಪಿನ್ನರ್ ಅಲನಾ ಅವರು ಹೋದ ಬಾರಿ ಯುಪಿ ವಾರಿಯರ್ಸ್ ತಂಡದಲ್ಲಿ ಆಡಿದ್ದರು. ಅವರು ಒಟ್ಟು 27 ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಆಡಿ 27 ವಿಕೆಟ್ ಗಳಿಸಿದ್ದಾರೆ. ಅವರಿಗೆ ಡೆಲ್ಲಿ ತಂಡವು ₹60 ಲಕ್ಷ ಮೌಲ್ಯ ನೀಡಿ ಸೇರ್ಪಡೆ ಮಾಡಿಕೊಂಡಿದೆ' ಎಂದು ಡಬ್ಲ್ಯುಪಿಎಲ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಪಘಾತ: ಬಾಕ್ಸರ್ ಜೋಶುವಾಗೆ ಗಾಯ

ಲಾಗೋಸ್ (ಎಎಫ್‌ಪಿ): ನೈಜೀರಿಯಾದಲ್ಲಿ ಸಂಭವಿಸಿದ ಕಾರು ಅಪಘಾತದಲ್ಲಿ ಬ್ರಿಟನ್‌ನ ಬಾಕ್ಸರ್, ವಿಶ್ವ ಹೆವಿವೇಯ್ಟ್ ಮಾಜಿ ಚಾಂಪಿಯನ್ ಆಂಥೋನಿ ಜೋಶುವಾ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ನೈಜೀರಿಯಾ ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಲಾಗೋಸ್- ಇಬಾಡಾನ್ ಎಕ್ಸ್‌ಪ್ರೆಸ್‌ವೇಯಲ್ಲಿ ಜೋಶುವಾ ಪ್ರಯಾಣಿಸುತ್ತಿದ್ದ ಕಾರು ನಿಂತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಜೋಶುವಾ ಅವರನ್ನು ತಕ್ಷಣವೇ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತದಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಜೋಶುವಾ ಅವರಿದ್ದ ಕಾರು ಓವರ್‌ಟೇಕ್ ಮಾಡುವಾಗ ನಿಯಂತ್ರಣ ತಪ್ಪಿ ಟ್ರಕ್‌ಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಗೋರ್ಕ್ ಎಫ್‌ಸಿ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೇತನ್ ಭದ್ರಾಪುರ ಅವರ ಉಡುಗೊರೆ ಗೋಲು ಹಾಗೂ ಸುದರ್ಶನ್ ವಿ.ಎಲ್. ಗಳಿಸಿದ ಗೋಲಿನ ನೆರವಿನಿಂದ ಅಗೋರ್ಕ್ ಎಫ್‌ಸಿ ತಂಡವು ಬಿಡಿಎಫ್‌ಎ 'ಎ' ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ 2–1ರಿಂದ ಬ್ಲಿಟ್ಝ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬ್ಲಿಟ್ಝ್ ತಂಡದ ಚೇತನ್ ಅವರು 14ನೇ ನಿಮಿಷದಲ್ಲಿ ಎದುರಾಳಿ ತಂಡಕ್ಕೆ ಗೋಲಿನ ಉಡುಗೊರೆ ನೀಡಿದರು. ಬಳಿಕ, ಸುದರ್ಶನ್ (53ನೇ ನಿ.) ಅವರು ಗೋಲು ಗಳಿಸಿ ಮುನ್ನಡೆಯನ್ನು 2–0ಗೆ ಹಿಗ್ಗಿಸಿದರು. ಬ್ಲಿಟ್ಝ್ ತಂಡದ ಅಥರ್ವ ಅಪೂರ್ವ ಶುಕ್ಲಾ ಅವರು (85ನೇ ನಿ.) ಕೊನೆಯ ಕ್ವಾರ್ಟರ್‌ನಲ್ಲಿ ಗೋಲು ಗಳಿಸಿ, ಸೋಲಿನ ಅಂತರವನ್ನು ತಗ್ಗಿಸಿದರು.

ಇನ್ನೊಂದು ಪಂದ್ಯದಲ್ಲಿ ರಿಯಲ್ ಚಿಕ್ಕಮಗಳೂರು ಎಫ್‌ಸಿ ಹಾಗೂ ರೂಟ್ಸ್ ಎಫ್‌ಸಿ ತಂಡಗಳು 1–1 ಡ್ರಾ ಸಾಧಿಸಿದವು.

ರೂಟ್ಸ್ ತಂಡದ ಟಿ.ಹವೊಕಿಪ್ 27ನೇ ನಿಮಿಷದಲ್ಲಿ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರೆ, ಚಿಕ್ಕಮಗಳೂರು ತಂಡದ ದಿಲೀಪ್ ಗೌಡ ಎಚ್.ಸಿ. 28ನೇ ನಿಮಿಷದಲ್ಲಿ ಗೋಲು ಹೊಡೆದು ಸಮಬಲ ಸಾಧಿಸಿದರು.

ಎಫ್‌ಸಿ ಡೆಕ್ಕನ್ ಹಾಗೂ ಜವಾಹರ್ ಯೂನಿಯನ್ ಎಫ್‌ಸಿ ನಡುವಣ ಪಂದ್ಯವು 2–2 ಡ್ರಾ ಆಯಿತು.

ಇಸಾಗೆ ಎಂಬಿಇ ಪುರಸ್ಕಾರ

ಲಂಡನ್ (ಪಿಟಿಐ): ಇಂಗ್ಲೆಂಡ್ ಮಹಿಳಾ ಕ್ರಿಕೆಟ್ ತಂಡದ ಮಾಜಿ ಆಟಗಾರ್ತಿ ಇಸಾ ಗುಹಾ ಅವರಿಗೆ ಪ್ರತಿಷ್ಠಿತ 'ಎಂಬಿಇ ಪುರಸ್ಕಾರ' ಕ್ಕೆ ಪಾತ್ರರಾಗಿದ್ದಾರೆ. ಈ ಗೌರವ ಗಳಿಸಿದ ದಕ್ಷಿಣ ಏಷ್ಯಾ ಮೂಲದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಯು ಅವರದ್ದಾಗಿದೆ.

ಎರಡು ಸಲ ವಿಶ್ವಕಪ್ ಜಯಿಸಿದ ಇಂಗ್ಲೆಂಡ್ ತಂಡದಲ್ಲಿ ಆಡಿದ್ದರು. ಇಸಾ ಅವರು ಒಟ್ಟು ಎಂಟು ಟೆಸ್ಟ್, 83 ಏಕದಿನ ಮತ್ತು 22 ಟಿ20 ಪಂದ್ಯಗಳಲ್ಲಿ ಆಡಿದ್ದಾರೆ. ಮಧ್ಯಮವೇಗದ ಬೌಲಿಂಗ್ ಮೂಲಕ ಒಟ್ಟು 148 ವಿಕೆಟ್‌ಗಳನ್ನು ಪಡೆದಿದ್ದಾರೆ. ಇಂಗ್ಲೆಂಡ್‌ನಲ್ಲಿ ನೆಲೆಸಿರುವ ಭಾರತ ಮೂಲದ ಕುಟುಂಬದ ಇಸಾ ಅವರು 2012ರಲ್ಲಿ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ವೀಕ್ಷಕ ವಿವರಣೆಗಾರರಾಗಿ ಜನಪ್ರಿಯರಾಗಿದ್ದಾರೆ.

ಇಸಾ ಅವರು 'ಟೇಕ್ ಹರ್ ಲೀಡ್' ದತ್ತಿ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅದರ ಮೂಲಕ ಕ್ರಿಕೆಟ್‌ನಲ್ಲಿ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಕೊಳ್ಳಲು ನೆರವು ನೀಡುತ್ತಿದ್ದಾರೆ.

ಆಯ್ದ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮತ್ತು ಸಮಾಜದಲ್ಲಿ ಎಲ್ಲರನ್ನೂ ಒಳಗೊಳ್ಳುವಿಕೆಯಲ್ಲಿ ಮಹತ್ವದ ಕಾಣಿಕೆ ನೀಡಿದವರಿಗೆ ಹೊಸ ವರ್ಷಕ್ಕೆ ರಾಜಮನೆತನ ನೀಡುವ ಗೌರವ ಇದಾಗಿದೆ. ಎಂಬಿಇ ಅಥವಾ ಮೆಂಬರ್ ಆಫ್ ಆರ್ಡರ್ ಪುರಸ್ಕಾರ ಇದಾಗಿದೆ.

ಎನ್‌ಐಎಸ್ ಬದಲಾವಣೆ ಬೇಡ: ಬಿಂದ್ರಾ ಕಾರ್ಯಪಡೆ

ನವದೆಹಲಿ (ಪಿಟಿಐ): ಪಟಿಯಾಲದಲ್ಲಿರುವ ಪ್ರತಿಷ್ಠಿತವಾದ ನೇತಾಜಿ ಸುಭಾಷ್ ರಾಷ್ಟ್ರೀಯ ಕ್ರೀಡಾ ಸಂಸ್ಥೆ(ಎನ್‌ಎಸ್‌ಎನ್‌ಐಎಸ್)ಯನ್ನು ಕ್ರೀಡಾ ಆಡಳಿತಗಾರರಿಗೆ ತರಬೇತಿ ನೀಡುವ ಅಕಾಡೆಮಿಯನ್ನಾಗಿ ಪರಿವರ್ತಿಸುವ ಪ್ರಸ್ತಾವವನ್ನು ಅಭಿನವ್ ಬಿಂದ್ರಾ ನೇತೃತ್ವದ ಕಾರ್ಯಪಡೆ ತಳ್ಳಿಹಾಕಿದೆ. ಈ ಕಾರ್ಯಪಡೆಯನ್ನು ಕೇಂದ್ರ ಕ್ರೀಡಾ ಸಚಿವಾಲಯವು ಈಚೆಗೆ ನೇಮಕ ಮಾಡಿತ್ತು.

ಅಭಿನವ್ ಬಿಂದ್ರಾ

'ಈ ಯೋಜನೆಯು ಸೀಮಿತ ಮತ್ತು ಅಸಮರ್ಥನೀಯ' ಎಂದು ಕಾರ್ಯಪಡೆಯು ಹೇಳಿದೆ. ಭಾರತದ ಕ್ರೀಡಾ ಆಡಳಿತದಲ್ಲಿರುವ ಲೋಪಗಳನ್ನು ಗುರುತಿಸಿ ಸುಧಾರಣೆಗಳನ್ನು ಸೂಚಿಸಲು ಈ ಪಡೆಯನ್ನು ಸರ್ಕಾರವು ರಚಿಸಿದೆ. 'ಎನ್‌ಎಸ್‌ಎನ್‌ಎಸ್‌ಐ ಅತ್ಯುತ್ಕೃಷ್ಟ ಮತ್ತು ಖ್ಯಾತಿವೆತ್ತ ಸಂಸ್ಥೆಯಾಗಿದೆ. ಇಲ್ಲಿ ಕ್ರೀಡಾ ತರಬೇತಿ ಪಡೆಯುವುದು ಗೌರವದ ಸಂಕೇತವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾರ್ವಜನಿ ಸಂಸ್ಥೆಗಳು ಉದ್ಯೋಗ ನೀಡಿಕೆಯಲ್ಲಿ ಈ ಸಂಸ್ಥೆಯಲ್ಲಿ ಪದವಿ ಪಡೆದವರಿಗೆ ಆದ್ಯತೆ ನೀಡುತ್ತವೆ. ಎನ್‌ಐಎಸ್ ತರಬೇತುದಾರರಿಗೆ ಹೆಚ್ಚಿನ ಬೇಡಿಕೆ ಇದೆ' ಎಂದು ಒಂಬತ್ತು ಸದಸ್ಯರು ಇರುವ ಕಾರ್ಯಪಡೆಯು ವರದಿಯಲ್ಲಿ ಉಲ್ಲೇಖಿಸಿದೆ.

ಆಡಳಿತದಲ್ಲಿ ಇನ್ನೂ ಕೆಲವು ಸುಧಾರಣೆಗಳನ್ನು ಕುರಿತು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ವರದಿಯನ್ನು ಸ್ವೀಕರಿಸಿದ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ, 'ಎನ್‌ಐಎಸ್‌ನಲ್ಲಿ ಕೋರ್ಸ್‌ಗಳ ಸ್ವರೂಪವನ್ನು ಬದಲಿಸಿ ಉತ್ತಮ ದರ್ಜೆಗೇರಿಸುವುದನ್ನು ಪರಿಗಣಿಸುತ್ತೇವೆ' ಎಂದಿದ್ದಾರೆ.

ಕನಕದಾಸ ವಿದ್ಯಾಸಂಸ್ಥೆ (ರಿ.)

ಹುಳಿಯಾರು ಪಶ್ಚಿಮ ಬಡಾವಣೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ

–: ಅರ್ಹ ಅಭ್ಯರ್ಥಿಗಳು ಬೇಕಾಗಿದ್ದಾರೆ :–

ಈ ಕೆಳಕಂಡ ಅನುದಾನಿತ ಶಾಲೆಯ ಶಿಕ್ಷಕ ಹುದ್ದೆಯ ನೇಮಕಾತಿಗಾಗಿ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ: ಸಿ8(1)ಶಾಶಿಅಶಾವೇ.ಅನುದಾನ 1353650/2023–24, ದಿನಾಂಕ: 23.12.2025ರ ಅನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರ. ಸಂ.	ಶಾಲೆಯ ಹೆಸರು	ಹುದ್ದೆಯ ಹೆಸರು	ವಿದ್ಯಾರ್ಹತೆ	ಮೀಸಲಾತಿ ಬಿಂದು	ಬೋಧನಾ ಮಾಧ್ಯಮ
1	ಕನಕದಾಸ ಪ್ರೌಢಶಾಲೆ ಹುಳಿಯಾರು, ಚಿ.ನಾ. ಹಳ್ಳಿ ತಾ॥ ತುಮಕೂರು ಜಿಲ್ಲೆ	ಹಿಂದಿ ಭಾಷಾ ಸಹ ಶಿಕ್ಷಕರು (ಕಲಾ)	ಬಿ.ಎ. (ಹಿಂದಿ ಐಚ್ಛಿಕ) ಬಿ.ಇಡಿ.	ಬಿಂದು–2 ಸಾಮಾನ್ಯ ಅಭ್ಯರ್ಥಿ	ಕನ್ನಡ

ಅರ್ಹ ಅಭ್ಯರ್ಥಿಗಳು ಪೂರ್ಣ ಮಾಹಿತಿ ಹಾಗೂ ದೃಢೀಕೃತ ದಾಖಲೆಗಳೊಂದಿಗೆ ಅರ್ಜಿಯನ್ನು ಈ ಜಾಹೀರಾತು ಪ್ರಕಟಣೆಯಾದ 21 ದಿನಗಳೊಳಗಾಗಿ ಮೇಲಿನ ವಿಳಾಸಕ್ಕೆ ಅರ್ಜಿ ಸಲ್ಲಿಸಿ, ಅದರ ಒಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ತುಮಕೂರು, ಇವರಿಗೆ ಸಲ್ಲಿಸತಕ್ಕದ್ದು, ಅರ್ಜಿಯೊಂದಿಗೆ ರಾಷ್ಟ್ರೀಕೃತ ಬ್ಯಾಂಕಿನಿಂದ 1,000–00 (ಒಂದು ಸಾವಿರ) ರೂ.ಗಳ ಡಿ.ಡಿ.ಯನ್ನು ಕಾರ್ಯದರ್ಶಿಗಳು, ಕನಕದಾಸ ವಿದ್ಯಾಸಂಸ್ಥೆ (ರಿ.) ಹುಳಿಯಾರು ಪಶ್ಚಿಮ ಬಡಾವಣೆ, ಇವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು. ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು. ಪ್ರತಿಗಳನ್ನು ಅಂಚೆ ಮುಖಾಂತರ ಸಂಬಂಧಿಸಿದವರಿಗೆ ಸಲ್ಲಿಸಲು ಸೂಚಿಸಿದೆ.

ಸಹಿ/–ಕಾರ್ಯದರ್ಶಿಗಳು,
ಕನಕದಾಸ ವಿದ್ಯಾಸಂಸ್ಥೆ (ರಿ.), ಹುಳಿಯಾರು, ಚಿ.ನಾ.ಹಳ್ಳಿ ತಾ॥, ತುಮಕೂರು ಜಿಲ್ಲೆ